ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೫೭

ಮೈಸೂರು ವಿಶ್ವವಿದ್ಯಾನಿಲಯ ಪಠ್ಯಪುಸ್ತಕಮಾಲೆ

ಪ್ರಧಾನ ಸಂಪಾದಕ:
ಡಾ|| ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್.,

ಗ್ರೀಸ್ ದೇಶದ ಚರಿತ್ರೆ

ಲೇಖಕ:
ಡಾ|| ಬಿ. ಯಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಎಂ.ಎ., ಡಿ.ಲಿಟ್.,

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೭

ಮೊದಲನೆಯ ಮುದ್ರಣ—೧೯೫೭

ಬೆಲೆ :

ಉತ್ತಮ ಪ್ರತಿ ರೂ. 3.2 ಸಾಮಾನ್ಯ ಪ್ರತಿ ರೂ. 2.20

ಮುದ್ರಕರು :
ಚೇತನ ಮುದ್ರಾಲಯ
ರಮಾವಿಲಾಸ ಅಗ್ರಹಾರ, ಮೈಸೂರು.

ಮುನ್ನುಡಿ

ಕಳೆದ ಒಂದು ತಲೆಮಾರಿನಿಂದ ನಮ್ಮ ಜನ ಕಾಣುತ್ತಿದ್ದ ಕನಸು ಈ ಪುಸ್ತಕಗಳ ಪ್ರಕಟಣೆಯಿಂದ ನನಸಾದಂತಾಗಿದೆ. ನಾವು ಈಗತಾನೆ ಭಾಷಾವಾರು ಪ್ರಾಂತರಚನೆಯ ಫಲವಾಗಿ ವಿಶಾಲ ಮೈಸೂರು ಪ್ರಾಂತವನ್ನು ಗಳಿಸಿಕೊಂಡಿದ್ದೇವೆ. ಜನತೆ ಈ ಏಕೀಕರಣವನ್ನು ಬಯಸಿದುದು ನಮ್ಮ ಸಂಸ್ಕೃತಿಯ ಏಳಿಗೆಗೆ ತಳಹದಿಯಾಗಬಲ್ಲ ಲೌಕಿಕದ ಚೌಕಟ್ಟಿನ ಸಾಧನೆಗಾಗಿಯೇ. ಈ ಚೌಕಟ್ಟಿನ ಪರಿಮಿತಿಯಲ್ಲಿ ನಮ್ಮ ದೇಶಭಾಷೆಯಾದ ಕನ್ನಡ ತನ್ನೆಲ್ಲ ವ್ಯವಹಾರವನ್ನು ನಡೆಸಬೇಕಾಗಿದೆ. ಹಾಗೆ ಮಾಡಿದಾಗಮಾತ್ರ ನಮ್ಮ ಸಾಮಾನ್ಯ ಜನತೆಯ ದೈನಂದಿನ ವ್ಯವಹಾರ ಬುದ್ಧಿ ಪುಷ್ಟಿ ಮತ್ತು ಸಾಂಸ್ಕೃತಿಕವಿಕಾಸ ಸಾಧ್ಯವಾಗುತ್ತದೆ. ಆದ್ದರಿಂದ ನಮ್ಮ ಭಾಷೆಯ ವಿಷಯದಲ್ಲಿ ನಾವು ಎಷ್ಟು ಶ್ರಮಿಸಿದರೂ ಸಾಲದು; ಎಷ್ಟು ಪ್ರೋತ್ಸಾಹನೀಡಿದರೂ ಅತಿರೇಕವಾಗದು. ಈ ದಿಕ್ಕಿನಲ್ಲಿ ಮಾಡುತ್ತಿರುವ ಪ್ರಯಾಣದ ಮೊದಲ ಮೈಲಿಗಲ್ಲು, ವಿಶ್ವವಿದ್ಯಾನಿಲಯ ಪ್ರಕಟಿಸುತ್ತಿರುವ ಈ ಪಠ್ಯ ಪುಸ್ತಕಮಾಲೆ.

ಪೂಜ್ಯ ಬಾಪೂಜಿಯವರು ಇದುವರೆಗೆ ಇದ್ದ ನಮ್ಮ ಶಿಕ್ಷಣಮಾಧ್ಯಮದ ಕೃತಕತೆಯನ್ನು ಸ್ವಾತಂತ್ರ್ಯ ಪೂರ್ವದಲ್ಲಿಯೇ ಕಟುವಾಗಿ ಟೀಕಿಸಿ "ದೇಶಭಾಷೆಗೆ ಪ್ರಥಮಸ್ಥಾನ ದೊರೆಯಬೇಕು; ದೇಶಭಾಷೆ ಶಿಕ್ಷಣ ಮಾಧ್ಯಮವಾಗಬೇಕು" ಎಂದು ಸ್ಪಷ್ಟವಾಗಿ ನುಡಿದರು. "ಈ ದೇಶ ಸ್ವತಂತ್ರವಾದಕೂಡಲೆ ಶಿಕ್ಷಣಮಾಧ್ಯಮದ ಪ್ರಶ್ನೆ ಪ್ರಶ್ನೆಯಾಗಿ ಉಳಿಯುವುದಿಲ್ಲ" ಎಂದು ಘೋಷಿಸಿದರು. ಇಪ್ಪತ್ತು ವರ್ಷಗಳ ಕೆಳಗೆ ಅವರು ಈ ಮಾತು ಆಡಿದಾಗ ದೇಶಭಾಷೆಗಳ ಸ್ಥಿತಿ ಇಂದಿನಷ್ಟು ಮುಂದುವರಿದಿರಲಿಲ್ಲ. ಬುದ್ಧಿ ಸಾಹಿತ್ಯ, ಭಾವ ಸಾಹಿತ್ಯ, ವಿಜ್ಞಾನ ಸಾಹಿತ್ಯಾದಿ ನಾನಾ ಪ್ರಕಾರಗಳಲ್ಲಿ ಈಗ ನಮ್ಮಲ್ಲಿ ಸಾಕಷ್ಟು ಸಾಹಿತ್ಯ ಬೆಳೆದಿದೆ. ಆದ್ದರಿಂದ ಇದುವರೆಗೆ ಆಂಗ್ಲಭಾಷೆ ಆಕ್ರಮಿಸಿದ್ದ ಸಿಂಹಾಸನಕ್ಕೆ ಏರಲು ಕನ್ನಡದಭಾಷೆ

ಅರ್ಹವಾಗಿದೆ, ಸಿದ್ಧವಾಗಿದೆ ಎಂದು ಘಂಟಾ ಘೋಷವಾಗಿ ಹೇಳಬಹುದು. ವೈಜ್ಞಾನಿಕವಾದ ಯಾವ ಹಳೆಯ ಮತ್ತು ಹೊಸವಿಷಯವನ್ನೇ ಅಗಲಿ, ಶಾಸ್ತ್ರೀಯವಾದ ಎಂತಹ ಗಹನ ಅಥವಾ ಸೂಕ್ಷ್ಮವಿಚಾರವನ್ನೇ ಆಗಲಿ ಅಭಿವ್ಯಕ್ತಪಡಿಸಲು ನಮ್ಮ ಭಾಷೆ ಸಂಪೂರ್ಣ ಸಮರ್ಥವಾಗಿದೆ.

ವಿದ್ಯಾಭ್ಯಾಸದ ಎಲ್ಲ ಮಟ್ಟಗಳಲ್ಲಿಯೂ ದೇಶಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕಾದುದು ಅಗತ್ಯ, ಅನಿವಾರ್ಯ. ಇದು ಕೇವಲ ಸ್ವಭಾಷಾಮೋಹದಿಂದ ಆಡುವಮಾತಲ್ಲ. ಅಮರನಾಥ ಝಾ, ಸರ್ ಚಾರ್ಲ್ಸ್‌ವುಡ್ ಮೊದಲಾದ ಸ್ವದೇಶ ಪರದೇಶಗಳ ಶಿಕ್ಷಣತಜ್ಞರು ಈತತ್ವವನ್ನು ಸ್ಪಷ್ಟವಾದ ನುಡಿಗಳಿಂದ ಪ್ರತಿಪಾದಿಸಿದ್ದಾರೆ. ನಾಗಪುರ, ಅಲಹಾಬಾದ್, ಕಾಶಿ ಮೊದಲಾದ ವಿಶ್ವವಿದ್ಯಾನಿಲಯಗಳಲ್ಲಿ ಈ ಕಾರ್ಯ ಆಗಲೆ ಆರಂಭವಾಗಿ ಉತ್ತಮ ಫಲಿತಾಂಶಗಳು ದೊರೆತಿವೆ. ಮೈಸೂರು ವಿಶ್ವವಿದ್ಯಾನಿಲಯವೂ ಈ ಕಾರ್ಯದಲ್ಲಿ ಈಗ ಹೆಜ್ಜೆಯನ್ನಿಡಹೊರಟಿದೆ ಅದರ ಅಂಗವಾಗಿ ಪ್ರಾರಂಭವಾಗಿರುವ ಈ ಪಠ್ಯ ಪುಸ್ತಕಮಾಲೆಯಲ್ಲಿ ಒಂದಾದ ಗ್ರೀಸ್ ದೇಶದ ಚರಿತ್ರೆಯನ್ನು ಹೊರತರುತ್ತಿರುವುದು ನಮಗೊಂದು ಹೆಮ್ಮೆ. ಇದರ ಕರ್ತೃಗಳಾದ ಡಾ|| ಬಿ. ಎಸ್. ಕೃಷ್ಣಸ್ವಾಮಿಅಯ್ಯಂಗಾರ್ ಅವರು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಉಪ ಪ್ರಾಧ್ಯಾಪಕರಾಗಿದ್ದಾರೆ. ಅವರ ಪಾಂಡಿತ್ಯ ಮತ್ತು ಅನುಭವಗಳನ್ನು ಒಳಗೊಂಡ ಈ ಗ್ರಂಥ ಬಹು ಮಟ್ಟಿಗೆ ನಿರ್ದುಷ್ಟವಾಗಿದೆ. ವಿದ್ಯಾರ್ಥಿಗಳಿಗೆ ಇದರಿಂದ ಅಪಾರವಾದ ಉಪಕಾರವಾಗುವುದರಲ್ಲಿ ಸಂದೇಹವಿಲ್ಲ.

೨೫–೧–೧೯೫೮ **ಕೆ. ವಿ. ಪುಟ್ಟಪ್ಪ,**

ಮೈಸೂರು ವೈಸ್-ಛಾನ್ಸಲರ್.

ಅರಿಕೆ

ನಮ್ಮ ಮಾನ್ಯ ಉಪಕುಲಪತಿಗಳಾದ ಡಾ|| ಕೆ. ವಿ. ಪುಟ್ಟಪ್ಪನವರ ಆಶ್ರಯದಲ್ಲಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕನ್ನಡವು ತನ್ನದೇ ಆದ ಮಹತ್ವ ಸ್ಥಾನವನ್ನು ಹೊಂದುವುದು ಶುಭಸೂಚನೆ. ವಿಶಾಲ ಮೈಸೂರು ಉದ್ಭವಿಸಿದ ವರ್ಷದಿಂದಲೂ ಎಲ್ಲೆಲ್ಲಿಯೂ ಕನ್ನಡಕ್ಕೆ ಪ್ರೋತ್ಸಾಹ ತನ್ನಷ್ಟಕ್ಕೆ ತಾನೆ ಬರುತ್ತಿರುವುದು ಹೆಮ್ಮೆಯ ವಿಷಯ. ಕೇವಲ ಭಾಷಾಭಿವೃದ್ಧಿಯಿಂದಲೇ ಸಂಸ್ಕೃತಿಯು ಪ್ರಗತಿ ಹೊಂದುವುದಿಲ್ಲ. ನಮ್ಮ ಮುಂದಿನ ಪೀಳಿಗೆಯವರು ಕನ್ನಡ ಸಂಸ್ಕೃತಿಯನ್ನು ತಮ್ಮ ರಕ್ತಗತ ಮಾಡಿಕೊಳ್ಳುವ ಹಾಗೆ ಮಾಡುವುದು ನಮ್ಮ ಮುಖ್ಯ ಕರ್ತವ್ಯ. ಕನ್ನಡ ಸಂಸ್ಕೃತಿಯು ಇತರ ದೇಶಗಳ ಸಾಹಿತ್ಯ, ಚರಿತ್ರೆ, ಸಾಮಾಜಿಕ ಜೀವನ, ಆರ್ಥಿಕಸ್ಥಿತಿ, ಉನ್ನತ ಧ್ಯೇಯಗಳಿಂದ ಬಹುಮಟ್ಟಿಗೆ ಪ್ರಗತಿ ಹೊಂದುವುದರಲ್ಲಿ ಸಂಶಯವಿಲ್ಲ. ಈ ದೃಷ್ಟಿಯಿಂದ "ಗ್ರೀಸ್ ದೇಶದ ಚರಿತ್ರೆ" ಮತ್ತು "ರೋಮನ್ ಚಕ್ರಾಧಿಪತ್ಯದ ಚರಿತ್ರೆ"ಯು ಒಂದು ದೇಶದ ಇತಿಹಾಸವು ಯಾವ ರೀತಿಯಾಗಿ ಸಾಮಾನ್ಯ ಜನಜೀವನದ ರೂಪು ಬದಲಿಸಬಹುದೆಂಬುದನ್ನು ವಿಷದಪಡಿಸಲು ಸಹಾಯವಾಗಬಹುದೆಂದು ನಂಬಿದ್ದೇನೆ. ನಾನು ಕನ್ನಡ ನುಡಿಗೆ ಈ ಅಲ್ಪ ಕಾಣಿಕೆ ಸಲ್ಲಿಸಲು ಅವಕಾಶ ಮಾಡಿಕೊಟ್ಟದ್ದಕ್ಕೆ ಡಾ|| ಕೆ. ವಿ. ಪುಟ್ಟಪ್ಪನವರಿಗೆ ಚಿರಋಣಿಯಾಗಿದ್ದೇನೆ.

ಡಾ|| ಬಿ. ಯಸ್. ಕೃಷ್ಣಸ್ವಾಮ್ಯೆಂಗಾರ್.

ಮೈಸೂರು ವಿಶ್ವವಿದ್ಯಾನಿಲಯ

23-4-1957

ವಿಷಯ ಸೂಚಿಕೆ

ಅಧ್ಯಾಯ	ವಿಷಯ	ಪುಟ
೧	ಗ್ರೀಸ್‌ದೇಶದ ಮೇಲ್ಮೈಲಕ್ಷಣ	೧
೨	ಏಜಿಯನ್ ನಾಗರಿಕತೆ	೬
೩	ಗ್ರೀಕರ ದಂಡೆಯಾತ್ರೆ	೧೩
೪	ವಸಾಹತದ ಕಾಲ	೨೦
೫	ಸ್ಪಾರ್ಟ ಪಟ್ಟಣದ ಉದಯ	೨೫
೬	ನಿರಂಕುಶ ಪ್ರಭುತ್ವ	೩೨
೭	ಅಥೆನ್ಸ್‌ರಾಷ್ಟ್ರದ ಹಿಂದಿನ ಚರಿತ್ರೆ	೩೫
೮	ಸೋಲನ್ ಸುಧಾರಣೆಗಳು	೩೯
೯	ಪೆಸಿಸ್ಟ್ರೇಸಿನ ನಿರಂಕುಶ ಪ್ರಭುತ್ವ	೪೪
೧೦	ಕ್ಲೀಸ್ಥನೆಸನ ಸುಧಾರಣೆಗಳು	೪೬
೧೧	ಅಯೋನಿಯರ ದಂಗೆ	೫೦
೧೨	ಮಾರಥಾನ್ ಕದನ	೫೬
೧೩	ಪರ್ಷಿಯನರ ಮೂರನೆಯ ದಂಡಯಾತ್ರೆ	೬೧
೧೪	ಡೇಲಾಸ್ ಸಂಯುಕ್ತ ಸಂಘ	೭೨
೧೫	ಪೆರಿಕ್ಲಿಸ್‌ನ ಯುಗ	೭೭
೧೬	ಅಥೆನ್ಸ್ ಸಾಮ್ರಾಜ್ಯದ ಬೆಳವಣಿಗೆ	೮೧
೧೭	ಪೆರಿಕ್ಲಿಸನ ಸಾಮ್ರಾಜ್ಯ ಶಾಹಿ	೮೫
೧೮	ಪೆಲಿಪೊನಿಸಿಯನ್ ಯುದ್ಧ	೯೧
೧೯	ಪೆಲಿಪೊನಿಸಿಯನ್ ಯುದ್ಧದ ಘಟನಾವಳಿ	೯೫
೨೦	ಸ್ಪಾರ್ಟ ಪ್ರಭುತ್ವ	೧೦೬
೨೧	ಥೀಬ್ಸ್ ಸಾರ್ವಭೌಮತ್ವ	೧೧೪
೨೨	ಮ್ಯಾಸಿಡೋನಿಯಾ ದೇಶದ ಫಿಲಿಪ್	೧೧೭
೨೩	ಅಲೆಗ್ಸಾಂಡರ್ ಮಹಾಶಯ	೧೨೨

ಅಧ್ಯಾಯ ೧

ಗ್ರೀಸ್ ದೇಶದ ಮೇಲ್ಮೈ ಲಕ್ಷಣ

ಪ್ರಾಚೀನಕಾಲದಲ್ಲಿ ನಾಗರಿಕತೆಯನ್ನು ಬಹಳ ಮಟ್ಟಿಗೆ ಅಭಿವೃದ್ಧಿ ಪಡಿಸಿದವರು ಪುರಾತನ ಗ್ರೀಕರು. ಇವರ ನಾಗರಿಕತೆಯು ಪಾಶ್ಚಾತ್ಯ ದೇಶಗಳ ಸಂಸ್ಕೃತಿಗೆ ಹಿನ್ನೆಲೆಯಾಗಿದೆ. ವಿಜ್ಞಾನ, ಕಲಾಕೌಶಲ್ಯ, ತತ್ತ್ವ ವಿವೇಚನೆ, ಪ್ರಜಾಪ್ರಭುತ್ವ ಪದ್ಧತಿ–ಇವು ಅವರ ನಾಗರಿಕತೆಯ ವೈಶಿಷ್ಟ್ಯ ವೆಂದು ಹೇಳಬಹುದು. ಮಾನವನ ಪ್ರಗತಿಯ ಪ್ರತಿಯೊಂದು ಅಂಶ ದಲ್ಲಿಯೂ ಅವರು ಮಾರ್ಗದರ್ಶಕರಾಗಿದ್ದರು. ಅವರು ಒಳ್ಳೆ ಪ್ರಜ್ಞಾ ಶಾಲಿಗಳು. ಅರಿಸ್ಟೋಟಲ್ ಎಂಬ ಜ್ಞಾನವಂತನ ಹೆಸರು ಸಾಧಾರಣ ವಾಗಿ ಎಲ್ಲರಿಗೂ ತಿಳಿದಿದೆ. ಕಲಾಕೌಶಲ್ಯದಲ್ಲಿ ಅಥೆನ್ಸ್ ನಗರವು ಸುಪ್ರ ಸಿದ್ಧವಾಗಿತ್ತು. ಫೀಡಿಯಸ್ ಎಂಬ ಕಲೋಪಾಸಕನ ಹೆಸರು ನಮ್ಮ ದೇಶದಲ್ಲಿ ವಾಲ್ಮೀಕಿಯ ಹೆಸರಿನಂತೆ ಮನೆಮಾತಾಗಿದೆ. ರಾಜಕೀಯದಲ್ಲಿ ನಗರರಾಷ್ಟ್ರವು (City-State) ಅವರ ಏಳಿಗೆಗೆ ಬಹಳ ಸಹಾಯಕ ವಾಯಿತು. ಈ ನಗರರಾಷ್ಟ್ರಗಳಿಂದ ಪ್ರತಿಯೊಬ್ಬ ವ್ಯಕ್ತಿಯು ತನ್ನ ರಾಷ್ಟ್ರದ ಪ್ರಗತಿಗೆ ದುಡಿಯುವಂತೆ ಸ್ಫೂರ್ತಿಯನ್ನು ಕೊಟ್ಟಿತು. ಗ್ರೀಕರು ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೆ ತಮ್ಮ ಪ್ರಾಣವನ್ನೇ ಮೀಸಲಾಗಿ ಇಟ್ಟಿದ್ದರು. ಅವರು ಪ್ರಜಾಪ್ರಭುತ್ವವನ್ನು ಸ್ಥಾಪಿಸಿ ಪ್ರಜೆಗಳೇ ನೇರವಾಗಿ ಆಡಳಿತದ ಹೊಣೆಯನ್ನು ಹೊತ್ತು ಪ್ರಜಾಪ್ರಭುತ್ವದ ರಕ್ಷಣೆಗೆ ಎಲ್ಲಾ ವಿಧವಾದ ಕಷ್ಟವನ್ನು ಅನುಭವಿಸಲು ಸಿದ್ಧರಾಗಿದ್ದರು. ತತ್ತ್ವಶಾಸ್ತ್ರದಲ್ಲಿ ಸಾಕ್ರಟಿಸನ ಹೆಸರು ಮರೆಯುವ ಹಾಗಿಲ್ಲ. ಇವು ಅವರ ಇತಿಹಾಸದ ಮುಖ್ಯ ಅಂಶಗಳೆಂದು ಹೇಳಬಹುದು. "ನೀನು ಬದುಕಿರು ವಾಗ ಸರಿಯಾಗಿ ಬದುಕು; ಸಾಯುವ ಕಾಲ ಬಂದಾಗ ಸಾವಿಗೆ ಅಂಜಬೇಡ; ಗತಿಸಿದ ಕಾಲದ ದೃಷ್ಟಿಯಿಂದಾಗಲಿ ಅಥವ ಮುಂಬರುವ ಸಾವಿನ ನಿರೀಕ್ಷಣೆ ಯಿಂದಾಗಲಿ ಬದುಕಬೇಡ."—ಇದು ಅವರ ಜೀವನದ ಧ್ಯೇಯ.

ಇತಿಹಾಸದ ಮೇಲೆ ಒಂದು ದೇಶದ ಮೇಲ್ಮೈಲಕ್ಷಣಗಳ ಪರಿಣಾಮ :—ಒಂದು ದೇಶದ ಸನ್ನಿವೇಶ, ಭೂಲಕ್ಷಣ, ವಾಯುಗುಣ ಮೊದಲಾದ ಲಕ್ಷಣಗಳು ಆ ದೇಶದ ಜನಜೀವನದ ಮೇಲೆ ಅತಿ ಮುಖ್ಯವಾದ ಪರಿಣಾಮವನ್ನುಂಟುಮಾಡುತ್ತವೆ. ಒಂದು ದೇಶದ ಇತಿಹಾಸವು ಆ ದೇಶದ ಮೇಲ್ಮೈಲಕ್ಷಣಗಳಿಂದ ಜನಜೀವನವು ಯಾವರೀತಿಯಾಗಿ ಮಾರ್ಪಾಡಾಗಿದೆಯೆಂದು ಹೇಳಬಹುದು. ಅಂದರೆ ಒಂದು ದೇಶವು ಸಮುದ್ರದ ಹತ್ತಿರವಿದ್ದರೆ ಆ ದೇಶದ ಜನರು ಸಮುದ್ರಯಾನವನ್ನು ವಿಸ್ತರಿಸಿ ನೌಕಾಶಕ್ತಿಯಿಂದ ಅಭಿವೃದ್ಧಿ ಹೊಂದುತ್ತಾರೆ. ಇಂಗ್ಲೆಂಡ್ ದೇಶದ ಚರಿತ್ರೆಯು ಇದನ್ನು ಸೂಚಿಸುತ್ತದೆ. ಇದೇ ರೀತಿಯಾಗಿ ಒಂದು ದೇಶದಲ್ಲಿ ಪರ್ವತಗಳು ಹೆಚ್ಚಾಗಿದ್ದರೆ ಜನರು ನಾಗರಿಕತೆಯಲ್ಲಿ ಹೀನಸ್ಥಿತಿಯನ್ನು ಹೊಂದಿದ್ದರೂ ಒಳ್ಳೆ ಧೈರ್ಯಶಾಲಿಗಳಾಗಿ ಸೈನಿಕರಾಗಿರುತ್ತಾರೆ. ಒಳ್ಳೆ ವಾಯುಗುಣವು ಆ ದೇಶದ ಜನರನ್ನು ಉತ್ಸಾಹವುಳ್ಳವರನ್ನಾಗಿ, ಚಟುವಟಿಕೆಯುಳ್ಳವರನ್ನಾಗಿ ಮಾಡುತ್ತದೆ. ಗ್ರೀಕರ ಇತಿಹಾಸವನ್ನು ತಿಳಿಯಬೇಕಾದರೆ ಮೊದಲು ಅವರ ದೇಶದ ಮೇಲ್ಮೈಲಕ್ಷಣವನ್ನು ತಿಳಿಯುವುದು ಬಹು ಮುಖ್ಯ.

ಏಜಿಯನ್ ಸಮುದ್ರ :—ಗ್ರೀಸ್‌ದೇಶವು ಯೂರೋಪಿಗೆ ದಕ್ಷಿಣದಲ್ಲಿ ಇರುವ ಪರ್ಯಾಯದ್ವೀಪ. ಈ ದೇಶವು ಮೆಡಿಟರೇನಿಯನ್ ಸಮುದ್ರದಲ್ಲಿ ಕಿವಿಯಲ್ಲಿ ತೂಗಾಡುವ ಒಂದು ಆಭರಣದ ಹಾಗೆ ಕಾಣುತ್ತದೆ. ಈ ದೇಶದ ಮೇಲ್ಮೈಲಕ್ಷಣದಲ್ಲಿ ಮುಖ್ಯವಾದದ್ದು **ಏಜಿಯನ್ ಸಮುದ್ರ.** ಏಜಿಯನ್ ಸಮುದ್ರವು ಗ್ರೀಸ್‌ದೇಶಕ್ಕೂ ಪಶ್ಚಿಮ ಏಷ್ಯಕ್ಕೂ ಮಧ್ಯದಲ್ಲಿದೆ. ಗ್ರೀಕರಿಗೆ ಏಜಿಯನ್ ಸಮುದ್ರವೆಂದರೆ ಪಂಚಪ್ರಾಣ. ಏಜಿಯನ್ ಸಮುದ್ರದಲ್ಲಿ ಅನೇಕ ದ್ವೀಪಗಳಿವೆ. ಇವುಗಳಲ್ಲಿ ಮುಖ್ಯವಾದ, ದಕ್ಷಿಣಕ್ಕೆ ಇರುವ **ಸೈಕ್ಲೇಡಸ್** ಎಂಬ ದ್ವೀಪಸ್ತೋಮಗಳು ಒಂದು ಸೇತುವೆ ಇದ್ದ ಹಾಗೆ ಇವೆ. ಇವು ಯುದ್ಧಕಾಲದಲ್ಲಿ ಗ್ರೀಕರಿಗೆ ನೆಲೆಸಲು ಬಹಳ ಸಹಾಯಕವಾಗಿದ್ದುವು. ಗ್ರೀಕರು ಏಜಿಯನ್ ಸಮುದ್ರದಿಂದ ಪಶ್ಚಿಮ ಏಷ್ಯದಲ್ಲಿ ವ್ಯಾಪಾರ ಮತ್ತು ಸಂಸ್ಕೃತಿಯ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಗ್ರೀಸ್‌ದೇಶಕ್ಕೆ ಪಶ್ಚಿಮದಲ್ಲಿ **ಅಯೋನಿಯನ್** ಎಂಬ

ಸಮುದ್ರವಿದೆ. ಆದರೆ ಈ ಸಮುದ್ರವು ಒರಟಾದ ಅಲೆಗಳು, ಬಿರುಗಾಳಿಗಳಿಂದ ಹಡಗಿನ ಸಂಚಾರಕ್ಕೆ ತೊಂದರೆಯಾಗಿದ್ದಿತು. ಆದ್ದರಿಂದ ಗ್ರೀಕರು ಈ ಸಮುದ್ರದ ಸಂಪರ್ಕವನ್ನು ಹೆಚ್ಚಾಗಿ ಇಟ್ಟುಕೊಂಡಿರಲಿಲ್ಲ. ಗ್ರೀಸ್ ದೇಶವು ಎರಡು ಮುಖವಾಗಿದ್ದರೂ ಪೂರ್ವದಕಡೆಯೇ ಹೆಚ್ಚಾಗಿ ನೋಡುತ್ತಿತ್ತು. ಗ್ರೀಕರು ತಮ್ಮ ನೌಕಾಬಲದಿಂದ ವಸಾಹತನ್ನೂ ವ್ಯಾಪಾರವನ್ನೂ ವಿಸ್ತರಿಸಿದರು.

ಗ್ರೀಸಿನ ಭೂಭಾಗ :—ಗ್ರೀಸ್ ದೇಶವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು—ಉತ್ತರ ಗ್ರೀಸ್, ಮಧ್ಯ ಗ್ರೀಸ್ ಮತ್ತು ದಕ್ಷಿಣ ಗ್ರೀಸ್. ಉತ್ತರದಿಂದ ದಕ್ಷಿಣದವರೆಗೂ **ಪಿಂಡಸ್** ಎಂಬ ದೊಡ್ಡ ಪರ್ವತಶ್ರೇಣಿಯಿದೆ. ಇದು ಗ್ರೀಸ್‌ದೇಶದ ಬೆನ್ನೆಲುಬು ಎಂದು ಹೇಳಬಹುದು. ಈ ಪರ್ವತ ಶ್ರೇಣಿಯ ಪಶ್ಚಿಮಕ್ಕೆ ಅಕರನೇನಿಯ, ಏಟೋಲಿಯ, ಎಪಿರಸ್ ಎಂಬ ಪ್ರದೇಶಗಳಿವೆ. ಈ ಪ್ರದೇಶಗಳು ನಾಗರಿಕತೆಯಲ್ಲಿ ಪ್ರಗತಿ ಇಲ್ಲದೆ ಉತ್ತರದ ಅನಾಗರಿಕರ ದಂಡಯಾತ್ರೆಗೆ ಒಳಗಾಗಿದ್ದವು. ಈ ಪರ್ವತದ ಈಶಾನ್ಯಕ್ಕೆ ಮೆಸಿಡೋನಿಯ, ಥೆಸಲಿ ಎಂಬ ಪ್ರದೇಶಗಳಿವೆ. ಮೆಸಿಡೋನಿಯ ಪ್ರದೇಶದಲ್ಲಿ ಚಿನ್ನದ ಗಣಿಯಿದ್ದುದರಿಂದ ಗ್ರೀಕರಿಗೆ ವಸಾಹತುಗಳನ್ನು ಸ್ಥಾಪಿಸಲು ಅನುಕೂಲವಾಯಿತು. ಥೆಸಲಿ ಪ್ರದೇಶವು ಪರ್ವತಗಳಿಂದ ತುಂಬಿದ್ದರೂ ಅನೇಕ ಕಣಿವೆಗಳಿಂದ ಶತ್ರುಗಳು ನುಗ್ಗುವುದಕ್ಕೆ ಅನುಕೂಲವಾಗಿದ್ದವು. ಈ ಪ್ರದೇಶದಲ್ಲಿ ಒಲಿಂಪಸ್ ಎಂಬ ಪರ್ವತಶ್ರೇಣಿಯು ದೇವತೆಗಳ ವಾಸಸ್ಥಾನವೆಂಬ ಪವಿತ್ರತೆಯನ್ನು ಹೊಂದಿತ್ತು. ಮಧ್ಯ ಗ್ರೀಸಿನಲ್ಲಿ ಭೋಷಿಯ ಎಂಬ ಪ್ರದೇಶವು ಮುಖ್ಯವಾದದ್ದು. ಈ ಪ್ರದೇಶದಲ್ಲಿಯೂ ಅನೇಕ ಪರ್ವತಗಳೂ, ಕಣಿವೆಗಳೂ ಇವೆ. ಇವುಗಳಲ್ಲಿ ಡೆಲ್ಫಿಯೆಂಬ ಸ್ಥಳವು ಗ್ರೀಕರಿಗೆ ಶ್ರೇಷ್ಠವಾಗಿತ್ತು, ಡೆಲ್ಫಿಯಲ್ಲಿ ಒಂದು ತರಹ ದಿವ್ಯವಾಣಿಯು ಅವರ ಭವಿಷ್ಯವನ್ನು ಸೂಚಿಸುತಿತ್ತು. ಥೆರ್ಮಾಪಿಲೇ ಎಂಬ ಕಣಿವೆಯು ಮಧ್ಯ ಗ್ರೀಸಿನ ದ್ವಾರಮಾರ್ಗ. ಈ ಮಾರ್ಗವನ್ನು ಗ್ರೀಕರು ಬಹಳಮಟ್ಟಿಗೆ ಕಾಪಾಡಬೇಕಾಯಿತು. ಥರ್ಮಾಫಿಲೇಯು ಶತ್ರುವಶವಾದರೆ ಅವರ ಸ್ವಾತಂತ್ರ್ಯಕ್ಕೆ ಅಡಚಣೆಯಾಗಿ ಹೋರಾಡಬೇಕಾಗುತ್ತಿತ್ತು. ಭೋಷಿಯ ಪ್ರದೇಶಕ್ಕೆ ಪೂರ್ವದಲ್ಲಿ ಇಬಿಯ ಎಂಬ ದ್ವೀಪವು ಯುದ್ಧಕಾಲದಲ್ಲಿ ಆಶ್ರಯವನ್ನು ನೀಡು

ತಿತ್ತು. ಭೋಷಿಯ ಪ್ರದೇಶಕ್ಕೆ ದಕ್ಷಿಣದಲ್ಲಿ ಅಟಿಕ ಎಂಬ ಪ್ರದೇಶವು ಮುಖ್ಯವಾದದ್ದು. ಈ ಪ್ರದೇಶವು ಒಂದು ಭೂಶಿರವಿದ್ದಹಾಗೆ ಇದ್ದು ಶತ್ರುಗಳು ನುಗ್ಗುವುದಕ್ಕೆ ಅವಕಾಶವಿಲ್ಲದೇ ಇತ್ತು. ಆದರೆ ಈ ಪ್ರದೇಶ ದಲ್ಲಿ ಅಥೆನ್ಸ್ ಎಂಬ ನಗರವು ಪ್ರಾಮುಖ್ಯತೆಯನ್ನು ಹೊಂದಿ ನಾಗರಿಕತೆಯ ಕೇಂದ್ರವಾಯಿತು. ಅಟಿಕ ಪ್ರದೇಶಕ್ಕೆ ಪಶ್ಚಿಮದಲ್ಲಿ ಮಗರ ಎಂಬ ಪ್ರದೇಶವು ವಕ್ರವಾದ ಪರ್ವತಶ್ರೇಣಿಯಿಂದ ತುಂಬಿ ಅಭಿವೃದ್ಧಿಯನ್ನು ಹೊಂದಲಿಲ್ಲ. ಮಧ್ಯ ಗ್ರೀಸಿಗೂ ದಕ್ಷಿಣ ಗ್ರೀಸಿಗೂ ಮಧ್ಯದಲ್ಲಿ ಕಾರಿಂತ್ ಎಂಬ ಭೂಶಿರವಿದೆ (Isthmus of Corinth). ಈ ಭೂಶಿರವು ಪಶ್ಚಿಮದಿಂದ ಪೂರ್ವಕ್ಕೆ ಕೇವಲ ಮೂರೂವರೆ ಮೈಲಿ ಅಗಲವಿದೆ. ಈ ಭೂಶಿರದಿಂದ ದಕ್ಷಿಣ ಗ್ರೀಸಿಗೂ, ಉತ್ತರ ಗ್ರೀಸಿಗೂ ಸಂಪರ್ಕವುಂಟಾಗಿ ಯುದ್ಧಕಾಲದಲ್ಲಿ ಸಹಾಯವಾಗಿತ್ತು. ಈ ಭೂಶಿರವಿಲ್ಲದೇ ಇದ್ದಿದ್ದರೆ ದಕ್ಷಿಣ ಗ್ರೀಸು ಒಂದು ದ್ವೀಪವಾಗುತಿತ್ತು. ವ್ಯಾಪಾರ ವಹಿವಾಟುಗಳು ಬದಲಾವಣೆ ಹೊಂದುತ್ತಿದ್ದವು. ಪರ್ಷಿಯನ್ನರು ಉತ್ತರಗ್ರೀಸಿನಲ್ಲಿ ದಂಡೆಯಾತ್ರೆಮಾಡಲು ಬಂದು ನೆಲಸಿದಾಗ ಗ್ರೀಕರು ದಕ್ಷಿಣ ಗ್ರೀಸಿನಲ್ಲಿರುವ ಸ್ಪಾರ್ಟ ಎಂಬ ಪ್ರಬಲವಾದ ಸೇನಾ ನಗರರಾಷ್ಟ್ರದ ಸಹಾಯವನ್ನು ಹೊಂದಿ ಈ ಭೂಶಿರದಲ್ಲಿ ಎಲ್ಲರೂ ಕಲೆತು ಸಮಾಲೋಚನೆಮಾಡಿದರು. ದಕ್ಷಿಣ ಗ್ರೀಸನ್ನು ಪೆಲಪೊನೆಸ್ ಅಂದರೆ ಪೆಲಾಪ್ಸನೆಂಬ ಪುರಾಣಪ್ರಸಿದ್ಧನ ಭೂಮಿ ಎಂದು ಕರೆಯುತ್ತಿದ್ದರು. ಈ ಭಾಗದಲ್ಲಿ ಕಾರಿಂತ್, ಆರ್ಕೆಡಿಯಾ, ಆರ್ಗಲಿಸ್, ಲಕೋನಿಯ, ಮೆಸ್ಸಿನಿಯ, ಎಲಿಸ್ ಮತ್ತು ಅಖೇಯ ಎಂಬುವು ಮುಖ್ಯ ಪ್ರದೇಶಗಳು. ಕಾರಿಂತ್ ಎಂಬ ಪ್ರದೇಶವು ಪೂರ್ವಕ್ಕೂ ಪಶ್ಚಿಮಕ್ಕೂ ಮಧ್ಯದಲ್ಲಿದ್ದರಿಂದ ವ್ಯಾಪಾರದಲ್ಲಿ ಅಭಿವೃದ್ಧಿಯನ್ನು ಹೊಂದಿತು. ಕಾರಿಂತ್‌ಕೊಲ್ಲಿಯು ಅವರ ಹತೋಟಿಯಲ್ಲಿತ್ತು. ಆರ್ಕೆಡಿಯ ಪ್ರದೇಶವು ಸುತ್ತಲೂ ಭೂಮಿಯಿಂದ ಆವರಿಸಲ್ಪಟ್ಟು ಜನರು ನಾಗರಿಕತೆಯಲ್ಲಿ ಬಹಳ ಹಿಂದುಳಿದವರಾಗಿದ್ದರು. ಲಕೋನಿಯಾ ಎಂಬ ಪ್ರದೇಶದಲ್ಲಿ ಸ್ಪಾರ್ಟ ಎಂಬ ನಗರರಾಷ್ಟ್ರವು ಪ್ರಬಲವಾದ ಸೈನಿಕರಾಷ್ಟ್ರವಾಗಿತ್ತು. ಗ್ರೀಸಿನ ಇತಿಹಾಸದಲ್ಲಿ ಮುಖ್ಯವಾಗಿ ಅಥೆನ್ಸ್ ಮತ್ತು ಸ್ಪಾರ್ಟ ಎಂಬ ಎರಡು ರಾಷ್ಟ್ರಗಳೇ ಪ್ರಧಾನಪಾತ್ರವನ್ನು ವಹಿಸಿದ್ದವು. ಮಸಿನಿಯಾ ಎಂಬ

ಗ್ರೀಸ್



ಪ್ರದೇಶವು ದಕ್ಷಿಣ ಗ್ರೀಸಿನಲ್ಲಿ ಬಹಳ ಫಲವತ್ತಾದ ಪ್ರದೇಶವಾಗಿತ್ತು. ಎಲಿಸ್ ಎಂಬ ಪ್ರದೇಶದಲ್ಲಿ ನಾಲ್ಕು ವರ್ಷಕ್ಕೆ ಒಂದುಸಲ ಒಲಂಪಿಕ್ ಪಂದ್ಯಗಳು ಎಂಬ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುತ್ತಿದ್ದರು. ಗ್ರೀಕರು ಎಷ್ಟೇ ದೂರದಲ್ಲಿದ್ದರೂ ಆಗಾಗ್ಗೆ ಈ ಒಲಂಪಿಕ್ ಪಂದ್ಯಗಳಲ್ಲಿ ಭಾಗವಹಿಸಿ ತಮ್ಮ ರಾಷ್ಟ್ರೀಯತೆಯನ್ನು ತೋರಿಸುತ್ತಿದ್ದರು. ಈ ಒಲಂಪಿಕ್ ಪದ್ಯದಲ್ಲಿ ವಿದ್ವಾಂಸರೂ ಭಾಗವಹಿಸಿ ತಮ್ಮ ಶಕ್ತಿಯನ್ನು ಪ್ರದರ್ಶಿಸುತ್ತಿದ್ದರು. ಗ್ರೀಕರ ವಿದ್ಯಾಭ್ಯಾಸದಲ್ಲಿ ಜ್ಞಾನಕ್ಕೂ ಮತ್ತು ದೈಹಿಕ ಶಕ್ತಿಗೂ ನಿಕಟ ಸಂಬಂಧವಿತ್ತು. ಅಂದರೆ 'ಸ್ವಸ್ಥ ದೇಹದಲ್ಲಿ ಸ್ವಸ್ಥ ಮನಸ್ಸು' ಎಂಬುದು ಅವರ ವಿದ್ಯಾಭ್ಯಾಸದ ಮುಖ್ಯ ಧ್ಯೇಯ.

ಗ್ರೀಸಿನ ಮೇಲ್ಮೈಲಕ್ಷಣಗಳ ಪರಿಣಾಮ :—ನಾವು ನೋಡಿದ ಹಾಗೆ ಗ್ರೀಸ್ ದೇಶವು ಪರ್ವತಪ್ರದೇಶವಾಗಿತ್ತು. ಈ ಪರ್ವತಗಳು ದೇಶವನ್ನು ಬೇರೆ ಬೇರೆ ಪ್ರದೇಶಗಳಿಗೆ ವಿಂಗಡಿಸಿ ಪ್ರತಿಯೊಂದು ಪ್ರದೇಶವೂ ಸ್ವತಂತ್ರ ರಾಷ್ಟ್ರವಾಗಲು ಅನುಕೂಲವಾಯಿತು. ಅಂದರೆ ಸಂಚಾರ ಸೌಲಭ್ಯಗಳು ಕಷ್ಟವಾಗಿ ಪ್ರತಿಯೊಂದು ರಾಷ್ಟ್ರವು ಒಂದು ರೀತಿಯ ಸಂಕುಚಿತ ಸ್ವದೇಶಾಭಿಮಾನವನ್ನು ಬೆಳೆಯಿಸಿತು. ಪ್ರತಿಯೊಂದು ಪ್ರದೇಶದಲ್ಲಿಯೂ ಒಂದು ಪಟ್ಟಣವು ಪ್ರಾಬಲ್ಯಕ್ಕೆ ಬಂದು ಆ ಪಟ್ಟಣವು ಆ ಪ್ರದೇಶಕ್ಕೆ ರಾಜಕೀಯ, ಸಂಸ್ಕೃತಿಯ ಕೇಂದ್ರವಾಗಿ ನಗರರಾಷ್ಟ್ರ (City-state) ವಾಯಿತು. ಆದರೂ ದೇಶಕ್ಕೆ ವಿಪತ್ತುಬಂದಾಗ ತಮ್ಮ ಸ್ವಾತಂತ್ರ್ಯವನ್ನು ಕಾಪಾಡುವುದಕ್ಕೆ ಗ್ರೀಕರು ತಮ್ಮ ಒಳಜಗಳವನ್ನು ಮರೆತು, ಸಂಕುಚಿತ ಭಾವನೆಯನ್ನು ವ್ಯಕ್ತಪಡಿಸದೆ ಒಂದುಗೂಡಿ ದೇಶವನ್ನು ರಕ್ಷಿಸುವುದರಲ್ಲಿ ಆಸಕ್ತಿ ಹೊಂದಿರುವುದು ಅವರ ಇತಿಹಾಸದ ವೈಶಿಷ್ಟ್ಯವೆಂದು ಹೇಳಬಹುದು. ಗ್ರೀಸ್ ದೇಶದ ನದಿಗಳು ಜನಗಳಿಗೆ ಯಾವ ವಿಧವಾದ ಅನುಕೂಲತೆಯಿಲ್ಲದೆ ವ್ಯವಸಾಯಕ್ಕಾಗಲೀ, ಸಮುದ್ರಯಾನಕ್ಕಾಗಲೀ ಏನೇನೂ ಸಹಾಯವಾಗಿರಲಿಲ್ಲ. ಈ ನದಿಗಳು ಬಂಡೆಯ ಮೇಲೆ ಹರಿದು ಪ್ರವಾಹಗಳಿಂದ ತುಂಬಿದ್ದರಿಂದ ಅವುಗಳು ಗೂಳಿಯ ದೇಹವನ್ನು ಹೊಂದಿ ಮನುಷ್ಯನ ತಲೆಯನ್ನು ಹೊಂದಿದ್ದವು ಎಂದು ಹೇಳಬಹುದು. ದೇಶದ ವಾಯುಗುಣವು ಶೀತೋಷ್ಣ ಸಮವಾಗಿದ್ದರಿಂದ ಜನಗಳು ಆರೋಗ್ಯವಂತ

ರಾಗಿದ್ದರು. ಪ್ರಕೃತಿ ಸೌಂದರ್ಯವು ಅವರ ಜ್ಞಾನಶಕ್ತಿಯನ್ನು ಅಭಿವೃದ್ಧಿ ಪಡಿಸಿ ಅವರು ಕಲೋಪಾಸಕರಾದರು. ಸಮುದ್ರವು ಅವರ ಐಕ್ಯತೆಯ ಕಟ್ಟಾಗಿ ಅವರು ಯಾವಾಗಲೂ ಬಯಲು ಪ್ರದೇಶದಲ್ಲೇ ಜೀವನವನ್ನು ನಡೆಸುವಹಾಗೆ ತೋರುತಿತ್ತು.

ಅಧ್ಯಾಯ ೨
ಏಜಿಯನ್ ನಾಗರಿಕತೆ

ಗ್ರೀಕರ ಇತಿಹಾಸದಲ್ಲಿ ಏಜಿಯನ್ ನಾಗರಿಕತೆಯು ಬಹಳ ಪುರಾತನವಾದುದು. ಈ ನಾಗರಿಕತೆಯು ಗ್ರೀಕರ ನಾಗರಿಕತೆಗೆ ತಳಹದಿ ಎಂದು ಹೇಳಬಹುದು. ೧೯ ನೆಯ ಶತಮಾನದವರೆವಿಗೂ ಈ ನಾಗರಿಕತೆಯ ವಿಚಾರವಾಗಿ ನಮಗೆ ಏನೂ ತಿಳಿದಿರಲಿಲ್ಲ. ಹೋಮರ್‌ನೆಂಬ ಸುಪ್ರಸಿದ್ಧನಾದ ಕವಿಯು ತನ್ನ ಬರವಣಿಗೆಯಲ್ಲಿ ಆಗಾಗ್ಗೆ ಏಷ್ಯಾಮೈನರಿನಲ್ಲಿ ಇರುವ ಟ್ರಾಯ್, ಗ್ರೀಸಿನಲ್ಲಿರುವ ಮೈಸಿನೆ, ಕ್ರೀಟ್‌ದ್ವೀಪದಲ್ಲಿರುವ ಕ್ಯಾಸನ್ ಎಂಬ ಪಟ್ಟಣಗಳು ನಾಗರಿಕತೆಯಲ್ಲಿ ಮುಂದುವರೆದಿದ್ದವೆಂದು ಹೇಳಿರುವುದೇ ಈ ನಾಗರಿಕತೆಯನ್ನು ಕಂಡುಹಿಡಿಯುವುದಕ್ಕೆ ಸೂಚನೆಯಾದವು. ಅದರಲ್ಲೂ ಕ್ರೀಟ್ ದ್ವೀಪವನ್ನ ಕುರಿತು "ನೂರು ಪಟ್ಟಣಗಳ ಸಮುದ್ರದ ರಾಣಿ" ಎಂದು ಹೇಳಿರುವುದು ವಿದ್ವಾಂಸರ ಕುತೂಹಲವನ್ನು ಕೆರಳಿಸಿತು.

ಗ್ರೀಸಿನಲ್ಲಿ ನಡೆದ ಭೂಶೋಧನೆಗಳು:—ಒಂದು ದೇಶದ ಪುರಾತನ ನಾಗರಿಕತೆಯನ್ನು ಕಂಡುಹಿಡಿಯುವುದಕ್ಕೆ ಭೂಶೋಧನೆಯು ಮುಖ್ಯವಾದ ಉಪಕರಣವೆಂದು ಹೇಳಬಹುದು. ಅಂದರೆ ಸಾಹಿತ್ಯದಲ್ಲಿಯಾಗಲಿ, ಇತರ ಬರವಣಿಗೆಯಲ್ಲಿಯಾಗಲಿ ಯಾವುದಾದರೂ ಪಟ್ಟಣವು ಪ್ರಸಿದ್ಧವಾಗಿತ್ತು ಎಂದು ವರ್ಣಿಸಿದ್ದರೆ ಭೂಶೋಧನೆಯಿಂದ ಅದರ ನಿಜಸ್ಥಿತಿಯನ್ನು ಕಂಡುಹಿಡಿಯಬಹುದು. ಸಾಧಾರಣವಾಗಿ ಪ್ರಾಚೀನ ಶೋಧಕರು ಯಾವುದಾದರೂ ಸ್ಥಳವನ್ನು ನೋಡಿದ ತತ್‌ಕ್ಷಣವೇ ಅದು ಇತಿಹಾಸ ದೃಷ್ಟಿಯಿಂದ ಮುಖ್ಯವಾಗಿದೆ ಎಂದು ಭೂಶೋಧನೆ ನಡೆಸುತ್ತಾರೆ. ಸುಮಾರು ಕ್ರಿ. ಶ. ೧೮೭೦ ರಲ್ಲಿ ಸ್ಲೀಮನ್ಸ್ ಎಂಬ ಜರ್ಮನಿ ದೇಶದ

ವ್ಯಾಪಾರಸ್ಥನು ತನ್ನ ಐಶ್ವರ್ಯವನ್ನೆಲ್ಲಾ ಟ್ರಾಯ್ ಮತ್ತು ಮೈಸಿನೆ ಎಂಬ ಸ್ಥಳಗಳಲ್ಲಿ ಭೂಶೋಧನೆ ನಡೆಸುವುದಕ್ಕೆ ಉಪಯೋಗಿಸಿದನು. ಟ್ರಾಯ್ ಎಂಬ ಸ್ಥಳದಲ್ಲಿ ಅಗೆದಾಗ ಒಂದು ಪಟ್ಟಣದ ಕೆಳಗೆ ಇನ್ನೊಂದು ಪಟ್ಟಣವು, ಹೀಗೆ ಆರು ಪಟ್ಟಣಗಳು ಕಂಡುಬಂದುವು. ಮೊದಲನೇ ಪಟ್ಟಣದಲ್ಲಿ ಕಂಡ ಪ್ರಾಚೀನಾವಶೇಷಗಳಿಂದ ಅದು ಕ್ರಿ. ಪೂ. ೩೦೦೦ ದಲ್ಲಿ ಪ್ರಸಿದ್ಧವಾಗಿತ್ತು ಎಂದು ಹೇಳಬಹುದು. ಇದೇ ರೀತಿಯಾಗಿ ದಕ್ಷಿಣ ಗ್ರೀಸಿನಲ್ಲಿ ಮೈಸಿನೆ ಎಂಬ ಸ್ಥಳದಲ್ಲಿಯೂ ಭೂಶೋಧನೆ ನಡೆಯಿತು. ಈ ಸ್ಥಳದಲ್ಲಿ ಸಿಕ್ಕಿದ ಅವಶೇಷಗಳೂ ಟ್ರಾಯ್ ಪಟ್ಟಣದಲ್ಲಿ ಸಿಕ್ಕಿದ ಅವಶೇಷಗಳೂ ಒಂದೇ ರೀತಿಯಾಗಿದ್ದರಿಂದ ಟ್ರಾಯ್, ಮೈಸಿನೆ ನಾಗರಿಕತೆಯು ಒಂದೇ ಗುಂಪಿಗೆ ಸೇರಿದ್ದೆಂದು, ಇದನ್ನು ಮೈಸಿನಿಯನ್ ನಾಗರಿಕತೆಯೆಂದೂ ಹೇಳಬಹುದು. ಈ ಸ್ಥಳಗಳಲ್ಲಿ ಸಿಕ್ಕಿದ ಅವಶೇಷಗಳು ಕಂಚಿನಿಂದ ಮಾಡಲ್ಪಟ್ಟದ್ದವು. ಇವು ಕಂಚಿನ ಯುಗಕ್ಕೆ ಸೇರಿದ್ದವು. ಮಾನವನ ನಾಗರಿಕತೆಯ ಇತಿಹಾಸದ ಪ್ರಾಚೀನತೆಯನ್ನು ಅವನು ಉಪಯೋಗಿಸುವ ಲೋಹದಿಂದ ಕಂಡುಹಿಡಿಯಬಹುದು. ಶಿಲಾಯುಗ, ಕಂಚಿನಯುಗ, ತಾಮ್ರಯುಗ, ಕಬ್ಬಿಣದ ಯುಗ—ಇವು ಮಾನವನ ಇತಿಹಾಸದ ಬೇರೆ ಬೇರೆ ಅಂತಸ್ತುಗಳು. ಆಧುನಿಕ ನಾಗರಿಕತೆಯು ಕಬ್ಬಿಣದ ಯುಗಕ್ಕೆ ಸೇರಿದ್ದು. ಏಜಿಯನ್ ನಾಗರಿಕತೆಯು ಶಿಲಾಯುಗಕ್ಕೆ ಸೇರಿದ್ದರಿಂದ ಅದರ ಪ್ರಾಚೀನತೆಯನ್ನು ತೋರಿಸುತ್ತದೆ.

ಕ್ರೀಟ್ ದ್ವೀಪದಲ್ಲಿ ಭೂಶೋಧನೆಗಳು :—ಇದೇ ರೀತಿಯಾಗಿ ಕ್ರೀಟ್‌ದ್ವೀಪದಲ್ಲಿಯೂ ಭೂಶೋಧನೆಗಳು ನಡೆದವು. ಕ್ರಿ. ಶ. ೧೯೦೦ ರಲ್ಲಿ ಸರ್ ಆರ್ಥರ್ ಇವಾನ್ಸ್ ಎಂಬ ವಿದ್ವಾಂಸನು ಕ್ರೀಟ್ ದ್ವೀಪದಲ್ಲಿ ಭೂಶೋಧನೆಯನ್ನು ನಡೆಸಿದನು. ಮುಖ್ಯವಾಗಿ ಕ್ನಾಸಸ್ ಪಟ್ಟಣದ ವೈಶಿಷ್ಟ್ಯವನ್ನು ಕಂಡುಹಿಡಿಯಬೇಕೆಂಬುದೇ ಆತನ ಅಭಿಲಾಷೆ. ಇಲ್ಲಿ ನಡೆದ ಭೂಶೋಧನೆಗಳು ಪ್ರಪಂಚದಲ್ಲಿ ವಿಸ್ಮಯವನ್ನು ಉಂಟುಮಾಡಿದವು. ಈ ದ್ವೀಪದಲ್ಲಿ ಅನೇಕ ಸ್ಥಳಗಳಲ್ಲಿ ಭೂಶೋಧನೆ ಮಾಡಿ ಮುಖ್ಯ ಅವಶೇಷಗಳು ಸಿಕ್ಕಿದವು. ಇವು ಶಿಲಾಯುಗಕ್ಕೆ ಸೇರಿದ್ದವು ಎಂದು ಖಚಿತವಾಗಿ ಹೇಳಬಹುದು. ಈ ನಾಗರಿಕತೆಯನ್ನು ಏಜಿಯನ್ ನಾಗರಿಕತೆಯೆಂದು

ಕರೆಯಬಹುದು. ಇದು ಏಜಿಯನ್ ಸಮುದ್ರ ಭಾಗಗಳಲ್ಲಿ ವಿಸ್ತರಿಸಿ ಟ್ರಾಯ್, ಮೈಸಿನೆ ಪಟ್ಟಣಗಳಲ್ಲಿಯೂ ಹರಡಿ ಕ್ರಿ. ಪೂ. ೧೩೫೦ ರಲ್ಲಿ ಅಕಸ್ಮಾತ್ತಾಗಿ ಅಳಿಯಿತು. ಕ್ರೀಟ್‌ದ್ವೀಪವು ಪೂರ್ವಕ್ಕೂ ಪಶ್ಚಿಮಕ್ಕೂ ಮಧ್ಯದಲ್ಲಿರುವುದರಿಂದ ವ್ಯಾಪಾರಕ್ಕೆ ಬಹಳ ಅನುಕೂಲವಾಗಿತ್ತು. ಏಜಿಯನ್ ನಾಗರಿಕತೆಯು ಒಂದು ರೀತಿ ವಾಣಿಜ್ಯ ನಾಗರಿಕತೆಯೆಂದು ಹೇಳಬಹುದು. ಈ ದ್ವೀಪವು ಫಲವತ್ತಾಗಿತ್ತು. ಮೀನಿನ ವ್ಯಾಪಾರ ದಿಂದ ವಿಶೇಷ ಐಶ್ವರ್ಯವನ್ನು ಸಂಪಾದಿಸಿ ಕ್ರೀಟ್‌ದೇಶದ ರಾಜರು ಪ್ರಬಲರಾಗಿದ್ದರು. ಸುತ್ತಲೂ ಸಮುದ್ರವಿರುವುದರಿಂದ ಕೋಟೆ ಕೊತ್ತಲೆ ಗಳ ಆವಶ್ಯಕತೆಯಿರಲಿಲ್ಲ. ಈ ನಾಗರಿಕತೆಯ ಕಾಲವನ್ನು ಕ್ರಿ. ಪೂ. ೩೦೦೦ ದಿಂದ—ಕ್ರಿ. ಪೂ. ೧೩೫೦ ರವರೆಗೆ ಎಂದು ನಿರ್ಣಯಿಸಬಹುದು.

ಕ್ನಾಸಸ್ :—ಕ್ನಾಸಸ್ ಪಟ್ಟಣದಲ್ಲಿ ಭೂಶೋಧನೆಯಿಂದ ಕಂಡು ಬಂದ ಪ್ರಾಚೀನಾವಶೇಷಗಳು ಹೋಮರನು ವರ್ಣಿಸಿರುವ ಸಾಮಾಜಿಕ ಮತ್ತು ಧಾರ್ಮಿಕ ಜೀವನಕ್ಕೆ ಬಹಳಮಟ್ಟಿಗೆ ಹೋಲುತ್ತವೆ. ಈ ಪಟ್ಟ ಣವು ಸಾಂಪ್ರದಾಯಕವಾದ ಮಿನಾಸ್ ಎಂಬ ರಾಜನ ಪಟ್ಟಣವಾಗಿರ ಬಹುದು. ಆದ್ದರಿಂದ ಏಜಿಯನ್ ನಾಗರಿಕತೆಯನ್ನು ಮಿನೊವನ ನಾಗರಿಕತೆಯೆಂದು ಹೇಳಬಹುದು. ಈ ಪಟ್ಟಣದಲ್ಲಿ ಅನೇಕ ಅರಮನೆ ಗಳ ಅವಶೇಷಗಳು ಕಂಡುಬಂದಿವೆ. ಮೊದಲನೆಯ ಅರಮನೆಯು ಕ್ರಿ. ಪೂ. ೨೫೦೦ ರಲ್ಲಿ ಕಟ್ಟಿರಬಹುದು. ಅದಾದಮೇಲೆ ಕ್ರಿ. ಪೂ. ೨೦೦೦ ರಲ್ಲಿ ಹೊರಗಿನವರ ಧಾಳಿಯಿಂದ ತೊಂದರೆಯುಂಟಾಗಿ ಕಲೆಯು ಇಳಿತರವಾಯಿತು. ಪುನಃ ಕ್ರಿ. ಪೂ. ೧೬೦೦ ರಲ್ಲಿ ಭವ್ಯರೀತಿಯಲ್ಲಿ ಕಟ್ಟಲ್ಪಟ್ಟ ಈ ಅರಮನೆಯ ಅವಶೇಷಗಳು ಹೆಚ್ಚಾಗಿ ಉಳಿದಿವೆ. ಈ ಅರಮನೆಯ ವಿಸ್ತಾರವು ಆರು ಎಕರೆ; ಅನೇಕ ಕೊಠಡಿಗಳೂ, ಚಕ್ರ ವ್ಯೂಹಗಳುಳ್ಳ ಆವಾರಗಳೂ ಇವೆ. ಒಳಗಡೆ ಒಂದು ದೊಡ್ಡ ಪಡಸಾಲೆ ಯಲ್ಲಿ ಕಲ್ಲಿನಲ್ಲಿ ಕಟ್ಟಿರುವ ರಾಜನ ಸಿಂಹಾಸನವು ಕಂಡುಬರುತ್ತದೆ. ಈ ಪಡಸಾಲೆಯಲ್ಲಿ ಭವ್ಯವಾದ ದೊಡ್ಡ ಕಲ್ಲಿನ ಸೋಪಾನವು ನೋಡುವುದಕ್ಕೆ ಸೊಗಸಾಗಿದೆ. ಇದರ ಪಕ್ಕದಲ್ಲಿರುವ ಕೊಠಡಿಗಳಲ್ಲಿ ಕಲ್ಲಿನಿಂದ ಕಟ್ಟಿರುವ ದೊಡ್ಡ ಹೂಜಿಗಳು ಕಂಡಿವೆ. ಈ ಹೂಜಿಗಳಲ್ಲಿ ಧಾನ್ಯ, ಎಣ್ಣೆ ಮತ್ತು ಮದ್ಯ

ವನ್ನು ಸಂಗ್ರಹಿಸಿರುವ ಹಾಗೆ ಕಾಣುತ್ತೆ. ಈ ಕೊಠಡಿಗಳು ಅರಮನೆಯ ಉಗ್ರಾಣವೆಂದು ಹೇಳಬಹುದು. ಈ ಅರಮನೆಯ ಗೋಡೆಗಳು ಕಲ್ಲಿನಿಂದ ಕಟ್ಟಲ್ಪಟ್ಟಿದ್ದವು. ಒಳಗಡೆ ಗೋಡೆಯ ಮೇಲೆ ಗಾರೆ ಹಚ್ಚಿ, ಚಿತ್ರಕಲೆಯನ್ನು ಪ್ರದರ್ಶಿಸಿರುವುದು ಅವರ ಕಲೆಯ ಕುಶಲತೆಯನ್ನು ತೋರಿಸುತ್ತದೆ. ಅರಮನೆಯಲ್ಲಿದ್ದ ಸ್ನಾನದ ಕೊಠಡಿಗಳು, ನೀರಿನ ಸರಬರಾಜು, ಚರಂಡಿ ವ್ಯವಸ್ಥೆ ಇವು ಈ ನಾಗರಿಕತೆಯ ವೈಶಿಷ್ಟ್ಯವೆಂದು ಹೇಳಬಹುದು. ಪುರಾತನ ನಾಗರಿಕತೆಗಳಲ್ಲಿ ಗಮನಿಸಬೇಕಾದ್ದು ರೋಗನಿವಾರಣೆಯ ವ್ಯವಸ್ಥೆ. ಈ ವಿಚಾರದಲ್ಲಿ ಏಜಿಯನ್ ನಾಗರಿಕತೆಯು ನಮ್ಮ ದೇಶದ ಸಿಂಧೂ ಸಂಸ್ಕೃತಿಗೆ ಬಹಳಮಟ್ಟಿಗೆ ಹೋಲುತ್ತದೆ. ಅರಮನೆಯಲ್ಲಿ ಎರಡು, ಮೂರು ಅಂತಸ್ತಿನ ಮಹಡಿಗಳಿದ್ದು ಕೊಠಡಿಗಳಲ್ಲಿ ಸಾಕಾದಷ್ಟು ಬೆಳಕಿಗೆ ಅವಕಾಶವಿತ್ತು.

ಸಾಮಾಜಿಕ ಜೀವನ—ಏಜಿಯನ್ನರ ಸಾಮಾಜಿಕ ಜೀವನವು ಆಧುನಿಕ ಪಾಶ್ಚಾತ್ಯರ ಜೀವನವನ್ನು ಬಹಳಮಟ್ಟಿಗೆ ಹೋಲುತ್ತದೆ. ಹೆಂಗಸರ ಉಡುಗೆ ತೊಡಿಗೆಗಳು, ಆಧುನಿಕ ರೀತಿಯ ಎತ್ತರವಾದ ಹ್ಯಾಟುಗಳು, ಕಸೂತಿ ಕೆಲಸಮಾಡಿದ ಕುಪ್ಪಸಗಳು, ಲಂಗಗಳು, ಮೊನೆಯುಳ್ಳ ಮೆಟ್ಟುಗಳು ಪಾಶ್ಚಾತ್ಯರ ಉಡಿಗೆ ತೊಡಿಗೆಗಳನ್ನು ಹೋಲುತ್ತಿದ್ದುವು. ಗಂಡಸರು ಸರಳವಾದ ಉಡುಪನ್ನು ಉಪಯೋಗಿಸುತ್ತಿದ್ದರು. ಅವರು ಹ್ಯಾಟುಗಳನ್ನು ಹಾಕಿಕೊಳ್ಳುತ್ತಿರಲಿಲ್ಲ. ತಲೆಯ ಕೂದಲನ್ನು ಉದ್ದವಾಗಿ ಬೆಳಸಿ ಜಡೆಹಾಕಿಕೊಳ್ಳುತ್ತಿದ್ದರು. ಚಡ್ಡಿಯನ್ನು ಹಾಕಿಕೊಂಡು ಭುಜದಮೇಲೆ ಒಂದು ವಸ್ತ್ರವನ್ನು ಧರಿಸಿ, ಕಾಲಿಗೆ ತೊಗಲಿನ ಎತ್ತರದ ಜೋಡುಗಳನ್ನು ಹಾಕಿಕೊಳ್ಳುತ್ತಿದ್ದರು. ಯುದ್ಧದಲ್ಲಿ ಉದ್ದವಾದ ಭಲ್ಲೆಯನ್ನೂ, ಸಣ್ಣಕತ್ತಿಯನ್ನೂ ಉಪಯೋಗಿಸುತ್ತಿದ್ದರು. ತೊಗಲಿನ ಶಿರಸ್ತ್ರಾಣವನ್ನೂ ಬಿರುಸುಳ್ಳ ಲೋಹದ ಅಂಚಿನ ಮೆದುವಾದ ಚರ್ಮವನ್ನೂ ಯುದ್ಧದಲ್ಲಿ ರಕ್ಷಣೆಗೋಸ್ಕರ ಉಪಯೋಗಿಸುತ್ತಿದ್ದರು. ಯುದ್ಧದಲ್ಲಿ ಬಿಲ್ಲುಗಾರರು ಕುದುರೆ ಸವಾರರ ಜೊತೆಯಲ್ಲಿ ಹೋಗುತ್ತಿದ್ದರು. ರಥಗಳನ್ನು ಉಪಯೋಗಿಸುತ್ತಿದ್ದರು. ಆದರೂ ಕುದುರೆಗಳು ಹೊರದೇಶದಿಂದ ತರಲ್ಪಟ್ಟು, ಅವುಗಳನ್ನು ಸವಾರಿಗೆ ಉಪಯೋಗಿಸುತ್ತಿರಲಿಲ್ಲ. ಕ್ರೀಟ್ ದ್ವೀಪದಲ್ಲಿ ಹೆಚ್ಚಾಗಿ ಯುದ್ಧಕ್ಕೆ ಅವಕಾಶವಿರಲಿಲ್ಲ. ಕೋಟೆ ಕೊತ್ತಲಗಳ ಅವ

ಶ್ಯಕತೆ ಇರಲಿಲ್ಲ. ಈ ನಾಗರಿಕತೆಯು ಮೈಸಿನೆ, ಟಿರಿನ್ಸ್, ಟ್ರಾಯ್ ಪಟ್ಟಣಗಳಲ್ಲಿ ಹರಡಿದಾಗ ಆ ಪಟ್ಟಣಗಳಲ್ಲಿ ರಕ್ಷಣೆಗೋಸ್ಕರ ಕೋಟಿ ಕೊತ್ತಲುಗಳನ್ನೂ ಭಾರಿಯಾದ ಗೋಡೆಗಳನ್ನೂ ಕಟ್ಟಬೇಕಾಯಿತು.

ನಗರದ ವರ್ಣನೆ—ಕ್ನಾಸಸ್ ನಗರದಲ್ಲಿ ಮನೆಗಳು ಅವ್ಯವಸ್ಥಿತ ರೀತಿಯಲ್ಲಿ ಕಟ್ಟಲ್ಪಟ್ಟಿದ್ದವು. ಆದರೆ ಈ ಮನೆಗಳಿಗೆ ಹೆಚ್ಚಾಗಿ ಕಿಟಕಿಗಳಿದ್ದವು. ಒಳ್ಳೆಯ ಗಾಳಿ, ಬೆಳಕು ಬರುವುದಕ್ಕೆ ಅನುಕೂಲವಾಗಿದ್ದವು. ಈ ಮನೆಗಳ ಮೇಲ್ಛಾವಣಿಗಳು ಚಪ್ಪಟೆಯಾಗಿ ತಾರಸಿಯ ರೀತಿಯಲ್ಲಿದ್ದವು. ಬೀದಿಗಳು ಸುತ್ತು ಸುತ್ತಾಗಿ ಒಂದೇ ಸಮನಾಗಿರಲಿಲ್ಲ. ಅವು ಪಾದಚಾರಿಗಳಿಗೆ ಅನುಕೂಲವಾಗಿದ್ದವು. ಗಾಡಿಗಳ ಸಂಚಾರವು ಹೆಚ್ಚಾಗಿಲ್ಲದ್ದರಿಂದ ಈ ಬೀದಿಗಳು ಅಷ್ಟೇನೂ ಅನಾನುಕೂಲವಾಗಿರಲಿಲ್ಲ. ಬಟ್ಟೆಗಳನ್ನು ಮನೆಯಲ್ಲಿ ತಯಾರಿಸುತ್ತಿದ್ದರು. ಪ್ರತಿಯೊಂದು ಬೀದಿಯಲ್ಲಿಯೂ ಕುಂಬಾರರ ಮನೆಗಳಿದ್ದವು. ಅವರು ತಯಾರಿಸಿದ ಮಡಿಕೆಗಳು ಸುಂದರವಾಗಿದ್ದವು. ಬಣ್ಣದ ಮಡಿಕೆಗಳ ಮೇಲೆ ಅವರ ಚಿತ್ರಕಲೆಯ ಕುಶಲತೆಯನ್ನು ಕಾಣಬಹುದು. ಈ ಮಡಿಕೆಗಳು ಈಜಿಪ್ಟ್, ಸಿಸಿಲಿ ಮತ್ತು ಮೆಡಿಟರೇನಿಯನ್ ಸಮುದ್ರದ ಇತರ ಭಾಗಗಳಲ್ಲಿ ಉಪಯೋಗದಲ್ಲಿದ್ದವು. ಈ ಮಡಿಕೆಗಳ ವ್ಯಾಪಾರವು ಹೆಚ್ಚಾಗಿ ಲಾಭದಾಯಕವಾಗಿತ್ತು. ನಗರದಲ್ಲಿ ಚಿತ್ರಕೆಲಸದವರು ದಂತದಲ್ಲಿ, ಕಲ್ಲಿನಲ್ಲಿ, ಸಣ್ಣ ಚಿತ್ರಗಳನ್ನು ಕೊರೆಯುತ್ತಿದ್ದರು. ಅಕ್ಕಸಾಲಿಗರು ಚಿನ್ನದಲ್ಲಿ ಒಡವೆಗಳನ್ನು ಮಾಡುತ್ತಿದ್ದರು. ಅವರ ಆಯುಧಗಳಮೇಲೆಯೂ ಅವರ ಕೌಶಲ್ಯತೆಯನ್ನು ಕಾಣಬಹುದು.

ಬರವಣಿಗೆ:—ಬರವಣಿಗೆಯು ಇಲ್ಲದೆ ಯಾವ ನಾಗರಿಕತೆಯೂ ಮುಂದುವರಿಯುವುದಿಲ್ಲ. ಏಜಿಯನ್ ನಾಗರಿಕತೆಯಲ್ಲಿ ಬರವಣಿಗೆ ಇತ್ತೆಂದು ಹೇಳುವುದಕ್ಕೆ ಅವರ ಜೇಡಿ ಮಣ್ಣಿನ ಸಣ್ಣ ಹಲಗೆಗಳೇ ಆಧಾರ. ಕ್ರಿ. ಪೂ. ೩೦೦೦ ದಲ್ಲಿಯೇ ಸಂಕೇತ ಚಿತ್ರಗಳು ಅವರ ಬರವಣಿಗೆಯನ್ನು ಸೂಚಿಸುತ್ತವೆ. ಈ ಸಂಕೇತ ಚಿತ್ರಗಳಿಂದ ರೇಖೆಯ ಚಿಹ್ನೆಗಳು ಒಂದು ಬರವಣಿಗೆಯ ರೀತಿಯಲ್ಲಿ ಪರಿಣಮಿಸಿದವು. ಏಜಿಯನರ ಬರವಣಿಗೆಯು ಸಿಂಧೂಸಂಸ್ಕೃತಿಯ ಬರವಣಿಗೆಯಹಾಗೆ ಈವತ್ತಿಗೂ ತಿಳಿದಿಲ್ಲ.

ಗ್ರಾಮಜೀವನ—ಏಜಿಯನ್ ನಾಗರಿಕತೆಯು ಕೇವಲ ನಗರ ಜೀವನವಾಗಿರಲಿಲ್ಲ. ಅವರ ಚಿತ್ರಕಲೆಯಿಂದ ಅವರ ಗ್ರಾಮಜೀವನ ವನ್ನೂ ತಿಳಿದುಕೊಳ್ಳಬಹುದು. ಹುಲ್ಲುಗಾವಲುಗಳಲ್ಲಿಯೂ ಗುಡ್ಡಗಳ ಮೇಲೆಯೂ ಜಾನುವಾರಗಳನ್ನು ಮೇಯಿಸುತ್ತಿದ್ದರು. ವ್ಯವಸಾಯದಿಂದ ಜೀವನವನ್ನು ನಡೆಸುತ್ತಿದ್ದರು. ದ್ರಾಕ್ಷಾರಸವನ್ನು ತೆಗೆಯುವುದು, ಹಿಪ್ಪೆ ಎಣ್ಣೆಯನ್ನು ತೆಗೆಯುವುದು—ಇವು ಮುಖ್ಯವಾದ ಕಸಬುಗಳು. ಮೀನಿನ ವ್ಯಾಪಾರವು ಬಹಳ ಅಭಿವೃದ್ಧಿಯಲ್ಲಿತ್ತು. ಈಜಿಪ್ಟ್, ಕೈಪ್ರಸ್, ದಕ್ಷಿಣ ಇಟಲಿ, ಸಿಸಿಲಿ, ಮತ್ತು ಸ್ಪೈಯಿನ್—ಈ ದೂರ ದೇಶಗಳೊಡನೆ ವ್ಯಾಪಾರ ಮಾಡುತ್ತಿದ್ದರು. ಮದ್ಯ, ಎಣ್ಣೆ, ಮಡಿಕೆ ಮತ್ತು ಗೃಹಕೈಗಾರಿಕೆಯ ಸಾಮಾನುಗಳನ್ನು ರಫ್ತು ಮಾಡುತ್ತಿದ್ದರು. ದಂತ, ತಾಮ್ರ, ಸೀಸ, ತವರ, ಬೆಳ್ಳಿ, ಚಿನ್ನ ಮತ್ತು ಬಾಲ್ಟಿಕ್ ಸಮುದ್ರತೀರದಿಂದ ಹಾಲುಮಡ್ಡಿ—ಇವುಗಳನ್ನು ಆಮದುಮಾಡುತ್ತಿದ್ದರು.

ಮತ :—ಏಜಿಯನರ ಮತವು ಗ್ರೀಕರ ಮತದಿಂದ ಬೇರೆಯಾಗಿತ್ತು. ಏಜಿಯನರು ಗ್ರೀಕರಹಾಗೆ ಅನೇಕ ದೇವತೆಗಳನ್ನು ಪೂಜಿಸುತ್ತಿರಲಿಲ್ಲ. ಅವರ ಮುಖ್ಯವಾದ ದೇವತೆ ಪ್ರಕೃತಿಯನ್ನು ವ್ಯಕ್ತೀಕರಿಸುವ ಏಕ ಮಹಾಮಾತೆ. ಈ ಏಕ ಮಹಾಮಾತೆಯನ್ನು ಪ್ರಕೃತಿಯಲ್ಲಿಯೂ, ಭೂಮಿಯ ಮೇಲೂ, ಆಕಾಶದಲ್ಲೂ ಕಾಣಬಹುದು. ಆಕೆಗೆ ಮನುಷ್ಯಾಕಾರವಿಲ್ಲದಿದ್ದುದರಿಂದ ಆಕೆಯ ಮೂರ್ತಿಗಳಿರಲಿಲ್ಲ. ಆದರೂ ಎರಡು ತಲೆಯ ಕೊಡಲಿಗೂ ಪವಿತ್ರವಾದ ಸ್ಥಳದಲ್ಲಿರುವ ಕಂಬಗಳಿಗೂ ಪೂಜೆಯನ್ನು ಮಾಡುತ್ತಿದ್ದರು. ಇಂಥ ಪವಿತ್ರಸ್ಥಳಗಳು ಅರಮನೆಗಳಲ್ಲಿದ್ದುದರಿಂದ ರಾಜನೇ ಮುಖ್ಯವಾದ ಪುರೋಹಿತನಾಗಿದ್ದನೆಂದು ಹೇಳಬಹುದು. ಮುಂದೆ ಈ ಮಹಾಮಾತೆಯನ್ನು ಮನುಷ್ಯಾಕಾರದಲ್ಲಿ ಪೂಜಿಸುತ್ತಿದ್ದರು. ಆಕೆಯ ಸೇವೆಯನ್ನು ಪಾರಿವಾಳಗಳೂ, ಹಾವುಗಳೂ ಮಾಡುತ್ತಿದ್ದವು. ಇವು ಆಕೆಯ ವಾಯುವಿನಲ್ಲಿಯೂ ಭೂಮಿಯ ಮೇಲೂ ಇರುವ ಅದ್ಭುತಶಕ್ತಿಯ ಸಾಂಕೇತಿಕ ಚಿಹ್ನೆಯಾಗಿದ್ದುವು. ಗ್ರೀಕರು ಈ ಪ್ರದೇಶಗಳಲ್ಲಿ ನೆಲಸಿದಾಗ ಈ ಮಹಾಮಾತೆಯನ್ನು ತಮ್ಮ ದೇವತೆಗಳಲ್ಲಿ ಸೇರಿಸಿಕೊಂಡು ಆಫ್ರೈಡೈಟ, ಆರ್ಟೆಮಿಸ್ ಎಂದು ಪೂಜಿಸುತ್ತಿದ್ದರು.

ಸಮಾಧಿ:—ಏಜಿಯನರು ಸತ್ತವರಿಗೆ ಸಮಾಧಿಯನ್ನು ಕಟ್ಟುತ್ತಿದ್ದರು. ಗ್ರೀಕರ ಪದ್ಧತಿಯಂತೆ ಅವರು ಸತ್ತ ದೇಹವನ್ನು ದಹನ ಮಾಡುತ್ತಿರಲಿಲ್ಲ. ಈ ಸಮಾಧಿಗಳು ಸಣ್ಣ ಕಲ್ಲಿನಿಂದಲೋ, ಮಣ್ಣಿನಿಂದಲೋ ಕಟ್ಟಲ್ಪಟ್ಟ ಕೋಣೆಗಳಾಗಿದ್ದವು. ಒಳಗೆ ದೇಹವನ್ನು ಮಲಗಿರುವ ಅಥವಾ ಕುಳಿತಿರುವ ಸ್ಥಿತಿಯಲ್ಲಿರಿಸಿ, ಇನ್ನೊಂದು ಲೋಕದಲ್ಲಿ ಉಪಯೋಗಕ್ಕೆ ಬರಲೆಂದು ಆಯುಧಗಳನ್ನೂ, ಪಾತ್ರೆಗಳನ್ನೂ ಇತರ ಉಪಕರಣಗಳನ್ನೂ ಇಡುತ್ತಿದ್ದರು. ಪುರಾತನ ಸಮಾಧಿಗಳಲ್ಲಿ ಸಾಧಾರಣವಾಗಿ ಸತ್ತ ಮನುಷ್ಯನು ಬದುಕಿರುವಾಗ ಯಾವ ಪದಾರ್ಥಗಳು ಶ್ರೇಷ್ಠವೆಂದು ಎಣಿಸಿದ್ದನೋ ಅವುಗಳನ್ನು ಹೂಳುವುದು ಪದ್ಧತಿಯಾಗಿತ್ತು. ಈಜಿಪ್ಟ್ ದೇಶದ ಸಮಾಧಿಗಳು ಐಶ್ವರ್ಯದ ನಿಧಿಯೆಂದು ಹೇಳಬಹುದು. ಕಳ್ಳತನವನ್ನು ತಪ್ಪಿಸುವುದಕ್ಕೆ ಈ ಸಮಾಧಿಗಳನ್ನು ಆಳವಾಗಿ ತೋಡಿ ಕಟ್ಟುತ್ತಿದ್ದರು. ಮೈಸಿನೆ ನಾಗರಿಕತೆಯ ದೊರೆಗಳಿಗೆ ಈ ರೀತಿಯ ಸಮಾಧಿಗಳನ್ನು ಕಟ್ಟುವುದು ರೂಢಿಯಾಗಿತ್ತು. ಶವವು ಕೊಳೆಯದಂತೆ ಸುಗಂಧ ಲೇಪಮಾಡುವುದು, ಮುಖಕ್ಕೆ ಚಿನ್ನದ ಮುಖವಾಡವನ್ನು ಹಾಕುವುದು, ಕಂಚಿನ ಆಯುಧಗಳು, ಚಿನ್ನದ ಒಡವೆಗಳು—ಇವೂ ಮೈಸಿನೆ ನಾಗರಿಕತೆಯ ಸಮಾಧಿಗಳ ಶ್ರೇಷ್ಠತೆಯೆಂದು ಹೇಳಬಹುದು. ಈಚಿನ ಸಮಾಧಿಗಳನ್ನು ಗುಡ್ಡದ ಹತ್ತಿರ ಜೇನುಗೂಡಿನ ರೀತಿಯಲ್ಲಿ ದೊಡ್ಡದಾಗಿಯೂ ವಿಸ್ತಾರವಾಗಿಯೂ ಕಟ್ಟುವುದು ಸಂಪ್ರದಾಯವಾಯಿತು. ಈ ಸಮಾಧಿಗಳ ಕೆತ್ತನೆಯ ಕೆಲಸ, ಬಣ್ಣದ ಅಲಂಕಾರ ನೋಡಲು ಸೊಗಸಾಗಿವೆ.

ಕ್ನಾಸಸಿನ ಪತನ:—ಏಜಿಯನ್ ನಾಗರಿಕತೆಯು ಸುಮಾರು ೧೫೦೦ ವರ್ಷಗಳವರೆಗೂ ಅಭಿವೃದ್ಧಿಯಲ್ಲಿತ್ತು. ಈ ನಾಗರಿಕತೆಯು ಅಕಸ್ಮಾತ್ತಾಗಿ ನಾಶವಾಯಿತು. ಇದು ಹೇಗೆ ನಾಶವಾಯಿತೆಂದು ಹೇಳುವುದು ಕಷ್ಟ. ಕ್ರಿ. ಪೂ. ೧೪೫೦ ರಲ್ಲಿ ಕ್ನಾಸಸಿನ ಅರಮನೆಯನ್ನು ಸುಟ್ಟು ನಾಶಪಡಿಸಿರುವ ಹಾಗೆ ಕಾಣುತ್ತದೆ. ಏಜಿಯನರ ನಾಗರಿಕತೆಯೂ ಕೊನೆಗೊಂಡಿತು. ಕ್ರಿ. ಪೂ. ೧೦೦೦ ರಲ್ಲಿ ಈ ನಾಗರಿಕತೆಯು ಪೂರ್ಣವಾಗಿ ನಾಶವಾಯಿತೆಂದು ಹೇಳಬಹುದು. ಕ್ರೀಟ್‌ದ್ವೀಪದ ಕೀರ್ತಿಯು ಅದೃಶ್ಯವಾಯಿತು.

ಅಧ್ಯಾಯ ೩

ಗ್ರೀಕರ ದಂಡಯಾತ್ರೆ

ಕ್ರಿ. ಪೂ. ೧೩೫೦ ರಲ್ಲಿ ಏಜಿಯನರ ನಾಗರಿಕತೆಯು ಅಕಸ್ಮಾತ್ತಾಗಿ ನಾಶವಾಯಿತು. ಇದಾದ ೩೦೦ ವರ್ಷಗಳವರೆವಿಗೂ, ಸುಮಾರು ಕ್ರಿ. ಪೂ. ೧೦೦೦ ದ ವರೆವಿಗೂ ಗ್ರೀಕರ ಇತಿಹಾಸವನ್ನು ಒಂದು ರೀತಿಯ "ಕತ್ತಲೆಯ ಕಾಲ" ವೆಂದು ಹೇಳಬಹುದು. ಅಂದರೆ ಈ ಕಾಲದಲ್ಲಿ ಯಾವ ರೀತಿಯಾದ ಪ್ರಗತಿಯೂ ಇರಲಿಲ್ಲ. ಗ್ರೀಸ್‌ದೇಶದ ಎಲ್ಲಾ ಭಾಗ ಗಳಲ್ಲಿಯೂ ಗಲಭೆಗಳು ಹರಡಿ ಶಾಂತಿಗೆ ಧಕ್ಕೆ ಬಂದಿತು. ಗ್ರೀಸ್ ದೇಶಕ್ಕೆ ಉತ್ತರದಿಂದ ಬಂದ ಕಾಡುಜನರು ಎಲ್ಲೆಲ್ಲಿಯೂ ನುಗ್ಗಿ ಧಾಳಿ ನಡೆಸಿದರು. ಅವರ ದಂಡಯಾತ್ರೆಗೆ ಮಿತಿಯೇ ಇರಲಿಲ್ಲ. ಅವರು ಕ್ರೀಟ್ ದ್ವೀಪಕ್ಕೂ ನುಗ್ಗಿ ಏಜಿಯನ್ ನಾಗರಿಕತೆಯನ್ನು ಸಂಪೂರ್ಣವಾಗಿ ನಾಶಮಾಡಿದರೆಂದು ಹೇಳಬಹುದು.

ಉತ್ತರದಿಂದ ಬಂದ ಆಕ್ರಮಣಕಾರರು :— ಉತ್ತರದಿಂದ ಬಂದ ಕಾಡುಜನರು ಗ್ರೀಸ್‌ದೇಶದ ಎಲ್ಲಾ ಭಾಗಗಳನ್ನೂ ಆಕ್ರಮಿಸಿ ಕೊನೆಗೆ ಅಲ್ಲಿಯೇ ನೆಲಸಿದರು. ತಮ್ಮ ದೇಶದಲ್ಲಿ ಆಹಾರವು ಸಿಕ್ಕುವುದು ಕಷ್ಟವಾದ್ದರಿಂದ ಇವರು ಬೇರೆ ಬೇರೆ ದೇಶಗಳಲ್ಲಿ ನೆಲಸಿ ಪ್ರಾಬಲ್ಯಕ್ಕೆ ಬಂದರು. ಇವರು ಒಂದೇ ದೇಶದಲ್ಲಿ ನೆಲಸದೆ ತಂಡತಂಡವಾಗಿ ಬೇರೆ ಬೇರೆ ದೇಶಗಳಲ್ಲಿ ನೆಲಸಿದರೆಂದು ಕಾಣುತ್ತದೆ. ಇವರೆಲ್ಲಾ ಒಂದೇ ಬುಡ ಕಟ್ಟಿಗೆ ಸೇರಿದ ಆರ್ಯರೆಂದು ಹೇಳಬಹುದು. ಇವರ ಶಾರೀರಕ ಲಕ್ಷಣಗಳು ಒಂದೇ ರೀತಿಯಾಗಿದ್ದವು. ಇವರು ನೋಡುವುದಕ್ಕೆ ಸುಂದರರಾಗಿದ್ದರು. ಒಳ್ಳೆ ಮೈಕಟ್ಟು ಹೊಂದಿದ್ದರು. ಇವರೆಲ್ಲಾ ಒಂದೇ ರೀತಿಯಾದ ಭಾಷೆಯನ್ನು ಮಾತನಾಡುತ್ತಿದ್ದರು. ಇವರಲ್ಲಿ ಒಂದೇ ರೀತಿಯಾದ ಸಂಪ್ರದಾಯಗಳಿದ್ದವು. ಸತ್ತವರನ್ನು ದಹನಮಾಡುವುದು ಇವರ ಪದ್ಧತಿಯಾಗಿತ್ತು. ಅನೇಕ ದೇವತೆಗಳನ್ನು ಪೂಜಿಸುವುದು ವಾಡಿಕೆಯಲ್ಲಿತ್ತು. ಇವರಲ್ಲಿ ಒಂದು ಗುಂಪು ಗ್ರೀಸ್‌ದೇಶಕ್ಕೆ ನುಗ್ಗಿ ಕೊನೆಗೆ ಅಲ್ಲಿಯೇ ನೆಲಸಿದರು. ಗ್ರೀಸ್ ದೇಶದಲ್ಲಿ ನೆಲ ಸಿದ ಮೇಲೆ ಇವರನ್ನು ಗ್ರೀಕರೆಂದು ಕರೆಯುವುದು ವಾಡಿಕೆಯಾಯಿತು.

ಇನ್ನೊಂದು ಗುಂಪು ಮಧ್ಯ ಏಷ್ಯಾದಿಂದ ಹಿಂದೂ ದೇಶದಲ್ಲಿ ನೆಲಸಿದ ಆರ್ಯರೆಂದು ಹೇಳುತ್ತಾರೆ.

ಗ್ರೀಕರು :—ಮೊದಲು ಬಂದವರು ಆಲ್ಬೇನಿಯಾ ದೇಶದ ಪರ್ವತಗಳಲ್ಲಿ ವಾಸಮಾಡುತ್ತಿದ್ದವರು. ಇವರು ಗ್ರೀಸ್‌ದೇಶದ ಪಶ್ಚಿಮ ಕಣಿವೆಗಳಿಂದ ಬಂದು ಪಿಂಡಸ್ ಪರ್ವತಶ್ರೇಣಿಯನ್ನು ದಾಟಿ ದಕ್ಷಿಣ ಗ್ರೀಸಿನಲ್ಲಿಯೂ ದಂಡಯಾತ್ರೆ ನಡೆಸಿದರು. ಇವರೆಲ್ಲಾ ಒಂದೇ ಗುಂಪಿಗೆ ಸೇರಿ, ಒಂದೇ ಭಾಷೆಯನ್ನು ಮಾತನಾಡುತ್ತಿದ್ದರು. ಇವರನ್ನು ಗ್ರೀಕರು ಅಥವಾ ಹೆಲೆನರು ಎಂದು ಕರೆಯುತ್ತೇವೆ. ಗ್ರೀಸ್ ದೇಶವನ್ನು ಹೆಲ್ಲಾಸ್ ಎಂದೂ ಕರೆಯುತ್ತಾರೆ.

ಫ್ರಿಜಿಯನರು :—ಇನ್ನೊಂದು ಗುಂಪು ಗ್ರೀಸ್ ದೇಶದ ಉತ್ತರಕ್ಕೆ ಬಂದು ಪೂರ್ವಕ್ಕೆ ತಿರುಗಿ ಭಾಸ್ಫೊರಸ್ ಜಲಸಂಧಿಯನ್ನು ದಾಟಿ ಟ್ರಾಯ್ ಎಂಬ ಪಟ್ಟಣದಲ್ಲಿ ನೆಲಸಿದರು. ಇವರು ದೊಡ್ಡ ಕೋಟೆಗಳನ್ನುಕಟ್ಟಿ ಟ್ರಾಯ್ ಪಟ್ಟಣವನ್ನು ಅಭಿವೃದ್ಧಿಪಡಿಸಿದರು. ಇಲ್ಲಿಂದ ಮುಂದಕ್ಕೆ ಫ್ರಿಜಿಯ ಎಂಬ ಪ್ರದೇಶದಲ್ಲಿ ನೆಲಸಿದ್ದರಿಂದ ಇವರನ್ನು ಫ್ರಿಜಿಯನರು ಎಂದು ಕರೆಯುತ್ತಾರೆ. ಹೋಮರ್ ಕವಿಯು ಟ್ರಾಯ್ ಪಟ್ಟಣದ ವೈಭವ ವನ್ನು ವರ್ಣಿಸಿದ್ದಾನೆ. ಇವರು ಮೆಸಿಡೋನಿಯಾ, ಥೆಸಲಿ ಪ್ರದೇಶಗ ಳನ್ನೂ ಆಕ್ರಮಿಸಿದರು. ಇವರನ್ನು ಪ್ರಸಿದ್ಧರಾದ ಟ್ರೋಜನರೆಂದೂ ಕರೆಯಬಹುದು.

ಅಖೇಯನರ ದಂಡಯಾತ್ರೆ :—ಕ್ರಿ. ಪೂ ೧೩೦೦ ರಲ್ಲಿ ಇವರ ಬುಡಕಟ್ಟಿಗೆ ಸೇರಿದ ಅಖೇಯನರು ಗ್ರೀಸ್ ದೇಶದಲ್ಲಿ ದಂಡಯಾತ್ರೆಯನ್ನು ಮಾಡಿ ಕ್ರೀಟ್ ದ್ವೀಪವನ್ನೂ ಆಕ್ರಮಿಸಿದರು. ಇವರು ಹೋದಕಡೆಯಲ್ಲಿ ಕೊಳ್ಳೆಹೊಡೆಯುವುದು, ಯುದ್ಧಮಾಡುವುದು — ಇವುಗಳಲ್ಲಿ ಆಸಕ್ತಿ ಯನ್ನು ತೋರಿಸಿದರು. ತಮ್ಮ ಭಾಷೆಯಲ್ಲಿ–ಅಂದರೆ ಗ್ರೀಕ್ ಭಾಷೆಯಲ್ಲಿ ಮಾತನಾಡುತ್ತಿದ್ದರು. ತಮ್ಮ ದೇವತೆಗಳನ್ನೇ ಪೂಜಿಸುತ್ತಿದ್ದರು. ಸತ್ತವ ರಿಗೆ ದಹನವನ್ನು ಮಾಡುವುದು ಇವರ ಸಂಪ್ರದಾಯ. ಆದರೆ ಕಲಾಕೌಶ ಲ್ಯದಲ್ಲಿ ಏಜಿಯನರ ರೀತಿಯನ್ನು ಅನುಸರಿಸಿದರು. ಥೆಸಲಿ, ಲೆಕೋನಿಯ, ಆರ್ಗಾಲಿಸ್ ಪ್ರದೇಶಗಳಲ್ಲಿ ಇವರ ಜೈತ್ರಯಾತ್ರೆಯು ಸಂಪೂರ್ಣ

ವಾಯಿತು. ಕ್ರಿ. ಪೂ. ೧೪ನೇ ಶತಮಾನದ ಕೊನೆಯಲ್ಲಿ ಗ್ರೀಸ್ ದೇಶದ ಎಲ್ಲಾ ಭಾಗಗಳಲ್ಲಿಯೂ ಇವರ ದಂಡಯಾತ್ರೆಯು ವಿಸ್ತರಿಸಿ, ಕ್ರೀಟ್ ದ್ವೀಪವನ್ನೂ ಆಕ್ರಮಿಸಿ, ಏಜಿಯನರ ನಾಗರಿಕತೆಯನ್ನು ಸಂಪೂರ್ಣವಾಗಿ ನಾಶಮಾಡಿದರು. ಕ್ರಿ. ಪೂ. ೧೨೦೦ ರಲ್ಲಿ ಇವರು ಈಜಿಪ್ಟ್ ದೇಶವನ್ನೂ ಆಕ್ರಮಿಸಿದರೆಂದು ಹೇಳಬಹುದು.

ಟ್ರೋಜನ್ ಯುದ್ಧ :--ಕ್ರಿ. ಪೂ. ೧೨೦೦—ಉತ್ತರ ಗ್ರೀಸಿನಲ್ಲಿದ್ದ ಅಖೇಯನರು ಪೂರ್ವದಕಡೆಗೆ ತಿರುಗಿ ತಮ್ಮ ನೌಕಾಬಲದಿಂದ ಕಪ್ಪುಸಮುದ್ರವನ್ನು ಪರಿಶೋಧಿಸುವಾಗ ಟ್ರಾಯ್ ಪಟ್ಟಣದಲ್ಲಿದ್ದ ಫ್ರಿಜಿಯನರಮೇಲೆ ಯುದ್ಧಮಾಡಬೇಕಾಯಿತು. ಇದನ್ನೇ ಪ್ರಸಿದ್ಧವಾದ ಟ್ರೋಜನ್ ಯುದ್ಧವೆಂದು ಕರೆಯುತ್ತಾರೆ. ಹೋಮರ್ ಕವಿಯು ಹೇಳುವಂತೆ ಪ್ರಿಯಂನ ಮಗನಾದ ಪ್ಯಾರಿಸ್ ಎಂಬುವನು ಸ್ಪಾರ್ಟ ಪಟ್ಟಣಕ್ಕೆ ಬಂದು ಅಲ್ಲಿಯ ಮೆಲಿನಸ್ ಎಂಬ ರಾಜನ ಹೆಂಡತಿ ಹೆಲೆನ್ ಎಂಬುವಳನ್ನು ಹೊತ್ತುಕೊಂಡು ಹೋದನು. ಇದೇ ಈ ಯುದ್ಧಕ್ಕೆ ಕಾರಣವಿರಬಹುದು. ಮೈಸಿನೆ ಪ್ರದೇಶದ ರಾಜನಾದ ಅಗಮೆಮ್ನನ್ ಎಂಬುವನು ಅಖೇಯನ್ನರ ಪರವಾಗಿ ತನ್ನ ಸೈನ್ಯವನ್ನೂ ಟ್ರಾಯ್ ಪಟ್ಟಣಕ್ಕೆ ತೆಗೆದುಕೊಂಡು ಹೋದನು. ಟ್ರಾಯ್ ಪಟ್ಟಣವು ನಾಶವಾಯಿತು. ಈ ಯುದ್ಧದ ವಿಚಾರದಲ್ಲಿ ಅನೇಕ ಕಟ್ಟುಕಥೆಗಳಿದ್ದರೂ ಆ ಕಾಲದ ಸ್ಥಿತಿಯನ್ನು ಚಿತ್ರಿಸಿಕೊಳ್ಳಲು ಅವು ಸಹಾಯಕವಾಗಿವೆ. ಭಯಂಕರವಾದ ಯುದ್ಧ, ದಂಡಯಾತ್ರೆ, ಸಾಹಸಕಾರ್ಯ, ಗೊಂದಲ–ಇವು ಎಲ್ಲೆಲ್ಲಿಯೂ ಕಂಡುಬರುತ್ತಿದ್ದವು.

ಹೋಮರ್ :—ಇದೇ ಕಾಲವನ್ನೇ ಹೋಮರಿನ ಕಾಲ, ಶೂರರ ಕಾಲವೆಂದು ಹೇಳುತ್ತಾರೆ. ಹೋಮರಿನ ಮಹಾಕಾವ್ಯಗಳಾದ **ಇಲಿಯಡ್** ಮತ್ತು **ಒಡಿಸೆ** ಈ ಕಾಲದ ಸ್ಥಿತಿಯನ್ನು ಚೆನ್ನಾಗಿ ವರ್ಣಿಸುತ್ತವೆ. ನಮ್ಮ ದೇಶದ ರಾಮಾಯಣ, ಮಹಾಭಾರತ ಪವಿತ್ರಗ್ರಂಥಗಳಂತೆ ಹೋಮರಿನ ಗ್ರಂಥಗಳೂ ಗ್ರೀಕರಿಗೆ ಪವಿತ್ರವಾಗಿದ್ದವು. ಅವರ ದಾಸರು ಹೋಮರಿನ ಗ್ರಂಥಗಳಿಂದ ಕಾವ್ಯಗಳನ್ನು ಹಾಡುತ್ತ ದೇಶದ ಎಲ್ಲಾ ಭಾಗಗಳಲ್ಲಿಯೂ ಸಂಚರಿಸುತ್ತಿದ್ದರು. ಹೋಮರನು ಖಿಯಾಸ್ ಎಂಬ ದ್ವೀಪದಲ್ಲಿ ಹುಟ್ಟಿದ ಹುಟ್ಟು ಕುರುಡನೆಂದು ಐತಿಹ್ಯವಿದೆ. ಈ ವಿಚಾರದಲ್ಲಿ

ಭಿನ್ನಾಭಿಪ್ರಾಯವಿದ್ದರೂ ಹೋಮರನ ಕಾಲವೆಂದರೆ ಗ್ರೀಕರ ಇತಿಹಾಸದಲ್ಲಿ ಶೂರರ ಕಾಲವೆಂದು ಧಾರಾಳವಾಗಿ ಹೇಳಬಹುದು. ಈ ಕಾಲವು ಕ್ರಿ.ಪೂ. ೧೧೦೦ ರಲ್ಲಿ ನಡೆದ ಡೋರಿಯನರ ದಂಡಯಾತ್ರೆಗಿಂತ ಮುಂಚೆ ಎಂಬುದನ್ನೂ ಒಪ್ಪಬೇಕು.

ಹೋಮರಿನ ಕಾಲದ ಜನಜೀವನ :—ಹೋಮರಿನ ಕಾಲದಲ್ಲಿ ರಾಜನೇ ಎಲ್ಲಾ ಆಡಳಿತವನ್ನು ನಡೆಸುತ್ತಿದ್ದನು. ಆತನು ದೈವಿಕ ಅಂಶದವನೆಂದೂ ಶೂರರ ಕುಲದವನೆಂದೂ ತಿಳಿದಿದ್ದರು; ಯುದ್ಧದಲ್ಲಿ ಮುಖ್ಯಸ್ಥನು, ಮುಖ್ಯ ನ್ಯಾಯಾಧಿಪತಿ, ಮುಖ್ಯ ಪುರೋಹಿತನೆಂದು ಭಾವಿಸಿದ್ದರು. ಆದರೂ ಆತನು ಸರ್ವಾಧಿಕಾರಿಯಾಗಿರಲಿಲ್ಲ. ಶ್ರೀಮಂತರ ಅಭಿಪ್ರಾಯಕ್ಕೆ ಮನ್ನಣೆಕೊಡಬೇಕಾಗಿತ್ತು. ಅದೇ ರೀತಿಯಲ್ಲಿ ಸಾರ್ವಜನಿಕರ ಸಭೆಯ ಒಪ್ಪಿಗೆಯನ್ನೂ ಪಡೆಯಬೇಕಾಗಿತ್ತು. ರಾಜನು ದೈವಿಕ ಹಕ್ಕುಗಳನ್ನು ಹೊಂದಿರಲಿಲ್ಲ. ಮುಖ್ಯವಾಗಿ ತಾನು ನಾಯಕನಾಗುವುದಕ್ಕೆ ಅರ್ಹತೆಯನ್ನು ಪಡೆದು ಗೌರವವನ್ನು ಹೊಂದಬೇಕಾಗಿತ್ತು. ಗೌರವವನ್ನು ತೋರಿಸುವುದಕ್ಕೆ ಆತನಿಗೆ ಒಂದು ಅರಮನೆಯನ್ನೂ, ಹೆಚ್ಚುಭಾಗ ಸಾರ್ವಜನಿಕರ ಭೂಮಿಯನ್ನೂ, ಯುದ್ಧದಲ್ಲಿ ಸಿಕ್ಕಿದ ಕೊಳ್ಳೆಯಲ್ಲಿ ಹೆಚ್ಚುಭಾಗವನ್ನೂ ಕೊಡುತ್ತಿದ್ದರು. ಮುಖ್ಯ ಸೇನಾಪತಿಯಾದ್ದರಿಂದ ಯುದ್ಧದಲ್ಲಿ ಸೈನ್ಯವನ್ನು ನಡೆಸುವುದು ಅವನ ಹೊಣೆಯಾಗಿತ್ತು. ಕಂಚಿನ ಕವಚವನ್ನು ಧರಿಸಿ, ಶಿರಸ್ತ್ರಾಣವನ್ನು ಹಾಕಿಕೊಂಡು, ಕೈಯಲ್ಲಿ ಭಲ್ಲೆಯನ್ನು ಹಿಡಿದುಕೊಂಡು, ತನ್ನ ರಥದಲ್ಲಿ ಕುಳಿತುಕೊಂಡು ಕತ್ತಿಕಠಾರಿಯಿಂದ ಯುದ್ಧ ಮಾಡುತ್ತಿದ್ದನು. ಶ್ರೀಮಂತರೂ, ಕಾಲಾಳುಗಳೂ ಅವನನ್ನು ಹಿಂಬಾಲಿಸುತ್ತಿದ್ದರು. ಅಶ್ವಬಲವು ಇನ್ನೂ ಗೊತ್ತಿರಲಿಲ್ಲ. ಮುಖ್ಯ ನ್ಯಾಯಾಧಿಪತಿಯಾಗಿ ಆತನು ಶ್ರೀಮಂತರೊಡನೆ ಅಂಗಡಿ ಬೀದಿಯಲ್ಲಿ ಕುಳಿತುಕೊಂಡು ಸಾಂಪ್ರದಾಯಕವಾಗಿಯೂ ನ್ಯಾಯವಾಗಿಯೂ ಮೊಕದ್ದಮೆಯ ತೀರ್ಪನ್ನು ಕೊಡಬೇಕಾಗಿತ್ತು. ಹಿರಿಯರು ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಿದ್ದರು. ಲಿಖಿತ ಕಾನೂನು ತಿಳಿದಿರಲಿಲ್ಲ. ಮುಖ್ಯಪುರೋಹಿತನಾಗಿ ರಾಜನು ದೇವತೆಗಳಿಗೆ ಯಜ್ಞ ಮಾಡಬೇಕಾಗಿತ್ತು. ಒಂದು ಕಡೆ ನೆಲೆಯಾಗಿ ನಿಲ್ಲದೆ ಇದ್ದುದರಿಂದ ದೇವಸ್ಥಾನಗಳೂ ಸ್ಥಿರವಾದ ಪೂಜೆಯ ಕ್ರಮಗಳೂ ರೂಢಿಯಲ್ಲಿರ

ಲಿಲ್ಲ. ಆದ್ದರಿಂದಲೇ ಪ್ರತ್ಯೇಕವಾದ ಪುರೋಹಿತ ವರ್ಗದ ಆವಶ್ಯಕತೆ ಕಂಡುಬರಲಿಲ್ಲ. ರಾಜನೇ ರಾಷ್ಟ್ರೀಯಪಿತನೆಂಬ ಭಾವನೆಯಿಂದ ಮತ ಸಂಬಂಧದ ಕರ್ತವ್ಯವನ್ನು ಸಲ್ಲಿಸಬೇಕಾಗಿತ್ತು. ರಾಜನು ಶ್ರೀಮಂತ ಸಭೆಯ ಮುಖ್ಯ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು ಯಾವುದೇ ಮುಖ್ಯವಿಚಾರದಲ್ಲಿ ತೀರ್ಮಾನ ಮಾಡಬೇಕಾಗಿತ್ತು. ಸಾರ್ವಜನಿಕ ಸಭೆಯು ರಾಜನ ತೀರ್ಮಾನದಮೇಲೆ ಚರ್ಚೆಮಾಡಲು ಅವಕಾಶವಿಲ್ಲದೇ ಇದ್ದರೂ ತನ್ನ ಅಭಿಪ್ರಾಯವನ್ನು ಪರವಾಗಿಯೋ ಅಥವಾ ವಿರುದ್ಧ ವಾಗಿಯೋ ಸೂಚಿಸಲು ಆರ್ಭಟದಿಂದಲೋ ಅಥವಾ ಗೊಣಗುಟ್ಟವಿಕೆ ಯಿಂದಲೋ ಸಂಕೇತವಾಗಿ ಸೂಚಿಸಬೇಕಾಗಿತ್ತು. ಹೋಮರಿನಕಾಲದ ಜೀವನದಲ್ಲಿ ರಾಜತ್ವ, ಕುಲೀನಪ್ರಭುತ್ವ, ಪ್ರಜಾಪ್ರಭುತ್ವ ಇವುಗಳ ರಾಜಕೀಯ ವೊಳಕೆಗಳು ಕಂಡುಬರುತ್ತವೆ.

ಅವರ ಸಾಮಾಜಿಕಜೀವನವು ಪ್ರಾಚೀನಪದ್ಧತಿಯಾದರೂ ಸರಳ ವಾಗಿತ್ತು. ಕುಟುಂಬಜೀವನವು ಬಹಳಮಟ್ಟಿಗೆ ಪ್ರಗತಿಹೊಂದಿತ್ತು. ತಂದೆಯೇ ಕುಟುಂಬದ ಮುಖ್ಯಸ್ಥನು. ಆತನ ಮಾತನ್ನು ಯಾರೂ ನಿರ್ಲಕ್ಷಿಸುತ್ತಿರಲಿಲ್ಲ. ಕುಟುಂಬದಲ್ಲಿ ಎಲ್ಲರೂ ಒಂದು ರೀತಿಯಾದ ಶಿಸ್ತನ್ನು ಪಾಲಿಸಬೇಕಾಗಿತ್ತು. ಯಾರೂ ಸೋಮಾರಿಗಳಾಗಿರಲು ಅವಕಾಶ ವಿರಲಿಲ್ಲ. ಮಹಿಳೆಯರು ಮನೆಕೆಲಸಗಳನ್ನು ಮಾಡಬೇಕಾಗಿತ್ತು. ನೇಯುವುದು, ಬಟ್ಟೆ ಒಗೆಯುವುದು ಅವರ ಕರ್ತವ್ಯ. ಯುದ್ಧದಲ್ಲಿ ಹಿಡಿದ ಗುಲಾಮರು ಮನೆ ಕಟ್ಟುವುದು, ಬೇಸಾಯ ಮಾಡುವುದು, ಇತ್ಯಾದಿ ಕೆಲಸಗಳನ್ನೂ ಮಾಡುತ್ತಿದ್ದರು. ಆದರೆ ಆ ಗುಲಾಮರನ್ನು ದಯೆಯಿಂದ ಕಾಣುತ್ತಿದ್ದರು. ಮಹಿಳೆಯರು ಗಂಡಸರೊಡನೆ ಯಾವ ಅಡ್ಡಿಯೂ ಇಲ್ಲದೆ ಬೆರೆಯುತ್ತಿದ್ದರು. ಮಹಿಳೆಯರನ್ನು ಬಹುಮಟ್ಟಿಗೆ ಪೂಜ್ಯ ಭಾವನೆಯಿಂದ ನೋಡುತ್ತಿದ್ದರು. ರಾಣಿಯೂ ಕೂಡ ತನ್ನ ಗೃಹಕೃತ್ಯ ಗಳನ್ನು ತಾನೇ ನೋಡಿಕೊಳ್ಳುತ್ತಿದ್ದಳೆಂದು ಹೋಮರನ "**ಒಡೆಸೆ**" ಎಂಬ ಮಹಾಕಾವ್ಯದಿಂದ ತಿಳಿಯಬಹುದು.

ಆದರೆ ರಾಷ್ಟ್ರದ ಎಲ್ಲೆಯ ಹೊರಗಡೆ ಜೀವನಕ್ಕೆ ಭದ್ರತೆಯಿರಲಿಲ್ಲ. ಕುಲದಲ್ಲಿಯೇ ನರಹತ್ಯೆಗೆ ಕೊಲ್ಲಲ್ಪಟ್ಟವನ ಬಂಧುಗಳಿಗೆ "ರಕ್ತಶುಲ್ಕ"

ವನ್ನು ದಂಡವಾಗಿ ಕೊಡುವುದು ವಾಡಿಕೆಯಲ್ಲಿತ್ತು. ಯುದ್ಧದಲ್ಲಿ ಶತ್ರುವಿಗೆ ಎಳ್ಳಷ್ಟೂ ದಯೆಯನ್ನು ತೋರಿಸುತ್ತಿರಲಿಲ್ಲ. ಸತ್ತವರಿಗೆ ಅಂಗಚ್ಛೇದ ಮಾಡುವುದು ಸಾಮಾನ್ಯವಾಗಿತ್ತು. ಅಪರಿಚಿತನನ್ನು ಕೊಂದರೆ ಯಾರೂ ಟೀಕಿಸುತ್ತಿರಲಿಲ್ಲ. ಆದರೂ ಅಪರಿಚಿತನಿಗೆ ರಕ್ಷಣೆ ಭರವಸೆಯನ್ನು ಕೊಟ್ಟದ್ದೇ ಆದರೆ ಅತನಿಗೆ ಯಾವ ವಿಧವಾದ ತೊಂದರೆಯನ್ನೂ ಉಂಟು ಮಾಡದೆ ಸತ್ಕರಿಸುವುದು ಮುಖ್ಯಕರ್ತವ್ಯವಾಗಿತ್ತು. ಹಾಗಿಲ್ಲದೆ ಮೋಸ ಮಾಡಿದರೆ ಅದು ದೇವರ ಮುಂದೆ ಮಾಡಿದ ನಾಚಿಕೆಗೇಡಿನ ಮಹಾಪಾಪವೆಂದು ತಿಳಿದಿದ್ದರು. ಕುಟುಂಬದ ಪವಿತ್ರತೆಗೆ ಕೊಲೆಯಿಂದಲೋ ವ್ಯಭಿಚಾರದಿಂದಲೋ ಕಳಂಕ ಬಂದರೆ ದೇವತೆಗಳಿಗೆ ಸಿಟ್ಟಾಗಿ ಕೆಡಕು ಉಂಟಾಗುವುದೆಂದು ಭಯಪಡುತ್ತಿದ್ದರು.

ಗ್ರೀಸ್ ದೇಶದಲ್ಲಿ ನೆಲಸಿದ ಮೇಲೆ ಅವರು ತಮ್ಮ ದೇವತೆಗಳನ್ನು ಪೂಜಿಸುತ್ತಿದ್ದರು. ಈ ದೇವತೆಗಳಲ್ಲಿ ಸೀಯೂಸ್ ಎಂಬುವನೇ ಮುಖ್ಯಸ್ಥನು. ಈ ದೇವತೆಗಳು ಅಮರರು. ಅವರು ತಮ್ಮಲ್ಲೇ ಕಲೆತು ತಮ್ಮ ಕಷ್ಟಸುಖದಲ್ಲಿ ಭಾಗಿಗಳಾಗಿದ್ದರೆಂದು ಅವರ ನಂಬಿಕೆ. ತಮಗಿಂತ ಅವರು ಶ್ರೇಷ್ಠರಾಗಿದ್ದಗೂ ತಮ್ಮ ಹಾಗೆ ಅವರೂ ಸದ್ಗುಣಗಳನ್ನೂ ದುರ್ಗುಣಗಳನ್ನೂ ಹೊಂದಿದ್ದರು. ನೈತಿಕ ರೀತಿಯಲ್ಲಿ ಅವರು ಅಷ್ಟೇನೂ ಮೇಲ್ಪಂಕ್ತಿಯಾಗಿರಲಿಲ್ಲ. ಅವರು ಥೆಸಲಿಗೆ ಉತ್ತರದಲ್ಲಿ ಒಲಿಂಪಸ್ ಎಂಬ ಉನ್ನತ ಪರ್ವತದಲ್ಲಿ ವಾಸಿಸುತ್ತಿದ್ದರು. ಅವರನ್ನು ಯಜ್ಞಯಾಗಾದಿಗಳಿಂದ ಒಲಿಸಬೇಕಾಗಿತ್ತು. ಪ್ರಾರ್ಥನೆಯಿಂದ ಅವರಿಗೆ ಮೊರೆಯಿಟ್ಟರೆ ಮಧ್ಯಸ್ಥಿಕೆ ವಹಿಸಿ ಸಹಾಯಮಾಡುತ್ತಿದ್ದರು. ಈ ಒಲಂಪಿಕ್ ದೇವತೆಗಳಲ್ಲದೆ ಸಮುದ್ರದಲ್ಲಿಯೂ, ಪಾತಾಳಲೋಕದಲ್ಲಿಯೂ ದೇವತೆಗಳಿದ್ದರು. ಪ್ರತಿಯೊಂದು ಬೆಟ್ಟದಲ್ಲಿಯೂ, ನೀರಿನ ಪ್ರವಾಹದಲ್ಲಿಯೂ, ಕಾಡಿನಲ್ಲಿಯೂ ಸಣ್ಣ ದೇವತೆಗಳಿವೆ ಎಂದು ಅವರ ನಂಬಿಕೆ.

ಅಖೇಯನರ ಕಾಲವು ಕ್ರಿ. ಪೂ. ೧೩೦೦ ರಿಂದ ಕ್ರಿ. ಪೂ. ೧೧೦೦ ರವರೆಗೆ ಪ್ರಸಿದ್ಧಿಯಾಗಿತ್ತು. ಹೋಮರನ ವರ್ಣನೆಯಲ್ಲಿ ಉತ್ಪ್ರೇಕ್ಷೆಯಿದ್ದರೂ ಗ್ರೀಕರು ಈ ಮಹಾಕಾವ್ಯಗಳಲ್ಲಿ ಸಂಪೂರ್ಣ ನಂಬಿಕೆ ಇಟ್ಟಿದ್ದರು. ಈ ಕಾಲದ ಜನಜೀವನವು ಅವರಿಗೆ ಸ್ಫೂರ್ತಿ ಉಂಟುಮಾಡಿತು. ತಮ್ಮ

ವಿದ್ಯಾಭ್ಯಾಸ ಕ್ರಮವನ್ನೂ ಆದರ್ಶವನ್ನೂ ಹೋಮರನ ಕಾವ್ಯಗಳ ತಳ ಹದಿಯ ಮೇಲೆ ವಿಸ್ತರಿಸಿದರು. ಈ ಕಾಲವನ್ನು ಶೂರರ ಕಾಲವೆಂದು ಹೇಳುತ್ತೇವೆ.

ದೋರಿಯನರ ದಂಡಯಾತ್ರೆ :—ಸುಮಾರು ಕ್ರಿ. ಪೂ. ೧೧೦೦ ರಲ್ಲಿ ಇದೇ ಬುಡಕಟ್ಟಿಗೆ ಸೇರಿದ ಇತರ ಅನಾಗರಿಕರು ಉತ್ತರದಿಂದ ಗ್ರೀಸ್ ದೇಶವನ್ನು ಆಕ್ರಮಿಸಿದರು. ಇವರಲ್ಲಿ ಮುಖ್ಯವಾಗಿ ಥೋಷಿಯನರು ಮಧ್ಯಗ್ರೀಸಿನಲ್ಲಿ ನೆಲಸಿದರು. ಆದರೆ ದೋರಿಯನರು ಮಧ್ಯಗ್ರೀಸಿನಿಂದ ಕಾರಿಂತ್ ಭೂಕಂಠವನ್ನು ದಾಟಿ ದಕ್ಷಿಣಗ್ರೀಸಿನಲ್ಲಿ ನೆಲಸಿದರು. ಮೆಸಿನಿಯ ಮತ್ತು ಲೆಕೋನಿಯ ಪ್ರದೇಶಗಳು ಅವರ ಸ್ವಾಧೀನಕ್ಕೆ ಬಂದವು. ಲೆಕೋನಿಯ ಪ್ರದೇಶದಲ್ಲಿ ಆಖೇಯನರು ಶ್ರೀಮಂತರನ್ನು ಅಡಗಿಸಿ ಸ್ಪಾರ್ಟ ಎಂಬ ಪಟ್ಟಣವನ್ನು ಸ್ಥಾಪಿಸಿದರು. ಸುತ್ತಲೂ ಶತ್ರುಗಳಿದ್ದುದರಿಂದ ಇವರು ತಮ್ಮ ಸೇನಾಶಕ್ತಿಯನ್ನು ವಿಸ್ತರಿಸಿ ಸೇನಾ ರಾಷ್ಟ್ರವನ್ನು ಕಟ್ಟಬೇಕಾಯಿತು. ಮೊದಲು ಬಂದ ಧಾಳಿಕಾರರಿಗಿಂತ ಇವರು: ಬಲಿಷ್ಠರು, ಕ್ರೂರಸ್ವಭಾವದವರು. ಆಖೇಯನರು ಧಾಳಿಮಾಡಿದರೂ ಕೊನೆಗೆ ಒಂದು ಕಡೆ ನೆಲಸಿ ನಾಗರಿಕತೆಯನ್ನು ಅಭಿವೃದ್ಧಿಪಡಿಸಿದರು. ಆದರೆ ದೋರಿಯನರು ತಾವು ಹೋದಕಡೆ ಎಲ್ಲವನ್ನೂ ನಾಶಮಾಡಿ ನಾಗರಿಕತೆಯ ಕುರುಹುಗಳನ್ನೂ ಧ್ವಂಸ ಮಾಡಿದರು. ಅವರ ದಂಡಯಾತ್ರೆಯ ತರುವಾಯ ೩೦೦ ವರ್ಷಗಳ ವರೆವಿಗೂ ಗ್ರೀಕರ ಇತಿಹಾಸವನ್ನು "ಶೂನ್ಯಕಾಲ" ವೆಂದು ಹೇಳಬಹುದು.

ವಲಸೆ ಹೋಗುವಿಕೆ :—ಹೀಗೆ ದೇಶಕ್ಕೆ ಬೇರೆ ಬೇರೆ ಕುಲದವರು ತಂಡತಂಡವಾಗಿ ನೆಲಸಿದ್ದರಿಂದ ಜನಸಂಖ್ಯೆಯ ಒತ್ತಡವು ಹೆಚ್ಚಾಯಿತು. ಎಲ್ಲರಿಗೂ ಒಂದೇ ಕಡೆ ನಿಲ್ಲಲು ಸ್ಥಳಾವಕಾಶವಿರಲಿಲ್ಲ. ಎಲ್ಲೆಲ್ಲಿಯೂ ನಿರಾಶ್ರಿತರ ಗುಂಪು ಕಂಡುಬಂದಿತು. ಅವರಲ್ಲಿ ಸಾಹಸವುಳ್ಳವರು ಧೈರ್ಯದಿಂದ ಬೇರೆ ಕಡೆ ವಲಸೆ ಹೋಗಲು ಮನಸ್ಸುಮಾಡಿದರು. ಉತ್ತರದಲ್ಲಿದ್ದ ಆಖೇಯನರು ಹೆಲೆಸ್ಪಾಂಟ್ ಪ್ರದೇಶದಲ್ಲಿ ನೆಲಸಿ ಟ್ರಾಯ್ ಪಟ್ಟಣವನ್ನು ಆಕ್ರಮಿಸಿದರು. ಹೀಗೆ ಏಷ್ಯಾ ಮೈನರಿನ ಸಮುದ್ರತೀರವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಅಲ್ಲೇ ನೆಲಸಿದರು. ಪಶ್ಚಿಮ ಏಷ್ಯ ಸಮುದ್ರ ತೀರದ ಕೈಮೆ, ಲೆಸ್ಬಾಸ್ ದ್ವೀಪದ ಮೈಟಲನೆ ಪಟ್ಟಣಗಳು ಪ್ರಸಿದ್ಧಿಗೆ

ಬಂದವು. ಹೀಗೆಯೇ ಅಟಿಕ ಪ್ರದೇಶದಿಂದ ಹೊರಟವರು ಮಧ್ಯಏಷ್ಯ ಮೈನರಿನಲ್ಲಿ ನೆಲಸಿ ಅಯೋನಿಯನರು ಎಂದು ಕರೆಯಲ್ಪಟ್ಟರು. ಇವರಿಗೆ ದಕ್ಷಿಣದಲ್ಲಿ ಡೋರಿಯನರು ನೆಲಸಿ ಕ್ರೀಟ್ ದ್ವೀಪವನ್ನೂ, ರ್ಹೋಡೆಸ್ ಮತ್ತು ಸೈಪ್ರಸ್ ದ್ವೀಪಗಳನ್ನೂ ತಮ್ಮ ವಶಕ್ಕೆ ತೆಗೆದುಕೊಂಡರು. ಈ ರೀತಿಯಾಗಿ ಪಶ್ಚಿಮ ಏಷ್ಯದಲ್ಲಿ ನೆಲಸಿದ ಗ್ರೀಕರು ತಮ್ಮ ನಾಗರಿಕತೆಯನ್ನು ಎಲ್ಲೆಲ್ಲಿಯೂ ಹರಡಿದರು.

ಅಧ್ಯಾಯ ೪.

ವಸಾಹತದ ಕಾಲ

ಗ್ರೀಕರು ಗ್ರೀಸ್ ದೇಶದಲ್ಲಿ ನೆಲಸಿದ ಮೇಲೆ ಸುಮಾರು ೨೦೦ ವರ್ಷಗಳವರೆವಿಗೂ ಏಜಿಯನ್ ಸಮುದ್ರ ಪ್ರದೇಶದಲ್ಲಿಯೂ ಮೆಡಿಟರೇನಿಯನ್ ಸಮುದ್ರ ಪ್ರದೇಶದಲ್ಲಿಯೂ ಹರಡಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಎಲ್ಲೆಲ್ಲಿಯೂ ತಮ್ಮ ಭಾಷೆ, ತಮ್ಮ ಮತ, ತಮ್ಮ ಶಿಷ್ಟಾಚಾರಗಳನ್ನು ಅನುಸರಿಸಿ ವ್ಯಾಪಾರವನ್ನು ಅಭಿವೃದ್ಧಿಪಡಿಸಿ ಅಭ್ಯುದಯವನ್ನು ಹೊಂದಿದರು. ಅವರು ಗ್ರೀಸ್ ದೇಶದಿಂದ ಹೊರಗಿದ್ದರೂ ತಾವೆಲ್ಲಾ ಒಂದೇ ಬುಡಕಟ್ಟಿಗೆ ಸೇರಿದವರೆಂದು ಮರೆಯದೆ, ಹೋದ ಕಡೆಯಲ್ಲೆಲ್ಲಾ ತಮ್ಮ ವ್ಯಕ್ತಿತ್ವವನ್ನು ಕಾಪಾಡಿಕೊಂಡು ತಮ್ಮ ರಾಷ್ಟ್ರೀಯತ್ವವನ್ನು ಕಳೆದುಕೊಳ್ಳಲಿಲ್ಲ. ಈ ಕಾಲವನ್ನು ಅಂದರೆ ಕ್ರಿ. ಪೂ. ೭೫೦ ರಿಂದ ಕ್ರಿ. ಪೂ. ೫೦೦ ರ ವರೆವಿಗೂ 'ವಸಾಹತದ ಕಾಲ' ವೆಂದು ಹೇಳಬಹುದು.

1. **ಗ್ರೀಕರ ವಸಾಹತದ ಕಾರಣಗಳು :**—ಒಂದು ದೇಶವು ವಸಾಹತುಗಳನ್ನು ಸ್ಥಾಪಿಸಲು ಸಾಧಾರಣವಾಗಿ ಆ ದೇಶದ ಜನರು ಧೈರ್ಯವಂತರಾಗಿರಬೇಕು. ಎಷ್ಟೇ ಕಷ್ಟವಾದರೂ ತಮ್ಮ ದೇಶದಿಂದ ಹೊರಗಡೆ ಹೋಗಿ ಸಾಹಸದಿಂದ ಬೇರೆಕಡೆಯಲ್ಲಿ ನೆಲಸಿ ಸುಖದಿಂದ ಬಾಳಬೇಕೆಂಬ ಅಭಿಲಾಷೆಯಿರಬೇಕು. ಅದಿಲ್ಲವೆ ಜೀವನಕ್ಕೆ ಎಷ್ಟೇ ಕಷ್ಟವಾದರೂ ತಮ್ಮ ದೇಶದಲ್ಲಿಯೇ ಇದ್ದುಕೊಂಡು ಪ್ರಾಚೀನ ಮಾರ್ಗಾನುಸಾರಿಗಳಾಗಿದ್ದರೆ ಅಂಥ ಜನರು ಎಂದಿಗೂ ಪ್ರಗತಿ ಹೊಂದುವುದಿಲ್ಲ. ಇದರ

ಜೊತೆಗೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕಾರಣಗಳೂ ಇರಬಹುದು. ಗ್ರೀಕರ ವಸಾಹತುಗಳಿಗೆ ಮುಖ್ಯವಾಗಿ ರಾಜಕೀಯ, ಆರ್ಥಿಕ, ವಾಣಿಜ್ಯ ಮತ್ತು ಕಾಲೋಚಿತ ಕಾರಣಗಳೆಂದು ಹೇಳಬಹುದು.

ರಾಜಕೀಯ ಕಾರಣ :—ಗ್ರೀಕರು ತಮ್ಮ ದೇಶವನ್ನು ಬಿಟ್ಟು ಬೇರೆಕಡೆ ವಲಸೆಮಾಡಿದ್ದು ಮುಖ್ಯವಾಗಿ ರಾಜಕೀಯ ಕಾರಣದಿಂದ. ಗ್ರೀಕರು ಸ್ವಾತಂತ್ರ್ಯ ಪ್ರೇಮಿಗಳು. ಅವರು ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಎಷ್ಟೇ ಕಷ್ಟಬಂದರೂ ಅನುಭವಿಸುವುದಕ್ಕೆ ಸಿದ್ಧರಾಗಿದ್ದರು. ಕ್ರಿ. ಪೂ. ೮ ನೆಯ ಶತಮಾನದಲ್ಲಿ ಗ್ರೀಸ್‌ದೇಶದ ಅನೇಕ ರಾಷ್ಟ್ರಗಳಲ್ಲಿ ರಾಜತ್ವವು ಅಳಿಸಿ ಶ್ರೀಮಂತರ ಪ್ರಭುತ್ವವು ಸ್ಥಾಪಿತವಾಯಿತು. ಈ ಶ್ರೀಮಂತರು ತಮ್ಮದೇ ಹಕ್ಕುಬಾದ್ಯತೆಯೆಂದು ಜನಸಾಮಾನ್ಯರನ್ನು ಪೀಡಿಸಿ ದಬ್ಬಾಳಿಕೆಯನ್ನು ನಡೆಸುತ್ತಿದ್ದರು. ಇದನ್ನು ಸಹಿಸದೆ ಜನಸಾಮಾನ್ಯರಲ್ಲಿ ಸಾಹಸವಂತರು ಒಟ್ಟುಗೂಡಿ ತಮ್ಮ ದೇಶವನ್ನು ಬಿಟ್ಟು ಹೊರಗೆ ಹೋಗಿ ನೆಲಸುವುದಕ್ಕೆ ಧೈರ್ಯದಿಂದ ಮನಸ್ಸುಮಾಡಿದರು. ಈ ವಸಾಹತುಗಳಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿ ಸ್ವತಂತ್ರರಾಗಿದ್ದರು. ಗ್ರೀಕರ ವಸಾಹತುಗಳಿಗೆ ರಾಜಕೀಯ ಅಸಮಾಧಾನವೇ ಮುಖ್ಯ ಕಾರಣ.

ಆರ್ಥಿಕ ಕಾರಣ :—ಗ್ರೀಕರು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಬೇರೆ ದೇಶಗಳಿಗೆ ಹೋಗಿ ವಸಾಹತುಗಳನ್ನು ಸ್ಥಾಪಿಸಿದರು. ಗ್ರೀಸ್ ದೇಶವು ಅಷ್ಟು ಫಲವತ್ತಾಗಿರಲಿಲ್ಲ. ಹೊರಗಿನಿಂದ ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳಬೇಕಾಗಿತ್ತು. ಗ್ರೀಕರು ತಮ್ಮ ನೌಕಾಶಕ್ತಿಯಿಂದ ಅನೇಕ ಫಲವತ್ತಾದ ಪ್ರದೇಶಗಳಲ್ಲಿ ನೆಲಸಿ ತಮ್ಮ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸಿಕೊಂಡರು. ಅದರಲ್ಲೂ ಜನಸಂಖ್ಯೆಯ ಒತ್ತಡವು ಹೆಚ್ಚಾದಮೇಲೆ ಗ್ರೀಕರು ವಸಾಹತುಗಳನ್ನು ಸ್ಥಾಪಿಸುವುದು ಅಗತ್ಯವಾಯಿತು. ಗ್ರೀಕರ ವಸಾಹತುಗಳು ಸಾಧಾರಣವಾಗಿ ಫಲವತ್ತಾದ ಪ್ರದೇಶಗಳಲ್ಲಿಯೋ ಅಥವಾ ವ್ಯಾಪಾರಕ್ಕೆ ಅನುಕೂಲವಾಗಿರುವ ಪ್ರದೇಶಗಳಲ್ಲಿಯೋ ಕಂಡುಬರುತ್ತವೆ.

ವಾಣಿಜ್ಯ ಅಭಿವೃದ್ಧಿ :—ಗ್ರೀಕರು ವಸಾಹತುಗಳನ್ನು ಸ್ಥಾಪಿಸಲು ತಮ್ಮ ವ್ಯಾಪಾರವನ್ನು ಅಭಿವೃದ್ಧಿಪಡಿಸುವುದು ಮುಖ್ಯ ಉದ್ದೇಶವಾಗಿತ್ತು.

ಎಲ್ಲೆಲ್ಲಿ ತಮ್ಮ ವ್ಯಾಪಾರವನ್ನು ವಿಸ್ತರಿಸುವುದಕ್ಕೆ ಅನುಕೂಲವಿತ್ತೋ ಆ ಪ್ರದೇಶಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಕಪ್ಪು ಸಮುದ್ರ ತೀರ, ಉತ್ತರ ಆಫ್ರಿಕ, ದಕ್ಷಿಣ ಇಟಲಿ, ಸಿಸಿಲಿ, ಸ್ಪೈಯಿನ್—ಈ ಪ್ರದೇಶಗಳು ವ್ಯಾಪಾರಕ್ಕೆ ಅನುಕೂಲವಾಗಿದ್ದವು. ಈ ಪ್ರದೇಶಗಳಲ್ಲೆಲ್ಲಾ ಗ್ರೀಕರು ನೆಲಸಿ ತಮ್ಮ ವ್ಯಾಪಾರವನ್ನು ಬಹುಮಟ್ಟಿಗೆ ಬೆಳೆಸಿದರು. ಮೆಡಿಟರೇನಿಯನ್ ಸಮುದ್ರವು ಗ್ರೀಕರ ಸರೋವರವಾಯಿತು. ಈ ಪ್ರದೇಶದಲ್ಲಿ ಗ್ರೀಕರಿಗೆ ವ್ಯಾಪಾರದಲ್ಲಿ ಇನ್ಯಾರೂ ಸ್ಪರ್ಧೆಯಿಲ್ಲದೆ ಅವರು ಪ್ರಬಲರಾಗಲು ಅನುಕೂಲವಾಯಿತು. ಇವರಿಗೆ ವ್ಯಾಪಾರದಲ್ಲಿ ಪೈಪೋಟಿ ಮಾಡುತ್ತಿದ್ದ ಫಿನೀಷಿಯನರು ಈ ಕಾಲದಲ್ಲಿ ಅಂದರೆ ಕ್ರಿ. ಪೂ. ೮ ನೆಯ ಶತಮಾನದಲ್ಲಿ ಅವನತಿಯಲ್ಲಿದ್ದರು.

2. ಗ್ರೀಕರ ವಸಾಹತದ ವರ್ಣನೆ:—ಗ್ರೀಕರು ತಮ್ಮ ವಸಾಹತುಗಳನ್ನು ಅನೇಕ ಪ್ರದೇಶಗಳಲ್ಲಿ ಸ್ಥಾಪಿಸಿದರು. ಮುಖ್ಯವಾಗಿ ಏಜಿಯನ್ ಸಮುದ್ರಪ್ರದೇಶದಲ್ಲಿ ನೆಲಸಿ, ತಮ್ಮ ವ್ಯಾಪಾರವನ್ನು ಅಭಿವೃದ್ಧಿಪಡಿಸಿದರು. ಇಬಿಯದ್ವೀಪದಲ್ಲಿ ಛಾಲ್ಸಿಸ್ ಮತ್ತು ಇರಿಟ್ರಿಯ ಪಟ್ಟಣದಿಂದ ಗ್ರೀಕರು ವಲಸೆಹೋಗಿ ಉತ್ತರದಲ್ಲಿದ್ದ ಛಾಲ್ಸಿಡಿಸ್ ದ್ವೀಪದಲ್ಲಿ ನೆಲಸಿದರು. ಈ ಪ್ರದೇಶವು ಖನಿಜಸಂಪತ್ತಿಗೆ ಪ್ರಸಿದ್ಧಿಯಾಗಿತ್ತು. ಕಪ್ಪುಸಮುದ್ರ ಪ್ರದೇಶವು ಗ್ರೀಕರ ವಸಾಹತುವಿನ ಮುಖ್ಯ ಕೇಂದ್ರವೆಂದು ಹೇಳಬಹುದು. ಹೆಲೆಸ್ಪಾಂಟ್ ಪ್ರದೇಶದಲ್ಲಿ ಅಯೋನಿಯರು ನೆಲಸಿ ತಮ್ಮ ವ್ಯಾಪಾರವನ್ನು ವಿಸ್ತರಿಸಿದರು. ಭಾಸ್ಪೋರಸ್ ಪ್ರದೇಶದಲ್ಲಿ ಬೈಸ್ಸಾಂಟಿಯನ್ ಎಂಬ ಪಟ್ಟಣವನ್ನು ಕಟ್ಟಿದರು. ಈ ಪಟ್ಟಣವೇ ಸಾವಿರ ವರ್ಷಗಳಾನಂತರ ಕಾಂಸ್ಟಾಂಟಿನೋಪಲ್ ಎಂಬ ಸುಪ್ರಸಿದ್ಧವಾದ ಪಟ್ಟಣವಾಯಿತು. ರಷ್ಯದೇಶಕ್ಕೆ ದಕ್ಷಿಣದಲ್ಲಿ ಕ್ರಿಮಿಯಾ ಎಂಬ ಚಿಕ್ಕ ಪರ್ಯಾಯದ್ವೀಪದಲ್ಲಿ ಹಿರಾಕ್ಲಿಯ ಎಂಬ ಪಟ್ಟಣವನ್ನು ಸ್ಥಾಪಿಸಿದರು. ಈ ಪಟ್ಟಣವೇ ಮುಂದೆ ಸೆಬಾಸ್ಟಪೋಲ್ ಎಂಬ ಪಟ್ಟಣವಾಯಿತು. ದಕ್ಷಿಣ ಇಟಲಿ ಮತ್ತು ಸಿಸಿಲಿ ದ್ವೀಪದಲ್ಲಿಯೂ ಗ್ರೀಕರು ವಸಾಹತುಗಳನ್ನು ಸ್ಥಾಪಿಸಿದರು. ದಕ್ಷಿಣ ಇಟಲಿಯಲ್ಲಿ ಕ್ಯೂಮೆ, ನೇಪಲ್ಸ್, ಸಿಬರಿಸ್, ಕ್ರೋಟನ್, ತಾರಸ (ತಾರಂತಮು) ಪಟ್ಟಣಗಳಲ್ಲಿ ನೆಲಸಿ ತಮ್ಮ ವ್ಯಾಪಾರ

ವನ್ನೂ ನಾಗರಿಕತೆಯನ್ನೂ ವಿಸ್ತರಿಸಿದರು. ಈ ಪ್ರದೇಶವನ್ನು "ಮಹಾ ಹೆಲಸ್" ಎಂದು ಕರೆಯುತ್ತಿದ್ದರು. ಸಿಸಿಲಿ ದ್ವೀಪದಲ್ಲಿಯೂ ವಸಾಹತುಗಳನ್ನು ಸ್ಥಾಪಿಸಿ ನ್ಯಾಕ್ಸಸ, ಮೆಸಿನ, ರ್ಹೀಜಿಯಂ ಮತ್ತು ಸಿರಾಕ್ಯೂಸ್ ಎಂಬ ಪಟ್ಟಣಗಳಲ್ಲಿ ನೆಲಸಿದರು. ಸಿಸಿಲಿ ದ್ವೀಪವು ಫಲವತ್ತಾಗಿತ್ತು. ಅದನ್ನು ಮೆಡಿಟರೇನಿಯನ್ ಪ್ರದೇಶದ ಕಣಜವೆಂದು ಕರೆಯುತ್ತಿದ್ದರು. ಈ ಪಟ್ಟಣಗಳು ವ್ಯಾಪಾರದಿಂದ ಅಭಿವೃದ್ಧಿ ಹೊಂದಿದುವು. ಇನ್ನೂ ಪಶ್ಚಿಮಕ್ಕೆ ಗಾಲ್ ಪ್ರದೇಶದಲ್ಲಿಯೂ ಸ್ಪೈಯಿನ್‌ನಲ್ಲಿಯೂ ವಸಾಹತುಗಳನ್ನು ಸ್ಥಾಪಿಸಿದರು. ಏಷ್ಯಾ ಮೈನರಿನಲ್ಲಿದ್ದ ಅಯೋನಿಯನರು ಫ್ರಾನ್ಸ್ ದೇಶಕ್ಕೆ ದಕ್ಷಿಣದಲ್ಲಿರುವ ಮಸ್ಸಿಲಿಯಾ (ಮಾರ್ಸೆಲ್ಸ್) ಪಟ್ಟಣದಲ್ಲಿ ನೆಲಸಿ ಬ್ರಿಟನ್ ದೇಶದ ಮತ್ತು ಉತ್ತರಯೂರೋಪಿನ ವ್ಯಾಪಾರದ ಸಂಪರ್ಕವನ್ನು ಹೊಂದಿದರು. ಸ್ಪೈಯಿನ್ ಪರ್ಯಾಯದ್ವೀಪದ ಪೂರ್ವ ಸಮುದ್ರ ತೀರದಲ್ಲಿಯೂ ವಸಾಹತುಗಳನ್ನು ಸ್ಥಾಪಿಸಿದರು. ಉತ್ತರ ಆಫ್ರಿಕ ಮತ್ತು ಈಜಿಪ್ಟಿನಲ್ಲಿಯೂ ಅವರ ವಸಾಹತುಗಳಿದ್ದವು. ಈ ಪ್ರದೇಶಗಳಲ್ಲಿ ದವಸಧಾನ್ಯಗಳು ಸಮೃದ್ಧಿಯಾಗಿ ಬೆಳೆಯುತ್ತಿದ್ದವು. ಕೈರನೆ ಎಂಬ ಪಟ್ಟಣವು ಗ್ರೀಕರ ವ್ಯಾಪಾರ ಕೇಂದ್ರವಾಯಿತು. ಈ ಪ್ರದೇಶದಿಂದ ತಮ್ಮ ದೇಶಕ್ಕೆ ಉಣ್ಣೆಯನ್ನು ರಫ್ತು ಮಾಡುತ್ತಿದ್ದರು. ಇದೇ ಪ್ರದೇಶದಲ್ಲಿ ಸಿಲ್ಫಿಯಂ ಎಂಬ ಅಪೂರ್ವ ಮೂಲಿಕೆಯನ್ನು ಎಂಥಾ ರೋಗವನ್ನಾದರೂ ವಾಸಿಮಾಡುವುದೆಂಬ ನಂಬಿಕೆಯಿಂದ ತಮ್ಮ ದೇಶಕ್ಕೆ ಕಳುಹಿಸುತ್ತಿದ್ದರು. ಈಜಿಪ್ಟ್ ಪ್ರದೇಶದಲ್ಲಿಯೂ ನೆಲಸಿ ನಾಕ್ರಟಿಸ್ ಎಂಬ ಪಟ್ಟಣವನ್ನು ಅಭಿವೃದ್ಧಿಗೆ ತಂದರು. ಈ ನಾಕ್ರಟಿಸ್ ಪಟ್ಟಣದಲ್ಲಿ ಗ್ರೀಕರ ಪೇಟೆಯೇ ಪ್ರತ್ಯೇಕವಾಗಿತ್ತು. ಗ್ರೀಕರ ವಸಾಹತುಗಳು ಮೆಡಿಟರೇನಿಯನ್ ಪ್ರದೇಶದಲ್ಲಿ ವಿಸ್ತರಿಸಿದ್ದುವು.

3. **ಗ್ರೀಕರ ವಸಾಹತುವಿನ ಗುಣಲಕ್ಷಣ**:—ಗ್ರೀಕರ ವಸಾಹತುವಿನಲ್ಲಿಯೂ ಇತರ ದೇಶದ ವಸಾಹತುವಿನಲ್ಲಿಯೂ ಕೆಲವು ಒಂದೇ ವಿಧವಾದ ಗುಣಲಕ್ಷಣಗಳು ಕಂಡುಬರುತ್ತವೆ. ಇಂಗ್ಲೆಂಡ್ ದೇಶದ "ಸಮುದ್ರ ನಾಯಿ" ಗಳಲ್ಲಿ ಕಂಡುಬರುವ ಧೈರ್ಯ, ಸಾಹಸ, ಚೈತನ್ಯವು ಗ್ರೀಕರ ವಸಾಹತುವಿನಲ್ಲಿಯೂ ಕಾಣಬಹುದು. ಈಸ್ಟ್ ಇಂಡಿಯಾ ಕಂಪೆನಿಯು ವ್ಯಾಪಾರ ದೃಷ್ಟಿಯಿಂದ ನಮ್ಮ ದೇಶದಲ್ಲಿ ನೆಲಸಿದ ಹಾಗೆ ಗ್ರೀಕರ ವಸಾ

ಹತುವಿನಲ್ಲಿಯೂ ಇದೇ ರೀತಿಯ ವ್ಯಾಪಾರ ಅಭಿವೃದ್ಧಿಯ ಲಕ್ಷಣವು ಕಂಡು ಬರುತ್ತದೆ. ೧೭ ನೇ ಶತಮಾನದಲ್ಲಿ ಪ್ಯೂರಿಟನರು ಇಂಗ್ಲೆಂಡ್ ದೇಶವನ್ನು ಬಿಟ್ಟು ಅಮೇರಿಕ ದೇಶದಲ್ಲಿ ವಲಸೆ ಮಾಡಿದಹಾಗೆ ಗ್ರೀಕರೂ ತಮ್ಮ ರಾಜಕೀಯ ಸ್ಥಿತಿಯಲ್ಲಿ ಅಸಮಾಧಾನಗೊಂಡು ಹೊರಗೆ ನೆಲಸಿದರು.

ಆದರೂ ಗ್ರೀಕರ ವಸಾಹತುವಿಗೂ ಇತರ ದೇಶದ ವಸಾಹತುಗಳಿಗೂ ಅನೇಕ ತಾರತಮ್ಯಗಳಿವೆ. ಗ್ರೀಕರ ವಸಾಹತುವಿನಲ್ಲಿ ತಂದೆ ತಾಯಿಗಳಿಗೆ ಮಕ್ಕಳಲ್ಲಿ ಇರುವ ವಿಶ್ವಾಸದಂತೆ ಮಾತೃಪಟ್ಟಣವು ವಸಾಹತುವನ್ನು ಪ್ರೀತಿಯಿಂದ ಕಾಣುತ್ತಿತ್ತು. ವಸಾಹತುವನ್ನು ಸ್ಥಾಪಿಸುವುದಕ್ಕೆ ಮುಂಚೆ ಗ್ರೀಕರ ಜೀವನದ ಲಕ್ಷಣವಾದ ನಗರರಾಷ್ಟ್ರವನ್ನು ಸ್ಥಾಪಿಸಬೇಕಾಗಿತ್ತು. ಮಾತೃಪಟ್ಟಣದ ಸಾರ್ವಜನಿಕ ಒಲೆಯಿಂದ ದಿವ್ಯ ಜ್ಯೋತಿಯನ್ನು ತೆಗೆದುಕೊಂಡು ಹೋಗಬೇಕು. ಗ್ರೀಕರ ವಸಾಹತು ಯಾವಾಗಲೂ ಖಾಸಗಿ ಸಾಹಸಕಾರ್ಯದ ರಂಗವಾಗಿತ್ತು. ಅಂದರೆ ಈ ವಸಾಹತುಗಳು ತಮ್ಮ ಸ್ವಂತ ಶಕ್ತಿಯಿಂದಲೇ ಅಭಿವೃದ್ಧಿ ಹೊಂದಬೇಕಾಗಿದ್ದುವು. ಮಾತೃನಗರದ ಆಶೀರ್ವಾದವಿತ್ತೇ ಹೊರತು ಮಿಕ್ಕ ಎಲ್ಲಾ ವಿಚಾರದಲ್ಲಿಯೂ ಅವು ಸ್ವತಂತ್ರವಾಗಿದ್ದುವು. ವಸಾಹತುವಿನಲ್ಲಿ ಬಂದು ನೆಲಸಿದವರು ಸಮಾನತೆಯನ್ನು ಹೊಂದಿದ್ದರು. ಪ್ರಜಾಪ್ರಭುತ್ವವು ಸ್ಥಾಪಿಸಲ್ಪಟ್ಟು ಎಲ್ಲರೂ ಆಡಳಿತದಲ್ಲಿ ಆಸಕ್ತಿಯನ್ನು ತೋರಿಸುತ್ತಿದ್ದರು. ಗ್ರೀಕರ ವಸಾಹತುಗಳು ಸಮುದ್ರಮುಖಾಂತರ ಸ್ಥಾಪಿಸಲ್ಪಟ್ಟು ಅಲ್ಲಿ ನೆಲಸಿದವರು ತಮ್ಮ ನೌಕಾಶಕ್ತಿಯಿಂದಲೇ ರಕ್ಷಣೆಮಾಡಿಕೊಳ್ಳಬೇಕಾಯಿತು.

4. ಗ್ರೀಕರ ಸಂಘಟನೆ:—ಗ್ರೀಕರ ವಸಾಹತುವಿನ ವರ್ಣನೆಯು ಮುಖ್ಯವಾಗಿ ಅವರ ರಾಜಕೀಯ, ಸಂಸ್ಕೃತಿಯ ಸಂಘಟನೆಯನ್ನು ಸೂಚಿಸುತ್ತದೆ. ಗ್ರೀಕರು ಯಾವ ಪ್ರದೇಶದಲ್ಲಿ ನೆಲೆಸಿದ್ದರೂ ತಮ್ಮ ಮಾತೃಭೂಮಿಯನ್ನು ಎಂದಿಗೂ ಮರೆಯುತ್ತಿರಲಿಲ್ಲ. ಎಲ್ಲರೂ ಒಂದೇ ಭಾಷೆ, ಒಂದೇ ಮತ, ಒಂದೇ ಶಿಷ್ಟಾಚಾರವನ್ನು ಅನುಸರಿಸುತ್ತಿದ್ದರು. ಇತರ ದೇಶದ ನಡೆನುಡಿಗಳಿಗೆ ಸೋಲದೆ ವ್ಯಕ್ತಿತ್ವವನ್ನು ಕಾಪಾಡಿಕೊಂಡರು. ತಮ್ಮ ದೇಶವನ್ನು ಬಿಟ್ಟು ಹೊರಗೆ ಎಷ್ಟೇ ಕಷ್ಟಗಳನ್ನು ಅನುಭವಿಸಿದರೂ ತಮ್ಮ ಮಾತೃಭೂಮಿಯ ರಕ್ತಸಂಬಂಧವನ್ನು ತ್ಯಜಿಸುತ್ತಿರಲಿಲ್ಲ. ಡೆಲ್ಫಿ


ಗ್ರೀಕರ ವಸಾಹತುಗಳು

ಯಲ್ಲಿದ್ದ ದಿವ್ಯವಾಣಿಯೂ ಒಲಿಂಪಿಕ್ ರಾಷ್ಟ್ರೀಯ ಪಂದ್ಯಗಳೂ ಅವರ ಸಂಘಟನೆಯ ಮುಖ್ಯ ಅಂಶಗಳು.



ಅಧ್ಯಾಯ ೫

ಸ್ಪಾರ್ಟ ಪಟ್ಟಣದ ಉದಯ

ಗ್ರೀಸ್ ದೇಶದ ರಾಷ್ಟ್ರಗಳ ಪೈಕಿ ಸ್ಪಾರ್ಟ ಎಂಬ ನಗರರಾಷ್ಟ್ರವು ಸೇನಾರಾಷ್ಟ್ರವೆಂದು ಪ್ರಸಿದ್ಧಿಯಾಗಿತ್ತು. ಕಾರಿಂತ್ ಎಂಬ ನಗರರಾಷ್ಟ್ರವು ವಾಣಿಜ್ಯರಾಷ್ಟ್ರವೆಂದೂ, ಅಥೆನ್ಸ್ ನಗರರಾಷ್ಟ್ರವು ಸಂಸ್ಕೃತಿಯ ರಾಷ್ಟ್ರವೆಂದೂ

ಪ್ರಸಿದ್ಧಿ ಹೊಂದಿದ್ದರೆ, ಸ್ಪಾರ್ಟನರು ತಮ್ಮ ದೈಹಿಕಶಕ್ತಿ, ಶಿಸ್ತು, ಸಂಯಮ ಮತ್ತು ಸರಳತೆಯಿಂದ ಶ್ರೇಷ್ಠತೆಯನ್ನು ತೋರಿಸಿದರು. ಸ್ಪಾರ್ಟನರು ಯಾವಾಗಲೂ ರಾಷ್ಟ್ರದ ಹಿತಕ್ಕೆ ದುಡಿದು ತಮ್ಮ ಪ್ರಾಣವನ್ನು ಅರ್ಪಿಸುವುದಕ್ಕೂ ಸಿದ್ಧರಾಗಿದ್ದರು. ರಾಷ್ಟ್ರವು ಪ್ರತಿಯೊಬ್ಬ ಪೌರನಾಗರಿಕನ ಜೀವನವನ್ನು ಹತೋಟಿಯಲ್ಲಿಟ್ಟು ಸ್ವತಂತ್ರಜೀವನಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಈ ನಿರ್ಬಂಧ ಸ್ಪಾರ್ಟನರನ್ನು ಪ್ರಾಚೀನಮಾರ್ಗಾನುಸಾರಿಗಳಾಗಿ ಮಾಡಿ ಯಾವ ರೀತಿಯಾದ ಪ್ರಗತಿಗೂ ಅವಕಾಶಕೊಡಲಿಲ್ಲ. ಸ್ಪಾರ್ಟ ನಗರ ರಾಷ್ಟ್ರವು ಕೇವಲ ಯುದ್ಧಕ್ಕೆ ಸಿದ್ಧಪಡಿಸುವ ಹಾಗೆ ಉಳಿಯಿತು. ಸ್ಪಾರ್ಟನರ ರಾಜಕೀಯ, ಸಾಮಾಜಿಕ ಜೀವನವು ವಿಚಿತ್ರವಾಗಿ ಕಂಡರೂ ಅವರ ರಾಷ್ಟ್ರವು "ಶಿಸ್ತಿನ ತೌರುಮನೆ" ಎಂದು ಹೇಳಬಹುದು.

1. **ರಾಜಕೀಯ ಜೀವನ**:—ಸ್ಪಾರ್ಟ ರಾಜ್ಯಪದ್ಧತಿಯು ವೈಶಿಷ್ಟ್ಯದಿಂದ ಕೂಡಿತ್ತು. ಎಲ್ಲಾ ಗ್ರೀಕ್ ರಾಷ್ಟ್ರಗಳಲ್ಲಿಯೂ ರಾಜ್ಯಪದ್ಧತಿಯಲ್ಲಿ ಬದಲಾವಣೆಗಳಾಗಿ ಕೊನೆಗೆ ಪ್ರಜಾಪ್ರಭುತ್ವಗಳು ಸ್ಥಾಪಿಸಲ್ಪಟ್ಟರೆ, ಸ್ಪಾರ್ಟ ರಾಜ್ಯಪದ್ಧತಿಯಲ್ಲಿ ಏನೂ ಬದಲಾವಣೆಗಳಿಗೆ ಅವಕಾಶವಿಲ್ಲದೆ ಒಂದೇ ರೀತಿಯಾದ ಆಡಳಿತವು ನೆಲೆಯಾಗಿತ್ತು. ರಾಜನ ಏಕಾಧಿಪತ್ಯವು ಯಾವ ಕಾಲದಲ್ಲಿಯೂ ಬದಲಾವಣೆಯಾಗಲಿಲ್ಲ. ಅವರ ರಾಜ್ಯಪದ್ಧತಿಯನ್ನು ವಿರುದ್ಧ ಅಂಶಗಳ ಮಿಶ್ರಣವೆಂದು ಹೇಳಬಹುದು. ಅಂದರೆ ರಾಜ್ಯತ್ವ, ಶ್ರೀಮಂತರ ಅಧಿಕಾರ, ಪ್ರಜಾಪ್ರಭುತ್ವ—ಇವೆಲ್ಲಾ ಬೆರಿಕೆಯಾಗಿ ಅವರ ರಾಜ್ಯಪದ್ಧತಿಯು ವಿಚಿತ್ರವಾದ ವ್ಯಕ್ತಿತ್ವವನ್ನು ಹೊಂದಿತ್ತು.

ಸ್ಪಾರ್ಟರಾಜ್ಯದಲ್ಲಿ **ಇಬ್ಬರು ರಾಜರಿದ್ದರು.** ಇವರು ಎರಡು ಪ್ರಸಿದ್ಧ ಶ್ರೀಮಂತಕುಲಕ್ಕೆ ಸೇರಿದವರು. ವಂಶಪಾರಂಪರ್ಯವಾಗಿ ರಾಜ್ಯತ್ವವು ಈ ಎರಡು ಕುಲಕ್ಕೇ ಸೇರಿದ್ದಿತು. ಈ ಇಬ್ಬರು ರಾಜರು ಹಕ್ಕು ಬಾಧ್ಯತೆಯನ್ನು ಒಂದೇ ಸಮಾನತೆಯಿಂದ ಅನುಭವಿಸುತ್ತಿದ್ದರು. ಅವರು ತಮ್ಮ ಪ್ರಜೆಗಳ ಪರವಾಗಿ ಪೌರೋಹಿತ್ಯವನ್ನು ಹೊಂದಿ ಯಜ್ಞಯಾಗಾದಿಗಳನ್ನು ಮಾಡಬೇಕಾಗಿತ್ತು. ಮತಸಂಬಂಧವಾದ ಸಂಸ್ಕಾರಗಳಲ್ಲಿ ಅಧ್ಯಕ್ಷತೆ ವಹಿಸಬೇಕಾಗಿತ್ತು. ಇದಕ್ಕೆ ಅವರಿಗೆ ಎರಡರಷ್ಟು ಆಹಾರವನ್ನೂ ಕಾಣಿಕೆಯನ್ನೂ ಕೊಡುತ್ತಿದ್ದರು. ಅವರ ನ್ಯಾಯಕೊಡುವ ಅಧಿಕಾರವು

ಬಹುಮಟ್ಟಿಗೆ ಕಡಿಮೆಮಾಡಲ್ಪಟ್ಟಿತ್ತು. ಕೇವಲ ದತ್ತು ಸ್ವೀಕಾರ ವಿಚಾರ ದಲ್ಲಿ ತಮ್ಮ ತೀರ್ಪನ್ನು ಕೊಡಬೇಕಾಗಿತ್ತು. ಆದರೆ ಸೇನೆ ವಿಚಾರದಲ್ಲಿ ಅವರ ಅಧಿಕಾರವು ಬಹಳ ಶ್ರೇಷ್ಠವಾಗಿತ್ತು. ಪ್ರತಿಯೊಬ್ಬ ರಾಜನಿಗೂ ನೂರುಜನ ಅಂಗರಕ್ಷಕರಿದ್ದರು. ರಣರಂಗದಲ್ಲಿ ಅವರಿಗೆ ವ್ಯತಿರಿಕ್ತವಾಗಿ ಯಾವ ಸೈನಿಕನೂ ನಡೆಯುವುದಕ್ಕೆ ಅವಕಾಶವಿರಲಿಲ್ಲ. ಅವರು ಮರಣ ದಂಡನೆಯನ್ನೂ ವಿಧಿಸಬಹುದು. ಆದರೆ ಯುದ್ಧವಾದ ಮೇಲೆ ತಾವು ರಣರಂಗದಲ್ಲಿ ಮಾಡಿದ ಕೃತ್ಯವನ್ನು ಪ್ರಜೆಗಳಿಗೆ ತಿಳಿಸಿ ಅವರ ಸಮ್ಮತಿ ಯನ್ನು ಪಡೆಯಬೇಕಾಗಿತ್ತು. ಮುಂದೆ ಒಬ್ಬ ರಾಜನು ಪಟ್ಟಣದಲ್ಲಿಯೇ ಇದ್ದುಕೊಂಡು ಆಡಳಿತವನ್ನು ನಡೆಸಬೇಕಾಗಿತ್ತು. ಇನ್ನೊಬ್ಬ ರಾಜನು ಯುದ್ಧಮಾಡುವುದಕ್ಕೆ ಸೈನಿಕರನ್ನು ಸೇರಿಸಿ ರಣರಂಗಕ್ಕೆ ಹೋಗಬೇಕಾ ಗಿತ್ತು. ಇಬ್ಬರು ರಾಜರಿದ್ದುದರಿಂದ ಆಡಳಿತದಲ್ಲಿ ಬಿಗಿಯಿರಲು ಅವ ಕಾಶವಾಯಿತು. ರಾಜನು ಸತ್ತಮೇಲೆ ವಿಶೇಷ ಮರ್ಯಾದೆಯನ್ನು ತೋರಿ ಸುತ್ತಿದ್ದರು. ಪ್ರತಿಯೊಂದು ಮನೆಯವರೂ ಇಬ್ಬರು ದುಃಖಪಡುವವರನ್ನು—ಒಬ್ಬ ಗಂಡಸು, ಒಬ್ಬ ಹೆಂಗಸು—ಕಳುಹಿಸಬೇಕಾಗಿತ್ತು. ಅಕ್ಕಪಕ್ಕದ ಪ್ರದೇಶಗಳಿಂದ ಗುಲಾಮರೂ, ಇತರರೂ ಬರಬೇಕಾಗಿತ್ತು. ಹೀಗೆ ಎಲ್ಲರೂ ದುಃಖಪ್ರದರ್ಶನಮಾಡಿ ಸತ್ತುಹೋದ ರಾಜನನ್ನು ತಮ್ಮ ಕುಲದ ಶ್ರೇಷ್ಠಪುರುಷನೆಂದು ಹೊಗಳುತ್ತಿದ್ದರು. ಆತನ ಹಿರಿಯ ಮಗನು ಸಣ್ಣ ಮಗುವಾಗಿದ್ದರೂ ರಾಜನಾಗಲು ಬಾಧ್ಯಸ್ತಿಕೆ ಹೊಂದಿದ್ದನು. **ಶಿಷ್ಟಸಭೆ** (ಸೆನೆಟ್) ಯನ್ನು "ಜೆರೂಸಿಯ" ಎಂದು ಕರೆಯುತ್ತಿದ್ದರು. ಈ ಸಭೆ ಯಲ್ಲಿ ಇಬ್ಬರು ರಾಜರೂ ಸೇರಿ ಮೂವತ್ತುಮಂದಿ ಸದಸ್ಯರಿದ್ದರು. ರಾಜ ರಲ್ಲದೆ ಮಿಕ್ಕ ಸದಸ್ಯರಿಗೆ ಅರವತ್ತು ವರ್ಷ ವಯಸ್ಸಿನ ವಿಧಿಯಿತ್ತು. ಇವರನ್ನು ತಮ್ಮ ಮೂರು ಕುಲಗಳಿಂದ ಚುನಾಯಿಸುತ್ತಿದ್ದರು. ಈ ಸದಸ್ಯರು ಸುಪ್ರಸಿದ್ಧ ಕುಲಕ್ಕೆ ಸೇರಿದ್ದರು. ಅವರೆಲ್ಲಾ ಬಹಳ ಅನುಭವ ಶಾಲಿಗಳು. ಅವರು ತಮ್ಮ ಸದ್ಗುಣಗಳಿಂದ ಚುನಾಯಿತರಾದವರು. ರಾಜನು ಈ ಸಭೆಯ ಮುಂದೆ ಎಲ್ಲಾ ಮುಖ್ಯ ವಿಷಯಗಳನ್ನು ಮಂಡಿಸಿ ಅವರ ಒಪ್ಪಿಗೆಯನ್ನು ಪಡೆಯಬೇಕಾಗಿತ್ತು. ಈ ಸಭೆಯು ಪಾತಕ ಸಂಬಂಧವಾದ ಮೊಕದ್ದಮೆಯಲ್ಲಿ ಅಂದರೆ ಕ್ರಿಮಿನಲ್ ಮೊಕದ್ದಮೆಯಲ್ಲಿ

ಶ್ರೇಷ್ಠನ್ಯಾಯಾಲಯವಾಗಿತ್ತು. ಜನರು ಈ ಸಭೆಯನ್ನು **ಅಪೆಲ್ಲಾ** ಎಂದು ಕರೆಯುತ್ತಿದ್ದರು. ಮೂವತ್ತು ವರ್ಷದ ಮೇಲೆ ಇರುವ ಪೌರನಾಗರಿಕರು ಈ ಸಭೆಯ ಸದಸ್ಯರಾಗಲು ಅವಕಾಶವಿತ್ತು. ಈ ಸಭೆಯು ತಿಂಗಳಿಗೆ ಒಂದು ಸಲವಾದರೂ ಸೇರಬೇಕಾಗಿತ್ತು. ಕಾನೂನು ರೀತಿಯಲ್ಲಿ ಈ ಸಭೆಯು ಯುದ್ಧಮಾಡುವುದು, ಕರಾರು ಮಾಡುವುದು, ರಾಜರನ್ನು ಪದವಿಯಿಂದ ತೆಗೆಯುವುದು ಮತ್ತು ಇತರ ಮುಖ್ಯ ವಿಚಾರಗಳಲ್ಲಿ ತನ್ನ ಅಭಿಪ್ರಾಯ ವನ್ನು ಕೊಡಬೇಕಾಗಿತ್ತು. ಆದರೆ ಈ ಸಭೆಯಲ್ಲಿ ಚರ್ಚೆಗೆ ಅವಕಾಶವಿರ ಲಿಲ್ಲ. ಸದಸ್ಯರು ತಮ್ಮ ಅಭಿಪ್ರಾಯವನ್ನು ಸೂಚಿಸಲು "ಆಗಬಹುದು," "ಬೇಡ" ಎಂದು ಗಟ್ಟಿಯಾಗಿ ಕೂಗಬೇಕಾಗಿತ್ತು. ಈ ಸಭೆಯ ಅಭಿ ಪ್ರಾಯವನ್ನು ಬದಲಾಯಿಸಲು ರಾಜನಿಗೂ ಮತ್ತು ಶಿಷ್ಟಸಭೆಗೂ ಅವಕಾಶ ವಿತ್ತು. ಸ್ಪಾರ್ಟನರ ರಾಜ್ಯಪದ್ಧತಿಯಲ್ಲಿ **ಯಿಫಾಫರೇಟ್** ಎಂಬ ಸಂಸ್ಥೆಯು ವೈಶಿಷ್ಟ್ಯದ್ದಾಗಿತ್ತು. ಅವರಲ್ಲಿ ಐದು ಜನ ಯಿಫಾಫರರಿದ್ದರು. ಇವರು ಪ್ರಜೆಗಳ ಪರ ನ್ಯಾಯಾಧಿಕಾರಿಗಳು. ಬಹುಶಃ ಕ್ರಿ. ಪೂ. ೮ ನೆಯ ಶತ ಮಾನದಲ್ಲಿ ಶ್ರೀಮಂತರು ಪ್ರಜೆಗಳ ಮೇಲೆ ದಬ್ಬಾಳಿಕೆ ನಡೆಯಿಸಿದಾಗ ಈ ಯಿಫಾಫರರು ಪ್ರಜೆಗಳನ್ನು ರಕ್ಷಿಸಲು ಮುಂದೆ ಬಂದು ಶ್ರೀಮಂತರನ್ನು ಅಡ ಗಿಸಿ ಪ್ರಜೆಗಳ ಹಕ್ಕುಬಾಧ್ಯತೆಗಳನ್ನು ಕಾಪಾಡಿರಬೇಕು. ಆದ್ದರಿಂದ ಯಿಫಾಫರರನ್ನು ಬಹಳ ಮರ್ಯಾದೆಯಿಂದ ಕಾಣುತ್ತಿದ್ದರು. ಅವರನ್ನು ಪ್ರಜೆಗಳೇ ಚುನಾಯಿಸುತ್ತಿದ್ದರು. ಅವರು ಯಾರಿಗೂ ಹೊಣೆಗಾರರಾಗಿರ ಲಿಲ್ಲ. ಅವರು ಪ್ರಜಾಸಭೆಯನ್ನು ಯಾವಾಗಬೇಕಾದರೂ ಸೇರಿಸಿ ಅಧ್ಯ ಕ್ಷತೆ ವಹಿಸಬಹುದಾಗಿತ್ತು. ಇಬ್ಬರು ಯಿಫಾಫರರು ರಾಜನ ಜೊತೆಯಲ್ಲಿ ರಣರಂಗಕ್ಕೆ ಹೋಗುತ್ತಿದ್ದರು. ರಾಜನ ನಡತೆಯನ್ನು ಹತೋಟಿಯಲ್ಲಿಡಲು ಅವಕಾಶವಾಯಿತು. ಅವರಿಗೆ ಪೋಲಿಸ್ ಅಧಿಕಾರವೂ ಇದ್ದಿತು. ಅವರು ಮಕ್ಕಳ ವಿದ್ಯಾಭ್ಯಾಸವನ್ನು ಕ್ರಮಪಡಿಸಬಹುದಾಗಿತ್ತು. ಅವರು ಯಾರ ಮೇಲೆ ಬೇಕಾದರೂ ದಂಡವಿಧಿಸಬಹುದಾಗಿತ್ತು. ವ್ಯವಹಾರ ಧರ್ಮ ಶಾಸ್ತ್ರಕ್ಕೆ (ಸಿವಿಲ್ ಲಾ) ಅವರು ಮುಖ್ಯನ್ಯಾಯಾಧಿಪತಿಗಳು. ಸ್ಪಾರ್ಟನರ ರಾಜ್ಯಪದ್ಧತಿಯಲ್ಲಿ **ಯಿಫಾಫರೇಟ್** ಅವರ ಪ್ರಜಾಪ್ರಭುತ್ವದ ಸ್ವರೂಪ ವನ್ನು ತೋರಿಸುತ್ತದೆ. ಇಷ್ಟು ಪ್ರಾಮುಖ್ಯವಾದ ಸಂಸ್ಥೆಗೆ ಯಾವ

ಸ್ಪಾರ್ಟನನ್ನಾದರೂ ಚುನಾಯಿಸಲು ಅವಕಾಶವಿತ್ತು. ಯಿಫರರು ರಾಜ್ಯ ಪದ್ಧತಿಯ ಸಂಪ್ರದಾಯದ ಪಾಲಕರು. ಸ್ಪಾರ್ಟ ರಾಜ್ಯಪದ್ಧತಿಯು ರಾಜ್ಯತ್ವ, ಶ್ರೀಮಂತರ ಆಡಳಿತ, ಪ್ರಜಾಪ್ರಭುತ್ವ—ಇವುಗಳ ಮಿಶ್ರಣ ವೆಂದು ಹೇಳಬಹುದು.

2. **ಸಾಮಾಜಿಕ ಜೀವನ**:—ಅವರ ಸಾಮಾಜಿಕ ಜೀವನವು ಬಹು ಮಟ್ಟಿಗೆ ಶಿಸ್ತು, ನಿಯಮಗಳಿಂದ ಕೂಡಿತ್ತು. ಅವರು ರಾಷ್ಟ್ರದ ಹಿತಕ್ಕೋ ಸ್ಕರ ದುಡಿಯಬೇಕಾಗಿತ್ತು. ಆಡಳಿತದ ಕಾನೂನುಗಳನ್ನು ತಮಗೆ ಎಷ್ಟೇ ತೊಂದರೆಯಾದರೂ ಉಲ್ಲಂಘಿಸುವುದಕ್ಕೆ ಅವಕಾಶವಿರಲಿಲ್ಲ. ಪ್ರತಿಯೊಬ್ಬ ಪ್ರಜೆಯೂ ಹುಟ್ಟಿದಂದಿನಿಂದ ಸಾಯುವವರೆಗೂ ರಾಷ್ಟ್ರದ ಹತೋಟಿಯಲ್ಲಿರ ಬೇಕಾಗಿತ್ತು. ಇಷ್ಟು ಕಠಿಣವಾದ ಶಿಸ್ತಿನ ತಳಹದಿಯ ಮೇಲೆ ಸೈನಿಕ ರಾಷ್ಟ್ರವನ್ನು ಕಟ್ಟಲು ಅನುಕೂಲವಾಯಿತು.

ಮಗು ಹುಟ್ಟಿದ ತಕ್ಷಣ ತಮ್ಮ ಪಟ್ಟಣದ ಹತ್ತಿರವಿರುವ ಟೇಗೆಟಸ್ ಎಂಬ ಗುಡ್ಡದ ಮೇಲೆ ಮೂರು ದಿವಸದವರೆವಿಗೂ ಬಯಲಿನಲ್ಲಿ ಇಡುತ್ತಿದ್ದರು. ಆ ಮಗುವು ಬದುಕಿದ್ದೇ ಆದರೆ ಮುಂದೆ ಯೋಗ್ಯ ಪ್ರಜೆಯಾಗುವನೆಂದು ಮಗುವನ್ನು ರಕ್ಷಿಸುವುದು ರಾಷ್ಟ್ರದ ಕರ್ತವ್ಯವಾಗಿದ್ದಿತು. ಆ ಮೂರು ದಿವಸಗಳಲ್ಲಿ ಮಗುವು ಸತ್ತುಹೋದರೆ ತಂದೆತಾಯಿಗಳೂ ಕೂಡ ದುಃಖಪಡುತ್ತಿರಲಿಲ್ಲ. ಏಳು ವರ್ಷಗಳವರೆವಿಗೂ ಮಗುವನ್ನು ಸುಖದಿಂದ ಬೆಳೆಯಿಸುತ್ತಿದ್ದರು. ರಾಷ್ಟ್ರದ ದಾದಿಗಳು ಮಗುವನ್ನು ಪಾಲಿಸಬೇಕಾಗಿತ್ತು. ಏಳನೆಯ ವರ್ಷದಿಂದ ಇಪ್ಪತ್ತನೆಯ ವರ್ಷದ ವರೆವಿಗೂ ಯುವಕರ ಶಿಕ್ಷಣದ ಮೊದಲನೆ ಅಂತಸ್ತು. ಏಳನೆಯ ವರ್ಷದಲ್ಲಿ ಶಿಕ್ಷಣಶಾಲೆಗೆ ಸೇರಬೇಕು. ಈ ಶಿಕ್ಷಣಶಾಲೆಯಲ್ಲಿ ಹುಡುಗನು ಕಟ್ಟುನಿಟ್ಟಾದ ಶಿಸ್ತಿನಿಂದ ತರಬೇತು ಹೊಂದಬೇಕಾಗಿತ್ತು. ಆತನ ಜೀವನವು ಅತಿ ಕಷ್ಟವಾಗಿತ್ತು. ಆತನು ಬರೀ ಕಾಲಿನಲ್ಲಿ ನಡೆಯಬೇಕಾಗಿತ್ತು. ಹಾಕಿಕೊಳ್ಳುವುದಕ್ಕೆ ಒಂದೇ ಒಂದು ಬಟ್ಟೆ. ಜೊಂಡಿನ ಮೇಲೆ ಮಲಗಬೇಕಾಗಿತ್ತು. ತನಗೆ ಬೇಕಾದಷ್ಟು ಆಹಾರವೂ ಕೂಡ ಸಿಗುತ್ತಿರಲಿಲ್ಲ. ಹೆಚ್ಚಾಗಿ ಬೇಕಾದರೆ ಕಳ್ಳತನದಿಂದ ಹಸಿವನ್ನು ನೀಗಿಸಬೇಕಾಗಿತ್ತು. ಕಳ್ಳತನವನ್ನು ಕಂಡುಹಿಡಿದಿದ್ದೇ ಆದರೆ ಉಗ್ರವಾದ ಶಿಕ್ಷೆಯನ್ನು ವಿಧಿಸುತ್ತಿದ್ದರು. ಸ್ಪಾರ್ಟ ರಾಷ್ಟ್ರದಲ್ಲಿ ಕಳ್ಳತನವು ಒಂದು

ರೀತಿಯ ಕಲೆಯಾಗಿತ್ತು. ಸ್ಪಾರ್ಟನರ ಹುಡುಗನೊಬ್ಬನು ಒಂದು ನರಿಯನ್ನು ಕದ್ದಾಗ ಆ ವೇಳೆಯಲ್ಲಿ ಒಬ್ಬ ಹಿರಿಯರನ್ನು ಕಂಡು ತನ್ನ ಕಳ್ಳತನವನ್ನು ಮುಚ್ಚಿಡಲು ಆ ನರಿಯನ್ನು ತನ್ನ ಹೊಟ್ಟೆಯಮೇಲೆ ಬಚ್ಚಿಟ್ಟು ಅದು ಅವನ ಹೊಟ್ಟೆಯನ್ನು ಕೊರೆಯುತ್ತಿದ್ದರೂ ಸ್ವಲ್ಪವೂ ಸೂಚನೆ ಕೊಡದೆ ಯಾತನೆಯನ್ನು ಅನುಭವಿಸುತ್ತಿದ್ದನೆಂದು ಒಂದು ಕಟ್ಟುಕಥೆಯಿದೆ. ಮಾನಸಿಕ ಶಿಕ್ಷಣಕ್ಕಿಂತ ದೈಹಿಕ ಶಿಕ್ಷಣವೇ ಮುಖ್ಯವಾಗಿತ್ತು. ವ್ಯಾಯಾಮ, ಸೈನಿಕ ತರಬೇತು, ಗರಡಿಸಾಧನೆ, ಚರ್ಮಸುಲಿಯುವಹಾಗೆ ಹೊಡೆಯುವುದು ಮತ್ತು ಇತರ ಕಷ್ಟತರವಾದ ಕೆಲಸಗಳು ಈ ಶಿಕ್ಷಣದ ಮುಖ್ಯ ಅಂಶಗಳು. ಸಂಗೀತ, ನೃತ್ಯ, ಓದುವುದು ಇವು ಮಾನಸಿಕ ಶಿಕ್ಷಣದ ವಿಷಯಗಳು. ಯುದ್ಧಮಾಡುವುದೇ ಮುಖ್ಯ ಹವ್ಯಾಸವಾಗಿ ಸ್ಪಾರ್ಟನರ ಹುಡುಗನು ತನ್ನ ಪ್ರಾಣವನ್ನು ಸಂತೋಷದಿಂದ ಅರ್ಪಿಸುತ್ತಿದ್ದನು. ಇಪ್ಪತ್ತನೆಯ ವರ್ಷದಿಂದ ಮೂವತ್ತನೆಯ ವರ್ಷದವರೆವಿಗೂ ಸ್ಪಾರ್ಟನರ ಯುವಕರ ಶಿಕ್ಷಣದ ಎರಡನೆಯ ಅಂತಸ್ತು. ಇಪ್ಪತ್ತನೆಯ ವರ್ಷದಲ್ಲಿ ಯುವಕನು ದಂಡಿನ ಪಾಳೆಯವನ್ನು ಸೇರಬೇಕಾಗಿತ್ತು. ಹದಿನೈದು ಜನರು ಸೇರಿರುವ ದಂಡಿನ ಪಾಳೆಯದಲ್ಲಿ ಅವರು ಸಾಮಾಜಿಕ ಜೀವನವನ್ನು ನಡೆಸಬೇಕಾಗಿತ್ತು. ಅವರು ಒಟ್ಟಿಗೆ ಸೇರಿ ಊಟಮಾಡುವುದು, ಸಂಚರಿಸುವುದು, ಮಲಗುವುದು—ಈ ರೀತಿಯಾದ ಸಮ್ಮಿಳಿತ ಜೀವನವನ್ನು ಕಲಿಯಬೇಕಾಗಿತ್ತು. ಅವರು ತಮ್ಮ ಆಹಾರವನ್ನು ಪ್ರತಿಯೊಂದು ತಿಂಗಳೂ ಒದಗಿಸಬೇಕಾಗಿತ್ತು. ಸರ್ಕಾರವು ಪ್ರತಿಯೊಬ್ಬ ಸ್ಪಾರ್ಟನರ ಪ್ರಜೆಗೂ ತನ್ನ ಜೀವನಕ್ಕೆ ಸಾಕಾಗುವಷ್ಟು ಭೂಮಿಯನ್ನು ಕೊಟ್ಟಿತ್ತು. ಈ ಭೂಮಿಯನ್ನು ಹಿಲಟರೆಂಬ ಗುಲಾಮರು ಸಾಗುವಳಿ ಮಾಡಿ ನಿಗದಿ ಮಾಡಿದಷ್ಟು ಆಹಾರವನ್ನು ಒದಗಿಸಬೇಕಾಗಿತ್ತು. ಬಾರ್ಲಿ, ಅನ್ನ, ಮದ್ಯ, ಅಂಜೂರ, ಗಿಣ್ಣು—ಇವೇ ಅವರ ಮುಖ್ಯ ಆಹಾರ. ಹಬ್ಬಕಾಲಗಳಲ್ಲಿ ಮಾಂಸವನ್ನು ಉಪಯೋಗಿಸುತ್ತಿದ್ದರು. ಮುಖ್ಯವಾಗಿ ಅವರು ಸಾಮೂಹಿಕ ಜೀವನವನ್ನು ಕಲಿಯಬೇಕಾಗಿತ್ತು. ಮೂವತ್ತರಿಂದ ಅರವತ್ತು ವರ್ಷದ ವರೆವಿಗೂ ಮೂರನೆಯ ಅಂತಸ್ತಿನ ಜೀವನವು. ಸ್ಪಾರ್ಟನರು ಮೂವತ್ತನೆಯ ವರ್ಷದಲ್ಲಿ ಪೌರನಾಗರಿಕ ಹಕ್ಕನ್ನು ಪಡೆದು ಜನಸಭೆಯ ಸದಸ್ಯತ್ವವನ್ನು ಪಡೆಯುವರು. ಇದೇ ವಯ

ಸ್ಸಿನಲ್ಲಿ ಮದುವೆಮಾಡಿಕೊಳ್ಳಲು ಅನುಮತಿಯನ್ನು ಪಡೆಯುವರು. ರಾಷ್ಟ್ರಕ್ಕೆ ಯೋಗ್ಯರಾದ ಮಕ್ಕಳನ್ನು ಪಡೆಯುವುದು ಮುಖ್ಯ ಹೊಣೆ. ಮದುವೆಯು ಒಂದು ರೀತಿಯಾದ ರಾಷ್ಟ್ರ ಸಂಸ್ಥೆಯಾಗಿತ್ತು. ಆದರೂ ಮದುವೆಯಾದ ಮೇಲೆ ಕುಟುಂಬ ಜೀವನವನ್ನು ನಡೆಸಲು ಅವಕಾಶವಿರಲಿಲ್ಲ. ತನ್ನ ಹೆಂಡತಿಯನ್ನು ಗುಟ್ಟಾಗಿ ಆಗಾಗ್ಗೆ ಭೇಟಿ ಮಾಡಬೇಕಾಗಿತ್ತು. ತನ್ನ ಹೆಚ್ಚು ಕಾಲವನ್ನು ದಂಡಿನ ಪಾಳೆಯದಲ್ಲಿ ಕಳೆಯಬೇಕಾಗಿತ್ತು. ಅರವತ್ತನೆಯ ವರ್ಷದವರಿವಿಗೂ ಈ ರೀತಿಯಾದ ಶಿಸ್ತಿನ ಜೀವನವನ್ನು ನಡೆಸಬೇಕಾಗಿತ್ತು. ಮಹಿಳೆಯರಿಗೂ ಇವೇ ರೀತಿಯಾದ ಸೈನಿಕ ಶಿಕ್ಷಣವನ್ನು ಕೊಡುತ್ತಿದ್ದರು. ಓಡುವುದು, ಹಾರುವುದು, ಭಲ್ಲೆಯನ್ನು ಎಸೆಯುವುದು, ಕುಸ್ತಿ ಮಾಡುವುದು—ಇವೇ ಮಹಿಳೆಯರ ಶಿಕ್ಷಣದ ಕ್ರಮ. ಮುಖ್ಯವಾಗಿ ಮಹಿಳೆಯರಲ್ಲಿ ಸ್ವಾಭಾವಿಕವಾದ ನಾಚಿಕೆ ಭಾವವನ್ನು ತಗ್ಗಿಸಬೇಕೆಂಬುದೇ ಉದ್ದೇಶವಾಗಿತ್ತು ಮಹಿಳೆಯರು ದೃಢಕಾಯದ, ಉತ್ಸಾಹವುಳ್ಳ ಪೀಳಿಗೆಯನ್ನು ಪಡೆಯುವ ಹೊಣೆಯನ್ನು ಹೊಂದಿದ್ದರು. ಸ್ಪಾರ್ಟ ರಾಷ್ಟ್ರದಲ್ಲಿ ಮಟ್ಟಿಗೆ ಮಹಿಳೆಯರು ಸ್ವತಂತ್ರರಾಗಿದ್ದರು. ಯುವಕರು ಮಹಿಳೆಯರನ್ನು ಅತ್ಯಂತ ಗೌರವದಿಂದ ಕಾಣಬೇಕಾಗಿತ್ತು.

ಮಿಕ್ಕ ವಿಚಾರದಲ್ಲಿ ಸ್ಪಾರ್ಟನರು ಸರಳ ಜೀವನವನ್ನು ಅನುಸರಿಸುತ್ತಿದ್ದರು. ಚಿನ್ನ, ಬೆಳ್ಳಿ ನಾಣ್ಯಗಳು ಚಲಾವಣೆಯಲ್ಲಿರಲಿಲ್ಲ. ಕಬ್ಬಿಣದ ಸಣ್ಣ ತುಂಡುಗಳು, ನಾಣ್ಯ ಚಲಾವಣೆಯಲ್ಲಿದ್ದವು. ಇದರಿಂದ ದುರಾಶೆಗೆ ಅವಕಾಶವಿರಲಿಲ್ಲ. ಐಶ್ವರ್ಯವಂತರು, ಬಡವರು, ಎಂಬ ಅಂತರಗಳಿರಲಿಲ್ಲ. ವ್ಯಾಪಾರ ವಹಿವಾಟುಗಳಲ್ಲಿ ಆಸಕ್ತಿಯಿರಲಿಲ್ಲ. ಸ್ಪಾರ್ಟನರು ಹಿಲಟರೆಂಬ ಗುಲಾಮರನ್ನು ಹತೋಟಿಯಲ್ಲಿಟ್ಟು ಅವರಿಂದ ತಮ್ಮ ಭೂಮಿಯನ್ನು ಸಾಗುವಳಿ ಮಾಡಿಸಬೇಕಾಗಿತ್ತು. ಅವರು ದಂಗೆ ಏಳದೇ ಇರುವ ಹಾಗೆ **ಕ್ರಿಪ್ಸಿಯ** ಎಂಬ ಗುಪ್ತ ಪೋಲಿಸಿನವರನ್ನು ಕಾವಲಿಡುತ್ತಿದ್ದರು. ಸ್ಪಾರ್ಟನರ ಶಿಸ್ತು ಹಿಲಟರಿಗೋಸ್ಕರ, ಹಿಲಟರು ಸ್ಪಾರ್ಟನರ ಶಿಸ್ತಿಗೋಸ್ಕರ ಎಂದು ಹೇಳಬಹುದು. ನೆರೆಯಲ್ಲಿದ್ದ **ಪೆರಿಯಾಸಿ** ಎಂಬ ಜನರು ಸ್ಪಾರ್ಟನರು ಯುದ್ಧಕ್ಕೆ ಹೊರಟಾಗ ಕಾಲಾಳುಗಳನ್ನು ಒದಗಿಸಬೇಕಾಗಿತ್ತು. ಸ್ಪಾರ್ಟ ರಾಷ್ಟ್ರವು ಒಂದು ದೊಡ್ಡ **ಸೈನಿಕ ಶಿಕ್ಷಣಶಾಲೆ**

ಎಂದು ಹೇಳಬಹುದು.

3. ಲೈಕರ್ಗಸ್ :—ಸ್ಪಾರ್ಟ ರಾಷ್ಟ್ರದ ಶಿಸ್ತಿಗೆ ಲೈಕರ್ಗಸ್ ಎಂಬ ಸುಧಾರಕನು ಮೂಲವೆಂದು ಹೇಳಬಹುದು. ಆತನು ಯಾವಾಗ ಜೀವಿಸಿದ್ದನು ಎಂಬುದು ಸರಿಯಾಗಿ ಗೊತ್ತಿಲ್ಲ. ಆತನು ಬಹುಶಃ ಕ್ರಿ. ಪೂ. ೮೦೦ ರಲ್ಲಿ ಜೀವಿಸಿರಬಹುದು. ಆತನು ಅನೇಕ ದೇಶಗಳಲ್ಲಿ ಸುತ್ತಿ ವಿಶೇಷ ಅನುಭವವನ್ನೂ ಜ್ಞಾನವನ್ನೂ ಹೊಂದಿದ್ದನು. ರಾಷ್ಟ್ರದಲ್ಲಿ ಅಂತಃಕಲಹಗಳು ಹೆಚ್ಚಿ ಪರಕೀಯರು ಧಾಳಿ ಮಾಡಬೇಕೆಂದಿರುವಾಗ ಈ ಸುಧಾರಕನು ಮುಂದೆ ಬಂದು ಅನೇಕ ಸುಧಾರಣೆಗಳನ್ನು ಮಾಡಿ ಸೈನಿಕ ರಾಷ್ಟ್ರವನ್ನು ನಿರ್ಮಿಸಿದನೆಂದು ಐತಿಹ್ಯವಿದೆ. ಆದ್ದರಿಂದ ಈ ಸುಧಾರಣೆಗಳನ್ನು ಲೈಕರ್ಗಿನ ಸುಧಾರಣೆಗಳು ಎಂದು ಹೇಳುತ್ತಾರೆ.

ಅಧ್ಯಾಯ ೬

ನಿರಂಕುಶಪ್ರಭುತ್ವ

ಕ್ರಿ. ಪೂ. ಏಳನೆಯ ಮತ್ತು ಆರನೆಯ ಶತಮಾನದಲ್ಲಿ ಗ್ರೀಸ್ ದೇಶದ ಅನೇಕ ರಾಷ್ಟ್ರಗಳಲ್ಲಿ ನಿರಂಕುಶಪ್ರಭುತ್ವವು ಸ್ಥಾಪಿತವಾಯಿತು. ಪ್ರಜೆಗಳ ಪರವಾಗಿ ಒಬ್ಬ ನಾಯಕನು ತನ್ನ ಬಲಶಕ್ತಿಯಿಂದ ಆಡಳಿತವನ್ನು ವಶಪಡಿಸಿಕೊಂಡು ದಬ್ಬಾಳಿಕೆಯಿಂದ ಆಳುವುದೇ ನಿರಂಕುಶಪ್ರಭುತ್ವ. ಈಗಿನ ಅರ್ಥದಂತೆ ನಿರಂಕುಶಪ್ರಭುತ್ವವೆಂದರೆ ಹಿಂಸಾತ್ಮಕ ಆಡಳಿತ. ನಿರಂಕುಶಪ್ರಭುವು ಜನಗಳನ್ನು ಸುಲಿಗೆ ಮಾಡಿ, ಹಿಂಸೆಕೊಟ್ಟು ದರ್ಪದಿಂದ ಆಳುವವನು. ಆದರೆ ಗ್ರೀಕರಿಗೆ ನಿರಂಕುಶಪ್ರಭುತ್ವವೆಂದರೆ ಕ್ರೂರವಾದ ಆಡಳಿತವಲ್ಲ. ನಿರಂಕುಶಪ್ರಭುವು ಕೆಟ್ಟವನಲ್ಲ. ಆತನು ರಾಷ್ಟ್ರದ ಪ್ರಗತಿಗೆ ದುಡಿಯುವಂತವನು. ಗ್ರೀಸ್ ದೇಶದ ನಿರಂಕುಶಪ್ರಭುತ್ವದ ಕಾಲವು ಅಭ್ಯುದಯದ ಕಾಲವಾಗಿತ್ತು.

1. ಹೇಗೆ ಸ್ಥಾಪಿತವಾಯಿತು ?—ನಿರಂಕುಶಪ್ರಭುತ್ವವು ಅನೇಕ ಕಾರಣಗಳಿಂದ ಸ್ಥಾಪಿತವಾಯಿತು. ವ್ಯಾಪಾರ ಮತ್ತು ವಸಾಹತುಗಳಿಂದ ಅನೇಕ ಜನರು ಶ್ರೀಮಂತರಾದರು. ತಮ್ಮ ಐಶ್ವರ್ಯದ

ಬಲದಿಂದ ರಾಜಕೀಯದಲ್ಲಿ ಉನ್ನತಸ್ಥಾನವನ್ನು ಹೊಂದಿದರು. ಕುಲೀನರಿಗೂ ಶ್ರೀಮಂತರಿಗೂ ಒಳಜಗಳಗಳು ಮೊದಲಾದವು. ಶ್ರೀಮಂತರು ಪ್ರಬಲರಾಗಿ ಪ್ರಜೆಗಳನ್ನು ತಮ್ಮ ಹತೋಟಿಯಲ್ಲಿಡಲು ಪ್ರಯತ್ನಪಟ್ಟರು. ಈ ಸಂದಿಗ್ಧಸ್ಥಿತಿಯಲ್ಲಿ ಪ್ರಜೆಗಳ ಪರವಾಗಿ ಸಾಮರ್ಥ್ಯವುಳ್ಳ ಒಬ್ಬ ನಾಯಕನು ಶ್ರೀಮಂತರ ದರ್ಪವನ್ನು ಅಡಗಿಸಿ ಪ್ರಜೆಗಳ ಹೆಸರಿನಲ್ಲಿ ತಾನೇ ಆಡಳಿತವನ್ನು ನಡೆಯಿಸಿದನು. ರಾಜನ ಆಡಳಿತದಂತೆ ನಿರಂಕುಶಪ್ರಭುತ್ವವು ಏಕಾಧಿಪತ್ಯ. ಆದರೆ ರಾಜತ್ವದಲ್ಲಿ ವಂಶಪರಂಪರೆಯ ಅಂಶವಿದೆ. ನಿರಂಕುಶಪ್ರಭುತ್ವದಲ್ಲಿ ಬಲಿಷ್ಠನಾದವನು ಆಕ್ರಮಣದಿಂದ ಆಡಳಿತಕ್ಕೆ ಬರಬಹುದು. ಮುಖ್ಯವಾಗಿ ನಿರಂಕುಶಪ್ರಭುವು ತನ್ನ ಶಾರೀರಕ ಬಲದಿಂದ ಪ್ರಜೆಗಳನ್ನು ಹತೋಟಿಯಲ್ಲಿಡುತ್ತಿದ್ದನು. ಒಂದು ರೀತಿಯಲ್ಲಿ ನಿರಂಕುಶ ಪ್ರಭುತ್ವವು ತಾತ್ಕಾಲಿಕ ರಾಜಪ್ರಭುತ್ವವೆಂದು ಹೇಳಬಹುದು. ಆದರೆ ಇದನ್ನು ರಾಜಕೀಯದಲ್ಲಿ ವಿಧಿವಿರುದ್ಧವಾದ ಆಡಳಿತವೆಂದು ಗ್ರೀಕರು ತಿಳಿದಿದ್ದರು.

2. **ಇದರ ಸ್ವಭಾವ**—ನಿರಂಕುಶಪ್ರಭುತ್ವವು ಎಷ್ಟೇ ಸೌಖ್ಯವಾಗಿದ್ದರೂ ಗ್ರೀಕರಿಗೆ ಸರಿಬೀಳಲಿಲ್ಲ. ತಾವು ಶ್ರೀಮಂತರನ್ನು ಅಡಗಿಸಲು ಒಬ್ಬ ನಾಯಕನ ಹತೋಟಿಯನ್ನೇ ಒಪ್ಪಿಕೊಂಡರು. ಆದರೆ ಈ ನಾಯಕನು ನಿರಂಕುಶಪ್ರಭುತ್ವವನ್ನು ಸ್ಥಾಪಿಸಿದ ಮೇಲೆ ಆತನಲ್ಲಿ ನಂಬಿಕೆ ಹೋಯಿತು. ಅದರಲ್ಲೂ ಆತನು ತನ್ನ ಸೇನಾಬಲದಿಂದ ಆಡಳಿತವನ್ನು ನಡೆಸಿದ ಮೇಲೆ ಇನ್ನೂ ಸಂಶಯವಾಯಿತು. ತಮ್ಮ ಸ್ವಾತಂತ್ರ್ಯಕ್ಕೆ ಚ್ಯುತಿಬರುವ ಹಾಗಿದ್ದರೆ ಗ್ರೀಕರು ಎಂದಿಗೂ ಸುಮ್ಮನಿರುತ್ತಿರಲಿಲ್ಲ. ತಾವೇ ಆಡಳಿತದ ಹೊಣೆಯನ್ನು ಹೊಂದಲು ಶಕ್ತರಾದಾಗ ನಿರಂಕುಶಪ್ರಭುತ್ವವು ತನ್ನಷ್ಟಕ್ಕೆ ತಾನೇ ಅಳಿಯಿತು. ಆದರೂ ಗ್ರೀಕರ ರಾಜಕೀಯ ಜೀವನದಲ್ಲಿ ನಿರಂಕುಶಪ್ರಭುತ್ವವು ಅವಶ್ಯವಾಗಿತ್ತು.

3. **ವಿವರಣೆ**:—ಗ್ರೀಕರ ನಿರಂಕುಶಪ್ರಭುತ್ವವು ಜನರಿಗೆ ಅನುಕೂಲವಾಗಿತ್ತು. ಮುಖ್ಯವಾಗಿ ಅವರು ಸುಖದಿಂದ ಬಾಳಬೇಕೆಂಬುದೇ ಅದರ ಉದ್ದೇಶ. ಗ್ರೀಕರ ಚರಿತ್ರೆಯಲ್ಲಿ ಈ ನಿರಂಕುಶಪ್ರಭುತ್ವದ ಕಾಲವು ಅತ್ಯಂತ ಪ್ರಗತಿಯ ಕಾಲವಾಗಿತ್ತು. ರಾಷ್ಟ್ರದಲ್ಲಿ ಎಲ್ಲೆಲ್ಲೂ

ಶಾಂತಿ, ಸುಭಿಕ್ಷಗಳು ನೆಲಸಿದ್ದವು. ಚಿತ್ರಕಲೆ, ಶಿಲ್ಪಕಲೆ ಮೊದಲಾದ ಕಲೆಗಳು ಹೆಚ್ಚಾಗಿ ಬೆಳೆದವು. ವ್ಯಾಪಾರವು ಅಭಿವೃದ್ಧಿಯಾಯಿತು. ಪ್ರತಿಯೊಬ್ಬ ನಿರಂಕುಶಪ್ರಭುವು ಪ್ರಜೆಗಳ ಏಳಿಗೆಗೆ ದುಡಿಯುತ್ತಿದ್ದನು. ತನ್ನ ರಾಷ್ಟ್ರವನ್ನು ಮುಂದುವರಿಸಬೇಕೆಂಬುದೇ ಅವನ ಉದ್ದೇಶ. ರಾಷ್ಟ್ರವು ಕಲೆಯ, ಸಾಹಿತ್ಯದ ಬೀಡಾಯಿತು. ಆಧುನಿಕ ನಿರಂಕುಶಪ್ರಭುತ್ವದಲ್ಲಿ ದಬ್ಬಾಳಿಕೆ, ಹಿಂಸೆ, ಒಳಸಂಚು ಕಂಡುಬರುತ್ತವೆ. ಆದರೆ ಗ್ರೀಕರ ಕಾಲದಲ್ಲಿ ನಿರಂಕುಶಪ್ರಭುತ್ವವು ಬಹುಮಟ್ಟಿಗೆ ಜನಗಳ ಅಭ್ಯುದಯವನ್ನೇ ಗುರಿಯಾಗಿಟ್ಟುಕೊಂಡು ಅವರು ಶಾಂತಿಯಿಂದ ಬಾಳಲು ಅವಕಾಶವಾಯಿತು. ನಿರಂಕುಶ ಪ್ರಭುಗಳಲ್ಲಿ ಮುಖ್ಯರಾದವರು ಸಿಸಿಯನ್‌ರಾಷ್ಟ್ರದ ಕೈಯಿಸ್ತನೀಸ್, ಮಿಗರ ರಾಷ್ಟ್ರದ ಥೀಗೆನಸ್. ಕಾರಿಂತರಾಷ್ಟ್ರದ ಪಿರಿಯಾಂಡರ್, ಅಥೆನ್ಸ್ ರಾಷ್ಟ್ರದ ಪಿಸಿಸ್‌ಟ್ರಾಟಸ್, ಸೆಮಸ್‌ರಾಷ್ಟ್ರದ ಪಾಲಿಕ್ರಟೆಸ್, ಸಿರಕ್ಯೂಸ್ ರಾಷ್ಟ್ರದ ಗಿಲೋ ಮತ್ತು ಹಿಯರೋ ಎಂಬುವರು. ಇವರಲ್ಲಿ ಪ್ರತಿಯೊಬ್ಬರೂ ಸಾಮರ್ಥ್ಯವುಳ್ಳವರು. ತಮ್ಮ ಬುದ್ಧಿ ಶಕ್ತಿಯಿಂದ ರಾಷ್ಟ್ರವನ್ನು ಏಳಿಗೆಗೆ ತಂದರು. ಸಿಸಿಯನ್ ರಾಷ್ಟ್ರದ ಕೈಯಿಸ್ತನೀಸ್ ತನ್ನ ಪ್ರಜೆಗಳನ್ನು ನ್ಯಾಯದಿಂದ ಆಳುತ್ತಿದ್ದನು. ಮಿಗರ ರಾಷ್ಟ್ರದ ಥೀಗೆನಸ್ ಎಂಬುವನು ಬಡವರ ಯೋಗಕ್ಷೇಮಕ್ಕೆ ದುಡಿಯುತ್ತಿದ್ದನು. ತನ್ನ ಪಟ್ಟಣದಲ್ಲಿ ಸೊಗಸಾದ ಕಾಲುವೆಯನ್ನು ತೋಡಿಸಿದನು. ಕಾರಿಂತ ರಾಷ್ಟ್ರದ ಪಿರಿಯಾಂಡರ್ ಎಂಬುವನು ವಸಾಹತುಗಳನ್ನು ಸ್ಥಾಪಿಸಿದನು. ತನ್ನ ರಾಷ್ಟ್ರದಲ್ಲಿ ಜನರು ಸೋಮಾರಿಗಳಾಗದೆ ಯಾವುದಾದರೂ ಉದ್ಯೋಗದಲ್ಲಿರಬೇಕೆಂದು ಒತ್ತಾಯ ಮಾಡಿದನು. ಸಾಹಿತ್ಯ ಮತ್ತು ಕಲೆಗೆ ಪ್ರೋತ್ಸಾಹವನ್ನು ಕೊಟ್ಟು ಅನೇಕ ದೇವಸ್ಥಾನಗಳನ್ನು ಕಟ್ಟಿಸಿದನು. ಅಥೆನ್ಸ್ ರಾಷ್ಟ್ರದ ಪಿಸಿಸ್‌ಟ್ರಾಟಸ್ ಎಂಬುವನೂ ಇದೇ ರೀತಿಯಾಗಿ ತನ್ನ ಸಾಮರ್ಥ್ಯದಿಂದ ಆಡಳಿತವನ್ನು ನಡಸಿ ಕಲೆ ಮತ್ತು ಸಾಹಿತ್ಯಕ್ಕೆ ಹೆಚ್ಚಾಗಿ ಪ್ರೋತ್ಸಾಹಕೊಟ್ಟನು.

4. ಅವನತಿ—ನಿರಂಕುಶಪ್ರಭುತ್ವವು ಎಷ್ಟೇ ಅನುಕೂಲವಾಗಿದ್ದರೂ ಅನೇಕ ನ್ಯೂನತೆಗಳಿಂದ ಕೂಡಿದ್ದಿತು. ಮುಖ್ಯವಾಗಿ ಅದು ಶಾಸನ ನಿಯಮಾನುಸಾರವಾದ ಆಡಳಿತವಾಗಿರಲಿಲ್ಲ. ತಾತ್ಕಾಲಿಕ ಅನುಕೂಲ

ಕ್ಕೋಸ್ಕರ ಗ್ರೀಕರು ಇಂಥ ಆಡಳಿತವನ್ನು ಸಹಿಸಿದ್ದರು. ಆದರೂ ತಮ್ಮ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗ ಗ್ರೀಕರು ಒಟ್ಟುಗೂಡಿ ಈ ಆಡಳಿತವನ್ನು ಕೊನೆಗಾಣಿಸಿದರು. ಸ್ವಚ್ಛಂದವಾದ ಹತೋಟಿಯೆಂದರೆ ಜುಗುಪ್ಸೆಯುಂಟಾಗುತ್ತಿತ್ತು. ತಾವೇ ಆಡಳಿತದ ಹೊಣೆಯನ್ನು ಹೊರಲು ಶಕ್ತಿಯಿದೆ ಎಂದು ಮನಸ್ಸಿಗೆ ನಾಟಿದಾಗ ನಿರಂಕುಶಪ್ರಭುತ್ವವು ಅದೃಶ್ಯವಾಯಿತು. ಈ ನಿರಂಕುಶಪ್ರಭುತ್ವವು ಸ್ಥಿರವಲ್ಲದ್ದಾದರೂ ಗ್ರೀಕರ ರಾಜಕೀಯ ಜೀವನದಲ್ಲಿ ಅಗತ್ಯವಾದ ಆಡಳಿತವಾಗಿತ್ತು. ಅದು ಶ್ರೀಮಂತರ ಆಳ್ವಿಕೆಗೂ ಪ್ರಜಾಪ್ರಭುತ್ವದ ಆಡಳಿತಕ್ಕೂ ಮಧ್ಯೆ ಇರುವ ಅಂತರವನ್ನು ಸೇರಿಸುತ್ತದೆ. ಮುಖ್ಯವಾಗಿ ಈ ಆಡಳಿತದಲ್ಲಿ ಪ್ರಜೆಗಳು ರಾಜಕೀಯ ಜೀವನದಲ್ಲಿ ತರಬೇತುಹೊಂದಿ ಮುಂದಕ್ಕೆ ತಾವೇ ಆಡಳಿತದ ಹೊಣೆಯನ್ನು ಹೊಂದಲು ಅನುಕೂಲವಾಯಿತು.

ಅಧ್ಯಾಯ ೭

ಆಥೆನ್ಸ್ ರಾಷ್ಟ್ರದ ಹಿಂದಿನ ಚರಿತ್ರೆ

ಗ್ರೀಕರ ಚರಿತ್ರೆಯಲ್ಲಿ ಆಥೆನ್ಸ್ ರಾಷ್ಟ್ರವು ಬೌದ್ಧಿಕ ವಿಚಾರದಲ್ಲಿ ಸುಪ್ರಸಿದ್ಧವಾಗಿತ್ತು. ಅಂದರೆ ರಾಷ್ಟ್ರದ ಪ್ರಜೆಗಳು ಒಳ್ಳೆ ಪ್ರಜ್ಞಾಶಾಲಿಗಳು. ಸ್ಪಾರ್ಟ ರಾಷ್ಟ್ರವು ತನ್ನ ಸೇನಾಶಕ್ತಿಯಿಂದ ಮುಂದುವರೆದಿದ್ದರೆ ಆಥೆನ್ಸ್ ರಾಷ್ಟ್ರವು ಜ್ಞಾನದ ಬೀಡಾಗಿತ್ತು. ಮಾನವನ ಅಂತರಾತ್ಮ ಶಕ್ತಿಯು ಬೆಳೆಯಲು ಅನುಕೂಲವಾದ ಕಲೆ, ಸಾಹಿತ್ಯ, ವಿಜ್ಞಾನ, ತತ್ತ್ವಶಾಸ್ತ್ರ, ಸಮಾಜ ವ್ಯವಸ್ಥೆ ಇವುಗಳಲ್ಲಿ ಪ್ರವೀಣತೆಯನ್ನು ತೋರಿಸಲು ಅವಕಾಶವಾಯಿತು. ಒಂದು ರೀತಿಯಾಗಿ ನೋಡಿದರೆ ಆಥೆನ್ಸ್ ರಾಷ್ಟ್ರದ ಚರಿತ್ರೆಯನ್ನು ಗ್ರೀಸ್‌ದೇಶದ ಚರಿತ್ರೆಯೆಂದು ಹೇಳಬಹುದು.

ಆದರೂ ಈ ರಾಷ್ಟ್ರದ ಹಿಂದಿನ ಚರಿತ್ರೆಯು ಮುಖ್ಯವಾಗಿರಲಿಲ್ಲ. ಈ ರಾಷ್ಟ್ರದ ಜನರು ಹೋಮರಿನ ಕಾಲದಲ್ಲಿ ಯಾವ ಭಾಗವನ್ನೂ ವಹಿಸಲಿಲ್ಲ. ವಸಾಹತುವಿನ ಕಾಲದಲ್ಲಿಯೂ ಪ್ರಾಮುಖ್ಯತೆ ಹೊಂದಲಿಲ್ಲ. ಇವರಿದ್ದ ಪ್ರದೇಶವು ಸಮುದ್ರದ ಹತ್ತಿರವಿದ್ದರೂ ಭೂಭಾಗವು ಫಲವತ್ತಾ

ಗಿರಲಿಲ್ಲ. ಅಟಿಕ ಪ್ರದೇಶವು ಅರವತ್ತುಮೈಲಿ ಉದ್ದ, ಇಪ್ಪತ್ತುನಾಲ್ಕು ಮೈಲಿ ಅಗಲವಿದ್ದರೂ ಶತ್ರುಗಳು ಅತಿಕ್ರಮಿಸುವುದಕ್ಕೆ ಯಾವ ರೀತಿಯಾದ ಆಕರ್ಷಣೆಗೆ ಅವಕಾಶವಿರಲಿಲ್ಲ. ಆದ್ದರಿಂದಲೇ ಅಥೀನಿಯನರು ತಾವು ಸ್ವಾತಂತ್ರ್ಯರೆಂದು ಹೆಮ್ಮೆಪಡುತ್ತಿದ್ದರು. ಥೀಸಿಯಸ್ ಎಂಬ ಮಹಾ ವೀರನು ಕ್ರಿ. ಪೂ. ೧೩೦೦ ರಲ್ಲಿ ಈ ಪ್ರದೇಶದಲ್ಲಿ ನೆಲಸಿ ಎಲ್ಲರನ್ನೂ ಒಟ್ಟು ಗೂಡಿಸಿ ರಾಜ್ಯವಾಳಿದನು ಎಂಬ ದಂತಕಥೆಯಿದೆ.

1. **ಹಿಂದಿನ ರಾಜ್ಯಪದ್ಧತಿ**—ಅವರ ರಾಜ್ಯಪದ್ಧತಿಯಲ್ಲಿ ಮೊದಲು ರಾಜಪ್ರಭುತ್ವವಿತ್ತೆಂದು ಕಾಣುತ್ತದೆ. ಕ್ರಿ. ಪೂ. ೭ ನೆಯ ಶತಮಾನದಲ್ಲಿ ರಾಜಪ್ರಭುತ್ವವು ಕುಲೀನರ ಪ್ರಭುತ್ವವಾಯಿತು. ಒಬ್ಬ ರಾಜನ ಬದಲಾಗಿ ರಾಜ್ಯಾಡಳಿತವನ್ನು ಇನ್ನೂ ಇಬ್ಬರು ನಿರ್ವಹಿಸಬೇಕಾಯಿತು. ಅಂದರೆ ಕಾರ್ಯನಿರ್ವಾಹಕ ಶಾಖೆಯಲ್ಲಿ ಆರ್ಕನ್, ಪೋಲ್‌ಮಾರ್ಕ್ ಮತ್ತು ರಾಜ—ಇವರುಗಳು ಆಡಳಿತಮಾಡಬೇಕಾಯಿತು. ಆರ್ಕನ್ ಮತ್ತು ಪ್ರೋಲ್‌ಮಾರ್ಕರನ್ನು ಪ್ರತಿಯೊಂದು ವರ್ಷವೂ ಪ್ರಜೆಗಳೇ ಚುನಾಯಿಸುತ್ತಿದ್ದರು. ಇವರ ಪೈಕಿ ಆರ್ಕನ್‌ನೇ ಮುಖ್ಯಸ್ಥನು. ಎಲ್ಲಾ ಸಿವಿಲ್ (ಪೌರೇಯ) ಮೊಕದ್ದಮೆಯಲ್ಲಿ ಅವನೇ ಮುಖ್ಯ ನ್ಯಾಯಾಧಿಪತಿ. ಆಡಳಿತದಲ್ಲಿ ಆರ್ಕನಿಗೆ ಮೊದಲನೆಯ ಸ್ಥಾನವನ್ನು ಕೊಟ್ಟಿದ್ದರು. ರಾಜನ ಹಕ್ಕುಗಳನ್ನು ಕಡಿಮೆಮಾಡಿ ಆತನ ಅಧಿಕಾರವನ್ನು ಹೆಚ್ಚುಮಾಡಿದರು. ಪೋಲ್‌ಮಾರ್ಕ್ ಎಂಬುವನು ಮುಖ್ಯ ಸೈನ್ಯಾಧಿಕಾರಿ. ಪೌರರಲ್ಲದ ಇತರರಿಗೆ ಮುಖ್ಯ ನ್ಯಾಯಾಧಿಪತಿಯಾಗಿದ್ದನು. ರಾಜನು ಮತದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಮತವಿಚಾರದ ಮೊಕದ್ದಮೆಗಳಿಗೆ ಮುಖ್ಯ ನ್ಯಾಯಾಧಿಪತಿಯಾಗಿದ್ದನು.

ನ್ಯಾಯವಿಧಾಯಕ ಸಭೆಯನ್ನು ಬೌಲಿ, ಬ್ಯೂಲಿ ಅಥವಾ ಏರಿಯೋಪಾಗಸ್ ಸಭೆ ಎಂದು ಕರೆಯುತ್ತಿದ್ದರು. ಇದನ್ನು ಹಿರಿಯರ ಸಭೆಯೆಂದೂ ಹೇಳಬಹುದು. ಇದು ಮುಖ್ಯವಾಗಿ ಶ್ರೀಮಂತರ ಸಭೆ. ಈ ಸಭೆಯ ಸದಸ್ಯರು ಕಾನೂನು ಮತ್ತು ರಾಜ್ಯಪದ್ಧತಿಯ ಪಾಲಕರಾಗಿದ್ದರು.

ಪ್ರಜಾಸಭೆಯಲ್ಲಿ ಎಲ್ಲಾ ಪೌರರೂ ಸದಸ್ಯರಾಗಿದ್ದರು. ಆದರೂ ಐಶ್ವರ್ಯದ ಆಧಾರದಮೇಲೆ ಮೂರು ವರ್ಗಗಳಿದ್ದವು. ಮೊದಲನೆಯ

ವರ್ಗವು ಶ್ರೀಮಂತರದು. ಎರಡನೆಯ ವರ್ಗವು ಒಕ್ಕಲು ವರ್ಗದವರದು. ಮೂರನೆಯ ವರ್ಗವು ಕಾರ್ಮಿಕರದು. ವ್ಯಾಪಾರಗಾರರೂ ಮೂರನೆಯ ವರ್ಗಕ್ಕೆ ಸೇರಿದ್ದರು. ಸಾಗುವಳಿಮಾಡುವ ಕೂಲಿಗಾರರು ಪೌರತ್ವದ ಹಕ್ಕನ್ನು ಹೊಂದಿರಲಿಲ್ಲ. ಸಮಾಜದಲ್ಲಿ ಈ ತಾರತಮ್ಯಗಳಿದ್ದುದರಿಂದ ಆಗಾಗ್ಗೆ ಘರ್ಷಣೆಯುಂಟಾಗುತ್ತಿತ್ತು.

2. **ಸಾಮಾಜಿಕ ಕ್ರಾಂತಿ**—ಕ್ರಿ. ಪೂ. ೭ ನೆಯ ಮತ್ತು ೮ ನೆಯ ಶತಮಾನಗಳಲ್ಲಿ ಒಂದು ರೀತಿಯಾದ ಸಾಮಾಜಿಕ ಕ್ರಾಂತಿಯುಂಟಾಯಿತು. ವ್ಯಾಪಾರ ವಾಣಿಜ್ಯವು ಅಭಿವೃದ್ಧಿಹೊಂದಿ ಕುಲೀನ ಪ್ರಭುತ್ವದ ಬದಲು ಶ್ರೀಮಂತರ ಪ್ರಭುತ್ವವು ಮೊದಲಾಯಿತು. ಐಶ್ವರ್ಯದ ಆಧಾರದಮೇಲೆ ಸಮಾಜವು ನಾಲ್ಕು ವರ್ಗಗಳಾಗಿ ವಿಂಗಡಿಸಲ್ಪಟ್ಟಿತು. ಮೊದಲನೆಯ ವರ್ಗದ '**ಪೆಂಟಿಕಾಸಿಯೋ ಮೆಡಿಮ್ನಿ**' ಎಂಬ ಶ್ರೀಮಂತರಿಗೆ ರಾಷ್ಟ್ರದ ಉನ್ನತ ಸ್ಥಾನಗಳನ್ನು ಮೀಸಲಾಗಿಟ್ಟಿದ್ದರು. ಎರಡನೆಯ ಮತ್ತು ಮೂರನೆಯ ವರ್ಗದ **ಹಿಪ್ಪಸ್, ಸ್ಯೂಗಿಟ್** ಎಂಬುವರು ರಾಜಕೀಯ ಹಕ್ಕುಗಳನ್ನು ಹೊಂದಿದ್ದರು. ನಾಲ್ಕನೆಯ ವರ್ಗದ **ಥೆಟಿಸ್** ಎಂಬವರಿಗೆ ರಾಜಕೀಯ ಹಕ್ಕುಗಳಿರಲಿಲ್ಲ. ಅವರು ಕೇವಲ ಪೌರತ್ವದ ಹಕ್ಕನ್ನು ಹೊಂದಿದ್ದರು. ಇದರಿಂದ ಹಿಂದುಳಿದ ವರ್ಗದವರಿಗೆ ಬಹಳ ಅಸಮಾಧಾನವುಂಟಾಯಿತು. ಕ್ರಮೇಣ ಸಂಘಟನೆಯಿಂದ ಅವರು ತಮ್ಮ ಶಕ್ತಿಯನ್ನು ಬೆಳಸಿಕೊಂಡರು. ಆದರೂ ಸಾಮಾನ್ಯ ಜನರಿಗೆ ಕಾನೂನು ಏನೆಂಬುದು ತಿಳಿಯುವುದಕ್ಕೆ ಅವಕಾಶವೇ ಇರಲಿಲ್ಲ. ಈ ಕಾನೂನಿನ ಆಡಳಿತವು ಕುಲೀನರ ಮತ್ತು ಶ್ರೀಮಂತರ ಗುತ್ತಿಗೆಯಾಗಿತ್ತು. ಕಾನೂನುಗಳ ಸಂಗ್ರಹವು ಅತಿ ಜರೂರಾದ ವಿಚಾರವಾಗಿತ್ತು. ಕ್ರಿ. ಪೂ. ೬೮೦ರಲ್ಲಿ ಥೆಸ್ಮಾಥೆಟಿ ಎಂಬ ಆರು ನ್ಯಾಯಾಧಿಪತಿಗಳ ಸಂಸ್ಥೆಯು ಸ್ಥಾಪಿತವಾಯಿತು. ಇವರನ್ನು ಪ್ರತಿಯೊಂದು ವರ್ಷವೂ ಸಾರ್ವಜನಿಕರೇ ಚುನಾಯಿಸುತ್ತಿದ್ದರು. ಇವರು ಅಥೆನ್ಸ್ ರಾಷ್ಟ್ರದ ನ್ಯಾಯಾಧೀಶರಾಗಿ ಎಲ್ಲರಿಗೂ ಒಂದೇ ರೀತಿಯಾದ ನ್ಯಾಯಪಾಲರಾದರು. ಸ್ವಲ್ಪ ಕಾಲದಮೇಲೆ ಆಡಳಿತದ ಉನ್ನತ ಅಧಿಕಾರಿಗಳಾದ ಆರ್ಕನರ ಹಾಗೆ ಉನ್ನತಸ್ಥಾನವನ್ನು ಹೊಂದಿ ಆರ್ಕನರು ಎಂದು ಪರಿಗಣಿತರಾದರು.

3. ಕೈಲನ್ ಒಳಸಂಚು—ಹೀಗಿರುವಾಗ ಕ್ರಿ. ಪೂ. ೬೩೨ ರಲ್ಲಿ ಕೈಲನ್ ಎಂಬ ಶ್ರೀಮಂತನು ದುರಾಶೆಯಿಂದ ತಾನೇ ಸರ್ವಾಧಿಕಾರವನ್ನು ಹೊಂದಬೇಕೆಂದು ಒಂದು ಪಿತೂರಿಯನ್ನು ಮಾಡಿದನು. ಮಿಗಾರಿಯನರ ಸಹಾಯದಿಂದ ಅಥೆನ್ಸ್ ಪಟ್ಟಣದ ದುರ್ಗವನ್ನು ಹಿಡಿದು ತನ್ನ ಅಧಿಕಾರವನ್ನು ಸ್ಥಾಪಿಸುವುದಕ್ಕೆ ಪ್ರಯತ್ನಪಟ್ಟನು. ಆದರೆ ಸಾರ್ವಜನಿಕರು ಒಟ್ಟುಗೂಡಿ ಅವನಿಗೆ ಬೆಂಬಲವನ್ನು ಕೊಡದಿದ್ದುದರಿಂದ ಕೈಲನನ ಪ್ರಯತ್ನವು ವಿಫಲವಾಯಿತು. ಕೊನೆಗೆ ಕೈಲನನ್ನು ಹಿಡಿದು ಸೆರೆಯಲ್ಲಿಡುವುದರಲ್ಲಿದ್ದರು. ಕೈಲನನು ತಪ್ಪಿಸಿಕೊಂಡು ಓಡಿಹೋದನು. ಆದರೂ ಅವನ ಅನುಯಾಯಿಗಳನ್ನು ಹಿಡಿದು ಅವರನ್ನು ಶಿಕ್ಷೆಗೆ ಗುರಿಮಾಡಿದರು. ಎಲ್ಲೆಲ್ಲೂ ಅಶಾಂತಿಯುಂಟಾಯಿತು. ಸಾರ್ವಜನಿಕರಿಗೆ ನೆಮ್ಮದಿಯಿರಲಿಲ್ಲ. ಅವರ ಆರ್ಥಿಕ ಸ್ಥಿತಿಯು ಶೋಚನೀಯವಾಗಿತ್ತು.

ಡ್ರೇಕನನ ಕಾನೂನು ಸಂಗ್ರಹ—ಕೈಲನನ ಒಳಸಂಚು ಶ್ರೀಮಂತರಿಗೆ ಎಚ್ಚರಿಕೆಯಾಗಿರಲು ಕಾರಣವಾಯಿತು. ಸಾಮಾನ್ಯ ಜನರು ಸಂಘಟನೆಯಿಂದ ಎಂಥಾ ವಿಪತ್ತನ್ನೂ ಕುಗ್ಗಿಸಬಲ್ಲರು ಎಂಬುದು ಮಂದಟ್ಟಾಯಿತು. ಕ್ರಿ. ಪೂ. ೬೨೧ ರಲ್ಲಿ ಶ್ರೀಮಂತರು ಡ್ರೇಕನ್ ಎಂಬ ಸುಧಾರಕನನ್ನು ಥೆಸ್ಮಾಥೆಟಯಾಗಿ ನೇಮಿಸಿದರು. ಆತನಿಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟು ರಾಷ್ಟ್ರದ ಕಾನೂನುಗಳನ್ನು ಸಂಗ್ರಹಮಾಡಲು ವ್ಯವಸ್ಥೆ ಮಾಡಿದರು. ಡ್ರೇಕನನು ಎಲ್ಲಾ ಕಾನೂನುಗಳನ್ನೂ ಒಟ್ಟುಗೂಡಿಸಿ ಸಂಗ್ರಹಮಾಡಿದ್ದು ಸಾರ್ವಜನಿಕರಿಗೆ ಬಹಳ ಸಹಾಯವಾಯಿತು. ಆದರೆ ಡ್ರೇಕನನ ಕಾನೂನುಸಂಗ್ರಹವು ಮಸಿಯಲ್ಲಲ್ಲದೆ ರಕ್ತದಲ್ಲಿ ಬರೆದಿದೆಯೆಂದು ಹೇಳುವುದು ವಾಡಿಕೆಯಾಗಿದೆ. ಸಣ್ಣ ಪುಟ್ಟ ಮೊಕದ್ದಮೆಗಳಿಗೂ ಆತನು ಮರಣದಂಡನೆಯನ್ನು ವಿಧಿಸಿರುವುದು ಆಶ್ಚರ್ಯವಾಗಿದೆ. ಡ್ರೇಕನನ ಹೆಸರು ಕ್ರೂರನಾದ ಸುಧಾರಕನೆಂದು ಲೋಕ ಪ್ರಸಿದ್ಧವಾಗಿದೆ.

ಡ್ರೇಕನನ ಕಾನೂನು ಸಂಗ್ರಹವು ಜನಸಾಮಾನ್ಯರಿಗೆ ಬಹಳ ಸಹಾಯವಾಯಿತು. ಶ್ರೀಮಂತರ ದಬ್ಬಾಳಿಕೆ, ಅನ್ಯಾಯ ಕೊನೆಗೊಂಡಿತು. ಎಲ್ಲರಿಗೂ ಕಾನೂನುಗಳನ್ನು ತಿಳಿಯಲು ಅವಕಾಶವಾಯಿತು. ಸಾಮಾನ್ಯರು ನ್ಯಾಯಕ್ಕೆ ಹೊಡೆದಾಡಲು ಅನುಕೂಲವಾಯಿತು. ಆದರೂ ಜನರ

ಆರ್ಥಿಕ ಸ್ಥಿತಿಯು ಬದಲಾವಣೆಯಾಗಲಿಲ್ಲ. ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಿದ್ದರು. ಬಡವರು ಸಾಲದ ಹೊರೆಯಿಂದ ಕಂಗೆಟ್ಟುಹೋಗಿದ್ದರು. ಬೇಸಾಯಗಾರರು ತಮ್ಮ ಭೂಮಿಯನ್ನು ಒತ್ತೆ ಮಾಡಿ ಸಾಲವನ್ನು ತೆಗೆದುಕೊಂಡಿದ್ದರು. ಅವರು ಈ ಸಾಲದಮೇಲೆ ಬಡ್ಡಿ ಕೊಡುವುದೇ ಬಹಳ ಕಷ್ಟವಾಯಿತು. ಕೊನೆಗೆ ತಮ್ಮ ಭೂಮಿಯನ್ನು ಕಳೆದುಕೊಂಡು ಸಾಹುಕಾರರ ಗುಲಾಮರಾಗುವ ಸ್ಥಿತಿಗೆ ಬಂದರು. ರಾಜಕೀಯ ಹಕ್ಕುಗಳು ತಮ್ಮ ಹಸಿವನ್ನು ನೀಗಿಸುವುದಿಲ್ಲವೆಂದು ಚೆನ್ನಾಗಿ ವಿದಿತವಾಯಿತು. ಆರ್ಥಿಕ ಸ್ಥಿತಿಯು ಇಂಥ ಹೀನಸ್ಥಿತಿಯಲ್ಲಿದ್ದಾಗ ರಾಷ್ಟ್ರದಲ್ಲಿ ಎಲ್ಲೆಲ್ಲಿಯೂ ಉಗ್ರವಾದ ಚಳುವಳಿ ಉಂಟಾಗುವುದರಲ್ಲಿತ್ತು. ಈ ವಿಷಮ ಸ್ಥಿತಿಯಲ್ಲಿ ಸೋಲನನೆಂಬ ಶ್ರೇಷ್ಠಸುಧಾರಕನು ಸಾರ್ವಜನಿಕರ ಪರವಾಗಿ ರಾಷ್ಟ್ರದ ಆಡಳಿತವನ್ನು ನಿರ್ವಹಿಸಲು ಬಂದಿದ್ದು ಅವರ ಪುಣ್ಯವೆಂದು ಹೇಳಬೇಕು.

ಅಧ್ಯಾಯ ೮

ಸೋಲನ್‌ನ ಸುಧಾರಣೆಗಳು

ಸೋಲನ್‌ನ ಸುಧಾರಣೆಗಳು ಅಥೆನ್ಸ್‌ರಾಷ್ಟ್ರದ ಪ್ರಜಾಪ್ರಭುತ್ವದ ತಳಹದಿಯನ್ನು ಹಾಕಿದವು. ಸೋಲನ್‌ನು ಶ್ರೀಮಂತರ ಕುಲಕ್ಕೆ ಸೇರಿದ್ದರೂ ಬಡವರ ಸ್ಥಿತಿಯನ್ನು ಕಂಡು ಅತ್ಯಂತ ಕನಿಕರವನ್ನು ತೋರಿಸಿದನು. ಮೊದಲಿನಿಂದಲೂ ಅವರ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕೆಂದು ಹಾತೊರೆಯುತ್ತಿದ್ದನು. ಶ್ರೀಮಂತರ ಅಹಂಕಾರ, ದುರಾಶೆಯನ್ನು ದ್ವೇಷಿಸಿ ಸಾಮಾನ್ಯಜನರ ಸೌಖ್ಯಕ್ಕಾಗಿ ದುಡಿದನು. ಮುಖ್ಯವಾಗಿ ಅವರ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸಬೇಕೆಂದು ಸಂಕಲ್ಪಮಾಡಿದನು. ಆದರೂ ಆತನ ಸುಧಾರಣೆಗಳು ಸಂಯಮ, ಸತ್ಯತೆ, ನ್ಯಾಯದಿಂದ ಕೂಡಿದ್ದವು. ಕ್ರಾಂತಿಯುತವಾದ ಬದಲಾವಣೆಗಳನ್ನು ಮಾಡಲು ಪ್ರಯತ್ನಪಡದೆ ಸೋಲನ್‌ನು ಶ್ರೀಮಂತರ ಮತ್ತು ಬಡವರ ಹೊಂದಿಕೆಯಿಂದ ಶಾಂತಿಯನ್ನು ಸ್ಥಾಪಿಸಬೇಕೆಂದು ಪ್ರಯತ್ನಪಟ್ಟನು. 'ಮಿತಿಮೀರುವಿಕೆಯಿಂದ ದೂರವಾಗಿರು' ಎಂಬುದೇ ಆತನ ಸುಧಾರಣೆಗಳ ಆದರ್ಶವಾಕ್ಯವಾಗಿತ್ತು.

1. **ಆರ್ಥಿಕ ಸುಧಾರಣೆಗಳು** :—ಸೋಲನನು ಮುಖ್ಯವಾಗಿ ಜನರ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸಬೇಕೆಂದು ಸಂಕಲ್ಪಮಾಡಿದನು. ಜನರ ಆರ್ಥಿಕಸ್ಥಿತಿಯು ಉತ್ತಮಗೊಳ್ಳದೆ ಇದ್ದರೆ ರಾಜಕೀಯ ಸುಧಾರಣೆಗಳು ಎಳ್ಳಷ್ಟೂ ಪ್ರಯೋಜನವಾಗುವುದಿಲ್ಲವೆಂದು ತಿಳಿದಿದ್ದನು. ಸಾಮಾನ್ಯ ಜನರು ಶಾಂತಿ, ತೃಪ್ತಿಯಿಂದ ಇರಬೇಕಾದರೆ ಅವರ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳಬೇಕು. ಹಸಿದ ಜನರಿಗೆ ರಾಜಕೀಯ ಹಕ್ಕುಗಳು ಏನೇನೂ ಸಹಾಯವಾಗುವುದಿಲ್ಲವೆಂದೂ ಆತನ ಅಭಿಪ್ರಾಯ. ರಾಜಕೀಯ ಸುಧಾರಣೆಗೆ ಮೊದಲು ಆರ್ಥಿಕ ಸುಧಾರಣೆಗಳು ಅವಶ್ಯಕವೆಂದು ಸೋಲನ್‌ನು ನಿಶ್ಚಯಿಸಿದನು. ನಾವು ನೋಡಿದ ಹಾಗೆ ಅಥೆನ್ಸ್ ರಾಷ್ಟ್ರದಲ್ಲಿ ಎಲ್ಲೆಲ್ಲಿಯೂ ಅತೃಪ್ತಿ, ಅಶಾಂತಿ ನೆಲಸಿತ್ತು. ಒಕ್ಕಲುತನದವರು ತಮ್ಮ ಭೂಮಿಯನ್ನು ಒತ್ತೆಮಾಡಿ ಸಾಲಗಾರರಾಗಿದ್ದರು. ಸ್ವಲ್ಪಕಾಲದ ಮೇಲೆ ಬಡ್ಡಿಗೆ ಬಡ್ಡಿ ಬೆಳೆದು ಸಾಲವನ್ನು ತೀರಿಸಲು ಸಾಧ್ಯವಾಗದೆ ತಮ್ಮ ಭೂಮಿಯನ್ನು ಕಳೆದುಕೊಂಡು ಕೊನೆಗೆ ಶ್ರೀಮಂತರ ಅಡಿಯಾಳಾಗುವ ಸ್ಥಿತಿಗೆ ಬಂದರು. ಶ್ರೀಮಂತರ ಕ್ರೂರತನಕ್ಕೆ ಮಿತಿಯೇ ಇರಲಿಲ್ಲ. ಇಂಥ ಸಂದಿಗ್ಧಸಮಯದಲ್ಲಿ ಸೋಲನನು ಆಡಳಿತದ ಹೊಣೆಯನ್ನು ಹೊತ್ತಿದ್ದು ಅಥಿನಿಯರ ಪುಣ್ಯವೆಂದೇ ಹೇಳಬೇಕು. ಆತನು ಅಧಿಕಾರಕ್ಕೆ ಬಂದ ತಕ್ಷಣ ಸಾಮಾನ್ಯ ಜನರನ್ನು ಅವರ ಸಾಲದ ಹೊರೆಯಿಂದ ಬಿಡುಗಡೆ ಮಾಡಬೇಕೆಂದು ಸಂಕಲ್ಪಿಸಿ " ಸೈಸಕ್ಥೀಯ " ಅಥವಾ " ಹೊರೆಯಿಂದ ಅಲ್ಲಾಡಿಸು " ಎಂಬ ಆರ್ಥಿಕ ಸುಧಾರಣೆಯನ್ನು ಮಾಡಿದನು. ಈ ಸುಧಾರಣೆಯಿಂದ ಎಲ್ಲಾ ಸಾಲಗಳೂ—ಒತ್ತೆಯ ಸಾಲ, ಖಾಸಗಿ ಸಾಲ, ಇತರ ಸಾಲಗಳು—ರದ್ದು ಮಾಡಲ್ಪಟ್ಟವು. ಸಾಲಕ್ಕೋಸ್ಕರ ಯಾರಾರು ಜೀತದಾಳುಗಳಾಗಿದ್ದರೋ ಅವರೆಲ್ಲಾ ಸ್ವತಂತ್ರರಾದರು. ಇನ್ನುಮೇಲೆ ಸಾಲಕ್ಕೋಸ್ಕರ ಯಾರೂ ತಮ್ಮ ವೈಯುಕ್ತಿಕ ಸ್ವಾತಂತ್ರ್ಯವನ್ನು ಒತ್ತೆಮಾಡಲು ಅವಕಾಶವಿರಲಿಲ್ಲ. ಈ ಸುಧಾರಣೆಯು ಒಂದು ರೀತಿಯಾದ 'ಆರ್ಥಿಕಕ್ರಾಂತಿ' ಯೆಂದು ಹೇಳಬಹುದು. ಆದರೂ ಸೋಲನನು ಶ್ರೀಮಂತರ ಪ್ರಭಾವವನ್ನು ಸಂಪೂರ್ಣವಾಗಿ ಕುಗ್ಗಿಸಲು ಪ್ರಯತ್ನ ಮಾಡಲಿಲ್ಲ. ಸಾಮಾನ್ಯ ಜನರು ಸಾಲದ ಹೊರೆಯಿಂದ ಬಿಡುಗಡೆ ಹೊಂದಿದ್ದರೂ ಸೋಲನನು ಶ್ರೀಮಂತರ

ಭೂಮಿಯನ್ನು ಮುಟ್ಟುಗೋಳುಹಾಕಿ ಒಂದೇ ಸಮನಾಗಿ ಹಂಚುವನೆಂದು ನಿರೀಕ್ಷಿಸುತ್ತಿದ್ದರು. ಆದರೆ ಸೋಲನನು ಆರೀತಿ ಮಾಡಿದರೆ ರಾಷ್ಟ್ರದಲ್ಲಿ ಎಲ್ಲೆಲ್ಲಿಯೂ ಕ್ರಾಂತಿಯುಂಟಾಗಿ ಅಶಾಂತಿ, ದ್ವೇಷ, ದೌರ್ಜನ್ಯ ನೆಲಸುವುದೆಂದು ಹೆದರಿ ಅಂಥ ಸುಧಾರಣೆಯನ್ನು ಮಾಡಲು ಹಿಂಜರಿದನು. ಇದರಿಂದ ಶ್ರೀಮಂತರು ತಮ್ಮ ಸಾಲವನ್ನು ರದ್ದುಮಾಡಿದ್ದರೂ ಭೂಸುಧಾರಣೆಯನ್ನು ಮಾಡದೆ ಇದ್ದಿದ್ದರಿಂದ ಸೋಲನನ ಪೋಷಕರಾದರು. ಈ ರೀತಿಯಾದ ಮಧ್ಯಸ್ಥಿಕೆಯಿಂದ ಸೋಲನನು ಶ್ರೀಮಂತರಿಗೂ ಸಾಮಾನ್ಯ ಜನರಿಗೂ ಒಂದು ರೀತಿಯಾದ ಸಂಧಾನವನ್ನು ನಿರ್ಮಿಸಿದನು.

2. **ರಾಜಕೀಯ ಸುಧಾರಣೆಗಳು** :—ಸೋಲನನ ರಾಜಕೀಯ ಸುಧಾರಣೆಗಳು ಅಥೆನ್ಸ್‌ರಾಷ್ಟ್ರದ ಪ್ರಜಾಪ್ರಭುತ್ವದ ತಳಹದಿಯೆಂದು ಹೇಳಿದ್ದೇವೆ. ಆತನ ರಾಜಕೀಯ ಸುಧಾರಣೆಗಳಿಂದ ಕುಲೀನರ ಪ್ರಭಾವವು ತಗ್ಗಿ ಶ್ರೀಮಂತರ ಆಡಳಿತವು ಸಾಮಾನ್ಯಜನರ ಹತೋಟಿಯಲ್ಲಿರಲು ಅವಕಾಶವಾಯಿತು. ಸೋಲನನು ರಾಜಕೀಯ ಹಕ್ಕುಗಳನ್ನು ಸಾಮಾನ್ಯ ಜನರಿಗೂ ವಿಸ್ತರಿಸಿ ಅವರೂ ಆಡಳಿತದಲ್ಲಿ ಉತ್ಸಾಹದಿಂದ ದುಡಿಯಲು ಅವಕಾಶ ಕಲ್ಪಿಸಿದನು. ಆತನ ರಾಜಕೀಯ ಸುಧಾರಣೆಗಳಲ್ಲಿಯೂ ಸಂಯಮ ಮತ್ತು ಸಂಧಾನದ ಚೈತನ್ಯಗಳು ಕಂಡುಬರುತ್ತವೆ.

a. ಥೆಟಿಸ್ ಎಂಬ ಹಿಂದುಳಿದವರನ್ನು ನಾಲ್ಕನೆಯ ವರ್ಗವಾಗಿ ರಚಿಸಲ್ಪಟ್ಟು ಅವರ ಅಂತಸ್ತಿಗೆ ಸರಿಯಾಗಿ ರಾಜಕೀಯ ಹಕ್ಕುಗಳನ್ನು ಕೊಟ್ಟನು. ಅವರು ಸಾರ್ವಜನಿಕ ಸಭೆಯಲ್ಲಿ ಸದಸ್ಯರಾಗಲು ಅವಕಾಶವಾಯಿತು. ನ್ಯಾಯಾಲಯದಲ್ಲಿಯೂ ತಕ್ಕಮಟ್ಟಿಗೆ ಹಕ್ಕನ್ನು ಹೊಂದಿದ್ದರು. ಆದರೆ ಅವರಿಗೆ ಆಡಳಿತದ ಉನ್ನತ ಸ್ಥಾನಗಳಲ್ಲಿ ಸೇವೆಸಲ್ಲಿಸಲು ಅರ್ಹತೆ ಇರಲಿಲ್ಲ. ಒಂದೇಸಲ ಅವರಿಗೆ ಎಲ್ಲಾ ಹಕ್ಕುಗಳನ್ನೂ ಕೊಟ್ಟಿದ್ದೇ ಆದರೆ ಆಡಳಿತದಲ್ಲಿ ದಕ್ಷತೆಯು ಕಮ್ಮಿಯಾಗುವುದೆಂದು ಭಾವಿಸಿದ್ದನು. ಮುಖ್ಯವಾಗಿ ಅವರು ರಾಜಕೀಯದಲ್ಲಿ ತರಬೇತು ಹೊಂದಿ ಮುಂದಕ್ಕೆ ತಮ್ಮ ಸಾಮರ್ಥ್ಯದಿಂದ ಉನ್ನತಸ್ಥಾನದಲ್ಲಿ ಸೇವೆಸಲ್ಲಿಸಲು ಅವಕಾಶವಾಯಿತು.

b. ಸೋಲನನ ಮುಖ್ಯವಾದ ರಾಜಕೀಯ ಸುಧಾರಣೆಯೆಂದರೆ "ಹೆಲಿಯ" ಎಂಬ ಸಾರ್ವಜನಿಕ ನ್ಯಾಯಾಸ್ಥಾನವನ್ನು ಸ್ಥಾಪಿಸಿದ್ದು.

ಇದು ಒಂದು ರೀತಿಯಾದ ಮಹತ್ವದ ಸುಧಾರಣೆಯೆಂದು ಹೇಳಬಹುದು. "ಹೆಲಿಯ" ಎಂಬ ನ್ಯಾಯಾಸ್ಥಾನದಲ್ಲಿ ಸಾರ್ವಜನಿಕರೇ ನ್ಯಾಯಾಧೀಶರಾಗಿರಲು ಅವಕಾಶವಿತ್ತು. ಈ ನ್ಯಾಯಾಸ್ಥಾನಕ್ಕೆ ಸಂಪೂರ್ಣ ಅಧಿಕಾರವಿತ್ತು. ಉನ್ನತ ಅಧಿಕಾರಿಗಳು ತಮ್ಮ ಅಧಿಕಾರದ ಅವಧಿಯಾದ ಮೇಲೆ ಈ ನ್ಯಾಯಾಸ್ಥಾನದ ಮುಂದೆ ತಮ್ಮ ಮೇಲೆ ಬಂದ ಮೊಕದ್ದಮೆಗಳಿಗೆ ಹೊಣೆಗಾರರಾಗಿದ್ದರು. ಪ್ರಜಾಪ್ರಭುತ್ವದಲ್ಲಿ ಮುಖ್ಯವಾಗಿ ಸಾರ್ವಜನಿಕರ ಹಕ್ಕುಗಳನ್ನು ರಕ್ಷಿಸುವುದು ಮಹತ್ತರವಾದ ಹೊಣೆಗಾರಿಕೆ. ಸೋಲನನ "ಹೆಲಿಯ" ಎಂಬ ನ್ಯಾಯಾಸ್ಥಾನವು ರಾಷ್ಟ್ರದಲ್ಲಿ ಸುಭದ್ರವಾದ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಅವಕಾಶವಾಯಿತು.

c. ಬೌಲಿ ಅಥವಾ ಬ್ಯೂಲಿ ಎಂಬ ಶ್ರೀಮಂತಸಭೆಗೆ ಇದ್ದ ಕಾನೂನು ಮಾಡುವ ಹಕ್ಕನ್ನು ರದ್ದುಗೊಳಿಸಿದನು. ಪ್ರಜಾಪ್ರಭುತ್ವದಲ್ಲಿ ಕಾನೂನು ಮಾಡುವ ಸಂಸ್ಥೆಯು ಅತ್ಯಂತ ಮುಖ್ಯವಾದುದು. ಪ್ರಜೆಗಳಿಗೆ ಕಾನೂನು ಮಾಡುವ ಹಕ್ಕಿದ್ದರೆ ಅವರ ಪ್ರಭುತ್ವವನ್ನು ಮಾನ್ಯಮಾಡಿದಹಾಗೆ. ಈ ಶ್ರೀಮಂತ ಸಭೆಯು ಕೇವಲ ದೋಷವಿಮರ್ಶನಾಧಿಕಾರವನ್ನು ಹೊಂದಿತ್ತು. ಮುಂದೆ ಪೆರಿಕ್ಲಿಸ್ ಎಂಬ ಸುಧಾರಕನು ಈ ಅಧಿಕಾರವನ್ನೂ ರದ್ದುಗೊಳಿಸಿದನು.

d. ನಾನ್ನೂರು ಸದಸ್ಯರಿರುವ ಹೊಸ ಆಲೋಚನಾಸಭೆಯನ್ನು ಸ್ಥಾಪಿಸಿದನು. ಅಥೆನ್ಸ್ ರಾಷ್ಟ್ರದಲ್ಲಿ ನಾಲ್ಕುಕುಲಗಳಿದ್ದವು. ಪ್ರತಿಯೊಂದು ಕುಲವೂ ನೂರು ಸದಸ್ಯರನ್ನು ಚುನಾಯಿಸಬೇಕಾಗಿತ್ತು. ಈ ಆಲೋಚನಾಸಭೆಯು ಮುಖ್ಯವಾಗಿ ಕಾನೂನು ಮಾಡುವ ಸಂಸ್ಥೆಯಾಯಿತು. ಇದರ ಜೊತೆಗೆ ಎಕ್ಲಿಸ್ಸಿಯಾ ಎಂಬ ಪ್ರಜಾಮಂಡಲಿಯು ರಾಷ್ಟ್ರದ ಮುಖ್ಯ ವಿಚಾರಗಳಲ್ಲಿ ತನ್ನ ಒಪ್ಪಿಗೆಯನ್ನು ಕೊಡಬೇಕಾಗಿತ್ತು. ಯುದ್ಧಮಾಡುವುದು, ಕರಾರುಮಾಡುವುದು, ಉನ್ನತ ಅಧಿಕಾರಿಗಳನ್ನು ನೇಮಿಸುವುದು—ಇವು ಈ ಪ್ರಜಾಮಂಡಲಿಯ ಮುಖ್ಯ ಕರ್ತವ್ಯ. ಈ ಸಂಸ್ಥೆಗೆ ಥೆಟಿಸ್ ಎಂಬ ಹಿಂದುಳಿದವರೂ ಸದಸ್ಯರಾಗಲು ಅವಕಾಶವಿತ್ತು.

e. ಉನ್ನತ ಅಧಿಕಾರಿಗಳಾದ ಒಂಬತ್ತು ಆರ್ಕನರನ್ನು ನೇಮಿಸುವುದರಲ್ಲಿ ಸೋಲನನು ಚುನಾವಣೆಯ ಜೊತೆಗೆ ಅದೃಷ್ಟದ ಆಯ್ಕೆಯನ್ನು

ಸೇರಿಸಿದನು. ನಾಲ್ಕು ಕುಲಗಳೂ ನಲವತ್ತು ಉಮೇದುವಾರರನ್ನು ಚುನಾಯಿಸಬೇಕಾಗಿತ್ತು. ಈ ನಲವತ್ತು ಉಮೇದುವಾರರಲ್ಲಿ ಒಂಬತ್ತು ಆರ್ಕನರನ್ನು ಅದೃಷ್ಟದ ಆಯ್ಕೆಯಿಂದ ನೇಮಿಸಬೇಕಾಗಿತ್ತು. ಅಂದರೆ ಚುನಾವಣೆಯ ನಲವತ್ತು ಉಮೇದುವಾರರೂ ರಾಷ್ಟ್ರದ ಉನ್ನತಸ್ಥಾನವನ್ನು ಹೊಂದಲು ಅರ್ಹತೆ ಹೊಂದಿದ್ದರು. ಅವರಲ್ಲಿ ಒಂಬತ್ತು ಉನ್ನತ ಅಧಿಕಾರಿಗಳನ್ನು ಅದೃಷ್ಟದ ಆಯ್ಕೆಯಲ್ಲಿ ಪಾಲಿಗೆ ಬಂದದ್ದು ಎಂದು ಒಪ್ಪಿಕೊಳ್ಳಬೇಕಾಗಿತ್ತು. ಇದರಿಂದ ಯಾರಿಗೂ ಅಸಮಾಧಾನಕ್ಕೆ ಕಾರಣವಿರಲಿಲ್ಲ.

3. **ಸೋಲನನ ಸುಧಾರಣೆಗಳ ಪರಿಣಾಮ :—**ಸೋಲನನ ಸುಧಾರಣೆಗಳು ಪ್ರಜಾಪ್ರಭುತ್ವದ ಆದಿಯೆಂದು ಹೇಳಬಹುದು. ಆತನು ಆಡಳಿತಕ್ಕೆ ಬಂದ ಹೊಸದರಲ್ಲಿದ್ದ ಅಶಾಂತಿ, ಅತೃಪ್ತಿ ಕೊನೆಗೊಂಡು ರಾಷ್ಟ್ರದ ಎಲ್ಲಾ ವರ್ಗದವರೂ ತಮ್ಮ ರಾಜಕೀಯ ಹಕ್ಕು ಬಾಧ್ಯತೆಗಳಿಗೆ ದುಡಿಯುವುದಕ್ಕೆ ಚೈತನ್ಯ ತುಂಬಿತು. ರಾಜಕೀಯದಲ್ಲಿ ಸೋಲನನನ್ನು ಮಧ್ಯಸ್ಥಗಾರನೆಂದು ಹೇಳಬಹುದು. ಆತನು ಚಳುವಳಿ ಎಬ್ಬಿಸದೆ ಜನ ಜಾಗ್ರತಿ ಉಂಟುಮಾಡಿ ಎಲ್ಲರೂ ರಾಷ್ಟ್ರದ ಹಿತಕ್ಕೋಸ್ಕರ ದುಡಿಯುವ ಹಾಗೆ ಮಾಡಿದ್ದು ಆತನ ಶಾಶ್ವತಕೆಲಸ. ಆತನಿಗೆ ತಾನೇ ಅಧಿಕಾರದಲ್ಲಿರಬೇಕೆಂಬ ಸ್ವಾರ್ಥತೆ ಇರಲಿಲ್ಲ. ತನ್ನ ಸುಧಾರಣೆಗಳು ತನ್ನ ಗೈರುಹಾಜರಿಯಲ್ಲಿ ಪ್ರಜೆಗಳು ಯಾವರೀತಿ ನಿರ್ವಹಿಸುವರು ಎಂದು ತಿಳಿಯಲು ಕ್ರಿ. ಪೂ. ೫೭೦ ರಲ್ಲಿ ತನ್ನ ಪದವಿಯಿಂದ ನಿವೃತ್ತಿಹೊಂದಿ ವಿದೇಶ ಸಂಚಾರಕ್ಕೆ ಹೊರಟನು. ಆತನ ಸುಧಾರಣೆಗಳು ಒಂದು ದೊಡ್ಡ ನ್ಯೂನತೆಗೆ ಅವಕಾಶವಾಯಿತು. ರಾಷ್ಟ್ರದಲ್ಲಿ ಅನೇಕ ಪಂಗಡಗಳು ಉದ್ಭವಿಸಿ ಅವು ತಮ್ಮತಮ್ಮಲ್ಲೇ ಅಂತರ್ಯುದ್ಧವನ್ನು ಮಾಡಲು ಸಹಾಯವಾಯಿತು. ಈ ನ್ಯೂನತೆಯನ್ನು ಮುಂದೆ ಕ್ಲಿಯಾಸ್ತನೀಸ್ ಎಂಬ ಸುಧಾರಕನು ಪರಿಹರಿಸಬೇಕಾಯಿತು. ಪೆರಿಕ್ಲಿಸ್ ಎಂಬ ಸುಧಾರಕನು ಸೋಲನನು ಹಾಕಿದ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಸುಂದರವಾದ ದಿವ್ಯಭವನ ನಿರ್ಮಿಸಿದನು.

ಅಧ್ಯಾಯ ೯

ಪಿಸಿಸ್ಟ್ರೇಸಿನ ನಿರಂಕುಶಪ್ರಭುತ್ವ ಕ್ರಿ. ಪೂ. ೫೬೦–೫೨೭

ಸೋಲನನ ಸುಧಾರಣೆಗಳು ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಎಷ್ಟೇ ಅನುಕೂಲವಾಗಿದ್ದರೂ ಪಕ್ಷಭಾವನೆಗೆ ಅವಕಾಶವಾಯಿತು. ರಾಷ್ಟ್ರದಲ್ಲಿ ಎಲ್ಲೆಲ್ಲಿಯೂ ಭೇದಭಾವನೆಗಳು ತಲೆದೋರಿ ಕಚ್ಚಾಟವುಂಟಾಯಿತು. ಮುಖ್ಯವಾಗಿ ಗುಡ್ಡ, ಮೈದಾನ, ಸಮುದ್ರದತೀರ ಎಂಬ ಭೌಗೋಲಿಕ ಪಕ್ಷಗಳು ಹುಟ್ಟಿದವು. ಈ ಪ್ರತಿಯೊಂದು ಪ್ರದೇಶದ ಜನರೂ ತಾವೇ ಆಡಳಿತವನ್ನು ಹೊಂದಲು ಪ್ರಯತ್ನಪಟ್ಟರು. ಅವರಿಗೆ ರಾಷ್ಟ್ರದ ಹಿತವು ಎಳ್ಳಷ್ಟೂ ಇರಲಿಲ್ಲ. ಸೋಲನನು ತನ್ನ ಸುಧಾರಣೆಗಳಿಂದ ಈ ನ್ಯೂನತೆಯುಂಟಾಗುವುದೆಂದು ತಿಳಿದಿಗಲಿಲ್ಲ. ಸಮಾಜದಲ್ಲಿ ಕುರುಬ, ಶ್ರೀಮಂತ, ವರ್ತಕ ಎಂಬ ತಾರತಮ್ಯಗಳು ಬೆಳೆದು ರಾಜ್ಯದ ಆಡಳಿತವನ್ನು ನಡೆಸುವುದೇ ಕಷ್ಟವಾಯಿತು. ಈ ಸಂದರ್ಭದಲ್ಲಿ ಪಿಸಿಸ್ಟ್ರೇಸ್ ಎಂಬ ಗುಡ್ಡ ಜನರ ನಾಯಕನು ತನ್ನ ಬಲಶಕ್ತಿಯಿಂದ ಅಧಿಕಾರಕ್ಕೆ ಬಂದು ತನ್ನ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಿದನು. ಪಿಸಿಸ್ಟ್ರೇಸನು ತನ್ನ ಪರಾಕ್ರಮದಿಂದ ಸಾಲಮಿಸ್ ದ್ವೀಪವನ್ನು ಗೆದ್ದು 'ಸಾಲಮಿಸನ ಶೂರ' ನೆಂದು ಪ್ರಸಿದ್ಧಿಯಾಗಿದ್ದನು. ಜನಸಾಮಾನ್ಯರಿಗೆ ಈತನನ್ನು ಕಂಡರೆ ಅಚ್ಚುಮೆಚ್ಚು. ಆದರೆ ಪಿಸಿಸ್ಟ್ರೇಸನು ಹೊರಗಡೆ ಜನಸಾಮಾನ್ಯರ ಹಿತೈಷಿಯೆಂದು ತೋರ್ಪಡಿಸಿದರೂ ನಿಜವಾಗಿ ತಾನೇ ಅಧಿಕಾರ ಚಲಾಯಿಸಬೇಕೆಂಬ ಅಪೇಕ್ಷೆ ಬಹಳವಾಗಿತ್ತು. ಕ್ರಿ. ಪೂ. ೫೬೦ ರಲ್ಲಿ ಪಿಸಿಸ್ಟ್ರೇಸನು ಅಥೆನ್ಸ್‌ನಗರದ ದುರ್ಗವನ್ನು ಹಿಡಿದು ತನ್ನ ನಿರಂಕುಶಪ್ರಭುತ್ವವನ್ನು ಸ್ಥಾಪಿಸಿದನು.

ಪಿಸಿಸ್ಟ್ರೇಸನ ಆಡಳಿತ:—ಪಿಸಿಸ್ಟ್ರೇಸನು ನಿರಂಕುಶಪ್ರಭುತ್ವವನ್ನು ಸ್ಥಾಪಿಸಿದರೂ ದಬ್ಬಾಳಿಕೆಯಿಂದ ಆಡಳಿತವನ್ನು ನಡೆಸದೆ ಜನಸಾಮಾನ್ಯರ ಯೋಗಕ್ಷೇಮಕ್ಕೆ ದುಡಿದು ರಾಷ್ಟ್ರಪ್ರಗತಿಯನ್ನು ಸಾಧಿಸಿದನು. ಅವನನ್ನು ರಕ್ಷಿಸುವುದಕ್ಕೆ ಐವತ್ತು ಅಂಗರಕ್ಷಕರಿದ್ದರು. ಇದು ನಿರಂಕುಶಪ್ರಭುತ್ವದ ಚಿಹ್ನೆ. ಆಡಳಿತದಲ್ಲಿ ಹೆಚ್ಚಾಗಿ ಬದಲಾವಣೆಯಾಗದೇ ಇದ್ದರೂ ಆರ್ಕನ

ರನ್ನೂ ಮತ್ತು ಇತರ ಉನ್ನತ ಅಧಿಕಾರಿಗಳನ್ನು ನೇಮಿಸುವಾಗ ಆತನ ಕೈವಾಡವಿತ್ತು. ಆದರೆ ರಾಷ್ಟ್ರದಲ್ಲಿ ಭದ್ರತೆಯಿತ್ತು. ಎಲ್ಲೂ ಕೊಲೆಗೆ ಅವಕಾಶವಿರಲಿಲ್ಲ. ಯಾರನ್ನೂ ಗಡೀಪಾರು ಮಾಡುತ್ತಿರಲಿಲ್ಲ. ತೆರಿಗೆಗಳು ಅನ್ಯಾಯವಾದ ಹೊರೆಯಾಗಿರಲಿಲ್ಲ. ವ್ಯಾಪಾರ ಮತ್ತು ವ್ಯವಸಾಯಕ್ಕೆ ಬಹುಮಟ್ಟಿಗೆ ಪ್ರೋತ್ಸಾಹವಿತ್ತು. ಪಿಸಿಸ್ಟ್ರೇಸನು ಮುಖ್ಯವಾಗಿ ಅಥೆನ್ಸ್ ನಗರವನ್ನು ಸೌಂದರ್ಯದ ಬೀಡಾಗಿ ಮಾಡಲು ಅನೇಕ ದೇವಸ್ಥಾನಗಳನ್ನು ಕಟ್ಟಿಸಿ ತನ್ನ ದೈವಭಕ್ತಿಯನ್ನು ತೋರಿಸಿದನು. ನಗರದ ದುರ್ಗದಮೇಲೆ ಅಥೆನೆ ಎಂಬ ದೇವತೆಗೆ ಅಮೃತಶಿಲೆಯಲ್ಲಿ ಸೊಗಸಾದ ದೇವಸ್ಥಾನವನ್ನು ಕಟ್ಟಿಸಿದನು. ಇದೇ ಸ್ಥಳದಲ್ಲಿ ನಾಲ್ಕು ವರ್ಷಕ್ಕೆ ಒಂದು ಸಲ ಭಾರಿ ಜಾತ್ರೆ ನಡೆಯುತ್ತಿತ್ತು. ಈ ದುರ್ಗದ ಕೆಳಗೆ ಡೆಯಾನಿಸಸ್ ಎಂಬ ದೇವರಿಗೆ ಮತ್ತೊಂದು ದೇವಸ್ಥಾನವನ್ನು ನಿರ್ಮಿಸಿದನು. ಇಲ್ಲಿ ವರ್ಷಕ್ಕೊಂದುಸಲ ಸಂಗೀತ, ನೃತ್ಯ ನಡೆಯುತ್ತಿತ್ತು. ಸಾಹಿತ್ಯಕ್ಕೆ ಪ್ರೋತ್ಸಾಹ ಕೊಟ್ಟದ್ದರಿಂದ ಅನೇಕ ಶ್ರೇಷ್ಠ ಕವಿಗಳು ಆತನ ಆಸ್ಥಾನದಲ್ಲಿ ಆಶ್ರಯಪಡೆದಿದ್ದರು. ಆತನ ಕೀರ್ತಿಯು ಶಾಶ್ವತವಾಗಿ ಹರಡಲು ಕಾರಣವೇನೆಂದರೆ ಮಹಾಕವಿಯಾದ ಹೋಮರನ ಕವಿತೆಗಳನ್ನು ಪರಿಷ್ಕರಣಮಾಡಿ ಪ್ರಕಟನೆ ಮಾಡಿದ್ದು. ಡೇಲಸ್ ದ್ವೀಪದಲ್ಲಿ ಅಪಾಲೋ ದೇವಸ್ಥಾನವನ್ನು ಶುದ್ಧೀಕರಣ ಮಾಡಿದನು. ಈ ರೀತಿಯಾಗಿ ಪಿಸಿಸ್ಟ್ರೇಸನು ಅಥೆನ್ಸ್ ರಾಷ್ಟ್ರವನ್ನು ಆಧ್ಯಾತ್ಮಿಕ ಕೇಂದ್ರವನ್ನಾಗಿಮಾಡಿದನು. ಆತನ ಆಡಳಿತವನ್ನು ಶಾಸನ ನಿಯಮಾನುಸಾರವಾದ ನಿರಂಕುಶಪ್ರಭುತ್ವವೆಂದು ಹೇಳಬಹುದು. ಮುಖ್ಯವಾಗಿ ಜನಸಾಮಾನ್ಯರು ಪ್ರಜಾಪ್ರಭುತ್ವದ ಹೊಣೆಯನ್ನು ಹೊರಲು ತರಬೇತು ಹೊಂದಿದರು.

ಹಿಪ್ಪಿಯಸನ ಆಡಳಿತ:—ಪೆಸಿಸ್ಟ್ರೇಸನು ಕಾಲವಾದ ನಂತರ ಅವನ ಮಕ್ಕಳು ಹಿಪ್ಪಿಯಸ್ ಮತ್ತು ಹಿಪ್ಪರ್ಕಸ್ ಕ್ರಿ. ಪೂ. ೫೨೭ ರಲ್ಲಿ ಆಡಳಿತಕ್ಕೆ ಬಂದರು. ಇವರಿಬ್ಬರೂ ಆಡಳಿತವನ್ನು ವಿಚಕ್ಷಣೆಯಿಂದ ನಿರ್ವಹಿಸಿ ಅಥೆನ್ಸ್ ನಗರವನ್ನು ಸಂಸ್ಕೃತಿಯ ಕೇಂದ್ರವನ್ನಾಗಿ ಮಾಡಿದರು. ಆದರೆ ಕ್ರಿ. ಪೂ. ೫೧೪ ರಲ್ಲಿ ಹಿಪ್ಪರ್ಕಸನನ್ನು ಹಾರ್ಮೋಡಿಯಸ್ ಮತ್ತು ಅರಿಸ್ಟೋಗೀಟನ್ ಎಂಬುವರು ಪಿತೂರಿಮಾಡಿ ಕೊಂದುಹಾಕಿದರು. ಹಿಪ್ಪಿ

ರ್ಕಸನು ಹಾರ್ಮೊಡಿಯಸನ ತಂಗಿಯನ್ನು ಅವಮಾನಗೊಳಿಸಿದನೆಂಬುದೂ, ರಾಷ್ಟ್ರವನ್ನು ನಿರಂಕುಶಪ್ರಭುತ್ವದಿಂದ ಬಿಡುಗಡೆಮಾಡಬೇಕೆಂಬುದೂ ಈ ಪಿತೂರಿಗೆ ಕಾರಣವಿರಬಹುದು. ಈ ಅನಾಹುತವಾದ ಮೇಲೆ ಹಿಪ್ಪಿಯ ಸನು ತನ್ನ ನೀತಿಯನ್ನು ಬದಲಾಯಿಸಿ, ಜನಗಳಲ್ಲಿ ನಂಬಿಕೆಯಿಲ್ಲದೆ ದಬ್ಬಾಳಿಕೆಯಿಂದ ಆಡಳಿತವನ್ನು ನಡೆಯಿಸಿದನು. ರಾಷ್ಟ್ರದಲ್ಲಿ ಎಲ್ಲೆಲ್ಲಿಯೂ ಅಶಾಂತಿ ನೆಲಸಿತು. ಡೆಲ್ಫಿ ದಿವ್ಯವಾಣಿಯೂ ಕೂಡ ಸ್ಪಾರ್ಟನರಿಗೆ "ಮೊದಲು ಅಥೆನ್ಸ್ ರಾಷ್ಟ್ರವನ್ನು ಸ್ವತಂತ್ರವಾಗಿ ಮಾಡಿ" ಎಂದು ಮೊರೆಯಿಟ್ಟಿತು. ಕ್ರಿ. ಪೂ. ೫೧೦ ರಲ್ಲಿ ಕ್ಲೀಸ್ಥನೆಸ್ ಎಂಬ ಸಾರ್ವಜನಿಕರ ಮುಖಂಡನ ಬೆಂಬಲದಿಂದ ಸ್ಪಾರ್ಟನರ ರಾಜನಾದ ಕ್ಲಿಯೋಮೆನೆಸ್ ಎಂಬುವನು ತನ್ನ ಸೈನ್ಯವನ್ನು ತಂದು ಹಿಪ್ಪಿಯಸನನ್ನು ಅಥೆನ್ಸ್ ನಗರದಿಂದ ಓಡಿಸಿದನು. ನಿರಂಕುಶ ಪ್ರಭುತ್ವವು ಅಳಿಸಿತು. ಸ್ಪಾರ್ಟನರ ಸೈನ್ಯವು ವಾಪಸಾದಮೇಲೆ ಸಾರ್ವಜನಿಕರು ಒಟ್ಟುಗೂಡಿ ಕ್ಲಿಸ್ಥನೆಸನೇ ಅಧಿಕಾರದ ಹೊಣೆಯನ್ನು ಹೊರಲು ಸಮರ್ಥನೆಂದು ನಿಶ್ಚಯಿಸಿ ಆತನನ್ನು ಸ್ವಾಗತಿಸಿದರು.

ಅಧ್ಯಾಯ ೧೦

ಕ್ಲೀಸ್ಥನೆಸ್‌ನ ಸುಧಾರಣೆಗಳು

ಸೋಲನನ ಹಾಗೆ ಕ್ಲೀಸ್ಥನೆಸನೂ ಪ್ರಗತಿಯ ಸುಧಾರಕನು. ಸೋಲನನು ಪ್ರಜಾಪ್ರಭುತ್ವದ ತಳಹದಿಯನ್ನು ಹಾಕಿದ್ದರೆ ಕ್ಲೀಸ್ಥನೆಸನು ಅದನ್ನು ಸುಭದ್ರತೆಯಿಂದ ವಿಸ್ತರಿಸಿ ರಾಷ್ಟ್ರದಲ್ಲಿ ಪೆಡಂಭೂತವಾದ ಪಾರ್ಟಿ ವೈಷಮ್ಯಗಳನ್ನು ನಿರ್ಮೂಲಮಾಡಿದನು. ಪ್ರಜಾಪ್ರಭುತ್ವವು ಯಶಸ್ವಿಯಾಗಿ ನಡೆಯಬೇಕಾದರೆ ಪಾರ್ಟಿಗಳಿಷ್ಟೇ ಇರಬೇಕು. ಆದರೆ ಈ ಪಾರ್ಟಿಗಳು ರಾಜಕೀಯದಲ್ಲಿ ಉನ್ನತ ಧ್ಯೇಯವನ್ನು ಹೊಂದಿ ಶಾಂತಿಯಿಂದ ಚಳುವಳಿ ನಡೆಸಿ ಪ್ರಜೆಗಳ ಬೆಂಬಲದಿಂದ ಅಧಿಕಾರಕ್ಕೆ ಬರಬೇಕು. ರಾಷ್ಟ್ರದಲ್ಲಿ ಉತ್ಕಟ ಸ್ಥಿತಿ ಉಂಟಾದರೆ ಈ ಪಾರ್ಟಿಗಳು ತಮ್ಮ ತಮ್ಮಲ್ಲೇ ಇರುವ ಭೇದ ಭಾವನೆಗಳನ್ನು ಮರೆತು ಎಲ್ಲರೂ ಒಂದೇ ಭಾವನೆಯಿಂದ ತಮ್ಮ ರಾಷ್ಟ್ರದ ಹಿತವನ್ನು ಸಾಧಿಸಬೇಕಾದದ್ದು ಮುಖ್ಯ. ಕ್ಲೀಸ್ಥನೆಸನ ಸುಧಾರಣೆಗಳು ಈ ಉನ್ನತ

ಧ್ಯೇಯಗಳಿಂದ ಕೂಡಿದ್ದವು. ರಾಜಕೀಯ ವಿಚಾರದಲ್ಲಿ ಅಥೆನ್ಸ್ ನಗರವು ಕೇಂದ್ರವಾಗಬೇಕು. ಆ ನಗರದಲ್ಲಿ ಶಾಸನ ಸಭೆಯ ಸದಸ್ಯರೂ ಮತದಾರರೂ ಒಟ್ಟುಗೂಡಿ ರಾಷ್ಟ್ರದ ಹಿತಕ್ಕೋಸ್ಕರ ದುಡಿಯಬೇಕು.

ಹತ್ತು ಹೊಸಕುಲಗಳು—ಸೋಲನನು ಅಟಿಕ ಪ್ರದೇಶದಲ್ಲಿ ನಾಲ್ಕು ಕುಲಗಳನ್ನು ಸ್ಥಾಪಿಸಿದ್ದನು. ಆದರೆ ಈ ಕುಲಗಳಲ್ಲಿ ಒಳಜಗಳವುಂಟಾಗಿ ಒಬ್ಬರನ್ನೊಬ್ಬರು ದ್ವೇಷಿಸಲು ಅವಕಾಶವಾಯಿತು. ಕ್ಲೀಸ್ಥನೆಸನು ಈ ನ್ಯೂನತೆಯನ್ನು ಸರಿಪಡಿಸಿ ಎಲ್ಲಾ ಪಂಗಡಗಳೂ ರಾಷ್ಟ್ರದ ಹಿತಕ್ಕೋಸ್ಕರ ದುಡಿಯುವಹಾಗೆ ಮಾಡಲು ಹತ್ತು ಹೊಸಕುಲಗಳನ್ನು ಏರ್ಪಡಿಸಿದನು. ಭೌಗೋಲಿಕ ವಿಭಾಗದಮೇಲೆ ರಾಷ್ಟ್ರದಲ್ಲಿ ಸುಮಾರು ನೂರರಿಂದ ಇನ್ನೂರರ ವರೆವಿಗೂ ಸಣ್ಣ ಪ್ರದೇಶ (Deme) ಗಳಿದ್ದವು. ಅಂದರೆ ಗುಡ್ಡದಲ್ಲಿಯೂ, ಮೈದಾನದಲ್ಲಿಯೂ, ಸಮುದ್ರತೀರದಲ್ಲಿಯೂ ಈ ಸಣ್ಣ ಪ್ರದೇಶಗಳು ಹರಡಿದ್ದವು. ಈ ಪ್ರತಿಯೊಂದು ಭೌಗೋಲಿಕ ಪ್ರದೇಶವನ್ನೂ ಹತ್ತು ಗುಂಪುಗಳಾಗಿ ವಿಂಗಡಿಸಿದನು. ಒಟ್ಟು ಮೂವತ್ತು ಗುಂಪುಗಳಾದವು. ಈ ಮೂವತ್ತು ಗುಂಪುಗಳನ್ನೂ ಹತ್ತು ಭಾಗಗಳಾಗಿ ವಿಂಗಡಿಸಿ ಪ್ರತಿಯೊಂದು ಭಾಗದಲ್ಲೂ ಮೂರು ಭೌಗೋಲಿಕ ಪ್ರದೇಶಗಳ ಪ್ರತಿನಿಧಿಯೂ ಇರುವಹಾಗೆ ಮಾಡಿದನು. ಈ ಹತ್ತು ಭಾಗಗಳೇ ಹತ್ತು ಹೊಸ ಕುಲಗಳಾದವು. ಇದರಿಂದ ಪ್ರತಿಯೊಂದು ಕುಲದಲ್ಲೂ ಗುಡ್ಡ, ಮೈದಾನ, ಸಮುದ್ರತೀರದ ಪ್ರತಿನಿಧಿಗಳು ಕಲೆತು, ರಾಜಕೀಯ ಸಂಪರ್ಕವನ್ನು ಹೊಂದಿದರು. ಅವರು ಕೇವಲ ತಮ್ಮ ಭೌಗೋಲಿಕ ಪ್ರದೇಶದ ಹಿತವನ್ನೇ ಸಾಧಿಸಬೇಕೆಂಬ ಸ್ವಾರ್ಥತೆಗೆ ಅವಕಾಶವಿರಲಿಲ್ಲ. ತಮ್ಮಲ್ಲಿದ್ದ ಭೇದಭಾವಗಳು ಕೊನೆಗೊಂಡವು. ರಾಷ್ಟ್ರದ ಅಭ್ಯುದಯಕ್ಕೆ ಎಲ್ಲರೂ ಸಹಕರಿಸಿ ಬಾಳಲು ಅವಕಾಶವಾಯಿತು. ಈ ಸುಧಾರಣೆಯು ಕಲ್ಪಿತವಾಗಿ ಕಂಡರೂ ಆಚರಣೆಗೆ ತರಲು ಕಷ್ಟವಾಗಲಿಲ್ಲ.

ಹೊಸ ಆಲೋಚನಾಸಭೆ—ಸೋಲನನು ಸ್ಥಾಪಿಸಿದ್ದ ನಾನ್ನೂರು ಸದಸ್ಯರ ಆಲೋಚನಾಸಭೆಯನ್ನು ರದ್ದುಗೊಳಿಸಿ, ಐನೂರು ಸದಸ್ಯರ ಹೊಸ ಆಲೋಚನಾ ಸಭೆಯನ್ನು ಸ್ಥಾಪಿಸಿದನು. ಪ್ರತಿಯೊಂದು ಕುಲವೂ ಐವತ್ತು ಸದಸ್ಯರನ್ನು ನೇಮಿಸಬೇಕಾಯಿತು. ಈ ಸಭೆಯು ಆಡಳಿತದಲ್ಲಿ

ಉನ್ನತಸ್ಥಾನವನ್ನು ಹೊಂದಿತ್ತು. ಅದರ ಅಧಿಕಾರವು ಅತಿ ವಿಶಾಲವಾಗಿತ್ತು. ಅದು ಶ್ರೇಷ್ಠ ಕಾರ್ಯನಿರ್ವಾಹಕಸಭೆ, ಶ್ರೇಷ್ಠ ಹಣಕಾಸಿನ ವ್ಯವಸ್ಥೆಯ ಸಂಸ್ಥೆ ಮತ್ತು ಶ್ರೇಷ್ಠ ವಿದೇಶೀಯ ನೀತಿಯಸಂಸ್ಥೆ. ಅಪಾಡ್ಕಟೈ ಎಂಬ ಹಣಕಾಸಿನ ಸಂಸ್ಥೆಯಲ್ಲಿ ಪ್ರತಿಯೊಂದು ಕುಲದಿಂದಲೂ ಒಬ್ಬೊಬ್ಬ ಹಣಕಾಸಿನ ಉನ್ನತ ಅಧಿಕಾರಿಯನ್ನು ಆರಿಸಿ ಹತ್ತು ಜನ ಅಧಿಕಾರಿಗಳು ರಾಷ್ಟ್ರದ ಹಣಕಾಸಿನ ಬಾಬತುಗಳನ್ನು ನೋಡಿಕೊಳ್ಳುತ್ತಿದ್ದರು.

ಪಂಚಾಗದ ಸುಧಾರಣೆ—ಕ್ಲೀಸ್ಥನೆಸನು ಎಲ್ಲಾ ಕುಲಗಳೂ ಒಂದೇ ಸಮನಾದ ಹಕ್ಕುಗಳನ್ನು ಹೊಂದಿರುವಹಾಗೆ ಒಂದೇ ಸಮನಾದ ಹೊಣೆಯನ್ನು ಹೊಂದಿರಬೇಕೆಂದು ನಿಷ್ಕರ್ಷಿಸಿ ಪಂಚಾಂಗದ ಸುಧಾರಣೆಯನ್ನು ಮಾಡಿದನು. ವರ್ಷವನ್ನು ಹತ್ತು ಭಾಗಗಳಾಗಿಮಾಡಿ ಪ್ರತಿಯೊಂದು ಕುಲವೂ ಮೂವತ್ತಾರು ದಿವಸದ ಒಂದು ತಿಂಗಳು ಸರ್ಕಾರದ ದಿನಚರಿಯ ಮಾಮೂಲು ಆಡಳಿತವನ್ನು ನಿಭಾಯಿಸುವಹಾಗೆ ವ್ಯವಸ್ಥೆ ಮಾಡಿದನು. ಈ ರೀತಿಯಾಗಿ ಹತ್ತು ಕುಲಗಳೂ ಆಡಳಿತದ ಹೊಣೆಯನ್ನು ಒಂದೇ ಸಮನಾಗಿ ಹೊಂದಲು ಅವಕಾಶವಾಯಿತು. ಪೆರಿಕ್ಲಿಸನ ಕಾಲದವರೆವಿಗೂ ಅಥೆನ್ಸ್ ರಾಷ್ಟ್ರದಲ್ಲಿ ಸರ್ಕಾರದ ನೌಕರರಿಗೆ ಸಂಬಳ ಸಾರಿಗೆಯನ್ನು ಕೊಡುತ್ತಿರಲಿಲ್ಲ. ಸರ್ಕಾರದ ಕೆಲಸವನ್ನು ಕೇವಲ ಸೇವಾಮನೋಭಾವನೆಯಿಂದ ಮಾಡಬೇಕಾಗಿತ್ತು. ಕ್ಲೀಸ್ಥನೆಸನ ಪಂಚಾಂಗ ಸುಧಾರಣೆಯಿಂದ ಸರ್ಕಾರದ ಕೆಲಸವು ತೊಂದರೆಯಿಲ್ಲದೆ ನಡೆಯಲು ಸಹಾಯವಾಯಿತು.

ಸ್ಟ್ರಾಟೆಗಿ—ಹತ್ತು ಜನ ಉನ್ನತ ಸೈನಾಧಿಕಾರಿಗಳಿರುವ ಸ್ಟ್ರಾಟೆಗಿ ಎಂಬ ಸೈನ್ಯ ಸಂಸ್ಥೆಯನ್ನು ಸ್ಥಾಪಿಸಿದನು. ಪ್ರತಿಯೊಂದು ಕುಲವು ಒಬ್ಬ ಉನ್ನತ ಸೈನಾಧಿಕಾರಿಯನ್ನು ಆರಿಸಿ ಈ ಸಂಸ್ಥೆಗೆ ಕಳುಹಿಸಬೇಕಾಯಿತು. ಈ ಸಂಸ್ಥೆಯು ಎಲ್ಲಾ ಸೈನಿಕ ವಿಚಾರವನ್ನು ನಿರ್ಣಯಿಸುವ ಹಕ್ಕನ್ನು ಹೊಂದಿತ್ತು.

ಸಾಮಾಜಿಕ ಬಹಿಷ್ಕಾರ (Ostracism)—ಕ್ಲೀಸ್ಥನೆಸನ ಸುಧಾರಣೆಗಳಲ್ಲಿ ಮುಖ್ಯವಾದದ್ದು ಸಾಮಾಜಿಕ ಬಹಿಷ್ಕಾರ. ಪ್ರಜಾಪ್ರಭುತ್ವದಲ್ಲಿ ಅನೇಕ ನಾಯಕರು ಸಾಮಾನ್ಯ ಜನರಿಗೆ ನಾನಾ ರೀತಿಯಲ್ಲಿ

ವಂಚಿಸಿ ಅಧಿಕಾರಕ್ಕೆ ಬರುತ್ತಾರೆ. ಅಧಿಕಾರಕ್ಕೆ ಮುಂಚೆ ತಮಗೇ ಹೆಚ್ಚಾಗಿ ಮತ ಬರುವುದಕ್ಕೋಸ್ಕರ ಜನಸಾಮಾನ್ಯರಿಗೆ ಏನೇನೋ ಮಾತುಕೊಟ್ಟು ಅವರ ಮತವನ್ನು ಗಳಿಸುವುದು ವಾಡಿಕೆಯಾಗಿದೆ. ರಾಜಕೀಯ ಶಿಕ್ಷಣವಿಲ್ಲದೇ ಇದ್ದರೆ ಜನಸಾಮಾನ್ಯರಿಗೆ ತಮ್ಮ ಮತದ ಹಕ್ಕಿನ ಬೆಲೆಯು ಗೊತ್ತಾಗುವುದಿಲ್ಲ. ಅಂಥ ಸಂದರ್ಭದಲ್ಲಿ ಅವರ ಮತವು ಅವರಿಗೇ ಹಾನಿಯಾಗುವುದುಂಟು. ಈ ನ್ಯೂನತೆಯನ್ನು ಸರಿಪಡಿಸುವುದಕ್ಕೆ ಕ್ಲೀಸ್ಥನೆಸನು ಸಾಮಾಜಿಕ ಬಹಿಷ್ಕಾರವನ್ನು ವಾಡಿಕೆಗೆ ತಂದನು. ಇದರಿಂದ ಯಾವ ನಾಯಕನು ರಾಷ್ಟ್ರದ ಜನರಿಗೆ ಮೋಸಗಾರನೆಂದು ಮುಂದಟ್ಟಾದರೆ ಆತನನ್ನು ಬಹಿಷ್ಕಾರ ಮಾಡಲು ಅಧಿಕಾರವಿತ್ತು. ಐದುಸಾವಿರ ಸದಸ್ಯರಿರುವ ಪ್ರಜಾಸಂಸ್ಥೆಯಲ್ಲಿ ನಾಯಕನು ವಂಚನೆಮಾಡುವನೆಂದು ತಿಳಿದು, ಆತನ ಹೆಸರನ್ನು ಒಂದು ಸಣ್ಣ ಮಡಕೆಯ ಚೂರಿನಮೇಲೆ ಸೂಚಿಸಿ, ಆತನಿಗೆ ವಿರೋಧವಾಗಿ ಬಹುಮತವು ಬಂದರೆ ಆತನು ಹತ್ತು ವರ್ಷಕಾಲ ರಾಷ್ಟ್ರದ ಹೊರಗಡೆ ದೇಶಭ್ರಷ್ಟನಾಗಬೇಕಾಗುತ್ತಿತ್ತು. ಆತನ ಖಾಸಗಿ ಆಸ್ತಿಗೆ ಮುಟ್ಟುಗೋಲು ಹಾಕುತ್ತಿರಲಿಲ್ಲ. ಆದರೂ ಆತನು ರಾಷ್ಟ್ರಕ್ಕೆ ಹಾನಿಕರ ವ್ಯಕ್ತಿ ಎಂಬುದು ಚೆನ್ನಾಗಿ ತಿಳಿಯುತ್ತಿತ್ತು. ಮೊದಲು ಈ ಸುಧಾರಣೆಯು ಒಳ್ಳೆಯ ಪರಿಣಾಮವನ್ನುಂಟುಮಾಡಿತು. ಕಪಟನಾಯಕರು ಸಾರ್ವಜನಿಕರನ್ನು ವಂಚಿಸಲು ಅವಕಾಶವಿರಲಿಲ್ಲ. ಆದರೆ ಸ್ವಲ್ಪಕಾಲದಮೇಲೆ ಜನರು ಈ ಹಕ್ಕನ್ನು ದುರುಪಯೋಗಮಾಡಿ ರಾಷ್ಟ್ರಕ್ಕೆ ಹಾನಿಯುಂಟಾಗುವ ಹಾಗೆ ಮಾಡಿದರು.

ಕ್ಲೀಸ್ಥನೆಸನ ಸುಧಾರಣೆಗಳು ರಾಜಕೀಯದಲ್ಲಿ ನೂತನ ಪ್ರಯೋಗವೆಂದು ಹೇಳಬಹುದು. ಪ್ರಜೆಗಳ ಪ್ರತಿನಿಧಿಗಳು ಪ್ರಜಾಪ್ರಭುತ್ವವು ಯಶಸ್ವಿಯಾಗುವವರಿಗೆ ಆಡಳಿತವನ್ನು ನಿರ್ವಹಿಸಿ, ಪ್ರಜೆಗಳ ಹಕ್ಕುಗಳಿಗೆ ಚ್ಯುತಿಬರದಂತೆ ನೋಡಿಕೊಂಡರು. ಪಾರ್ಟಿ ವೈಷಮ್ಯಗಳಿಗೆ ಅವಕಾಶವಿರಲಿಲ್ಲ. ಎಲ್ಲಾ ಕುಲಗಳೂ ಒಂದೇ ರೀತಿಯಾದ ಹಕ್ಕನ್ನೂ ಹೊಣೆಯನ್ನೂ ಹೊಂದಿದ್ದವು. ಮುಂದೆ ಪರ್ಷಿಯನರ ದಂಡಯಾತ್ರೆಯಿಂದ ರಾಷ್ಟ್ರದಲ್ಲಿ ಉತ್ಕಟಸ್ಥಿತಿ ತಲೆದೋರಿದಾಗ ಅಥೆನಿಯನರು ತಮ್ಮ ಅಂತಃಕಲಹಗಳನ್ನು

ಮರೆತು, ಎಲ್ಲರೂ ಒಟ್ಟಿಗೆ ಸೇರಿ ಸ್ವಾತಂತ್ರ್ಯವನ್ನು ರಕ್ಷಿಸಿಕೊಂಡಿದ್ದು ಕ್ಲೀಸ್ಥನೆಸನ ಸುಧಾರಣೆಗಳ ಶ್ರೇಷ್ಠತೆಯನ್ನು ಸೂಚಿಸುತ್ತವೆ.

ಅಧ್ಯಾಯ ೧೧

ಅಯೋನಿಯನರ ದಂಗೆ

ಗ್ರೀಕರು ರಾಜಕೀಯ ಆಡಳಿತ ಪ್ರಯೋಗದಲ್ಲಿ ಆಸಕ್ತರಾಗಿದ್ದಾಗ ಏಷ್ಯಾ ಖಂಡದಲ್ಲಿ ನಿರಂಕುಶ ಪ್ರಭುತ್ವ ಉನ್ನತಸ್ಥಿತಿಗೆ ಬಂದು ಕೊನೆಗೆ ಕ್ಷೀಣಿಸುತ್ತಿದ್ದಿತು. ಕ್ರಿ. ಪೂ. ೭ನೆಯ ಶತಮಾನದಲ್ಲಿ ಅಸ್ಸೀರಿಯಾ ಎಂಬ ರಾಜ್ಯವು ಕ್ಷೀಣವಾಗಿ ಮೀಡಿಯಾ ಎಂಬ ರಾಜ್ಯವು ಅಭಿವೃದ್ಧಿ ಹೊಂದಿತು. ಡೆಯಾಸಿಸ್ ಎಂಬ ರಾಜನು ಎಕ್ಬಾಟನ ಎಂಬ ಪಟ್ಟಣವನ್ನು ಕಟ್ಟಿದನು. ಅದು ಮುಂದೆ ರಾಜಧಾನಿಯಾಯಿತು. ರಾಜ್ಯವು ಪ್ರಬಲಗೊಂಡು ಮುಂದೆ ಅಸ್ಸೀರಿಯಾ ಮತ್ತು ಪರ್ಷಿಯಾ ರಾಜ್ಯಗಳನ್ನು ಜಯಿಸಲು ಸಾಧ್ಯವಾಯಿತು.

ಲಿಡಿಯಾ ರಾಜ್ಯದ ಉದಯ—ಮಿಡಿಯಾ ರಾಜ್ಯಕ್ಕೆ ಪಶ್ಚಿಮದಲ್ಲಿ ಲಿಡಿಯಾ ಎಂಬ ರಾಜ್ಯವೂ ಪ್ರಾಬಲ್ಯಕ್ಕೆ ಬಂದಿತು. ಕ್ರೀಸಸ್ ಎಂಬ ರಾಜನು ಈ ರಾಜ್ಯದ ಕೀರ್ತಿಗೆ ಮುಖ್ಯ ಕಾರಣನು. ತನ್ನ ಶೌರ್ಯಬಲದಿಂದ ರಾಜ್ಯವನ್ನು ವಿಸ್ತರಿಸಿ ಪಶ್ಚಿಮ ಏಷ್ಯದ ತೀರದಲ್ಲಿದ್ದ ಗ್ರೀಕರ ಪಟ್ಟಣಗಳನ್ನು ಜಯಿಸಿದನು. ಏಷ್ಯಾ ದೇಶದಲ್ಲಿ ನೆಲಸಿದ್ದ ಗ್ರೀಕರು ಆತನಿಗೆ ಅಧೀನರಾದರು. ಆದರೂ ಕ್ರೀಸಸನು ಅನಾಗರಿಕನಲ್ಲ. ಅವನು ಗ್ರೀಕರ ನಾಗರಿಕತೆಯ ಅನುಯಾಯಿ. ಡೆಲ್ಫಿಯ ದಿವ್ಯವಾಣಿಯಲ್ಲಿ ನಂಬಿಕೆಯಿತ್ತು. ಆದರೆ ಈ ವೇಳೆಯಲ್ಲಿ ಆತನ ಭಾವನಾದ, ಮೀಡಿಯಾ ದೇಶದ ರಾಜನಾದ ಅಸ್ಟಿಯಗೆಸ್ ಎಂಬುವನನ್ನು ಪರ್ಷಿಯಾ ದೇಶದ ಪ್ರಬಲ ರಾಜನಾದ ಸೈರಸ್ ಎಂಬುವನು ಸೋಲಿಸಿ ಮೀಡಿಯಾ ದೇಶವನ್ನು ಆಕ್ರಮಿಸಿದನು. ಲಿಡಿಯಾ ದೇಶದ ನೆರೆ ರಾಜ್ಯವಾದ ಮೀಡಿಯಾ ದೇಶವು ಶತ್ರುವಶವಾದ್ದರಿಂದ ತೊಂದರೆಗೆ ಆಸ್ಪದವಾಯಿತು. ಕ್ರೀಸಸನು ಡೆಲ್ಫಿಯ ದಿವ್ಯವಾಣಿಯ ಸಲಹೆ ಕೇಳಿ ಅದರಿಂದ ಒಂದು ಅನಿಶ್ಚಿತ ಉತ್ತರವನ್ನು ಪಡೆದನು.

"ಕ್ರೀಸಸನು ಹಾಲಿಸ್ ನದಿಯನ್ನು ದಾಟಿದರೆ ಆತನು ಒಂದು ಪ್ರಬಲವಾದ ಸಾಮ್ರಾಜ್ಯವನ್ನು ನಾಶಮಾಡುವನು." ಈ ಸಂದೇಶವನ್ನು ತನಗೆ ಅನುಕೂಲವಾಗುವಹಾಗೆ ವ್ಯಾಖ್ಯಾನಮಾಡಿಕೊಂಡು ಕ್ರೀಸಸನು ಪರ್ಷಿಯನರ ವಶವಾದ ಮೀಡಿಯಾ ರಾಜ್ಯದಮೇಲೆ ದಂಡೆತ್ತಿಹೋದನು. ಆದರೆ ಕ್ರೀಸಸನು ಸೋತುಹೋಗಿ, ಆತನ ರಾಜ್ಯವನ್ನು ಪರ್ಷಿಯನರು ಆಕ್ರಮಿಸಿಕೊಂಡರು. ಲಿಡಿಯಾದೇಶದ ರಾಜಧಾನಿಯಾದ ಸಾರ್ಡಿಸ್ ಪಟ್ಟಣವನ್ನು ಕೊಳ್ಳೆಹೊಡೆದು ನಾಶಪಡಿಸಿದರು.

ಪರ್ಷಿಯಾದೇಶದ ಉದಯ—ಮೀಡಿಯಾ ರಾಜ್ಯವು ಸೈರಸನ ವಶವಾದ ಮೇಲೆ ಏಷ್ಯಾದಲ್ಲಿದ್ದ ಗ್ರೀಕರು ಪರ್ಷಿಯಾದೇಶದ ರಾಜನಿಗೆ ಅಧೀನರಾದರು. ಸೈರಸನು ಸಾರ್ಡಿಸ್ ಪಟ್ಟಣದಲ್ಲಿ ಸಾತ್ರಪ ಎಂಬ ರಾಜ್ಯಪಾಲನನ್ನು ತನ್ನ ಪ್ರತಿನಿಧಿಯಾಗಿ ನೇಮಿಸಿದನು. ಗ್ರೀಕರು ಪೊಗದಿಯನ್ನು ಕೊಡಬೇಕಾಗಿತ್ತು. ಸೈನಿಕ ಸೇವೆಯನ್ನೂ ಮಾಡಬೇಕಾಗಿತ್ತು. ಸೈರಸಿನ ತರುವಾಯ ಕ್ಯಾಂಬಿಸೆಸ್ ಮತ್ತು ಹಿಸ್ಟಾಟಸ್ಪಸ್ ಮಗನಾದ ಡೇರಿಯಸ್ ಎಂಬುವನು ರಾಜನಾದಾಗ ಪರ್ಷಿಯಾ ದೇಶವು ಪ್ರಬಲವಾದ ರಾಜ್ಯವಾಯಿತು. ಡೇರಿಯಸನು ತನ್ನ ವಿಸ್ತಾರವಾದ ರಾಜ್ಯವನ್ನು ಇಪ್ಪತ್ತು ಪ್ರಾಂತ್ಯಗಳಾಗಿ ವಿಂಗಡಿಸಿ ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಒಬ್ಬ ಸಾತ್ರಪನನ್ನು ನೇಮಿಸಿದನು. ವ್ಯಾಪಾರವು ಅಭಿವೃದ್ಧಿಯಾಯಿತು. ಡೇರಿಕ್ ಎಂಬ ಪರ್ಷಿಯನರ ನಾಣ್ಯವು ಚಲಾವಣೆಯಲ್ಲಿತ್ತು. ಪಶ್ಚಿಮ ಏಷ್ಯಾದಲ್ಲಿದ್ದ ಗ್ರೀಕರನ್ನು ತನ್ನ ಹತೋಟಿಯಲ್ಲಿಟ್ಟು ಪೊಗದಿಯನ್ನೂ ಸೈನಿಕಸೇವೆಯನ್ನೂ ಮಾಡುವಹಾಗೆ ನಿರ್ಬಂಧಿಸಿದನು. ಗ್ರೀಸ್ ಭೂಪ್ರದೇಶದ ಥ್ರೇಸನ್ನೂ ಜಯಿಸಿದನು. ಈತನ ಕಾಲದಲ್ಲೇ ಏಷ್ಯಾದಲ್ಲಿದ್ದ ಗ್ರೀಕರು ದಂಗೆಯೆದ್ದರು.

ಅಯೋನಿಯರ ದಂಗೆ ಕ್ರಿ. ಪೂ. ೪೯೯ :—ಏಷ್ಯಾದಲ್ಲಿದ್ದ ಗ್ರೀಕರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಅಸಮಾಧಾನಹೊಂದಿದ್ದರು. ಸಮಯ ಸಿಕ್ಕಿದಾಗ ಅವರು ದಂಗೆ ಏಳಲು ಸಿದ್ಧರಾಗಿದ್ದರು. ಹೀಗಿರುವಾಗ ಕ್ರಿ. ಪೂ. ೪೯೯ ರಲ್ಲಿ ಏಜಿಯನ್ ಸಮುದ್ರದ ನಾಕ್ಸಸ್ ಎಂಬ ದ್ವೀಪದಲ್ಲಿ ಶ್ರೀಮಂತರಿಗೂ ಮತ್ತು ಪ್ರಜಾಪ್ರಭುತ್ವವಾದಿಗಳಿಗೂ ಒಳಯುದ್ಧ

ಉಂಟಾಯಿತು. ಪ್ರಜಾಪ್ರಭುತ್ವವಾದಿಗಳು ಅನೇಕ ಶ್ರೀಮಂತರನ್ನು ದೇಶಭ್ರಷ್ಟರನ್ನಾಗಿ ಮಾಡಿದರು. ಈ ಶ್ರೀಮಂತರು ಸಾರ್ಡಿಸ್ ಪಟ್ಟಣದಲ್ಲಿದ್ದ ಆರ್ಟಫೆರ್ನಸ್ ಎಂಬ ಸಾತ್ರಪನಲ್ಲಿ ಮೊರೆಯಿಟ್ಟು ಆತನ ಸಹಾಯವನ್ನು ಅಪೇಕ್ಷಿಸಿದರು. ಈ ಸಮಯದಲ್ಲಿ ಮಿಲೆಟಸ್ ಪಟ್ಟಣದಿಂದ ಓಡಿಸಲ್ಪಟ್ಟ ಗ್ರೀಕನಾದ ಅರಿಸ್ಟಗೊರಸನೆಂಬ ನಿರಂಕುಶ ಪ್ರಭುವು ಆರ್ಟಫೆರ್ನಸನ ಅನುಗ್ರಹವನ್ನು ಹೊಂದಲು ಒಂದು ಸೂಚನೆಯನ್ನು ಮಾಡಿದನು. ಅದೇನಂದರೆ ನ್ಯಾಕ್ಸಸ್‌ದ್ವೀಪದ ಶ್ರೀಮಂತರಿಗೆ ಸಹಾಯಮಾಡುವ ನೆಪದಲ್ಲಿ ಮೊದಲು ನಾಕ್ಸಸ್ ದ್ವೀಪವನ್ನೂ ಅದಾದಮೇಲೆ ಸೈಕ್ಲೇಡ್ಸ್ ದ್ವೀಪ ಸ್ತೋಮವನ್ನೂ ಜಯಿಸಬಹುದೆಂದು ಸೂಚಿಸಿದನು. ಈ ಸೂಚನೆಯು ಅನುಕೂಲವಾಗಿ ಕಂಡಿದ್ದರಿಂದ ಅರ್ಟಫೆರ್ನಸನು ಅದೇ ರೀತಿಯಾಗಿ ದಂಡಯಾತ್ರೆಗೆ ಸಿದ್ಧಪಡಿಸಿದನು. ಅರಿಸ್ಟಗೊರಸನು ಎಷ್ಟಾದರೂ ಗ್ರೀಕನು. ಆದ್ದರಿಂದ ಆತನ ಜೊತೆಯಲ್ಲಿ ಮೆಗಬಿಟಿಸ್ ಎಂಬ ನೌಕಾಸೇನಾಪತಿಯನ್ನು ನೇಮಿಸಿ ಇನ್ನೂರು ಹಡಗುಗಳನ್ನು ಕಳುಹಿಸಿದನು. ಮಧ್ಯದಲ್ಲಿ ಅರಿಸ್ಟ ಗೊರಸನಿಗೂ ಮೆಗಬಿಟೀಸನಿಗೂ ಜಗಳವಾಯಿತು. ಮೆಗಬಿಟೀಸನು ನಾಕ್ಸಸ್‌ದ್ವೀಪದ ಸಾರ್ವಜನಿಕರಿಗೆ ತಮಗೆ ಉಂಟಾಗಬಹುದಾದ ವಿಪತ್ತನ್ನು ಸೂಚಿಸಿ ಗುಟ್ಟಾಗಿ ಎಚ್ಚರಿಕೆ ಕೊಟ್ಟನು. ಇದರಿಂದ ನಾಕ್ಸಿಯನರು ತಮ್ಮ ರಕ್ಷಣೆಯನ್ನು ಮಾಡಿಕೊಳ್ಳಲು ಶಕ್ತರಾದರು. ಈ ದಂಡಯಾತ್ರೆಯು ವಿಫಲವಾಯಿತು.

ಅರಿಸ್ಟಗೊರಸನ ನಾಯಕತ್ವ:—ನಾಕ್ಸಸ್‌ದ್ವೀಪದ ದಂಡ ಯಾತ್ರೆಯು ವಿಫಲವಾದ್ದರಿಂದ ಅರಿಸ್ಟಗೊರಸನು ಹಿಂದಕ್ಕೆ ಹೋಗಲು ಹೆದರಿ ಪಶ್ಚಿಮ ಏಷ್ಯಾದಲ್ಲಿದ್ದ ಗ್ರೀಕರನ್ನು ಒಟ್ಟುಗೂಡಿಸಿ ಪರ್ಷಿಯನರಿಗೆ ವಿರುದ್ಧವಾಗಿ ದಂಗೆಯನ್ನು ರೂಪಿಸಲು ಮನಸ್ಸುಮಾಡಿದನು. ಈ ದಂಗೆಗೆ ತಾನೇ ನಾಯಕತ್ವವನ್ನು ವಹಿಸಬೇಕಾಯಿತು. ಮೊದಲು ತನ್ನ ನಿರಂಕುಶಪ್ರಭುತ್ವವನ್ನು ರದ್ದುಗೊಳಿಸಿ ಮಿಕ್ಕ ಎಲ್ಲಾ ನಗರರಾಷ್ಟ್ರಗಳಲ್ಲಿಯೂ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದನು. ಗ್ರೀಕರ ಸಂಘಟನೆಗೋಸ್ಕರ ತಾನೇ ಸ್ವತಃ ಪಶ್ಚಿಮಏಷ್ಯಾದಲ್ಲಿದ್ದ ಗ್ರೀಕರ ರಾಷ್ಟ್ರಗಳಿಗೆ ಭೇಟಿಕೊಟ್ಟು ದಂಗೆ ಏಳಲು ಉಪದೇಶಿಸಿದನು. ಈತನ ಚಳುವಳಿಯಿಂದ ಪಶ್ಚಿಮ ಏಷ್ಯಾದಲ್ಲಿ

ಒಂದುರೀತಿಯಾದ ರಾಜಕೀಯ ಕ್ರಾಂತಿಯಾಯಿತು. ಆದರೂ ಅರಿಸ್ಟ ಗೊರಸನಿಗೆ ಮಾತೃಭೂಮಿಯಾದ ಗ್ರೀಸ್‌ದೇಶದ ಸಹಾಯವಿಲ್ಲದೆ ದಂಗೆ ಯೇಳುವುದು ಕಷ್ಟವೆಂದು ಮಂದಟ್ಟಾಯಿತು. ಈ ಹೊಣೆಯನ್ನು ತಾನೇ ವಹಿಸಬೇಕಾಯಿತು. ಮೊದಲು ಸ್ಪಾರ್ಟರಾಷ್ಟ್ರಕ್ಕೆ ಹೋದನು. ಸ್ಪಾರ್ಟನರ ರಾಜನಾದ ಕ್ಲಿಯೋಮೆನೆಸನು ಎಲ್ಲಾ ವಿಚಾರಗಳನ್ನೂ ಆಸಕ್ತಿಯಿಂದ ಕೇಳಿ ಸಹಾಯಮಾಡುವುದರಲ್ಲಿದ್ದನು. ಆದರೆ ಸಾರ್ಡಿಸ್ ಪಟ್ಟಣಕ್ಕೂ ಪರ್ಷಿಯಾದೇಶದ ರಾಜಧಾನಿಯಾದ ಸೂಸ ಪಟ್ಟಣಕ್ಕೂ ಎಷ್ಟು ದೂರ ವೆಂದು ಕೇಳಿದಾಗ ಅರಿಸ್ಟಗೊರಸನು ಏಷ್ಯಾಖಂಡದ ಭೂಪಟವನ್ನು ತೋರಿಸಿ ಎಚ್ಚರಿಕೆಯಿಲ್ಲದೆ ಮೂರು ತಿಂಗಳ ಪ್ರಯಾಣವೆಂದು ಹೇಳಿದನು. ಸ್ಪಾರ್ಟನರ ರಾಜನು ತತ್‌ಕ್ಷಣವೇ ಸಹಾಯಮಾಡಲು ನಿರಾಕರಿಸಿ "ಮೈಲಿಷಿಯದ ಪರಕೀಯನೇ, ತೊಲಗು" ಎಂದು ಹೇಳಿಕಳುಹಿಸಿ ಬಿಟ್ಟನು. ಅರಿಸ್ಟಗೊರಸನು ಆಶಾಭಂಗದಿಂದ ಅಥೆನ್ಸ್ ನಗರಕ್ಕೆ ಹೋದನು. ಅಥಿನಿಯನರು ಎಲ್ಲಾ ವಿಚಾರವನ್ನು ತಿಳಿದುಕೊಂಡು ತತ್‌ಕ್ಷಣವೇ ತಮ್ಮ ಬಂಧುಬಳಗದವರಿಗೆ ಸಹಾಯಮಾಡಲು ಸಂಕಲ್ಪಿಸಿದರು. ಅವರು ಸಹಾಯಮಾಡಲು ಇನ್ನೂ ಒಂದು ಕಾರಣವಿತ್ತು. ತಮ್ಮ ರಾಷ್ಟ್ರದ ನಿರಂಕುಶಪ್ರಭುವಾದ ಹಿಪಯಸನು ದೇಶಭ್ರಷ್ಟನಾಗಿ ಸಾರ್ಡಿಸ್ ನಗರದ ಸತ್ರಪನಾದ ಆರ್ಟಫೆರ್ನಸನ ಆಶ್ರಯವನ್ನು ಹೊಂದಿ ಪಿತೂರಿ ಮಾಡುತ್ತಿ ದ್ದನು. ತತ್‌ಕ್ಷಣವೇ ಅಥಿನಿಯನರು ಇಪ್ಪತ್ತು ಹಡಗುಗಳನ್ನು ಸಿದ್ಧಪಡಿಸಿ ಅರಿಸ್ಟಗೊರಸನ ಜೊತೆಯಲ್ಲಿ ಕಳುಹಿಸಿದರು. ಇಬಿಯಾ ದ್ವೀಪದಲ್ಲಿದ್ದ ಎರಿಟ್ರಿಯ ಎಂಬ ಸಣ್ಣ ನಗರರಾಷ್ಟ್ರವೂ ಕೂಡ ಉತ್ಸಾಹದಿಂದ ತಾನಾಗಿಯೇ ಐದು ಹಡಗುಗಳನ್ನು ಕಳುಹಿಸಿತು. ಹೆರೊಡೊಟಸ್ ಎಂಬ ಗ್ರೀಕರ ಇತಿ ಹಾಸಕಾರನು ಹೇಳಿದ ಹಾಗೆ ಈ ಹಡಗುಗಳೇ ಗ್ರೀಕರಿಗೂ ಪರ್ಷಿಯನ ರಿಗೂ, ಪಶ್ಚಿಮ ಮತ್ತು ಪ್ರಾಚ್ಯಯುದ್ಧಕ್ಕೆ ಪೀಠಿಕೆಯಾದುವು.

ಹೆರೊಡೊಟಸ್ — ಪರ್ಷಿಯನ್ನರ ದಂಡಯಾತ್ರೆಯ ವಿವರಣೆ ಯನ್ನು ಹೆರೊಡೊಟಸ್ ಎಂಬ ಗ್ರೀಕರ ಇತಿಹಾಸಕಾರನು ಚೆನ್ನಾಗಿ ವಿಮ ರ್ಶಿಸಿದ್ದಾನೆ. ಆತನು ಸುಮಾರು ಕ್ರಿ. ಪೂ. ೪೮೪ ರಲ್ಲಿ ರೋಡೆಸ್ ದ್ವೀಪದ ಹತ್ತಿರ ಹಾಲಿಕಾರ್ನಸಸ್ ಎಂಬ ಪಟ್ಟಣದಲ್ಲಿ ಜನಿಸಿದನು. ಗ್ರೀಸ್ ಮತ್ತು

ಮೆಡಿಟರೇನಿಯನ್ ಪ್ರದೇಶದಲ್ಲಿ ಸಂಚರಿಸಿ, ಅಥೆನ್ಸ್ ಪಟ್ಟಣದಲ್ಲಿ ಸ್ವಲ್ಪ ಕಾಲವಿದ್ದು, ಕೊನೆಗೆ ದಕ್ಷಿಣ ಇಟಲಿಯ ಥೂರ್ಸೈ ಎಂಬ ಅಥಿನಿಯನರ ವಸಾಹತುವಿನಲ್ಲಿ ನೆಲಸಿದನು. ಗ್ರೀಕರ ಇತಿಹಾಸಕಾರರಲ್ಲಿ ಅವನೇ ಮೊದಲನೆಯವನು. ಪೌರ್ವಾತ್ಯ ದೇಶಕ್ಕೂ ಪಾಶ್ಚಾತ್ಯ ದೇಶಕ್ಕೂ ಉಂಟಾದ ಯುದ್ಧವನ್ನು ಸಂಪೂರ್ಣವಾಗಿ ಬರೆದಿದ್ದಾನೆ. ಆತನು ಬರೆದಿರುವ ಇತಿಹಾಸದಲ್ಲಿ ಸತ್ಯ ಮತ್ತು ಕಟ್ಟು ಕಥೆಗಳು ಸೇರಿ ಅದು ಪಕ್ಷಪಾತದಿಂದ ಕೂಡಿದೆ. ಪೌರ್ವಾತ್ಯ ಜನರನ್ನು ಅನಾಗರಿಕರೆಂದು ಕರೆದಿರುವುದೂ, ಯುದ್ಧವಾದ ಐವತ್ತು ವರ್ಷದ ಮೇಲೆ ಗ್ರೀಸ್ ದೇಶದಲ್ಲಿ ಸಂಚರಿಸಿ ವಿಷಯಗಳನ್ನು ಸಂಗ್ರಹಿಸಿದ್ದೂ, ಗ್ರೀಕರು ಈ ಕಾಲಕ್ಕೆ ತಮ್ಮ ಜಯವನ್ನು ಒಂದು ಅದ್ಭುತ ಸಾಧನೆಯೆಂದು ಪ್ರಶಂಸೆಮಾಡಿರುವುದೂ ಆತನು ಬರೆದಿರುವ ಇತಿಹಾಸದ ನ್ಯೂನತೆಗಳು. ಆದರೂ ಆತನು ಬರೆದ ಇತಿಹಾಸವು ವಿಷಯ ಸಂಗ್ರಹಣೆಯಿಂದ ಕೂಡಿದೆ.

ದಂಗೆಯ ಅಪಜಯ— ಕ್ರಿ. ಪೂ. ೪೯೯ ರಲ್ಲಿ ಅರಿಸ್ಟಗೊರಸನು ಅಥಿನಿಯನರ ಜೊತೆಯಲ್ಲಿ ಮಿಲೆಟಸ್ ಪಟ್ಟಣಕ್ಕೆ ಬಂದನು. ಅಲ್ಲಿ ಗ್ರೀಕರ ಸೈನ್ಯವು ಸಿದ್ಧವಾಗಿತ್ತು. ಪರ್ಷಿಯನರು ತಮ್ಮ ಸೈನ್ಯವನ್ನು ಸಿದ್ಧಪಡಿಸುವುದಕ್ಕೆ ಮೊದಲೇ ಸಾರ್ಡಿಸ್ ನಗರವನ್ನು ಹಿಡಿಯಬೇಕೆಂದು ನಿಷ್ಕರ್ಷೆ ಮಾಡಿದರು. ಅದೇ ರೀತಿಯಾಗಿ ಸಾರ್ಡಿಸ್ ನಗರವನ್ನು ಪ್ರವೇಶಿಸಿ ಅಥಿನಿಯನರು ನಗರವನ್ನು ಸುಟ್ಟುಹಾಕಿದರು. ಆದರೂ ಆರ್ಟಫರ್ನಸನು ತನ್ನ ಸೈನ್ಯವನ್ನು ಒಟ್ಟುಗೂಡಿಸಿ ಪೌರರ ಸಹಾಯದಿಂದ ಗ್ರೀಕರನ್ನು ಓಡಿಸಿದನು. ಡೇರಿಯಸನಿಗೆ ಸಾರ್ಡಿಸ್ ನಗರವನ್ನು ಸುಟ್ಟದ್ದು ಅಥಿನಿಯರಿಂದಲೇ ಎಂಬ ಸಮಾಚಾರವು ತಿಳಿಯಿತು. ಆತನು ಬಿಲ್ಲನ್ನು ತೆಗೆದುಕೊಂಡು ಆಕಾಶದಲ್ಲಿ ಬಾಣವನ್ನು ಹಾರಿಸಿ ಅಥಿನಿಯನರನ್ನು ನಾಶಮಾಡುವುದಾಗಿ ಸಂಕಲ್ಪಮಾಡಿದನು. ತನ್ನ ಸೇವಕನು ಪ್ರತಿದಿನವೂ " ಮಹಾಸ್ವಾಮಿ, ಅಥಿನಿಯರನ್ನು ನೆನಪಿನಲ್ಲಿಡಿ " ಎಂದು ಹೇಳುವಹಾಗೆ ಆಜ್ಞಾಪಿಸಿದನು. ಪರ್ಷಿಯನರು ಮಿಲೆಟಸ್ ಪಟ್ಟಣವನ್ನು ಹಿಡಿದರು. ಗ್ರೀಕರನ್ನು ಸಮುದ್ರತೀರದ ಯಿಫಿಸಸ್ ಎಂಬ ಸ್ಥಳದಲ್ಲಿ ಸೋಲಿಸಿದರು. ಅಥಿನಿಯನರು ಈ ಪರಾವರ್ತನೆಯಾದ ಮೇಲೆ ತಮ್ಮ ದೇಶಕ್ಕೆ ಹಿಂತಿರುಗಿದರು. ಪಶ್ಚಿಮ

ಏಷ್ಯದ ಅಯೋನಿಯನರು ತಾವೇ ಯುದ್ಧಮಾಡಬೇಕಾಯಿತು. ದಂಗೆಯು ದಕ್ಷಿಣಕ್ಕೂ ಹರಡಿತು. ಗ್ರೀಕರು ಎಷ್ಟೇ ಹೋರಾಡಿದರೂ ಪ್ರಯೋಜನವಾಗಲಿಲ್ಲ. ಪರ್ಷಿಯನರು ತಮ್ಮ ದೇಶದಿಂದ ಹೊಸ ಸೈನ್ಯಗಳನ್ನು ತರಿಸಿ ದಂಗೆಯನ್ನು ಅಡಗಿಸಿದರು. ಫಿನೀಷಿಯನರ ನೌಕೆಯು ಅವರಿಗೆ ಸಹಾಯ ಮಾಡಿ ಸೈಪ್ರಸ್ ದ್ವೀಪವನ್ನು ಹಿಡಿಯಿತು. ಹೆಲೆಸ್ಪಾಂಟ್ ಪ್ರದೇಶದ ಗ್ರೀಕರನ್ನು ಜಯಿಸಿದರು. ಅರಿಸ್ಟಗೊರಸನು ನಿರಾಶನಾಗಿ ಪರಾರಿಯಾದನು. ಆದರೆ ಅವನು ಥ್ರೇಸ್ ಪ್ರದೇಶಕ್ಕೆ ಓಡಿಹೋದಾಗ ಅವನನ್ನು ಶತ್ರುಗಳು ಹಿಡಿದು ಕೊಂದುಹಾಕಿದರು. ಗ್ರೀಕರು ಮಿಲೆಟಸ್ ಪಟ್ಟಣವನ್ನು ರಕ್ಷಿಸುವುದಕ್ಕೆ ಎಷ್ಟೇ ಪ್ರಯತ್ನ ಪಟ್ಟರೂ ಸಾಧ್ಯವಾಗಲಿಲ್ಲ. ಮಿಲೆಟಸ್, ಖಿಯಾಸ್, ಲೆಸ್‌ಬಾಸ್, ಮತ್ತು ಸೇಮಾಸ್ ಪಟ್ಟಣದಿಂದ ಸಹಾಯ ಬಂದರೂ ಗ್ರೀಕರ ಒಳಜಗಳದಿಂದ ಏನೂ ಪ್ರಯೋಜನವಾಗಲಿಲ್ಲ. ನಾಯಕತ್ವದಲ್ಲಿ ಭಿನ್ನಾಭಿಪ್ರಾಯವುಂಟಾಯಿತು. ಇಂಥ ವಿಷಮ ಸ್ಥಿತಿಯಲ್ಲಿ ಗ್ರೀಕರು ಐಕ್ಯತೆಯನ್ನು ಹೊಂದದೇ ಇದ್ದದ್ದು ವಿಷಾದಕರ. ಲೇಡ್ ಎಂಬ ದ್ವೀಪದಲ್ಲಿ ಖಿಯಾನರು ಒಬ್ಬರೇ ಯುದ್ಧಮಾಡಬೇಕಾಯಿತು. ಮೈಲೀಷಿಯನರೂ ಸೇಮಿಯನರೂ ಲೆಸಬಿಯನರೂ ತಮ್ಮ ತಮ್ಮಲ್ಲೇ ಒಳಜಗಳವುಂಟಾಗಿ ಹಿಂಜರಿದರು. ಪರ್ಷಿಯನರು ಖಿಯಾನರನ್ನು ಸೋಲಿಸಲು ಕಷ್ಟವಾಗಲಿಲ್ಲ. ಕೊನೆಗೆ ಕ್ರಿ. ಪೂ. ೪೯೪ರಲ್ಲಿ ಪರ್ಷಿಯನರು ಮಿಲೆಟಸ್ ಪಟ್ಟಣವನ್ನು ಹಿಡಿದರು. ನಗರದಲ್ಲಿದ್ದ ಗಂಡಸರನ್ನು ಕೊಂದರು. ಹೆಂಗಸರನ್ನೂ ಮಕ್ಕಳನ್ನೂ ಗುಲಾಮರಾಗಿ ಮಾಡಿದರು. ದೇವಸ್ಥಾನಗಳನ್ನು ಸುಟ್ಟರು. ಮಿಕ್ಕವರನ್ನು ಪರ್ಷಿಯ ಕೊಲ್ಲಿಯ ಪ್ರದೇಶಕ್ಕೆ ರವಾನಿಸಿದರು. ಮಿಲೆಟಸ್ ನಗರದ ಪತನವು ಅಯೋನಿಯನರ ದಂಗೆಯ ಕೊನೆಯ ಅಂಕವೆಂದು ಹೇಳಬಹುದು. ಈ ದಂಗೆಯು ಗ್ರೀಕರಿಗೆ ಒಂದು ದುರಂತವಾಯಿತು. ಅವರ ಸ್ವಾರ್ಥತೆ, ದ್ರೋಹ, ಹಿಂಜರಿಯುವಿಕೆಯನ್ನು ಬಹಿರಂಗವಾಗಿ ತೋರ್ಪಡಿಸಿತು. ಈ ದಂಗೆಯಿಂದಾದ ಅಪಜಯವು ಅವರಿಗೆ ವಿಶೇಷವಾದ ಪಾಠವನ್ನು ಕಲಿಸಿತು. ತಮ್ಮ ಒಳಜಗಳದಿಂದ ಸ್ವಾತಂತ್ರ್ಯಕ್ಕೆ ಚ್ಯುತಿ ಬರುವುದೆಂದೂ ದೇಶಕ್ಕೆ ವಿಪತ್ತು ಬಂದಾಗ ತಮ್ಮ ಸ್ವಾರ್ಥತೆಯನ್ನು ಬದಿಗಿಟ್ಟು ಐಕ್ಯತೆಯಿಂದ ಹೋರಾಡಬೇಕೆಂದೂ ಅವರಿಗೆ ಮುಂದಟ್ಟಾಯಿತು.

ಅಧ್ಯಾಯ ೧೨

ಮೂರಥಾನ್ ಕದನ

ಅಯೋನಿಯನರ ದಂಗೆಯು ವಿಫಲವಾದ ಮೇಲೆ ಡೇರಿಯಸನು ಗ್ರೀಸ್‌ದೇಶದ ದಂಡಯಾತ್ರೆಗೆ ಸಿದ್ಧಪಡಿಸಿದನು. ಅದರಲ್ಲೂ ಸಾರ್ಡಿಸ್ ನಗರವನ್ನು ಸುಟ್ಟುಹಾಕಿದ ಅಥೀನಿಯರನ್ನು ಶಿಕ್ಷಿಸಬೇಕೆಂಬುದೇ ಅವನ ಮುಖ್ಯ ಆಸೆಯಾಗಿತ್ತು. ಆತನ ಸೇವಕನು ಪ್ರತಿದಿನವೂ ಅಥೀನಿಯನರ ಜ್ಞಾಪಕವನ್ನು ಕೊಡುತ್ತಿದ್ದನು. ಪರ್ಷಿಯನರ ದಂಡಯಾತ್ರೆಯು ಗ್ರೀಕರ ಇತಿಹಾಸದಲ್ಲಿ ಮಹತ್ತರವಾದದ್ದು. ಪರ್ಷಿಯನರು ಗ್ರೀಕರ ಸ್ವಾತಂತ್ರ್ಯ ವನ್ನು ನಾಶಮಾಡಿ ಅವರ ದೇಶವನ್ನು ಆಕ್ರಮಣಮಾಡಲು ಸರ್ವಪ್ರಯತ್ನ ಗಳನ್ನೂ ಮಾಡಿದರು. ಈ ದಂಡಯಾತ್ರೆಯಿಂದ ಗ್ರೀಕರು ಅನೇಕ ವಿಧವಾದ ಕಷ್ಟಗಳನ್ನು ಅನುಭವಿಸಬೇಕಾಯಿತು. ಆದರೂ ತಮ್ಮ ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕೆ ಯಾವ ತ್ಯಾಗವನ್ನು ಮಾಡುವುದಕ್ಕೂ ಸಿದ್ಧರಾಗಿದ್ದರು. ತಮ್ಮ ಪ್ರಾಣವನ್ನೂ ಕೂಡ ಅರ್ಪಿಸಲು ಹಿಂಜರಿಯಲಿಲ್ಲ. ತಮ್ಮ ಒಳ ಜಗಳಗಳನ್ನು ಮರೆತು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕೆಂಬ ಒಂದೇ ದೃಷ್ಟಿಯಿಂದ ಯುದ್ಧಮಾಡಿರುವುದು ಸ್ವಾತಂತ್ರ್ಯಹೋರಾಟದಲ್ಲಿರುವವರಿಗೆ ಸ್ಫೂರ್ತಿಯನ್ನು ಕೊಡುತ್ತದೆ.

ಪರ್ಷಿಯನರ ಮೊದಲನೆಯ ದಂಡಯಾತ್ರೆ. ಕ್ರಿ. ಪೂ. ೪೯೦ ಡೇರಿಯಸನು ಅಯೋನಿಯನರ ದಂಗೆಯನ್ನು ಅಡಗಿಸಿದ ಮೇಲೆ ಪಶ್ಚಿಮ ಏಷ್ಯದ ಪ್ರದೇಶಗಳಲ್ಲಿ ಸುವ್ಯವಸ್ಥಿತವಾದ ಆಡಳಿತವನ್ನು ಜಾರಿಗೆ ತಂದನು. ಪ್ರತಿಯೊಂದು ಪಟ್ಟಣದ ಸಾಧನ ಸಂಪತ್ತಿನ ಟಿಪ್ಪಣಿಯನ್ನು ಸಂಗ್ರಹಿಸಿ ಪ್ರಗತಿಯನ್ನು ನಿಗದಿಮಾಡಿದನು. ತನ್ನ ಆಡಳಿತದಲ್ಲಿದ್ದ ಗ್ರೀಕರ ಪ್ರೀತಿ ಯನ್ನು ಹೊಂದಲು ಅವರ ನಗರಗಳಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದನು. ಆದರೂ ಅಥೀನಿಯನರ ಮೇಲೆ ತನ್ನ ಸೇಡು ತೀರಿಸುವವರೆಗೂ ಅವನಿಗೆ ಸಮಾಧಾನವಿರಲಿಲ್ಲ. ಕ್ರಿ. ಪೂ. ೪೯೦ ರಲ್ಲಿ ತನ್ನ ಅಳಿಯನಾದ ಮಾರ್ಡೋನಿಯಸನನ್ನು ನಾಯಕನನ್ನಾಗಿ ಗ್ರೀಸ್‌ದೇಶದ ದಂಡಯಾತ್ರೆಗೆ ಕಳುಹಿಸಿದನು. ಮಾರ್ಡೋನಿಯಸನು ಏಜಿಯನ್ ಸಮುದ್ರದ ಥೇಸಾಸ್

ದ್ವೀಪವನ್ನು ಆಕ್ರಮಣಮಾಡಿ, ಉತ್ತರಕ್ಕೆ ಥ್ರೇಸ್‌ಪ್ರದೇಶವನ್ನು ಜಯಿಸಿದನು. ಅಲ್ಲಿಂದ ಮುಂದೆ ಮೆಸಿಡೋನಿಯಾ ಪ್ರದೇಶವನ್ನೂ ಗೆದ್ದನು. ತನ್ನ ಸೈನ್ಯದ ಜೊತೆಯಲ್ಲಿ ನೌಕೆಯನ್ನೂ ತೆಗೆದುಕೊಂಡುಹೋಗಿದ್ದನು. ಸೇನೆಯೂ ನೌಕೆಯೂ ಒಟ್ಟುಗೂಡಿ ಯುದ್ಧಮಾಡಬೇಕೆಂಬುದೇ ಅವನ ಆಸೆ. ಆದರೆ ಪರ್ಷಿಯನರ ನೌಕೆಯು ಆಥಾಸ್ ಭೂಶಿರದ ಹತ್ತಿರ ಬಿರುಗಾಳಿ ಎದ್ದು ಬಂಡೆಗೆ ತಗಲಿ ನಾಶವಾಯಿತು. ಸೈನ್ಯವೂ ಕೂಡ ಥ್ರೇಸಿಯನರಿಂದ ತೊಂದರೆಗೆ ಸಿಕ್ಕಿ ಮಾರ್ಡೋನಿಯಸನಿಗೆ ಗಾಯವಾಯಿತು. ಹೊರಟ ವೇಳೆ ಸರಿಯಲ್ಲವೆಂದು ಮಾರ್ಡೋನಿಯಸನು ಈ ದಂಡಯಾತ್ರೆಯನ್ನು ಬಿಟ್ಟು ಹಿಂದಕ್ಕೆ ಹೊರಟುಹೋದನು. ಇದೇ ಪರ್ಷಿಯನರ ಮೊದಲನೆಯ ದಂಡಯಾತ್ರೆ. ಪ್ರಕೃತಿಯೇ ಅವರಿಗೆ ವಿರೋಧವಾಗಿ ಅಪಜಯಕ್ಕೆ ಕಾರಣವಾಯಿತೆನ್ನಬಹುದು.

ಪರ್ಷಿಯನ್ನರ ಎರಡನೆಯ ದಂಡಯಾತ್ರೆ :—ಮೊದಲನೆಯ ದಂಡಯಾತ್ರೆಯು ವಿಫಲವಾದರೂ ಡೇರಿಯಸನು ತನ್ನ ಉದ್ದೇಶವನ್ನು ಬಿಡಲಿಲ್ಲ. ಇನ್ನೊಂದು ಸೇನೆಯನ್ನು ಸಿದ್ಧಪಡಿಸಿದನು. ತನ್ನ ಆಸ್ಥಾನದಲ್ಲಿದ್ದ ಹಿಪ್ಪಿಯಸ್ ಮತ್ತು ಇತರ ಗ್ರೀಕ್ ದೇಶಭ್ರಷ್ಟರ ಬೋಧನೆಯಿಂದ ಎಲ್ಲಾ ಗ್ರೀಕ್‌ರಾಷ್ಟ್ರಗಳಿಗೂ "ಭೂಮಿಯನ್ನೂ ನೀರನ್ನೂ" ನಿರ್ಬಂಧದಿಂದ ಕೇಳಲು ರಾಜದೂತರನ್ನು ಕಳುಹಿಸಿದನು. ಈ ರೀತಿಯಾಗಿ "ಭೂಮಿಯನ್ನೂ ನೀರನ್ನೂ" ಕೇಳುವುದು ಪರ್ಷಿಯನರ ಸಾರ್ವಭೌಮತ್ವವನ್ನು ಸಂಕೇತವಾಗಿ ಒಪ್ಪಿಕೊಂಡ ಹಾಗೆ. ಅನೇಕ ರಾಷ್ಟ್ರಗಳು ರಾಜದೂತರಿಗೆ ಸಂಕೇತ "ಭೂಮಿಯನ್ನೂ ನೀರನ್ನೂ" ಕೊಟ್ಟವು. ಆದರೆ ಅಥೆನ್ಸ್ ಮತ್ತು ಸ್ಪಾರ್ಟ ರಾಷ್ಟ್ರಗಳು "ಭೂಮಿಯನ್ನೂ ನೀರನ್ನೂ" ಕೊಡುವುದಕ್ಕೆ ಎಳ್ಳಷ್ಟೂ ಒಪ್ಪಲಿಲ್ಲ. ರಾಜದೂತನು ಸ್ಪಾರ್ಟ ನಗರಕ್ಕೆ ಹೋದಾಗ ಸ್ಪಾರ್ಟನರು ಅವನನ್ನು ಒಂದು ಬಾವಿಯ ಹತ್ತಿರ ಕರೆದುಕೊಂಡು ಹೋಗಿ ಬಲಾತ್ಕಾರದಿಂದ ತಳ್ಳಿ ಎಷ್ಟುಬೇಕೋ ಅಷ್ಟು ನೀರನ್ನು ಕುಡಿಯೆಂದು ಹೇಳಿದರೆಂದು ಕಥೆಯಿದೆ. ಇದೇ ರೀತಿಯಾಗಿ ಇನ್ನೊಬ್ಬ ರಾಜದೂತನು ಅಥೆನ್ಸ್‌ನಗರಕ್ಕೆ ಹೋದಾಗ ಅಥೆನಿಯನರು ಅವನನ್ನು ಒಂದು ಎತ್ತರವಾದ ಬಂಡೆಯಮೇಲೆ ಕರೆದುಕೊಂಡುಹೋಗಿ ಕೆಳಕ್ಕೆ ಎಸೆದರೆಂದು

ಕಥೆಯಿದೆ. ಈ ಎರಡು ರಾಷ್ಟ್ರಗಳೂ ಪರ್ಷಿಯಾದೇಶಕ್ಕೆ ಅಡಿಯಾಳಾಗಲು ಸಿದ್ಧವಿಲ್ಲವೆಂಬುದು ವಿಶದವಾಯಿತು. ಕ್ರಿ. ಪೂ. ೪೯೦ ರಲ್ಲಿ ಡೇರಿಯಸನು ತನ್ನ ಎರಡನೆಯ ದಂಡಯಾತ್ರೆಯನ್ನು ಕೈಗೊಂಡನು. ಡೇಟಿಸ್ ಮತ್ತು ಆರ್ಟಫರ್ನಸ್ ಎಂಬುವರು ಈ ದಂಡಯಾತ್ರೆಯ ಮುಖಂಡರು. ಗ್ರೀಕರ ದೇಶಭ್ರಷ್ಟನಾದ ಹಿಪ್ಪಿಯಸನೂ ಅವರ ಜೊತೆಯಲ್ಲಿ ಹೊರಟನು. ೬೦೦ ಹಡಗುಗಳು ಸೈಲಿಸಿಯಾ ದ್ವೀಪದಿಂದ ಹೊರಡಬೇಕಾಯಿತು. ಮೊದಲನೆಯ ದಂಡಯಾತ್ರೆಯು ವಿಫಲವಾದ್ದರಿಂದ ಈ ದಂಡಯಾತ್ರೆಯು ಏಜಿಯನ್ ಸಮುದ್ರದ ದಕ್ಷಿಣದಲ್ಲಿ ಸೈಕ್ಲೇಡಸ್ ದ್ವೀಪಸ್ತೋಮದ ಹತ್ತಿರ ಹೋಗಬೇಕೆಂದು ನಿಶ್ಚಯಿಸಿದರು. ಸೇಮಾಸ್ ದ್ವೀಪದಿಂದ ನಾಕ್ಸಸ್ ದ್ವೀಪಕ್ಕೆ ಹೋಗಿ, ಅಲ್ಲಿಂದ ಎರೆಟ್ರಿಯ ನಗರವನ್ನು ಶಿಕ್ಷಿಸುವುದಕ್ಕೋಸ್ಕರ ಇಬಿಯಾ ದ್ವೀಪಕ್ಕೆ ಹೊರಟರು. ಆದರೆ ಎರೆಟ್ರಿಯನರು ತಮ್ಮ ನಗರವನ್ನು ತ್ಯಜಿಸಿ ಆಟಿಕ ಪ್ರದೇಶಕ್ಕೆ ಹೋಗಿ ಅಥೀನಿಯನರ ಆಶ್ರಯದಲ್ಲಿದ್ದರು. ಎರೆಟ್ರಿಯ ನಗರವನ್ನು ಪ್ರವೇಶಿಸಿ ದೇವಸ್ಥಾನಗಳನ್ನು ನಾಶಮಾಡಿದರು.

ಮಾರಥಾನ್ ಕದನ. ಕ್ರಿ. ಪೂ. ೪೯೦ :—ಹಿಪ್ಪಿಯಸನ ಸಲಹೆಯಂತೆ ಪರ್ಷಿಯನರು ಜಲಸಂಧಿಯನ್ನು ದಾಟಿ ಮಾರಥಾನ್ ಎಂಬ ಬಯಲು ಪ್ರದೇಶದಲ್ಲಿ ನೆಲಸಿದರು. ಮಾರಥಾನ್ ಬಯಲು ಪ್ರದೇಶವು ಅಥೆನ್ಸ್ ನಗರಕ್ಕೆ ಇಪ್ಪತ್ತುಮೈಲಿ ದೂರದಲ್ಲಿದೆ. ಪೆಂಟೆಲಿಕಸ್ ಗುಡ್ಡಕ್ಕೂ ಸಮುದ್ರಕ್ಕೂ ಮಧ್ಯದಲ್ಲಿರುವ ಈ ಪ್ರದೇಶವು ಐದು ಮೈಲಿ ಉದ್ದ, ಒಂದೂವರೆ ಮೈಲಿ ಅಗಲವಿದೆ. ಈ ಸ್ಥಳವು ಪರ್ಷಿಯನರು ತಮ್ಮ ಹಡಗುಗಳನ್ನು ಸುರಕ್ಷಿತವಾಗಿಡಲು ಅನುಕೂಲವಾಗಿತ್ತು. ಜಲಸೌಕರ್ಯವೂ ಇತ್ತು. ಆದರೂ ಅಥೀನಿಯನರ ಸೇನೆಯು ಈ ಸ್ಥಳಕ್ಕೆ ಬಂದ ಮೇಲೆ ಅಥೆನ್ಸ್ ನಗರದ ಮೇಲೆ ದಾಳಿ ಮಾಡಲು ಯೋಚಿಸಿದ್ದರು. ಶತ್ರುವು ತಮ್ಮ ಪ್ರದೇಶದಲ್ಲಿಯೇ ನೆಲಸಿದ್ದು ಅಥೀನಿಯನರಿಗೆ ಬಹುಮಟ್ಟಿಗೆ ಉತ್ಕಟಸ್ಥಿತಿಯನ್ನುಂಟುಮಾಡಿತು. ತಮ್ಮ ರಾಷ್ಟ್ರಕ್ಕೆ ವಿಪತ್ತು ಎಂಬುದನ್ನು ಚೆನ್ನಾಗಿ ತಿಳಿದುಕೊಂಡರು. ಈ ಸಂದಿಗ್ಧಸಮಯದಲ್ಲಿ ಎದೆಗುಂದದೆ ತಮ್ಮ ಧೈರ್ಯ, ಸಾಹಸದಿಂದ ಶತ್ರುವನ್ನು ಬೆನ್ನಟ್ಟಿ ತಮ್ಮ ಸ್ವಾತಂತ್ರ್ಯ

ವನ್ನು ರಕ್ಷಿಸಲು ಸಂಕಲ್ಪಮಾಡಿಕೊಂಡರು. ಶತ್ರುವನ್ನು ಮಾರಥಾನ್ ಬಯಲಿನಲ್ಲೇ ಎದುರಿಸಬೇಕೋ ಅಥವಾ ಶತ್ರುವು ತಮ್ಮ ನಗರಕ್ಕೆ ಬರುವವರೆವಿಗೂ ಕಾಯಬೇಕೋ ಎಂಬ ಒಂದು ಮುಖ್ಯವಾದ ಪ್ರಶ್ನೆಯು ಉದ್ಭವಿಸಿತು. ಈ ಪ್ರಶ್ನೆಯನ್ನು ಸರಿಯಾಗಿ ಪರಿಹರಿಸಿದರೆ ಯುದ್ಧದಲ್ಲಿ ಅರ್ಧಜಯವನ್ನು ಹೊಂದಿದ ಹಾಗೆ. ಮಿಲ್ಟೈಡಿಸ್ ಎಂಬ ಅಥಿನಿಯನರ ನಾಯಕನು ತತ್‍ಕ್ಷಣವೇ ಮಾರಥಾನ್ ಬಯಲಿಗೆ ಮುನ್ನುಗ್ಗಿ, ಶತ್ರುಗಳು ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳುವುದಕ್ಕೆ ಮುಂಚಿತವಾಗಿಯೇ ಅವರಮೇಲೆ ಅಕಸ್ಮಾತ್ತಾಗಿ ಬೀಳಲು ಸಲಹೆ ಮಾಡಿದನು. ಈ ಸಲಹೆಯು ಬಹು ಶ್ರೇಷ್ಠವಾದದ್ದು. ಈ ಸಲಹೆಯನ್ನು ಎಲ್ಲರೂ ಒಪ್ಪಿಕೊಂಡರು. ಕೂಡಲೇ ಸೈನ್ಯವನ್ನು ಜಮಾಯಿಸಿ ಕ್ಯಾಲಿಮಾಕಸ್ ಎಂಬ ಶೂರನ ನಾಯಕತ್ವದಲ್ಲಿ ಮಾರಥಾನಿಗೆ ಹೋಗಲು ಸಿದ್ಧವಾಯಿತು. ಅಥಿನಿಯನರ ಸೈನ್ಯವು ಮಾರಥಾನಿಗೆ ಹೋಗುವುದಕ್ಕೆ ಮುಂಚೆ ಸ್ಪಾರ್ಟನರಿಗೆ ಸಮಾಚಾರವನ್ನು ತಿಳಿಸಿ ಅವರ ಸಹಾಯವನ್ನು ಕೋರಲಾಯಿತು. ಆದರೆ ಸ್ಪಾರ್ಟನರು ಒಂದು ಧರ್ಮ ಭೀತಿಯಲ್ಲಿದ್ದರು. ಹುಣ್ಣಿಮೆ ಆಗುವವರೆವಿಗೂ ಅವರು ಸಹಾಯಮಾಡಲು ಹಿಂತೆಗೆದರು. ಸ್ಪಾರ್ಟನರು ಸಂದಿಗ್ಧಸ್ಥಿತಿಯನ್ನು ಗ್ರಹಿಸದೆ, ತಮ್ಮ ಮೂಢಭಕ್ತಿಯನ್ನು ಪ್ರದರ್ಶಿಸಿದ್ದು ಅವರ ಜೀವನದ ಒಂದು ದೊಡ್ಡ ನ್ಯೂನತೆ. ಆದರೂ ಅಥಿನಿಯನರ ಸೈನ್ಯವು ಮಾರಥಾನ್ ಮೈದಾನಕ್ಕೆ ಹೋಗಿ ಪೆಂಟಲಕಸ ಗುಡ್ಡದ ಹತ್ತಿರ, ತಮ್ಮ ನಗರಕ್ಕೆ ನೇರವಾದ ಸಂಪರ್ಕವಿರುವ ಸ್ಥಳದಲ್ಲಿ ನೆಲಸಿದರು. ಅಥಿನಿಯನರಿಗೆ ಅನುಕೂಲವಾದ ಸ್ಥಳದಲ್ಲಿದ್ದುದರಿಂದ ಯುದ್ಧ ನಡೆಯುವುದು ಸಾವಕಾಶವಾದರೂ ತೊಂದರೆಯಿರಲಿಲ್ಲ. ಪರ್ಷಿಯನರು ಯುದ್ಧವು ತಡವಾದಷ್ಟೂ ಕಷ್ಟಕ್ಕೊಳಗಾದರು. ತಾವು ತಂದ ಆಹಾರ ಸಾಮಗ್ರಿಗಳು ಕಡಮೆಯಾಗಿ ಯುದ್ಧ ಮುಂದುವರಿಸುವುದೇ ಕಷ್ಟವಾಯಿತು. ಕೊನೆಗೆ ಪರ್ಷಿಯನರು ಯುದ್ಧವನ್ನು ಮೊದಲುಮಾಡಬೇಕಾಯಿತು. ಅಥಿನಿಯನರ ಸೈನ್ಯವು ಹಿಂದಿನಿಂದ ಬಂದು ಪರ್ಷಿಯನರ ಸೈನ್ಯದ ಕೇಂದ್ರವನ್ನು ದಾಳಿಮಾಡಿತು. ಪರ್ಷಿಯನರ ಸೈನ್ಯವು ಅಥಿನಿಯನರಿಂದ ಸುತ್ತಲ್ಪಟ್ಟು ಅನೇಕ ಸೈನಿಕರು ಮಡಿದರು. ಕೊನೆಗೆ ಪರ್ಷಿಯನರು ರಣರಂಗದಿಂದ

ತಪ್ಪಿಸಿಕೊಂಡು ತಮ್ಮ ಹಡಗಿನಲ್ಲಿ ಓಡಿಹೋಗಬೇಕಾಯಿತು. ಸುಮಾರು ೬೦೦೦ ಪರ್ಷಿಯನ್ ಸೈನಿಕರು ಮಡಿದರು. ಕೇವಲ ೧೯೨ ಅಥೆನಿಯನರ ಸೈನಿಕರು ಮಡಿದರು. ಈ ವೇಳೆಯಲ್ಲಿ ಪೂರ್ಣಿಮೆಯು ಕಳೆದ ಮೇಲೆ ಸ್ಪಾರ್ಟನರ ಸೈನ್ಯವು ಮಾರಾಥಾನ್ ಬಯಲಿಗೆ ಬಂದಿತು. ಈ ಸೈನ್ಯವು ಅಥೇನಿಯರ ಶೌರ್ಯವನ್ನು ಮೆಚ್ಚಿ ಹಿಂದಕ್ಕೆ ಹೋಯಿತು. ಈ ಕದನದಲ್ಲಿ ಮಡಿದವರನ್ನು ಅಥೆನಿಯನರು ವೀರರೆಂದು ಸ್ಮರಿಸುತ್ತಿದ್ದರು.



ಮಾರಥಾನ್ ಕದನದ ಪರಿಣಾಮ:—ಮಾರಥಾನ್ ಕದನವು ಪ್ರಪಂಚದ ಇತಿಹಾಸದಲ್ಲೇ ಒಂದು ನಿರ್ಧಾರಕ ಕದನವೆಂದು ಹೇಳಬಹುದು. ಅದು ಸ್ವಾತಂತ್ರ್ಯಯುದ್ಧ. ಅಥೆನಿಯನರು ತಮ್ಮ ಧೈರ್ಯ, ಸಾಹಸ, ದೇಶಾಭಿಮಾನವನ್ನು ಚೆನ್ನಾಗಿ ಪ್ರದರ್ಶಿಸಿ ಗ್ರೀಕರಿಗೆ ಮೇಲ್ಪಂಕ್ತಿ ಹಾಕಿದರು. ಅವರ ಕೀರ್ತಿ ಎಲ್ಲೆಲ್ಲಿಯೂ ಹರಡಿತು. ಪರ್ಷಿಯನರು ಅಜೇಯರು ಎಂಬ ದಂತಕಥೆಯನ್ನು ಸುಳ್ಳು ಮಾಡಿದರು. ಅವರಲ್ಲಿ ಹೊಸ ಸ್ವಾಭಿಮಾನವೂ ಹೊಸ ಚೈತನ್ಯವೂ ಅಭಿವೃದ್ಧಿಹೊಂದಿ

ಸ್ವಾತಂತ್ರ್ಯದ ಪರಾಕ್ರಮಿಗಳು ಎಂದು ಖ್ಯಾತಿಹೊಂದಿದರು. ಈ ಅದ್ಭುತ ಜಯವು ಅಥಿನಿಯನರ ಪ್ರಜಾಪ್ರಭುತ್ವದ ಮೊದಲನೆಯ ಕಾಣಿಕೆ.

ಅಧ್ಯಾಯ ೧೩

ಪರ್ಷಿಯನರ ಮೂರನೆಯ ದಂಡಯಾತ್ರೆ

ಮಾರಥಾನ್ ಕದನದಲ್ಲಿ ಪರ್ಷಿಯನರಿಗೆ ಅಪಜಯವಾದರೂ ಡೇರಿಯಸನು ಅಥಿನಿಯನರ ಮೇಲೆ ಸೇಡುತೀರಿಸಿಕೊಳ್ಳಲು ಹಿಂತೆಗೆಯಲಿಲ್ಲ. ಇನ್ನೂ ಪ್ರಬಲವಾದ ಸೈನ್ಯವನ್ನು ಸೇರಿಸಿ ಯುದ್ಧಮಾಡಬೇಕೆಂದು ಸಂಕಲ್ಪಿಸಿದನು. ಆದರೆ ಕ್ರಿ. ಪೂ. ೪೮೫ ರಲ್ಲಿ ಆತನು ಸತ್ತುಹೋದಮೇಲೆ ಆತನ ಮಗನಾದ ಕ್ಸರ್ಕ್ಸೆಸ್ (Xerxes) ಎಂಬುವನು ಗ್ರೀಕರ ಮೇಲೆ ಅದೇ ಬದ್ಧದ್ವೇಷವನ್ನು ತೋರಿಸಿ ಯುದ್ಧಕ್ಕೆ ಸಿದ್ಧತೆಗಳನ್ನು ಮಾಡಿದನು. ಕ್ಸರ್ಕ್ಸೆಸನು ತನ್ನ ತಂದೆಯ ಹಾಗೆ ಶೂರನೂ ಅಲ್ಲ, ಯೋಧನೂ ಅಲ್ಲ. ಆದರೆ ಅವನ ಅಹಂಕಾರ, ಸ್ವಪ್ರತಿಷ್ಠೆ, ಬಡಾಯಿ, ಪೊಳ್ಳು ಜಂಬಕ್ಕೆ ಮಿತಿಯೇ ಇರಲಿಲ್ಲ. ಅವನು ಕ್ರೂರಸ್ವಭಾವದ, ಚಂಚಲಬುದ್ಧಿಯ ನಿರಂಕುಶಪ್ರಭುವಾಗಿದ್ದನು. ಅವನ ಸಲಹೆಗಾರರೂ ಅವನನ್ನು ತಪ್ಪುದಾರಿಯಲ್ಲಿ ಒಯ್ಯಲು ಸಹಾಯಕರಾದರು. ಗ್ರೀಸ್‌ದೇಶದಲ್ಲಿ ದಂಡಯಾತ್ರೆ ಮಾಡುವುದು ಕೇವಲ ಪ್ರತಿಷ್ಠೆಯಲ್ಲದೆ ಬಡಾಯಿಯ ಸಾಹಸವಾಯಿತು. ಕೊನೆಗೆ ಕ್ಸರ್ಕ್ಸೆಸನು ಎಷ್ಟೇ ಪ್ರಯತ್ನಪಟ್ಟರೂ ಗ್ರೀಕರನ್ನು ಸೋಲಿಸುವುದಕ್ಕೆ ಸಾಧ್ಯವಾಗದೆ ಹಿಂದಕ್ಕೆ ಹೋಗಬೇಕಾಯಿತು.

ಕ್ಸರ್ಕ್ಸೆಸನ ಯುದ್ಧಸಿದ್ಧತೆ:—ಕ್ಸರ್ಕ್ಸೆಸನು ಗ್ರೀಕರ ಮೇಲೆ ದಂಡಯಾತ್ರೆ ಮಾಡಲು ಅದ್ಭುತವಾದ ಸಿದ್ಧತೆಗಳನ್ನು ಮಾಡಿದನು. ಸೈನ್ಯವೂ ನೌಕೆಯೂ ಜೋಡಿಯಾಗಿ ಯುದ್ಧ ಮಾಡಬೇಕೆಂದು ಏರ್ಪಡಿಸಿದನು. ಮೊದಲನೆಯ ದಂಡಯಾತ್ರೆಯು ವಿಫಲವಾದ್ದರಿಂದ ಆಥಸ್ ಭೂಶಿರದ ಹತ್ತಿರ ಒಂದು ಕಾಲುವೆಯನ್ನು ತೋಡಿಸಿದನು. ಸಾಧ್ಯವಾದ ಮಟ್ಟಿಗೂ ನೌಕೆಯೂ ಸೈನ್ಯವೂ ಒಟ್ಟಿಗೆ ಸಹಕರಿಸುವ ಹಾಗೆ ಗೊತ್ತುಪಡಿಸಿದನು. ಸೈನ್ಯವು ಹೆಲೆಸ್ಪಾಂಟ ಜಲಸಂಧಿಯನ್ನು ದಾಟಲು ಒಂದು

ಸೇತುವೆಯನ್ನು ಕಟ್ಟಿಸಿದನು. ಆದರೆ ಮೊದಲನೆಯ ಸೇತುವೆಯು ಸುಂಟರಗಾಳಿಯಿಂದ ನಾಶವಾಯಿತು. ಖ್ಸರ್ಸಸ್ಸನು ಕೋಪಗೊಂಡು ಆ ಸೇತುವೆಯನ್ನು ಕಟ್ಟಿದ ಇಂಜನಿಯರುಗಳಿಗೆ ಮರಣದಂಡನೆ ವಿಧಿಸಿ, ಆ ಜಲಸಂಧಿಯ ನೀರಿಗೆ ಇನ್ನೂರು ಚಡಿ ಏಟುಗಳನ್ನು ಕೊಡುವ ಹಾಗೆ ಆಜ್ಞೆಮಾಡಿದನು. ಬೇರೆ ಸೇತುವೆಯನ್ನು ಕಟ್ಟಲಾಯಿತು. ಇದು ಅವನ ಸ್ವಪ್ರತಿಷ್ಠೆಯನ್ನು ತೋರಿಸುತ್ತದೆ. ಸೈನ್ಯವನ್ನೂ ನೌಕೆಯನ್ನೂ ಏಷ್ಯಾ ದೇಶದ ಎಲ್ಲಾ ಜನಾಂಗಗಳಿಂದಲೂ ಜಮಾಯಿಸಲಾಯಿತು. ಹೆರಡೋಟಸನು ಕೇಳುವ ಹಾಗೆ "ಏಷ್ಯಾದೇಶದ ಯಾವ ಜನಾಂಗಗಳು ಆತನ ಸೈನ್ಯದಲ್ಲಿರಲಿಲ್ಲ!" ಆತನ ಸೈನ್ಯದಲ್ಲಿ ಪರ್ಷಿಯನರು, ಅಸ್ಸಿರಿಯನರು, ಬಾಕ್ಟ್ರಿಯನರು, ಕ್ಯಾಸ್ಪಿಯನರು, ಇಥಿಯೋಪಿಯನರು, ಥ್ರೇಸಿಯನರು ಮತ್ತು ಹಿಂದುಗಳೂ ಇದ್ದರು. ನೌಕೆಯಲ್ಲಿಯೂ ಕೂಡ ಫಿನಿಷಿಯನರೂ, ಈಜಿಪ್ಟಿನವರೂ, ಸೈಲಿಸಿಯನರೂ, ಕೇರಿಯನರೂ, ಪಾಂಫಿಲಿಯನರೂ, ಪಶ್ಚಿಮ ಏಷ್ಯದ ಗ್ರೀಕರೂ ತಮ್ಮ ನೌಕೆಗಳನ್ನು ಕಳುಹಿಸಿದ್ದರು. ಕೇವಲ ಸಂಖ್ಯಾಬಲದಲ್ಲಿ ಖ್ಸರ್ಸಸ್ಸನ ಸೇನಾಸಮೂಹವು ಪ್ರಬಲವಾಗಿತ್ತು. ಆದರೆ ಶಿಸ್ತು, ಸ್ವದೇಶಾಭಿಮಾನ, ವ್ಯವಸ್ಥಿತೆಯಿಲ್ಲದೆ ಪರ್ಷಿಯನರ ಸೈನ್ಯವು ದಂಡಯಾತ್ರೆಗೆ ಹೊರಟಾಗ ಪ್ರೇತಯಾತ್ರೆಯ ಮೆರವಣಿಗೆಯ ಹಾಗೆ ಕಾಣುತ್ತಿತ್ತು. ಈ ಸೈನ್ಯಕ್ಕೆ, ಅದು ಹೋದ ದಾರಿಯಲ್ಲಿ ಸಿಕ್ಕುವ ಪ್ರತಿಯೊಂದು ಪಟ್ಟಣವೂ ಒಂದ ದಿವಸದ ಮಟ್ಟಿಗಾದರೂ ಊಟ ಉಪಚಾರಗಳನ್ನು ನೋಡಿಕೊಳ್ಳಬೇಕಾಗಿತ್ತು. ಇದು ಸುಲಭವಾದ ಕೆಲಸವಾಗಿರಲಿಲ್ಲ. ಅನೇಕ ಪಟ್ಟಣಗಳು ಬಿಕಾರಿಯಾದವು. ಅನೇಕ ಬಾವಿಗಳು ನೀರಿಲ್ಲದೆ ಖಾಲಿಯಾದವು. ಈ ಸೇನಾ ಸಮೂಹವು ಖ್ಸರ್ಸಸ್ಸನ ನಾಯಕತ್ವದಲ್ಲಿ ಸಾರ್ಡಿಸ್ ನಗರದಿಂದ ಉತ್ತರಕ್ಕೆ ಹೆಲೆಸ್ಪಾಂಟ್ ಜಲಸಂಧಿಯ ಮೇಲೆ ಕಟ್ಟಿದ ಸೇತುವೆಯನ್ನು ದಾಟಿ, ಥ್ರೇಸ್, ಮೆಸಿಡೋನಿಯಾ ಪ್ರದೇಶವನ್ನು ಹಾದು, ಥೆಸಲಿಯಾ ಪ್ರದೇಶದಲ್ಲಿ ನೆಲಸಿತು. ಪರ್ಷಿಯನರ ನೌಕೆಯೂ ಏಜಿಯನ್ ಸಮುದ್ರದ ಉತ್ತರದಲ್ಲಿ ಹೊರಟು, ಛಾಲ್ಸಿಡಿಸ್ ಪರ್ಯಾಯ ದ್ವೀಪದ ತೀರದಲ್ಲಿ ನೆಲಸಿತು. ಖ್ಸರ್ಸಸ್ಸನು ಥೆಸಲಿ ಪ್ರದೇಶದಿಂದ ದಕ್ಷಿಣಕ್ಕೆ ಹೋಗಿ ಥೆರ್ಮಾಫಿಲೆ ಕಣಿವೆಯನ್ನು ಆಕ್ರಮಿಸಿದನು. ಥೆರ್ಮಾ

ಫಿಲೆ ಕಣಿವೆಯು ಗ್ರೀಸ್ ದೇಶದ ಹೆಬ್ಬಾಗಿಲು. ಈ ಕಣಿವೆಯು ಗ್ರೀಕರ ರಕ್ಷಣೆಗೆ ಮುಖ್ಯವಾದ ದಾರಿ. ಈ ಕಣಿವೆಯು ಶತ್ರುಗಳ ವಶವಾದರೆ ಗ್ರೀಕರ ಪತನವಾದ ಹಾಗೆ.

ಗ್ರೀಕರ ಪ್ರತಿಕೂಲ ಸಿದ್ಧತೆ:—ಝರ್ಸಿಸ್ಸನು ಥೆರ್ಮಾಫಿಲೆಯಲ್ಲಿ ಬಂದು ನೆಲಸಿದ ಸುದ್ದಿಯು ತಿಳಿದು, ಗ್ರೀಕರು ತಮಗೆ ದೊಡ್ಡ ವಿಪತ್ತು ಸಂಭವಿಸಿದೆಯೆಂದು ಗ್ರಹಿಸಿ, ಶತ್ರುವನ್ನು ಧೈರ್ಯದಿಂದ ಎದುರಿಸಲು ದೃಢ ಸಂಕಲ್ಪ ಮಾಡಿಕೊಂಡರು. ಸ್ಪಾರ್ಟ ಮತ್ತು ಅಥೆನ್ಸ್ ರಾಷ್ಟ್ರಗಳು ಮುಂದಾಳತ್ವವನ್ನು ವಹಿಸಿ ಎಲ್ಲರೂ ಐಕ್ಯತೆಯಿಂದ ಯುದ್ಧ ಮಾಡುವ ಹಾಗೆ ಚೇತನಗೊಳಿಸಿದವು. ಕ್ರಿ. ಪೂ. ೪೮೧ ರಲ್ಲಿ ಕಾರಿಂತ್ ಭೂಶಿರದಲ್ಲಿ ಗ್ರೀಕರ ರಾಷ್ಟ್ರಸಭೆ (Hellenic Congress) ಯು ಸೇರಿತು. ಗ್ರೀಕರ ಎಲ್ಲಾ ರಾಷ್ಟ್ರಗಳೂ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿದರು. ಈ ರಾಷ್ಟ್ರಸಭೆಯು ಗ್ರೀಕರ ಇತಿಹಾಸದಲ್ಲಿ ಮಹತ್ವವಾದ ಘಟನೆಯೆಂದು ಹೇಳಬಹುದು. ಗ್ರೀಕರು ತಮ್ಮ ಒಳಜಗಳವನ್ನು ಮರೆತು ಸಾಮೂಹಿಕ ಪ್ರತಿಭಟನೆಯಿಂದ ಹೋರಾಡಲು ನಿಶ್ಚಯಿಸಿದರು. ಎಲ್ಲಾ ರಾಷ್ಟ್ರಗಳೂ ತಮ್ಮ ಒಳಜಗಳವನ್ನು ಮರೆತವು. ಅಥೆನ್ಸ್, ಏಜಿನ ರಾಷ್ಟ್ರಗಳು ತಮ್ಮ ದ್ವೇಷವನ್ನು ಮರೆತವು. ಯಾವ ರಾಷ್ಟ್ರಗಳು ಪರ್ಶಿಯನರಿಗೆ ಬಲಾತ್ಕಾರವಿಲ್ಲದೆ "ಭೂಮಿ ನೀರನ್ನೂ" ಕೊಟ್ಟಿದ್ದವೋ ಅವುಗಳನ್ನು ಶಿಕ್ಷಿಸಬೇಕೆಂದು ನಿರ್ಣಯವಾಯಿತು. ರಾಷ್ಟ್ರಸಭೆಗೆ ಸೇರಿದ ಪ್ರತಿಯೊಂದು ರಾಷ್ಟ್ರವೂ ಸೈನ್ಯವನ್ನೂ ಮತ್ತು ನೌಕೆಯನ್ನೂ ಕೊಡುವಹಾಗೆ ಒಪ್ಪಿದವು. ಸೈನ್ಯದ ನಾಯಕತ್ವವನ್ನು ಸ್ಪಾರ್ಟ ವಹಿಸಬೇಕಾಯಿತು. ಸ್ಪಾರ್ಟನರ ರಾಜನಾದ ಲಿಯೋನಿದಾಸ್ ಎಂಬ ಶೂರನು ನಾಯಕನಾದನು. ನೌಕೆಯ ನಾಯಕತ್ವವನ್ನು ಅಥೆನ್ಸ್ ರಾಷ್ಟ್ರವು ವಹಿಸಲು ಹಕ್ಕು ಹೊಂದಿತ್ತು. ಅಥೆನ್ಸ್‌ರಾಷ್ಟ್ರವು ಥೆಮಿಸ್ಟಾಕ್ಲಿಸ್ ಎಂಬ ನಾಯಕನ ಪ್ರಯತ್ನದಿಂದ ತನ್ನ ನೌಕೆಯನ್ನು ಬಲಪಡಿಸಿ ನೌಕಾಶಕ್ತಿಯನ್ನು ವಿಸ್ತರಿಸಿತು. ಅಥೆನ್ಸ್‌ನಗರದ ಬಳಿ ಬೆಳ್ಳಿಗಣಿ ಸಿಕ್ಕಿತು. ಥೆಮಿಸ್ಟಾಕ್ಲಿಸನು ಈ ಗಣಿಯ ಉತ್ಪನ್ನದಿಂದ ರಾಷ್ಟ್ರದ ನೌಕಾಶಕ್ತಿಯನ್ನು ಬಲಪಡಿಸುವ ಹಾಗೆ ಸಲಹೆ ಮಾಡಿದ್ದು ಆತನ ಕೀರ್ತಿಗೆ ಕಾರಣವಾಯಿತು. ಹೊಸ

ಹಡಗುಗಳನ್ನು ಕಟ್ಟಿ, ಪೈರಸ್ ಬಂದರನ್ನು ಅಭಿವೃದ್ಧಿಪಡಿಸಿ, ಥೆಮಿಸ್ಟಾಕ್ಲಿಸನ ಉತ್ಸಾಹದಿಂದ ಅಥೆನಿಯನರು ಪ್ರಬಲವಾದ ನೌಕಾಶಕ್ತಿಯನ್ನು ಹೊಂದಿದ್ದರು. ಆದರೆ ಇತರ ಗ್ರೀಕ್‌ರಾಷ್ಟ್ರಗಳು ಅಥೆನ್ಸ್‌ರಾಷ್ಟ್ರವನ್ನು ಹೊಟ್ಟೆಕಿಚ್ಚಿನಿಂದ ಕಾಣುತ್ತಿದ್ದವು. ನೌಕಾನಾಯಕತ್ವವನ್ನೂ ಸ್ಪಾರ್ಟರಾಷ್ಟ್ರಕ್ಕೆ ಕೊಡಲು ನಿಶ್ಚಯಿಸಿದವು. ಅಥೆನಿಯನರು ಈ ಗಂಡಕಾಲದಲ್ಲಿ ತಮ್ಮ ಉದಾರತೆಯನ್ನು ತೋರಿಸಿ ರಾಷ್ಟ್ರಸಭೆಯ ನಿರ್ಣಯವನ್ನು ವಿರೋಧಿಸಲಿಲ್ಲ. ನೌಕೆಯ ನಾಯಕತ್ವವನ್ನೂ ಸ್ಪಾರ್ಟ ವಹಿಸಬೇಕಾಯಿತು. ಎಲ್ಲೆಲ್ಲಿಯೂ ಉತ್ಸಾಹವನ್ನು ಹುರಿದುಂಬಿಸುವ ದೇಶಾಭಿಮಾನ ಎದ್ದು ಕಾಣುತ್ತಿತ್ತು.

ಥರ್ಮಾಫಿಲೆ ಕದನ:—ಕ್ರಿ. ಪೂ. ೪೮೦ ರಲ್ಲಿ ಗ್ರೀಕರ ಸೈನ್ಯವು ಲಿಯೋನಿದಾಸನ ನಾಯಕತ್ವದಲ್ಲಿ ಥರ್ಮಾಫಿಲೆಗೆ ಹೋಯಿತು. ಅವರ ನೌಕೆಯೂ ಜೊತೆಯಲ್ಲಿ ಹೋಗಿ ಇಬಿಯಾದ್ವೀಪದ ಉತ್ತರದಲ್ಲಿ ನೆಲಸಿತು. ಗ್ರೀಕರ ಸೈನ್ಯವು ಅನುಕೂಲವಾದ ಸ್ಥಳವನ್ನು ಆಕ್ರಮಿಸಿ ಪರ್ಷಿಯನರ ಸೈನ್ಯವು ಮುಂದಕ್ಕೆ ಬರದ ಹಾಗೆ ಅಡ್ಡಿಮಾಡಿತು. ಪರ್ಷಿಯನರ ಸೈನ್ಯವು ಆ ಕಣಿವೆಯಲ್ಲಿ ಚಲಿಸಲು ಬಹಳ ಕಷ್ಟವಾಗಿ ಯುದ್ಧವಾದರೆ ಸಾಕೆಂದು ಕಾದಿತ್ತು. ಗ್ರೀಕರು ಬೇಕೆಂದು ಯುದ್ಧಮಾಡಲು ನಿದಾನಮಾಡಿದರು. ಕೊನೆಗೆ ಝರ್ಕ್ಸಸ್ಸನು ಲಂಚತನದಿಂದ ತನ್ನ ಕಾರ್ಯವನ್ನು ಸಾಧಿಸಬೇಕಾಯಿತು. ಇಫಿಯಾಲ್ಟಿಸ್ ಎಂಬ ಗ್ರೀಕರ ದೇಶದ್ರೋಹಿಯು ಝರ್ಕ್ಸಸ್ಸನಿಂದ ಲಂಚಪಡೆದು ಆತನಿಗೆ ಒಂದು ಗುಟ್ಟು ಹಾದಿಯನ್ನು ತಿಳಿಸಿದನು. ಅವೇ ರೀತಿಯಾಗಿ ಝರ್ಕ್ಸಸ್ಸನು ಒಂದು ರಾತ್ರಿ ತನ್ನ ಸೈನ್ಯವನ್ನು ಆ ಹಾದಿಯಲ್ಲಿ ತೆಗೆದುಕೊಂಡು ಹೋಗಿ ಗ್ರೀಕರನ್ನು ಅನಿರೀಕ್ಷಿತವಾಗಿ ಮುತ್ತಿಗೆ ಹಾಕಿದನು. ಗ್ರೀಕರು ಧೈರ್ಯವಾಗಿ ಯುದ್ಧಮಾಡಿದರು. ಅವರು ತಮ್ಮ ಪ್ರಾಣವನ್ನು ಅರ್ಪಿಸಲು ಸಿದ್ಧರಾಗಿದ್ದರು. ಲಿಯೋನಿದಾಸನೂ ಆತನ ಮುನ್ನೂರು ಅಂಗರಕ್ಷಕರೂ ಕೊನೆಯವರಿಗೂ ಹೋರಾಡಿ ಮಡಿದರು. ಈ ಕದನದಲ್ಲಿ ಗ್ರೀಕರು ಸೋತರೂ ಲಿಯೋನಿದಾಸನೂ ಆತನ ಮುನ್ನೂರು ಅಂಗರಕ್ಷಕರೂ ತೋರಿಸಿದ ಧೈರ್ಯ, ಸಾಹಸ, ಹೋರಾಟ, ಅವರನ್ನು ಅಮರರನ್ನಾಗಿ ಮಾಡಿದವು. ಗ್ರೀಕರು ಎಷ್ಟೇ ಕಷ್ಟಬಂದರೂ ಶತ್ರುವಿಗೆ ಶರಣಾಗತರಾಗುವುದಿಲ್ಲವೆಂಬುವುದು ಖಚಿತ

ನಾಯಿತು. ಪರ್ಷಿಯನರು ಈ ಯುದ್ಧದಲ್ಲಿ ಜಯಶೀಲರಾದರೂ ಅದು ನಿಜವಾದ ಜಯವಾಗಲಿಲ್ಲ. ಅವರು ಶತ್ರುವಿನ ಸಾಮರ್ಥ್ಯವನ್ನು ಕಡಿಮೆಯಾಗಿ ಎಣಿಸಿ ತಮ್ಮ ಸೈನ್ಯಸಿದ್ಧತೆಯಲ್ಲಿ ಉದಾಸೀನರಾದರು. ಗ್ರೀಕರನ್ನು ಜಯಿಸುವುದು ಸುಲಭವೆಂಬ ಮನೋಭಾವನೆಯು ಅವರ ನೀತಿಗೆಡಿಸಿತು. ಪರ್ಷಿಯನರ ನೌಕೆಯು ಇಬಿಯಾ ದ್ವೀಪದ ಉತ್ತರಕ್ಕೆ ಆರ್ಟೆಮಿಸಿಯಂ ಎಂಬ ಸ್ಥಳದಲ್ಲಿ ಗ್ರೀಕರ ನೌಕೆಯನ್ನು ಮುತ್ತಿ ಓಡಿಸಿತು. ಗ್ರೀಕರ ನೌಕೆಯು ಅಟಿಕತೀರಕ್ಕೆ ಹೋಗಿ ನೆಲಸಿದವು.

ಸಾಲಮಿಸ್ ಕದನ. ಕ್ರಿ. ಪೂ. ೪೮೦—ಥರ್ಮೊಫಿಲೆ ಕದನದಲ್ಲಿ ಪರ್ಷಿಯನರು ಜಯಶೀಲರಾಗಿ ಮಧ್ಯಗ್ರೀಸನ್ನು ಆಕ್ರಮಣ ಮಾಡಿದರು. ಎಲ್ಲಾ ನಗರಗಳೂ ಅವರ ಸಾರ್ವಭೌಮತ್ವವನ್ನು ಒಪ್ಪಿಕೊಂಡವು. ಲೋಕ್ರಿಸ್, ಫೋಸಿಸ್, ಭೋಷಿಯ ರಾಷ್ಟ್ರಗಳೂ ಅಧೀನವಾದವು. ಗ್ರೀಕರ ಸೈನ್ಯವು ಕಾರಿಂತ ಭೂಶಿರಕ್ಕೆ ವಾಪಸು ಹೋಯಿತು. ಈ ಸಮಯದಲ್ಲಿ ಅಥೆನ್ಸ್ ರಾಷ್ಟ್ರವು ಉತ್ಕಟಸ್ಥಿತಿಯಲ್ಲಿತ್ತು. ಶತ್ರುವು ಅಟಿಕ ಪ್ರದೇಶಕ್ಕೆ ನುಗ್ಗಿ ಅಥೆನ್ಸ್ ನಗರವನ್ನು ನಾಶ ಮಾಡುವನೆಂದು ನಿಶ್ಚಯವಾಯಿತು. ಅಥೀನಿಯನರು ತೋರಿಸಿದ ಸಹನೆ, ಧೈರ್ಯ, ಸ್ವಾರ್ಥತ್ಯಾಗ ಅಸಾಮಾನ್ಯವಾದ ಗುಣಗಳು ಮೆಚ್ಚತಕ್ಕವು. ಪೌರರು ಒಟ್ಟುಸೇರಿ ಮುಂದೇನು ಮಾಡಬೇಕೆಂದು ಯೋಚಿಸಿದರು. ಥೆಮಿಸ್ಟೋಕ್ಲಿಸನು ನಗರದಲ್ಲಿದ್ದ ಹೆಂಗಸರು ಮಕ್ಕಳನ್ನು ಮೊದಲು ನೆರೆಹೊರೆಯ ಪ್ರದೇಶಗಳಿಗೆ ಕಳುಹಿಸಿ, ಗಂಡಸರೆಲ್ಲಾ ನಗರವನ್ನು ಬಿಟ್ಟು ಖಾಲಿಮಾಡಬೇಕೆಂದು ಸೂಚಿಸಿದನು. ಅದೇ ರೀತಿಯಾಗಿ ಹೆಂಗಸರು ಮಕ್ಕಳನ್ನು ನೆರೆಹೊರೆಯ ದ್ವೀಪಗಳಿಗೆ ಕಳುಹಿಸಿದರು. ತತ್‌ಕ್ಷಣವೇ ಎಲ್ಲರೂ ನಗರವನ್ನು ಬಿಟ್ಟು ನಿರ್ಜನಪ್ರದೇಶವನ್ನಾಗಿ ಮಾಡಿದರು. ಝರ್ಕ್ಸಿಸನು ಅಥೆನ್ಸ್‌ನಗರಕ್ಕೆ ಬಂದಾಗ ಅಲ್ಲಿ ಯಾರೂ ಇಲ್ಲದೆ ಇರುವುದನ್ನು ನೋಡಿ ಆಶ್ಚರ್ಯಪಟ್ಟನು. ಎರಡು ವಾರದವರೆವಿಗೂ ನಗರವನ್ನು ಕೊಳ್ಳೆಹೊಡೆದು, ದೇವಸ್ಥಾನಗಳನ್ನೂ, ಸುಂದರವಾದ ಕಟ್ಟಡಗಳನ್ನೂ ನಾಶ ಮಾಡಿದರೂ ಅಥೀನಿಯನರ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಸಾಧ್ಯವಾಗಲಿಲ್ಲ.

ಕಾರಿಂತ ಭೂಶಿರದಲ್ಲಿ ಸೇರಿದ್ದ ಗ್ರೀಕರು ಮುಂದೇನು ಮಾಡಬೇ

ಕೆಂದು ಯೋಚಿಸಲು ಒಂದು ಸಂಗ್ರಾಮ ಸಭೆಯನ್ನು ನೇಮಿಸಿದರು. ಈ ಸಭೆಯಲ್ಲಿ ಥೆಮಿಸ್ಟಾಕ್ಲಿಸನು ಕೂಡಲೇ ತಮ್ಮ ಸೈನ್ಯವನ್ನು ಸಾಲಮಿಸ್ ದ್ವೀಪಕ್ಕೆ ತೆಗೆದುಕೊಂಡು ಹೋಗಿ ಯುದ್ಧವನ್ನು ಮುಂದುವರಿಸಬೇಕೆಂದು ಸೂಚಿಸಿದನು. ಅದೇ ರೀತಿಯಾಗಿ ಗ್ರೀಕರ ಸೈನ್ಯವು ಸಾಲಮಿಸ್ ದ್ವೀಪದ ಉತ್ತರದಲ್ಲಿ ನೆಲಸಿತು. ಗ್ರೀಕರ ನೌಕೆಯೂ ಸಾಲಮಿಸ್ ನಗರದ ಹತ್ತಿರದಲ್ಲಿಯೇ ನೆಲಸಿತು. ಝರ್ಕ್ಸಸ್ಸನು ಅಟಿಕ ತೀರವನ್ನು ಆಕ್ರಮಿಸಿ ಸಾಲಮಿಸ್ ದ್ವೀಪವನ್ನು ತನ್ನ ನೌಕೆಯಿಂದ ಸುತ್ತುಗಟ್ಟಿ ಗ್ರೀಕರಿಗೆ ಹೊರಗಡೆಯಿಂದ ಸಂಪರ್ಕವಿಲ್ಲದಂತೆ ಮಾಡಿದನು. ಅಲ್ಲಿ ನೆಲಸಿದ್ದ ಗ್ರೀಕರಿಗೆ ಆಹಾರ ಸರಬರಾಜಿಗೆ ಬಹಳ ತೊಂದರೆಯಾಯಿತು. ಪರ್ಷಿಯನರ ನೌಕೆಯು ಸಾಲಮಿಸ್ ದ್ವೀಪಕ್ಕೂ ಮತ್ತು ಅಟಿಕಾ ಪ್ರದೇಶಕ್ಕೂ ಮಧ್ಯೆ ಸಿಟಲಿಯ ಎಂಬ ಸಣ್ಣ ದ್ವೀಪದಲ್ಲಿ ನೆಲಸಿತು. ಈ ಸಂದರ್ಭದಲ್ಲಿ ಥೆಮಿಸ್ಟಕ್ಲಿಸನು ಒಂದು ಉಪಾಯವನ್ನು ಹೂಡಿದನು. ಝರ್ಕ್ಸಸ್ಸನಿಗೆ ಒಂದು ಸ್ನೇಹ ಭಾವದ ಕಾಗದವನ್ನು ಬರೆದನು. ಅದರಲ್ಲಿ ಗ್ರೀಕರು ಒಳಜಗಳಗಳಿಂದ ಸಾಲಮಿಸ್ ದ್ವೀಪದಿಂದ ಹಿಮ್ಮೆಟ್ಟುವ ಯೋಚನೆ ಮಾಡುತ್ತಿರುವರೆಂದೂ, ತಾನು ಝರ್ಕ್ಸಸ್ಸನ ಹಿತಚಿಂತಕನೆಂದೂ ಗ್ರೀಕರನ್ನು ಕೂಡಲೇ ಆಕ್ರಮಣ ಮಾಡಿದರೆ ಜಯಿಸಬಹುದೆಂದೂ ಸಲಹೆ ಮಾಡಿದನು. ಈ ಕಾಗದವು ಸಮಯೋಚಿತವಾಗಿತ್ತು. ಮುಖ್ಯವಾಗಿ ಝರ್ಕ್ಸಸ್ಸನು ಹೇಗಾದರೂ ಯುದ್ಧ ಮಾಡಬೇಕೆಂಬುದೇ ಗ್ರೀಕರ ಉದ್ದೇಶವಾಗಿತ್ತು. ಈ ಕಾಗದವನ್ನು ಬರೆದಿದ್ದರಿಂದ ಥೆಮಿಸ್ಟಕ್ಲಿಸನು ಸುರಕ್ಷಿತ ಸ್ಥಿತಿಯಲ್ಲಿದ್ದನು. ಗ್ರೀಕರು ಜಯವನ್ನು ಹೊಂದಿದರೆ ಥೆಮಿಸ್ಟಾಕ್ಲಿಸನ ಕಾಗದದಿಂದ ಜಯಿಸಿದರೆಂದು ಆತನಿಗೆ ವಿಶೇಷ ಮರ್ಯಾದೆ ಸಲ್ಲಿಸುವರು. ಒಂದು ವೇಳೆ ಪರ್ಷಿಯನರು ಜಯಿಸಿದರೂ ಝರ್ಕ್ಸಸ್ಸನ ಅಭಿಮಾನವನ್ನು ಹೊಂದುವುದರಲ್ಲಿ ಸಂಶಯವಿಲ್ಲ. ಝರ್ಕ್ಸಸ್ಸನು ಥೆಮಿಸ್ಟಕ್ಲಿಸನ ಕಾಗದವನ್ನು ನಂಬಿ ತನ್ನ ಸೈನ್ಯವು ಗ್ರೀಕರ ಮೇಲೆ ಯುದ್ಧಮಾಡಲು ಅನುಮತಿಕೊಟ್ಟನು. ಸಾಲಮಿಸ್ ದ್ವೀಪದ ಪಶ್ಚಿಮದಲ್ಲಿ ಇನ್ನೂರು ಈಜಿಪ್ಟಿನವರ ನೌಕೆಯು ಪರ್ಷಿಯನರ ಪರವಾಗಿ ನೆಲಸಿದ್ದವು. ಸಿಟಲಿಯ ದ್ವೀಪದಲ್ಲಿದ್ದ ಪರ್ಷಿಯನರು ಮೂರು ಭಾಗ ಮಾಡಿಕೊಂಡು ಗ್ರೀಕರ ಮೇಲೆ ದಂಡೆತ್ತಿ ಹೋಗಲು ಪ್ರಯತ್ನಪಟ್ಟರು.

ಆದರೆ ಇಕ್ಕಟ್ಟಿನಲ್ಲಿ ಜಲಭಾಗದ ಯುದ್ಧಮಾಡಲು ಬಹಳ ತೊಂದರೆಯಾಗಿ ಪರ್ಷಿಯನರು ಗೊಂದಲದಲ್ಲಿದ್ದರು. ಅವರ ನೌಕೆಯೂ ಸುಲಭವಾಗಿ ಚಲಿಸಲು ಸಾಧ್ಯವಾಗದೆ ಬಹುಮಟ್ಟಿಗೆ ನಾಶವಾಯಿತು. ಪರ್ಷಿಯನರು ಹಿಮ್ಮೆಟ್ಟಲೂ ಅವಕಾಶವಿಲ್ಲದೆ ಮಡಿದರು. ಈ ವೇಳೆಯಲ್ಲಿ ಏಜಿನ ಸಣ್ಣ ರಾಷ್ಟ್ರವು ಗ್ರೀಕರಿಗೆ ಸಹಾಯವನ್ನು ನೀಡಿತು. ಖ್ಸರ್ಸಸ್ಸನು ಅಟಿಕ ತೀರ ದಲ್ಲಿ ಯುದ್ಧವನ್ನು ನೋಡುತ್ತಿದ್ದಾಗ ಒಂದು ವಿಚಿತ್ರವಾದ ದೃಶ್ಯವನ್ನು ನೋಡಿದನು. ತನ್ನ ಪರವಾಗಿ ಯುದ್ಧಮಾಡುತ್ತಿದ್ದ ಕೇರಿಯ ರಾಜ್ಯದ ರಾಣಿ ಆರ್ಟಿಮಿಸಿಯ ಎಂಬುವಳು ಪರ್ಷಿಯನರಿಗೆ ಸೋಲು ನಿಶ್ಚಯವೆಂದು ತಿಳಿದು ತಾನು ತಪ್ಪಿಸಿಕೊಳ್ಳಲು ಒಂದು ಉಪಾಯವನ್ನು ಮಾಡಿದಳು. ಗ್ರೀಕರ ಹಡಗನ್ನು ಮುಳುಗಿಸುವ ನೆಪದಲ್ಲಿ ತನ್ನ ಹಡಗನ್ನೇ ಮುಳುಗಿಸಿ ತಪ್ಪಿಸಿಕೊಂಡಳು. ಖ್ಸರ್ಸಸ್ಸನು ಇದನ್ನು ಸರಿಯಾಗಿ ನೋಡದೆ ಆ ರಾಣಿಯು ಗ್ರೀಕರ ಹಡಗನ್ನು ಮುಳುಗಿಸದಳೆಂದು ಮೆಚ್ಚಿ "ನನ್ನ ಗಂಡಸರು ಹೆಂಗಸರಾಗಿದ್ದಾರೆ. ನನ್ನ ಹೆಂಗಸರು ಗಂಡಸರು" ಎಂದು ಹೇಳಿದನು. ಅಥಿನಿಯನರು ಶತ್ರುವನ್ನು ಎಲ್ಲೆಲ್ಲಿಯೂ ಚದುರಿಸಿದರು. ಖ್ಸರ್ಸಸ್ಸನು ಮಾರ್ಡೋನಿಯಸನ ಸಲಹೆ ಮೇಲೆ ಹೆಲೆಸ್ಪಾಂಟಿನ ಸೇತುವೆಯು ಸುರಕ್ಷಿತ ವಾಗಿರುವಾಗಲೇ ಪಶ್ಚಿಮ ಏಷ್ಯಾ ಪ್ರದೇಶಕ್ಕೆ ಹಿಮ್ಮೆಟ್ಟಿದನು. ಖ್ಸರ್ಸಸ್ಸನಿಗೆ ಗ್ರೀಸ್‌ದೇಶದ ಸ್ವಂತ ಅನುಭವವು ವ್ಯರ್ಥವಾಯಿತು.

ಸಾಲಮಿಸ್ ಕದನದ ಪರಿಣಾಮ—ಸಾಲಮಿಸ್ ಕದನವೂ ಗ್ರೀಕರ ಇತಿಹಾಸದಲ್ಲಿ ಮಹತ್ವವುಳ್ಳದ್ದು. ಈ ಕದನವು ಪರ್ಷಿಯನರ ನೌಕಾಶಕ್ತಿಗೆ ಸಾವಿನ ಪೆಟ್ಟೆಂದು ಹೇಳಬಹುದು. ಪರ್ಷಿಯನರ ಕೀರ್ತಿಯು ಕುಗ್ಗಿತು. ಗ್ರೀಕರಿಗೆ ಪರ್ಷಿಯನರ ಭಯವು ಸಂಪೂರ್ಣವಾಗಿ ತೊಲಗಿತು. ಗ್ರೀಸ್‌ದೇಶ ದಲ್ಲಿ ಎಲ್ಲೆಲ್ಲಿಯೂ ಉತ್ಸಾಹ ಹರಡಿತು. ತಮ್ಮ ಸ್ವಾತಂತ್ರ್ಯವನ್ನು ಯಾವ ಶತ್ರುವಾದರೂ ನಾಶಮಾಡಲು ಸಾಧ್ಯವಿಲ್ಲವೆಂಬುದು ಖಚಿತವಾಯಿತು. ತಾವು ಐಕ್ಯತೆಯಿಂದ ಎಂತಹ ಆಪತ್ತನ್ನಾದರೂ ಜಯಿಸಬಹುದೆಂದು ಚೆನ್ನಾಗಿ ತಿಳಿದುಕೊಂಡರು. ಮುಖ್ಯವಾಗಿ ಏಜಿನ ರಾಷ್ಟ್ರವನ್ನು ಗೌರವಿಸಿ ಕೊಳ್ಳೆಯಲ್ಲಿ ಹೆಚ್ಚಿನ ಭಾಗವನ್ನು ಆ ರಾಷ್ಟ್ರಕ್ಕೆ ಕೊಟ್ಟರು. ಥೆಮಿಸ್ಟಕ್ಲಿಸ ನಿಗೂ ವಿಶೇಷ ಗೌರವವನ್ನು ಸಲ್ಲಿಸಿದರು. ಈ ಯುದ್ಧವೇ "ಇತಿಹಾಸ


ಪಿತ" ನಾದ ಹೆರಡೋಟಸನಿಗೆ ತನ್ನ ಇತಿಹಾಸವನ್ನು ಬರೆಯಲು ಸ್ಫೂರ್ತಿ ಕೊಟ್ಟಿತು.

ಪ್ಲೆಟಿಯ ಕದನ. ಕ್ರಿ.ಪೂ. ೪೭೯—ಸಾಲಮಿಸ್ ಕದನವಾದ ಮೇಲೆ ಝರ್ಕ್ಸಿಸ್ಸನು ಮಾರ್ಡೋನಿಯಸನನ್ನು ಗ್ರೀಸ್‌ದೇಶದಲ್ಲಿ ನೆಲಸುವಂತೆ ಮಾಡಿ, ಮುಂದಕ್ಕೆ ಯಾವ ರೀತಿಯಲ್ಲಾದರೂ ಗ್ರೀಕರು ಶರಣಾಗತರಾಗುವ ಹಾಗೆ ಮಾಡಲು ಉಪದೇಶಮಾಡಿದನು. ಮಾರ್ಡೋನಿಯಸನು ಯುದ್ಧದಲ್ಲಿ ಗ್ರೀಕರನ್ನು ಗೆಲ್ಲಲು ಸಾಧ್ಯವಿಲ್ಲವೆಂದು ಚೆನ್ನಾಗಿ ತಿಳಿದು ರಾಜ್ಯತಂತ್ರದಿಂದ ಅವರ ಸ್ನೇಹವನ್ನು ಹೊಂದಲು ಪ್ರಯತ್ನಮಾಡಿದನು. ಅನೇಕ ರಾಷ್ಟ್ರಗಳು ಅವನಿಂದ ಲಂಚವನ್ನು ಪಡೆದು ಸ್ನೇಹವನ್ನು ಬೆಳೆಸಿದವು. ಮುಖ್ಯವಾಗಿ ಮಾರ್ಡೋನಿಯಸನು ಅಥೆನ್ಸ್ ಮತ್ತು ಸ್ಪಾರ್ಟ ರಾಷ್ಟ್ರಗಳು ಪರ್ಷಿಯನರ ವಶವಾದರೆ ತನ್ನ ದೇಶದ ಸಾರ್ವಭೌಮತ್ವವನ್ನು ಸ್ಥಾಪಿಸಲು ಸಾಧ್ಯವೆಂದು ತಿಳಿದನು. ಮೆಸಿಡೋನಿಯಾ ದೇಶದ ರಾಜನಾದ ಅಲೆಕ್ಸಾಂಡರನನ್ನು ಅಥೆನ್ಸ್ ನಗರಕ್ಕೆ ಕಳುಹಿಸಿ ಅಥಿನಿಯನರ ಸರಿಸಮಾನತೆಯ ಮೈತ್ರಿಯನ್ನು ಕೋರಿದನು. ಆದರೆ ಅಥಿನಿಯನರು "ಸೂರ್ಯನು ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುವ ವರಿವಿಗೂ" ಝರ್ಕ್ಸಿಸ್ಸನ ಸ್ನೇಹವನ್ನು ಮಾಡಿಕೊಳ್ಳುವುದಿಲ್ಲವೆಂದು ಖಂಡಿತವಾದ ಜವಾಬನ್ನು ಕೊಟ್ಟರು. ಸ್ಪಾರ್ಟನರೂ ಇದೇರೀತಿಯಾಗಿ ಅವನ ಸ್ನೇಹವನ್ನು ತಿರಸ್ಕರಿಸಿದರು. ಮಾರ್ಡೋನಿಯಸನು ಯುದ್ಧವಲ್ಲದೆ ಬೇರೆ ಮಾರ್ಗವಿಲ್ಲವೆಂದು ನಿಶ್ಚಯಿಸಿ ತನ್ನ ಸೈನ್ಯವನ್ನು ಮಧ್ಯಗ್ರೀಸಿನಲ್ಲಿರುವ ಭೋಷಿಯಾ ಪ್ರದೇಶಕ್ಕೆ ತಂದನು. ಥೀಬ್ಸ್‌ದುರ್ಗವು ಮಾರ್ಡೋನಿಯಸನ ಸೈನ್ಯ ಸಹಾಯಕ್ಕೆ ಆಧಾರಸ್ಥಾನವಾಯಿತು. ತನ್ನ ಸೈನ್ಯವನ್ನು ಪ್ಲೆಟಿಯಾನಗರದ ಸಮೀಪದಲ್ಲಿ, ಸಿಥಾರನ್ ಎಂಬ ಸಣ್ಣ ಗುಡ್ಡದ ಹತ್ತಿರ, ಅಸೋಪಸ್ ನದಿಯ ತೀರದಲ್ಲಿ ನೆಲಸಿ ಯುದ್ಧಕ್ಕೆ ಸಿದ್ಧಮಾಡಿಕೊಂಡನು. ಗ್ರೀಕರು ಕೂಡಲೇ ತಮ್ಮ ಸೈನ್ಯವನ್ನು ಪ್ಲಾಟಿಯ ನಗರಕ್ಕೆ ಕಳುಹಿಸಿದರು. ಸ್ಪಾರ್ಟನರೂ ತಮ್ಮ ಪ್ರಬಲವಾದ ಸೈನ್ಯವನ್ನು ಪಾಸೇನಿಯಸನ ನಾಯಕತ್ವದಲ್ಲಿ ಕಳುಹಿಸಿದರು. ಗ್ರೀಕರ ಸೈನ್ಯವು ಶಿಸ್ತಿನಿಂದ ವ್ಯವಸ್ಥಿತರೀತಿಯಲ್ಲಿ ಯುದ್ಧ ಮಾಡಿತು. ಶತ್ರುವಿಗೆ ಯಾವ ಸರಬರಾಜೂ ಸಿಕ್ಕದೆ ಇರಲು ಅಕ್ಕ ಪಕ್ಕದ ಬೆಳೆಯನ್ನು ನಾಶಮಾಡಿದವು. ಕೊನೆಗೆ ನೀರೂ ಸಿಕ್ಕದೆ

ಇರುವಹಾಗೆ ಪಕ್ಕದಲ್ಲಿದ್ದ ಬಾವಿ, ಕೊಳಗಳಿಗೆ ವಿಷವನ್ನು ಹಾಕಿದವು. ಮಾರ್ಡೋನಿಯಸನು ತನ್ನಸೈನ್ಯಕ್ಕೆ ತತ್‍ಕ್ಷಣವೇ ಯುದ್ಧಮಾಡಲು ಅನುಮತಿ ಕೊಟ್ಟನು. ಗ್ರೀಕರ ಸೈನ್ಯವು ಪರ್ಷಿಯನರ ಸೈನ್ಯದ ಕೇಂದ್ರಕ್ಕೆ ನುಗ್ಗುವ ಹಾಗೆ ನಟಿಸಿ ಕೊನೆಗೆ ಬಲಗಡೆ ಮತ್ತು ಎಡಗಡೆ ಇದ್ದ ಸೈನಿಕರನ್ನು ಚದುರಿಸಿತು. ಪರ್ಷಿಯನರು ಇಕ್ಕಟ್ಟು ಪ್ರದೇಶದಲ್ಲಿ ಯುದ್ಧಮಾಡಬೇಕಾಯಿತು. ಹೆಚ್ಚುಮಂದಿ ಪರ್ಷಿಯನರು ಸತ್ತರು. ಕೊನೆಗೆ ಮಾರ್ಡೋನಿಯಸನೂ ಕೊಲ್ಲಲ್ಪಟ್ಟನು. ಉಳಿದ ಪರ್ಷಿಯನರು ದಿಕ್ಕುತೋಚದೆ ರಣರಂಗದಿಂದ ಓಡಿಹೋದರು. ಪರ್ಷಿಯನರು ಬಿಟ್ಟುಹೋದ ಕೊಳ್ಳೆಯು ಅಪರಿಮಿತವಾಗಿತ್ತು. ಗ್ರೀಕರಿಗೆ ಪ್ರಾಚ್ಯದೇಶದ ಸುಖೋಪಭೋಗವೇನೆಂಬುದು ಅವರು ಬಿಟ್ಟುಹೋದ ಬೆಳ್ಳಿ, ಚಿನ್ನದ ಐಶ್ವರ್ಯದಿಂದ ಚೆನ್ನಾಗಿ ಗೊತ್ತಾಯಿತು. ಮೂರರಲ್ಲಿ ಒಂದು ಭಾಗವನ್ನು ದೇವತೆಗಳಿಗೆ ಮೀಸಲಾಗಿಟ್ಟರು. ಪಾಸೆನಿಯಸನಿಗೆ ಹೆಚ್ಚು ಭಾಗವನ್ನು ಕೊಟ್ಟರು. ಪ್ಲಾಟಿಯು ಒಂದು ಸಣ್ಣ ರಾಷ್ಟ್ರವಾಗಿತ್ತು. ಎಷ್ಟೇ ಕಷ್ಟವಾದರೂ ಯುದ್ಧಮಾಡಲು ಅದು ತನ್ನ ಪ್ರದೇಶವನ್ನು ಬಿಟ್ಟುಕೊಟ್ಟದ್ದರಿಂದ ವಿಶೇಷ ಗೌರವವನ್ನು ಹೊಂದಿತು. ಯಾವ ರಾಷ್ಟ್ರಗಳು ಪರ್ಷಿಯನರಿಗೆ ಅಧೀನತೆ ತೋರಿಸಿದವೋ ಅವುಗಳನ್ನು ದೇಶದ್ರೋಹಿಗಳೆಂದು ಶಿಕ್ಷಿಸಲು ನಿಶ್ಚಯಿಸಿದರು. ಥೀಬ್ಸ್ ರಾಷ್ಟ್ರವು ಭೋಷಿಯನ ಒಕ್ಕೂಟದ ನಾಯಕತ್ವವನ್ನು ಕಳೆದುಕೊಂಡಿತು. ಈ ಕದನವಾಗುತ್ತಿದ್ದಾಗಲೆ ಸ್ಪಾರ್ಟನರ ನೌಕೆಯು ಹೆಲೆಸ್ಪಾಂಟ್ ಪ್ರದೇಶದ ಮೈಕೇಲ್ ಭೂಶಿರದ ಹತ್ತಿರ ಪರ್ಷಿಯನರ ನೌಕೆಯನ್ನು ಸಂಪೂರ್ಣವಾಗಿ ಸೋಲಿಸಿ ಚದುರಿಸಿತು. ಪ್ಲಟಿಯ ಮತ್ತು ಮೈಕೇಲ್ ಕದನಗಳು ಏಕಕಾಲದಲ್ಲೇ ನಡೆದು ಗ್ರೀಕರಿಗೆ ಅದ್ಭುತ ವಿಜಯವನ್ನು ಗಳಿಸಿದವು. ಅಸಾಧ್ಯವಾದದ್ದು ಸಂಭವಿಸಿತು. ಇನ್ನು ಮುಂದೆ ಪ್ರಾಚ್ಯದೇಶದಿಂದ ಯಾವ ದಂಡಯಾತ್ರೆಯೂ ನಡೆಯುವುದಿಲ್ಲವೆಂದು ನಿಶ್ಚಿತವಾಯಿತು. ಏನಿದ್ದರೂ ಪಾಶ್ಚಾತ್ಯ ದೇಶವು ಪ್ರಾಚ್ಯದೇಶವನ್ನು ಬೆದರಿಸಬೇಕಾಯಿತು. ಏಷ್ಯಾ ದೇಶವು ಯುದ್ಧದ ರಂಗಭೂಮಿಯಾಯಿತು. ಗ್ರೀಸ್‍ದೇಶವು ಹೆರೊಡೋಟಸನು ಹೇಳುವ ಹಾಗೆ ಅನಾಗರಿಕರಿಂದ ವಿಮೋಚನೆಯಾಯಿತು.

ಸಾಲಮಿಸ್ ಕದನ (ಕ್ರಿ.ಪೂ. ೪೮೦)




ಪ್ಲಾಟಿಯ ಕದನ
ಗ್ರೀಕರ ಸೇನೆ
ಪರ್ಷಿಯನ್ ಸೇನೆ

ಅಧ್ಯಾಯ ೧೪

ಡೇಲಾಸ್ ಸಂಯುಕ್ತ ಸಂಘ

ಪರ್ಷಿಯನರ ದಂಡಯಾತ್ರೆಯು ವಿಫಲವಾದ ಮೇಲೆ ಏಷ್ಯದ ಗ್ರೀಕರನ್ನು ರಕ್ಷಿಸುವುದು ದೊಡ್ಡ ಸಮಸ್ಯೆಯಾಯಿತು. ಏಷ್ಯದ ಗ್ರೀಕರು ಹೊಸದಾಗಿ ಗಳಿಸಿದ ತಮ್ಮ ಸ್ವಾತಂತ್ರ್ಯವನ್ನು ತಾವೇ ರಕ್ಷಿಸಿಕೊಳ್ಳಲು ಬಲಹೀನರಾಗಿ ಮಾತೃಭೂಮಿಯ ಗ್ರೀಕರ ಪರಾಧೀನದಲ್ಲಿದ್ದರು. ಮುಖ್ಯವಾಗಿ ಸ್ಪಾರ್ಟ ಅಥವಾ ಅಥೆನ್ಸ್ ರಾಷ್ಟ್ರವು ಏಷ್ಯದ ಗ್ರೀಕರ ನಾಯಕತ್ವವನ್ನು ವಹಿಸಲು ಶ್ರೇಷ್ಠವಾದ ಅರ್ಹತೆಯನ್ನು ಹೊಂದಿದ್ದವು. ಈ ಎರಡು ರಾಷ್ಟ್ರಗಳು ಸ್ವಾತಂತ್ರ್ಯ ರಕ್ಷಣೆಗೆ ತೋರಿಸಿದ ಧೈರ್ಯ, ಸಾಹಸ, ದೇಶಾಭಿಮಾನ, ತ್ಯಾಗ ಎಂದೆಂದಿಗೂ ಮರೆಯುವ ಹಾಗಿಲ್ಲ. ಆದರೆ ಸ್ಪಾರ್ಟನರು ಯಾವಾಗಲೂ ಸಂಪ್ರದಾಯ ಪಾಲಕರಾಗಿ ಪ್ರಗತಿ ಹೊಂದಲು ಸಾಧ್ಯವಾಗಲಿಲ್ಲ. ಅವರ ಉಗ್ರವಾದ ಸೈನಿಕ ಶಿಸ್ತು, ವ್ಯಕ್ತಿತ್ವದ ನೈಷ್ಠುರ್ಯ ಸ್ವಯಂವೇದ್ಯವಾದ ಜೀವನದ ಮನೋಹರತ್ವದ ಪರಿತ್ಯಾಗ, ಹೊಲಸು ಆಚಾರದ ಕ್ರೂರತ್ವ, ತತ್ವಗಳ ಮಾನಸಿಕಭ್ರಷ್ಟಾಚರಣೆ — ಈ ಕೊರತೆಗಳು ಸ್ಪಾರ್ಟನರ ನಾಯಕತ್ವಕ್ಕೆ ಅಡಚಣೆಯಾಗಿದ್ದವು. ಅದೂ ಅಲ್ಲದೆ ಏಷ್ಯದ ಗ್ರೀಕರು ನಾಯಕತ್ವವನ್ನು ವಹಿಸಬೇಕಾದರೆ ಪ್ರಬಲವಾದ ನೌಕಾಶಕ್ತಿಯಿಂದಲೇ ಸಾಧ್ಯ. ಸ್ಪಾರ್ಟ ರಾಷ್ಟ್ರವು ಇಂಥ ನೌಕಾಶಕ್ತಿಯನ್ನು ಹೊಂದಿರಲಿಲ್ಲ. ಪರ್ಷಿಯನರ ದಂಡಯಾತ್ರೆಯಿಂದ ಸ್ಪಾರ್ಟ ರಾಷ್ಟ್ರವು ಏನೇನೂ ಬದಲಾವಣೆ ಹೊಂದಲಿಲ್ಲ. ಆದರೆ ಅಥೆನ್ಸ್ ರಾಷ್ಟ್ರವು ಅದ್ಭುತವಾದ ಜಯವನ್ನು ಗಳಿಸಿ ಏಷ್ಯದ ಗ್ರೀಕರ ರಕ್ಷಣೆಯ ಜವಾಬ್ದಾರಿಯನ್ನು ಹೊರಲು ಮನಸ್ಸು ಮಾಡಿತು. ಅಥಿನಿಯನರ ಉದಾರತ್ವ, ಚುರುಕುತನ, ದೇಶಾಭಿಮಾನ, ಪರಿಸ್ಥಿತಿಗೆ ಸರಿಯಾಗಿ ಹೊಂದಿಕೊಳ್ಳುವಿಕೆ, ಪ್ರಜಾಪ್ರಭುತ್ವದ ಚೈತನ್ಯ, ನಿಸ್ವಾರ್ಥತೆ—ಈ ಶ್ರೇಷ್ಠಗುಣಗಳು ಅವರ ನಾಯಕತ್ವಕ್ಕೆ ತಳಹದಿಯಾದವು. ಅವರ ನೌಕಾ ಶಕ್ತಿಯೂ ಬಹಳಮಟ್ಟಿಗೆ ಸಹಾಯ

ವಾಯಿತು. ಅಥೆನ್ಸ್ ರಾಷ್ಟ್ರವು ಏಷ್ಯದ ಗ್ರೀಕರನ್ನು ಒಟ್ಟುಗೂಡಿಸಿ ಅವರ ರಕ್ಷಣೆಗೋಸ್ಕರ ಡೇಲಾಸ್ ಸಂಯುಕ್ತಸಂಘವೆಂಬ ಒಕ್ಕೂಟವನ್ನು ಸ್ಥಾಪಿಸಿತು.

ಸಂಘದ ವ್ಯವಸ್ಥೆ—ಸ್ಪಾರ್ಟ ತೋರಿಸಿದ ಉದಾಸೀನ ಮನೋಭಾವವು ಅಥೆನ್ಸ್ ನಾಯಕತ್ವಕ್ಕೆ ಅನುಕೂಲವಾಯಿತು. ಕ್ರಿ. ಪೂ. ೪೭೭ ರಲ್ಲಿ ಅಥೆನ್ಸ್ ರಾಷ್ಟ್ರದ ನೇತೃತ್ವದಲ್ಲಿ ಡೇಲಾಸ್ ಸಂಯುಕ್ತ ಸಂಘವು ಉದ್ಭವಿಸಿತು. ಈ ಸಂಘದ ಸದಸ್ಯತ್ವವು ಬಲಾತ್ಕಾರವಿಲ್ಲದೆ ಸ್ವಂತ ಇಚ್ಛೆಯುಳ್ಳದ್ದಾಗಿತ್ತು. ಕಡಲು ಸಂಬಂಧವಾದ ಒಕ್ಕೂಟದ ಮುಖ್ಯ ಉದ್ದೇಶಗಳು ಎರಡು—ಗ್ರೀಕರನ್ನು ರಕ್ಷಿಸುವುದು ಮತ್ತು ಪರ್ಷಿಯನರ ಮೇಲೆ ಆಕ್ರಮಣಮಾಡುವುದು. ಈ ಒಕ್ಕೂಟದ ಖಜಾನೆಯು ಡೇಲಾಸ್ ದ್ವೀಪದಲ್ಲಿದ್ದುದರಿಂದ ಇದನ್ನು ಡೇಲಾಸ್ ಸಂಯುಕ್ತ ಸಂಘವೆಂದು ಕರೆದರು. ಈ ಸಂಘದ ವ್ಯವಸ್ಥೆಯು ಕ್ರಮಬದ್ಧವಾದ ದಾಖಲೆಯನ್ನು ಅವಲಂಬಿಸಿರಲಿಲ್ಲ; ಅಥೆನ್ಸ್ ರಾಷ್ಟ್ರಕ್ಕೂ ಇತರ ರಾಷ್ಟ್ರಗಳಿಗೂ ಒಪ್ಪಂದ ರೀತಿಯಲ್ಲಿತ್ತು. ಅಥೆನ್ಸ್ ರಾಷ್ಟ್ರವು ಒಕ್ಕೂಟಕ್ಕೆ ಸೇರಿದ ಸದಸ್ಯ ರಾಷ್ಟ್ರಗಳನ್ನು ಒಕ್ಕೂಟದ ವ್ಯವಸ್ಥೆಗೆ ಮನ್ನಣೆಮಾಡುವುದಾಗಿ ಪ್ರತಿಜ್ಞೆ ವಿನಿಮಯಮಾಡಬೇಕಾಗಿತ್ತು. ಪ್ರತಿಯೊಂದು ಸದಸ್ಯ ರಾಷ್ಟ್ರವು ಸಾಮೂಹಿಕ ನೌಕಾಬಲಕ್ಕೆ ಹಡಗುಗಳನ್ನು ಕಳುಹಿಸುವುದಾಗಿಯೂ, ಪ್ರತಿಯೊಂದು ವರ್ಷವೂ ನಿಗದಿಯಾದ ಪೊಗದಿಯನ್ನು ಕೊಡುವುದಾಗಿಯೂ ಒಪ್ಪಿಕೊಂಡಿತು. ಸದಸ್ಯರು ಕೊಡಬೇಕಾದ ಪೊಗದಿಯನ್ನು ನಿರ್ಣಯಿಸಲು ಅರಿಸ್ಟೈಡಿಸ್ ಎಂಬ ಪ್ರಾಮಾಣಿಕ ಅಥಿನಿಯನ್ನಿನ ನಾಯಕನನ್ನು ನೇಮಿಸಿದರು. ಈತನು ಪ್ರತಿಯೊಂದು ಸದಸ್ಯ ರಾಷ್ಟ್ರದ ಸಾಧನ ಸಂಪತ್ತಿನ ಆಧಾರದ ಮೇಲೆ ನ್ಯಾಯವಾದ ಪೊಗದಿಯನ್ನು ಗೊತ್ತುಮಾಡಿದನು. ಏಜಿಯನ್ ಪ್ರದೇಶದಲ್ಲಿ ಅನೇಕ ಗ್ರೀಕ್ ರಾಷ್ಟ್ರಗಳು ಈ ಒಕ್ಕೂಟವನ್ನು ಸೇರಿದವು. ಅಯೋನಿಯನ್ ಮತ್ತು ಅಯೋಲಿಯನ್ ನಗರಗಳೂ, ಲೆಸ್‌ಬಾಸ್‌ನಿಂದ ರೋಡ್ಸ್‌ವರೆವಿಗೆ ಇರುವ ರಾಷ್ಟ್ರಗಳೂ, ಉತ್ತರಕ್ಕೆ ಪ್ರಪಾಂಟಿಸ್, ಥ್ರೇಸ್, ಸೈಕ್ಲೇಡ್ಸ್ ದ್ವೀಪಸ್ತೋಮ, ಕ್ಯಾರಿಸ್ಟಸ್ ಬಿಟ್ಟು ಇಬಿಯಾ ದ್ವೀಪದ ರಾಷ್ಟ್ರಗಳೂ ಸದಸ್ಯರಾದವು. ಮುಖ್ಯವಾಗಿ ನೌಕಾ

ರಾಷ್ಟ್ರಗಳ ಒಕ್ಕೂಟವಾಯಿತು.

ಅಥೆನ್ಸಿನ ಸ್ಥಾನ :—ಡೇಲಾಸ್ ಸಂಯುಕ್ತ ಸಂಘದಲ್ಲಿ ಅಥೆನ್ಸ್ ರಾಷ್ಟ್ರವು ಮಿಕ್ಕ ಸದಸ್ಯರ ಹಾಗೆ ಸಾಧಾರಣ ಸದಸ್ಯತ್ವವನ್ನು ಹೊಂದಿತ್ತು. ಸಂಘದ ಆಲೋಚನಾ ಸಭೆಯು ಡೇಲಾಸ್ ದ್ವೀಪದಲ್ಲಿ ನಡೆಯುತ್ತಿತ್ತು. ಪ್ರತಿಯೊಂದು ಸದಸ್ಯರಾಷ್ಟ್ರವು ಸಮಾನತೆಯನ್ನು ಹೊಂದಿ ಒಂದೇ ಮತ ವನ್ನು ಕೊಡಬೇಕಾಗಿತ್ತು. ಅಥೆನ್ಸ್‌ರಾಷ್ಟ್ರವು ಶ್ರೇಷ್ಠತೆಯ ಸ್ಥಾನವನ್ನು ಹೊಂದಲು ಅವಕಾಶವಿರಲಿಲ್ಲ. ಆದರೂ ಅಥೆನ್ಸ್ ರಾಷ್ಟ್ರವು ಈ ಸಂಘದ ಕಾರ್ಯನಿರ್ವಾಹಕ ಸಭೆಯಾದ್ದರಿಂದ ಎಲ್ಲಾ ಆಡಳಿತವನ್ನೂ ವಹಿಸ ಬೇಕಾಯಿತು. ಅನೇಕ ಸದಸ್ಯರು ಹಡಗುಗಳನ್ನು ಕಳುಹಿಸಲು ಕಷ್ಟವಾಗಿ ಅದರ ಬದಲು ಹೆಚ್ಚು ಪೊಗದಿಯನ್ನು ಕೊಡಲು ಒಪ್ಪಿದರು. ಇದರಿಂದ ಸಂಘದ ಬೊಕ್ಕಸದ ಹೊಣೆಗಾರಿಕೆಯು ಅಥೆನ್ಸ್ ರಾಷ್ಟ್ರಕ್ಕೆ ಸೇರಿತು. ಪೊಗದಿಯನ್ನು ಹತ್ತು ಜನ ಕೋಶಾಧ್ಯಕ್ಷರಿರುವ "ಹೆಲೆನೋಟೇಮಿಯಾ" ಎಂಬ ಮಂಡಲಿಯು ವಸೂಲು ಮಾಡಬೇಕಾಗಿತ್ತು. ಆದರೆ ಈ ಕೋಶಾ ಧ್ಯಕ್ಷರೆಲ್ಲ ಅಥೆನ್ಸ್‌ರಾಷ್ಟ್ರದವರೇ. ಕ್ರಮೇಣ ಈ ಸಂಘವು ಅಥಿನಿಯನರ ಸಾಮ್ರಾಜ್ಯವಾಗಲು ಅನುಕೂಲವಾಯಿತು. ಡೇಲಾಸ್ ಸಂಯುಕ್ತ ಸಂಘವನ್ನು ಥೆಮಿಸ್ಟಾಕ್ಲೀಸನ "ಆಧ್ಯಾತ್ಮಿಕ ಶಿಶು" ವೆಂದು ಹೇಳಬಹುದು. ಆತನ ನೀತಿ, ಕಾರ್ಯಕುಶಲತೆಯಿಂದ ಅಥೆನ್ಸ್‌ರಾಷ್ಟ್ರವು ನೌಕಾಶಕ್ತಿಯನ್ನು ಹೊಂದಿ ಈ ಒಕ್ಕೂಟವನ್ನು ಕಟ್ಟಲು ಸಾಧ್ಯವಾಯಿತು. ನೌಕಾಶಕ್ತಿ ಯಿಲ್ಲದೆ ಏಷ್ಯದ ಗ್ರೀಕರನ್ನು ರಕ್ಷಿಸಲು ಸಾಧ್ಯವಾಗುತ್ತಿರಲಿಲ್ಲ.

ಸಂಘದ ಕಾರ್ಯಸಾಧನೆ :—ಒಕ್ಕೂಟದ ಮುಖ್ಯ ಉದ್ದೇಶವು ಏಷ್ಯದ ಗ್ರೀಕರ ರಕ್ಷಣೆ. ಪರ್ಷಿಯನರು ಗ್ರೀಸ್‌ದೇಶದ ದಂಡಯಾತ್ರೆ ಯಾದ ಮೇಲೆ ಪಶ್ಚಿಮ ಏಷ್ಯದಲ್ಲಿ ಗ್ರೀಕ್‌ರಾಷ್ಟ್ರಗಳಿಗೆ ಅನೇಕ ವಿಧವಾದ ಕಿರುಕುಳಗಳನ್ನು ಕೊಡುತ್ತಿದ್ದರು. ಅವರ ಸೊಲ್ಲನ್ನು ಅಡಗಿಸಿ ಅವರನ್ನು ಪಶ್ಚಿಮ ಏಷ್ಯದಿಂದ ಹೊಡೆದೋಡಿಸಬೇಕಾದದ್ದು ಮುಖ್ಯ ಕರ್ತವ್ಯ ವಾಯಿತು. ಮಿಲ್ಟೈಡಿಯಸನ ಮಗನಾದ ಕೈಮನ್ ಎಂಬ ಶೂರನನ್ನು ಒಕ್ಕೂಟದ ಸೈನ್ಯಾಧಿಪತಿಯಾಗಿ ನೇಮಿಸಿದರು. ಕೈಮನನು ಮೊದಲು ಸ್ಪಾರ್ಟನಾಯಕನಾದ ಪಾಸೇನಿಯಸನನ್ನು ಹೆಲೆಸ್ಪಾಂಟ್ ಪ್ರದೇಶದಿಂದ

ಓಡಿಸಿದನು. ಈ ಪಾಸೇನಿಯುಸನು ಪರ್ಷಿಯನರ ಸಂಪರ್ಕವನ್ನು ಹೊಂದಿ ಏಷ್ಯದ ಗ್ರೀಕ್‌ರಾಷ್ಟ್ರಗಳ ಮೇಲೆ ಒಳಸಂಚು ಮಾಡುತ್ತಿದ್ದನು. ಪರ್ಷಿಯನರ ಸೈನ್ಯವನ್ನು ಉತ್ತರದಲ್ಲಿ ಸ್ಟ್ರೈಮನ್ ನದಿಯ ತೀರದಲ್ಲಿ ಇಯಾನ್ ಎಂಬ ಸ್ಥಳದಲ್ಲಿ ಸೋಲಿಸಿದನು. ಪರ್ಷಿಯನರಿಗೆ ಸೇರಿದ್ದ ಸ್ಕೈರಸ್ ಮತ್ತು ಕೇರಿಯ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡನು. ಕೊನೆಗೆ ಪಾಂಪಿಲಿಯಾ ಪ್ರದೇಶದ ಇರಿಮಿಡನ್ ಎಂಬ ನದಿತೀರದಲ್ಲಿ ಕ್ರಿ.ಪೂ. ೪೬೬ರಲ್ಲಿ ಪರ್ಷಿಯನರನ್ನು ಸಂಪೂರ್ಣವಾಗಿ ಸೋಲಿಸಿದನು. ಪರ್ಷಿಯನರ ನೌಕೆಯು ನಾಶವಾಯಿತು. ಏಜಿಯನ್ ಪ್ರದೇಶದಲ್ಲಿ ಪರ್ಷಿಯನರ ಚಲನೆಯೇ ಇಲ್ಲದೆ ಏಷ್ಯದ ಗ್ರೀಕರು ಯಾವ ಆತಂಕವನ್ನೂ ಹೊಂದದೆ ಸುರಕ್ಷಿತರಾದರು. ಕೈಮನನ ಸಾಹಸದಿಂದ ಅಥೆನ್ಸ್ ರಾಷ್ಟ್ರವು ತನ್ನ ದೊಡ್ಡ ಹೊಣೆಗಾರಿಕೆಯನ್ನು ಸಮರ್ಥನೆಯಿಂದ ನಿರ್ವಹಿಸಲು ಸಾಧ್ಯವಾಯಿತು. ಒಕ್ಕೂಟದ ಸದಸ್ಯರು ಅಥೆನ್ಸಿನ ನಾಯಕತ್ವದಲ್ಲಿ ಸಂಪೂರ್ಣ ನಂಬಿಕೆಯಿಟ್ಟು ಕ್ರಮೇಣ ಅಥೆನ್ಸ್ ರಾಷ್ಟ್ರವು ಅಭಿವೃದ್ಧಿಯಾಗಲು ಅವಕಾಶವಾಯಿತು.

ಒಕ್ಕೂಟದ ಪರಿವರ್ತನೆ— ಡೇಲಾಸ್ ಸಂಯುಕ್ತ ಸಂಘವು ಕ್ರಮೇಣ ಅಥೆನ್ಸ್ ಸಾಮ್ರಾಜ್ಯವಾಗಿ ಬದಲಾವಣೆಯಾಯಿತು. ಈ ಪರಿವರ್ತನೆಗೆ ಅನೇಕ ಸಂದರ್ಭಗಳಿದ್ದವು. ಸದಸ್ಯರಲ್ಲಿ ಮೂರು ವರ್ಗಗಳಾದವು. ಮೊದಲನೆಯ ವರ್ಗದಲ್ಲಿ ಸ್ವತಂತ್ರ ಸದಸ್ಯರು ಕೇವಲ ಹಡಗುಗಳನ್ನೇ ಕಳುಹಿಸಿ, ಪೊಗದಿಯನ್ನು ಕೊಡದೇ ಇರುವವರು. ಎರಡನೆಯ ವರ್ಗದಲ್ಲಿ ಸ್ವತಂತ್ರ ಸದಸ್ಯರು ಪೊಗದಿಯನ್ನೂ ಹಡಗುಗಳನ್ನೂ ಕೊಡುವವರು. ಮೂರನೆಯ ವರ್ಗದಲ್ಲಿ ಪರಾಧೀನ ಸದಸ್ಯರು ಪೊಗದಿಯನ್ನೂ ಹಡಗುಗಳನ್ನೂ ಕೊಟ್ಟು ಅಥೆನ್ಸ್ ರಾಷ್ಟ್ರದ ಹತೋಟಿಯಲ್ಲಿರುವವರು. ಅಥೆನ್ಸ್ ರಾಷ್ಟ್ರವು ಮೊದಲನೆಯ ವರ್ಗದಲ್ಲಿ ಸ್ವಲ್ಪವೇ ಸದಸ್ಯರನ್ನು ಸೇರಿಸಿ ಮೂರನೆಯ ವರ್ಗದಲ್ಲಿ ಎಷ್ಟು ಹೆಚ್ಚಾಗಿ ಸದಸ್ಯರನ್ನು ಹೊಂದಲು ಅನುಕೂಲವೋ ಅಷ್ಟುಮಟ್ಟಿಗೆ ಸೇರಿಸಲು ಪ್ರಯತ್ನಿಸಿತು. ಏನಾದರೂ ನೆಪದಿಂದ ಮೊದಲನೆಯ ವರ್ಗದ ಸದಸ್ಯರನ್ನು ಎರಡನೆಯ ವರ್ಗಕ್ಕೂ ಎರಡನೆಯ ವರ್ಗದವರನ್ನು ಮೂರನೆಯ ವರ್ಗಕ್ಕೂ ಬದಲಾಯಿಸಿತು. ಮೂರನೆಯ ವರ್ಗದ ಸದಸ್ಯರು ಅಥೆನ್ಸ್ ರಾಷ್ಟ್ರಕ್ಕೆ ಅಧೀನರಾಗಿದ್ದರಿಂದ ತಮ್ಮ ಸ್ವಾತಂ

ತ್ರ್ಯವನ್ನು ಕಳೆದುಕೊಂಡರು. ಮೊದಲನೆಯ ವರ್ಗದಲ್ಲಿ ಬರಬರುತ್ತ ಕೇವಲ ಮೂವರೇ ಸದಸ್ಯರಿದ್ದರು (ಲೆಸ್‌ಬಾಸ್, ಖಿಯೊಸ್, ಸೇಮೊಸ್). ಅಥೆನ್ಸ್ ರಾಷ್ಟ್ರವು ಸಂಘದ ಬೊಕ್ಕಸವನ್ನು ಸದಸ್ಯರ ಅನುಮತಿಯಿಲ್ಲದೆ ತನ್ನ ಸ್ವಾರ್ಥ ಪ್ರಯೋಜನಕ್ಕೆ ಉಪಯೋಗಿಸಿತು. ಅಂದರೆ ಅಥೆನ್ಸ್ ನಗರವನ್ನು ಸುಂದರವಾಗಿ ಮಾಡುವುದು, ದೇವಸ್ಥಾನಗಳನ್ನೂ ಉದ್ಯಾನ ವನಗಳನ್ನೂ ನಿರ್ಮಿಸುವುದು, ಪೈರಸ್ ಬಂದರನ್ನು ಅಭಿವೃದ್ಧಿಪಡಿಸುವುದು, ವ್ಯಾಪಾರವನ್ನು ವಿಸ್ತರಿಸುವುದು–ಇವೇ ಮುಖ್ಯವಾದವು. ಕೆಲವು ರಾಷ್ಟ್ರಗಳು ಪ್ರತಿಭಟನೆ ಸೂಚಿಸಿ ಸಂಘವನ್ನು ಬಿಟ್ಟುಬಿಡಬೇಕೆಂದು ಪ್ರಯತ್ನಪಟ್ಟವು (ನಾಕ್ಸಸ್. ಥೇಸಸ್, ಕ್ಯಾರಿಸ್ಟಸ್, ಸ್ಕೈರಸ್). ಆದರೆ ಅಥೆನ್ಸ್ ರಾಷ್ಟ್ರವು ಒಪ್ಪದೆ ಅವರನ್ನು ಮೂರನೆಯ ವರ್ಗದ ಸದಸ್ಯರನ್ನಾಗಿ ಮಾಡಿತು. ಸಣ್ಣ ರಾಷ್ಟ್ರಗಳು ತಮ್ಮ ಸದಸ್ಯರನ್ನು ಡೇಲಾಸ್ ದ್ವೀಪಕ್ಕೆ ಕಳುಹಿಸುವ ಬದಲು ತಮ್ಮ ಮತದ ಹಕ್ಕನ್ನು ಅಥೆನ್ಸ್ ಚಲಾಯಿಸಲು ಒಪ್ಪಿದವು. ಇದರಿಂದ ಸಂಘದ ಸಭೆಯ ಕಾರ್ಯಕಲಾಪಗಳನ್ನು ಅಥೆನ್ಸ್ ರಾಷ್ಟ್ರಕ್ಕೆ ಅನುಕೂಲವಾಗಿ ರೂಪಿಸಲು ಸಾಧ್ಯವಾಯಿತು. ಕೊನೆಗೆ ಕ್ರಿ. ಪೂ. ೪೫೪ ರಲ್ಲಿ ಈ ಸಂಘದ ಬೊಕ್ಕಸವನ್ನು ಡೇಲಾಸ್ ದ್ವೀಪದಿಂದ ಅಥೆನ್ಸ್ ನಗರಕ್ಕೆ ವರ್ಗಮಾಡಲಾಯಿತು. ಡೇಲಾಸ್ ಸಂಯುಕ್ತ ಸಂಘವು ಅಥೆನ್ಸ್ ಸಾಮ್ರಾಜ್ಯವೆಂಬುದು ಈಡೇರಿತು.

ಅಥೆನ್ಸ್ ರಾಷ್ಟ್ರದ ಪ್ರಗತಿ—ಅಥೆನ್ಸ್ ರಾಷ್ಟ್ರವು ಡೇಲಾಸ್ ಸಂಯುಕ್ತ ಸಂಘದ ನಾಯಕತ್ವದಿಂದ ತನ್ನ ಸಾಮ್ರಾಜ್ಯವನ್ನು ಕಟ್ಟಿದರೂ ಗ್ರೀಕರ ನಾಗರಿಕತೆಯನ್ನು ಅಭಿವೃದ್ಧಿಪಡಿಸಿತು. ಸಂಘದ ಬೊಕ್ಕಸವನ್ನು ಸ್ವಾರ್ಥತೆಗೆ ಉಪಯೋಗಿಸಿದರೂ ಕೊನೆಗೆ ಗ್ರೀಕರ ಪ್ರಗತಿಗೆ ಸಹಾಯವಾಯಿತು. ಅಥೆನ್ಸ್ ನಗರವು ಸೌಂದರ್ಯದ ಬೀಡಾಯಿತು. ನಗರದ ರಕ್ಷಣೆಗೋಸ್ಕರ ಥೆಮಿಸ್ಟಕ್ಲಿಸನ ಸಲಹೆಯಂತೆ ದೊಡ್ಡ ಗೋಡೆಯನ್ನು ಕಟ್ಟಿದರು. ಸುಂದರವಾದ ದೇವಸ್ಥಾನಗಳು ನಿರ್ಮಿತವಾದವು. ಪೈರಸ್ ಬಂದರು ಅಭಿವೃದ್ಧಿ ಹೊಂದಿತು. ನೌಕಾ ವ್ಯಾಪಾರವು ವಿಸ್ತರಿಸಿತು. ಅನೇಕ ಕೈಗಾರಿಕೆಗಳು ಸ್ಥಾಪಿತವಾದವು. ಹೊಸ ಹಡಗುಗಳನ್ನು ಕಟ್ಟಿದರು. ಥೆಮಿಸ್ಟಕ್ಲಿಸನು ರಾಷ್ಟ್ರದ ಹಿತಕ್ಕೋಸ್ಕರ ಎಷ್ಟೇ ದುಡಿದಿದ್ದರೂ ಆತನ ಆಡಂಬರ, ಅಹಂಕಾರ

ಅಥಿನಿಯನರಿಗೆ ಸರಿಬೀಳಲಿಲ್ಲ. ಕೊನೆಗೆ ಅವನು ಗುಟ್ಟಾಗಿ ಪರ್ಷಿಯನರ ಹತ್ತಿರ ಒಳಸಂಚು ಮಾಡಲು ಅವನನ್ನು ರಾಷ್ಟ್ರದಿಂದ ಬಹಿಷ್ಕಾರ ಮಾಡಿದರು. ಇದೇ ರೀತಿಯಾಗಿ ಕೈಮನನು ತನ್ನ ಸಾಮರ್ಥ್ಯದಿಂದ ಪರ್ಷಿಯನರನ್ನು ಸೋಲಿಸಿ ಏಷ್ಯದ ಗ್ರೀಕರನ್ನು ರಕ್ಷಿಸಿದ್ದರೂ ಸ್ಪಾರ್ಟನರ ಸ್ನೇಹತ್ವವು ಸರಿಬೀಳದೆ ಆತನನ್ನೂ ಬಹಿಷ್ಕಾರ ಮಾಡಿದರು. ಇದರಿಂದ ನಾಯಕರಿಗಿಂತ ರಾಷ್ಟ್ರದ ಹಿತವು ಮುಖ್ಯವೆಂಬುದನ್ನು ವಿಶದಪಡಿಸಿದರು. ಪ್ರಜಾಪ್ರಭುತ್ವವು ಪೆರಿಕ್ಲಿಸ್ ಎಂಬ ಸಮರ್ಥನಾದ ನಾಯಕನಿಗೆ ರಾಷ್ಟ್ರದ ಆಡಳಿತದ ಹೊಣೆಗಾರಿಗೆಯನ್ನು ವಹಿಸಿತು.

ಅಧ್ಯಾಯ ೧೫

ಪೆರಿಕ್ಲಿಸನ ಯುಗ

ಗ್ರೀಕರ ಇತಿಹಾಸದಲ್ಲಿ ಪೆರಿಕ್ಲಿಸನ ಯುಗವು (ಕ್ರಿ. ಪೂ. ೪೬೭–೨೯) ಮಹಾಯಶಸ್ವಿಯಾದ ಕಾಲ. ಜೀವನದ ಯಾವದೃಷ್ಟಿಯಿಂದ ನೋಡಿದರೂ ಈ ಕಾಲದಲ್ಲಿ ಅಥೆನ್ಸ್ ರಾಷ್ಟ್ರವು ಪ್ರಗತಿಯ ಅತ್ಯುನ್ನತ ಸ್ಥಿತಿಯನ್ನು ಹೊಂದಿತು. ಕಲೆ, ಸಾಹಿತ್ಯ, ವಿಜ್ಞಾನ, ಉತ್ತಮ ರಸಿಕತೆ, ವಿನಯಶೀಲತೆ–ಇವು ಪರಿಪೂರ್ಣತೆಯಿಂದ ಪ್ರಕಾಶಿತವಾದವು. ನಾಟಕ, ಶಿಲ್ಪವಿದ್ಯೆ, ಚಿತ್ರಕಲೆ, ಇತಿಹಾಸ, ತತ್ತ್ವ ಶಾಸ್ತ್ರ—ಇವುಗಳೆಲ್ಲಾ ಬಹುಮಟ್ಟಿಗೆ ಮುನ್ನಡೆಯಿಂದ ಶೋಭಿಸಿದವು. ಅಥೆನ್ಸ್ ರಾಷ್ಟ್ರವು ಗ್ರೀಸ್‌ದೇಶಕ್ಕೆ ಬೌದ್ಧಿಕ ಕೇಂದ್ರವಾಯಿತು. ಇದನ್ನು ಸುವರ್ಣಯುಗವೆಂದೂ ಕರೆಯುವರು. ಕೇವಲ ರಾಜಕೀಯ ಶ್ರೇಷ್ಠತೆಯಿಂದಲೇ ಅಲ್ಲದೆ ಅಥೆನ್ಸ್‌ರಾಷ್ಟ್ರವು ಸಂಸ್ಕೃತಿಯ ಬೀಡಾಯಿತು.

ಪೆರಿಕ್ಲಿಸನ ಜೀವನ ಚರಿತ್ರೆ—ಪೆರಿಕ್ಲಿಸನು ಶ್ರೇಷ್ಠವಾದ ಶ್ರೀಮಂತ ಕುಲಕ್ಕೆ ಸೇರಿದವನು. ಆತನ ತಂದೆಯು ಮೈಕೇಲ್ ಯುದ್ಧದಲ್ಲಿ ಸೈನ್ಯಾಧಿಪತಿಯಾದ ಕ್ಸಾಂಥಿಪಸ್ (Xanthippus). ತಾಯಿಯು ಕ್ಲಿಸ್ಥನಿಸನ ಸೋದರ ಸೊಸೆಯಾದ ಅಗರಿಸ್ಟೆ ಎಂಬುವಳು. ತನ್ನ ತಂದೆಯಹಾಗೆ ಪೆರಿಕ್ಲಿಸನೂ ಸೈನಿಕನಾಗಿ ತರಬೇತು ಹೊಂದಿದನು. ತನ್ನ ತಾಯಿಯ

ಪ್ರಜಾಪ್ರಭುತ್ವದ ಹುಟ್ಟುಗುಣವನ್ನು ಪಡೆದು ಪೆರಿಕ್ಲಿಸನು ಮೊದಲಿನಿಂದಲೂ ಸಾಮಾನ್ಯ ಜನರ ಯೋಗಕ್ಷೇಮಕ್ಕೆ ದುಡಿಯುತ್ತಿದ್ದನು. ಸುಮಾರು ನಲವತ್ತು ವರ್ಷಗಳವರೆವಿಗೂ ಅಥೆನ್ಸ್ ರಾಷ್ಟ್ರದ ಸಾರ್ವಜನಿಕ ಜೀವನದಲ್ಲಿ ಭಾಗವಹಿಸಿ ಕೀರ್ತಿಹೊಂದಿದನು. ಆತನ ಪ್ರಾಮಾಣಿಕತೆ, ಔದಾರ್ಯ, ಅದ್ಭುತಶಕ್ತಿ, ಉತ್ಸಾಹ, ದೂರದೃಷ್ಟಿ, ಶಾಂತಸ್ವಭಾವ, ತತ್ತ್ವನಿಷ್ಠೆ, ಸಂಗೀತಸಾಹಿತ್ಯ ಶಿಕ್ಷಣ, ವಿಸ್ಮಯಕರವಾದ ವಾಗ್ವೈಖರಿ, ಅಪೂರ್ವವಾದ ರಾಜಕೀಯ ಸಾಮರ್ಥ್ಯ—ಈ ಗುಣಗಳು ಆತನ ನಾಯಕತ್ವದ ತಳಹದಿಯಾಗಿದ್ದವು. ಕಲೆ, ಸಾಹಿತ್ಯ, ತತ್ತ್ವಶಾಸ್ತ್ರದಲ್ಲಿ ಶ್ರೇಷ್ಠವಾದ ಶಿಕ್ಷಣವನ್ನು ಹೊಂದಿದ್ದನು. ಆತನು ಸಂಕೋಚ ಸ್ವಭಾವದವನು, ಮಿತಭಾಷಿ. ಆತನ ಗಂಭೀರತೆಯೂ, ಸರಳತೆಯೂ ಅಥೀನಿಯನರನ್ನು ವಿಸ್ಮಯಗೊಳಿಸಿದವು. ಆತನು ಯಾವಾಗಲೂ ವಿದ್ವಾಂಸರ ಜೊತೆಯಲ್ಲಿರುತ್ತಿದ್ದನು. ಪ್ರಖ್ಯಾತ ಸಂಗೀತಗಾರನಾದ ಡೆಮನ್ ಎಂಬುವನೂ, ಪ್ರಖ್ಯಾತ ತತ್ತ್ವಜ್ಞಾನಿಯಾದ ಅನೆಕ್ಸೋಗರಾಸ್ ಎಂಬುವನೂ, ಅಸ್ಪೆಸಿಯಾ ಎಂಬ ನಿಪುಣತೆಯುಳ್ಳ ಸುಸಂಸ್ಕೃತ ಮಹಿಳೆಯೂ ಅವನ ಅಚ್ಚುಮೆಚ್ಚು ಸ್ನೇಹಿತರು. ಇಂಥಾ ನಾಯಕನನ್ನು ಪಡೆದ ಅಥೀನಿಯನರು ಅದೃಷ್ಟವಂತರೆಂದರೆ ಅತಿಶಯೋಕ್ತಿಯಾಗಲಾರದು.

ಪೆರಿಕ್ಲಿಸನ ರಾಜಕೀಯ ಸುಧಾರಣೆಗಳು—ಪೆರಿಕ್ಲಿಸನ ರಾಜಕೀಯ ಸುಧಾರಣೆ ಪೂರ್ಣವಾದ ಪ್ರಜಾಪ್ರಭುತ್ವವನ್ನು ಸ್ಥಾಪಿಸಿತು. ಸೋಲನನ ಸುಧಾರಣೆಗಳು ಅಥೀನಿಯನರ ಪ್ರಜಾಪ್ರಭುತ್ವದ ಅಸ್ತಿವಾರವನ್ನು ಹಾಕಿತು. ಕ್ಲಿಯಸ್ತನಸನು ಈ ಅಸ್ತಿವಾರದ ಮೇಲೆ ಪ್ರಜಾಪ್ರಭುತ್ವವನ್ನು ನಿರ್ಮಿಸಿ ತನ್ನ ಸುಧಾರಣೆಗಳಿಂದ ಎಲ್ಲರೂ ರಾಷ್ಟ್ರಹಿತಕ್ಕೆ ದುಡಿಯುವ ಹಾಗೆ ಮಾಡಿದನು. ಪೆರಿಕ್ಲಿಸನು ಪ್ರಜಾಪ್ರಭುತ್ವದ ಭವ್ಯ ಕಟ್ಟಡಕ್ಕೆ ಮೆರಗು ಹಾಕಿದನು. ಆತನ ಸುಧಾರಣೆಗಳಿಂದ ಎಲ್ಲರಿಗೂ ರಾಜಕೀಯ ಸಮಾನತೆ, ಎಲ್ಲರೂ ರಾಷ್ಟ್ರಸೇವೆ ಮಾಡಲು ಸಮಾನ ಸದಾವಕಾಶ ಲಭಿಸಿದವು. ರಾಜಕೀಯದಲ್ಲಿ ಮೇಲು, ಕೀಳು ಎಂಬ ಭಾವನೆಯಿಲ್ಲದೆ, ಶ್ರೀಮಂತ, ಬಡವ ಎಂಬ ತಾರತಮ್ಯಗಳಿಲ್ಲದೆ ಸಾಮಾನ್ಯ ಜನರೂ ಒಂದೇ ರೀತಿಯಾಗಿ ಹಕ್ಕುಗಳನ್ನು ಅನುಭವಿಸಲು ಅನುಕೂಲವಾಗಬೇಕೆಂಬುದೇ

ಅವನ ಮುಖ್ಯೋದ್ದೇಶವಾಗಿತ್ತು.

a. ಏರಿಯೋ ಪಾಗಸ್ ಎಂಬ ಆಲೋಚನಾಸಭೆಯ ದೋಷವಿಮರ್ಶಕ ಅಧಿಕಾರವನ್ನು ರದ್ದುಗೊಳಿಸಿದನು. ಸೋಲನನು ಈ ಸಭೆಯ ವಿಮರ್ಶಿಸುವ ಅಧಿಕಾರವನ್ನು ತೆಗೆದುಹಾಕಿದ್ದನು. ಪೆರಿಕ್ಲಿಸನ ಸುಧಾರಣೆಯಿಂದ ಈ ಸಭೆಯು ಕೇವಲ ಗೌರವಾನ್ವಿತ ಸಭೆಯಾಯಿತು. ಇದರಿಂದ ಸಾಮಾನ್ಯಜನರ ಪ್ರಭುತ್ವದ ತತ್ತ್ವವನ್ನು ಖಂಡಿತ ಮಾಡಲಾಯಿತು.

b. ಪ್ರಜಾಪ್ರಭುತ್ವದ ಮುಖ್ಯ ಸಲಕರಣೆಗಳು ಎರಡು—ಅದೃಷ್ಟದ ಆಯ್ಕೆ, ಸಂಬಳ. ಪೆರಿಕ್ಲಿಸನು ಈ ಎರಡು ಸಲಕರಣೆಗಳಿಂದ ಪ್ರಜಾಪ್ರಭುತ್ವವನ್ನು ಭದ್ರಪಡಿಸಿದನು. ಅಥೆನ್ಸ್ ರಾಷ್ಟ್ರದಲ್ಲಿ ಯಾವ ಅಧಿಕಾರಿಗಳಿಗೂ ಸಂಬಳವಿರಲಿಲ್ಲ. ಎಲ್ಲರೂ ಕೇವಲ ಸೇವೆಯ ಮನೋಭಾವನೆಯಿಂದ ದುಡಿಯಬೇಕಾಗಿತ್ತು. ಶ್ರೀಮಂತರು ಈ ರೀತಿಯಾಗಿ ಮಾಡಬಹುದೇ ವಿನಾ ಬಡವರಿಗೆ ಸಾಧ್ಯವಾಗಲಿಲ್ಲ. ಅವರು ರಾಷ್ಟ್ರಸೇವೆ ಮಾಡಬೇಕೆಂದು ಆಸೆಪಟ್ಟರೂ ಸಾಧ್ಯವಾಗಲಿಲ್ಲ. ಇದರಿಂದ ಅನೇಕ ಜನರು ತಮ್ಮ ಜೀವನಕ್ಕೋಸ್ಕರ ಬೇರೆ ಕಸಬನ್ನು ಹಿಡಿಯಬೇಕಾಯಿತು. ಪೆರಿಕ್ಲಿಸನು ಬಡವರೂ ಸಹ ರಾಷ್ಟ್ರಸೇವೆಮಾಡಲು ಅನುಕೂಲವಾಗುವ ಹಾಗೆ ಎಲ್ಲಾ ಅಧಿಕಾರಿಗಳಿಗೂ ಸಂಬಳವನ್ನು ಕೊಡಲು ವಾಡಿಕೆಗೆ ತಂದನು. ಮುಖ್ಯ ಅಧಿಕಾರಿಗಳಾದ ಆರ್ಖನರಿಗೂ ನ್ಯಾಯಾಧಿಕಾರಿಗಳಿಗೂ ಇತರ ಸಣ್ಣ ಅಧಿಕಾರಿಗಳಿಗೂ ಸಂಬಳವನ್ನು ಕೊಡಲಾಯಿತು. ಪ್ರಜಾಸಂಸ್ಥೆಯ ಸದಸ್ಯರಿಗೂ ಸಂಬಳವನ್ನು ನಿಷ್ಕರ್ಷೆಮಾಡಿದನು. ಆರ್ಖನರ ಅಧಿಕಾರವು ಎಲ್ಲರಿಗೂ ಅವಕಾಶವಾಯಿತು. ಆದರೆ ಆಡಳಿತದ ಅಧಿಕಾರಿಗಳಿಗೆ ಸಂಬಳ ಕೊಟ್ಟರೆ ಅನೇಕ ಜನರು ಸರ್ಕಾರದ ಚಾಕರಿಗೆ ನುಗ್ಗಾಡುವರು. ಪೆರಿಕ್ಲಿಸನು ಈ ತೊಂದರೆಯನ್ನು ತಪ್ಪಿಸಲು ಸಂಬಳವನ್ನು ಬಹಳ ಹೆಚ್ಚಾಗಿ ನಿಗದಿ ಮಾಡದೆ ಕಮ್ಮಿ ಸಂಬಳವನ್ನು ಕೊಟ್ಟನು. ನಿಜವಾಗಿ ಸೇವಮನೋಭಾವನೆ ಇರುವವರು ಕಮ್ಮಿ ಸಂಬಳವನ್ನು ಒಪ್ಪಿಕೊಂಡು ಅಧಿಕಾರದಲ್ಲಿದ್ದರು. ಆದರೆ ಐಶ್ವರ್ಯವನ್ನು ಸಂಪಾದಿಸಬೇಕೆಂಬ ಅಭಿಲಾಷೆಯುಳ್ಳವರು ವ್ಯಾಪಾರ ಅಥವಾ ಖಾಸಗಿ ಉದ್ಯೋಗದಲ್ಲಿರುತ್ತಿದ್ದರು. ಎಲ್ಲಾ ಅಧಿಕಾರಿಗಳನ್ನೂ ಅದೃಷ್ಟದ ಆಯ್ಕೆಯಿಂದ ನೇಮಿಸುವ ಪದ್ಧತಿಯು ಜಾರಿಗೆ

ಬಂದಿತು. ಎಲ್ಲರೂ ಅಧಿಕಾರ ಸ್ಥಾನವನ್ನು ಹೊಂದಲೂ ಅರ್ಹತೆ ಪಡೆದಿದ್ದರು. ಸೋಲನನು ಚುನಾವಣೆ ಮತ್ತು ಅದೃಷ್ಟ ಆಯ್ಕೆ ಎರಡನ್ನೂ ಸೇರಿಸಿ ಒಂಬತ್ತು ಆರ್ಖನರನ್ನು ನೇಮಿಸುತ್ತಿದ್ದನು. ಆದರೆ ಪೆರಿಕ್ಲಿಸನು ಚುನಾವಣೆಯನ್ನು ಸಂಪೂರ್ಣವಾಗಿ ತೆಗೆದುಹಾಕಿ ಅದೃಷ್ಟ ಆಯ್ಕೆಯನ್ನು ವಾಡಿಕೆಗೆ ತಂದನು. ರಾಜಕೀಯ ಶಿಕ್ಷಣವು ಉನ್ನತ ರೀತಿಯಲ್ಲಿರುವ ರಾಷ್ಟ್ರದಲ್ಲಿ ಅದೃಷ್ಟ ಆಯ್ಕೆಯನ್ನು ಉಪಯೋಗಿಸಬಹುದು. ಅಥೆನ್ಸ್ ರಾಷ್ಟ್ರದಲ್ಲಿ ಸಾಮಾನ್ಯ ಜನರೂ ರಾಜಕೀಯ ರಂಗದಲ್ಲಿ ಉನ್ನತಮಟ್ಟದಲ್ಲಿ ಶಿಕ್ಷಣಹೊಂದಿ ಹೆಚ್ಚಾಗಿ ಅನುಭವ ಪಡೆದಿದ್ದರು. ಆದ್ದರಿಂದ ಈ ಸುಧಾರಣೆಯು ಅನುಕೂಲವಾಯಿತು. ಒಂದು ಪಾತ್ರೆಯಲ್ಲಿ ಬಿಳಿ ಅವರೆ, ಕಪ್ಪು ಅವರೆ ಇವುಗಳನ್ನು ಬೆರಿಕೆಮಾಡಿ, ಯಾರು ಬಿಳಿ ಅವರೆಯನ್ನು ತೆಗೆಯುತ್ತಾರೋ ಅವರಿಗೆ ಅಧಿಕಾರಸ್ಥಾನವನ್ನು ಕೊಡುತ್ತಿರಲಿಲ್ಲ. ಈ ರೀತಿಯಾಗಿ ಅದೃಷ್ಟ ಆಯ್ಕೆಯನ್ನು ಆಚರಣೆಗೆ ತಂದರು. ಇದರಿಂದ ಎಲ್ಲರಿಗೂ ರಾಷ್ಟ್ರಸೇವೆಮಾಡಲು ಸಮಾನಾವಕಾಶವಾಯಿತು.

c. ಪೌರರದಾಖಲೆ ಪರಿಷ್ಕರಣ—ಪೆರಿಕ್ಲಿಸನು ಪೌರರ ದಾಖಲೆಯನ್ನು ಪರಿಷ್ಕರಿಸಿ ತಾನು ಮಾಡಿದ ಸುಧಾರಣೆಗಳನ್ನು ಅನುಭವಿಸುವ ಹಕ್ಕು ಕೇವಲ ಅಥಿನಿಯನರಿಗೆ ಸೇರಿದ್ದು ಎಂದು ನಿಶ್ಚಯಿಸಿದನು. ಅಂದರೆ ಅಥೆನ್ಸ್ ರಾಷ್ಟ್ರದ ತಂದೆತಾಯಿಗಳ ಪೀಳಿಗೆಗಳಿಗೆ ಈ ಹಕ್ಕುಗಳು ಮೀಸಲಾಗಿಡಲ್ಪಟ್ಟವು. ತಂದೆ, ತಾಯಿಯಲ್ಲಿ ಯಾರಾದರೂ ಅಥೆನ್ಸ್ ರಾಷ್ಟ್ರದವರಲ್ಲದೆ ಬೇರೆ ಗ್ರೀಕ್ ರಾಷ್ಟ್ರದವರಾಗಿದ್ದರೆ ಅವರ ಪೀಳಿಗೆಗಳಿಗೆ ಅವಕಾಶವಿರಲಿಲ್ಲ. ಗ್ರೀಕರಿಗೆ ಪ್ರಜಾಪ್ರಭುತ್ವವೆಂದರೆ ಕೇವಲ ಹಕ್ಕು ಅನುಭವಿಸುವುದಲ್ಲ. ಹಕ್ಕಿಗಿಂತ ಹೊಣೆಗಾರಿಕೆ ಹೆಚ್ಚು. ಗ್ರೀಕ್ ರಾಷ್ಟ್ರಗಳಲ್ಲಿ ಪೌರರೇ ಅಲ್ಲದೆ ಬಹು ಸಂಖ್ಯಾತ ಗುಲಾಮರಿದ್ದರು. ಈ ಗುಲಾಮರಿಗೆ ರಾಜಕೀಯ ಹಕ್ಕಾಗಲಿ, ಪೌರತ್ವವಾಗಲಿ ಇರಲಿಲ್ಲ. ಆಧುನಿಕ ದೃಷ್ಟಿಯಲ್ಲಿ ನೋಡಿದರೆ ಗ್ರೀಕರ ಪ್ರಜಾಪ್ರಭುತ್ವವು ನಿಜವಾದ ಪ್ರಭುತ್ವವಲ್ಲ. ಒಂದು ರೀತಿಯಾದ ಶ್ರೀಮಂತರ ಅಥವಾ ಅಲ್ಪಸಂಖ್ಯಾತರ ಆಡಳಿತವೆಂದು ಹೇಳಬಹುದು.

d. ಕೊನೆಯದಾಗಿ ಶ್ರೀಮಂತರು ಸಾರ್ವಜನಿಕರ ಹಿತಕ್ಕೋಸ್ಕರ ತಮ್ಮ ಐಶ್ವರ್ಯದಲ್ಲಿ ಒಂದು ಭಾಗವನ್ನು ವೆಚ್ಚಮಾಡಬೇಕೆಂದು ಒತ್ತಾಯ

ಮಾಡಿದನು. ಬಡವರು ರಾಷ್ಟ್ರದ ಹಿತಕ್ಕೆ ಸೇವೆಮಾಡಿದರೆ ಶ್ರೀಮಂತರು ತಮ್ಮ ಐಶ್ವರ್ಯದಲ್ಲಿ ಒಂದು ಭಾಗವನ್ನು ಮೀಸಲಾಗಿಟ್ಟು ರಾಷ್ಟ್ರದ ಪ್ರಗತಿಯನ್ನು ಸಾಧಿಸಬೇಕಾಯಿತು. ಅವರು ಆಗಾಗ್ಗೆ ನಾಟಕಗಳನ್ನೋ, ಹಬ್ಬಗಳನ್ನೋ, ಸ್ಪರ್ಧೆಗಳನ್ನೋ ಏರ್ಪಡಿಸಿ ಸಾರ್ವಜನಿಕರ ಯೋಗಕ್ಷೇಮಕ್ಕೆ ದುಡಿಯಬೇಕಾಯಿತು. ಇದರಿಂದ ಬಡವರಿಗೂ ಶ್ರೀಮಂತರಿಗೂ ಅನ್ಯೋನ್ಯ ಪ್ರೀತಿ ಮತ್ತು ಸ್ನೇಹ ಬೆಳೆದು ಎಲ್ಲರೂ ಸರಿಸಮಾನತೆಯಿಂದ ರಾಷ್ಟ್ರದ ಹಿತವನ್ನು ಸಾಧಿಸಿದರು.

ಪೆರಿಕ್ಲಿಸನ ರಾಜಕೀಯ ಸುಧಾರಣೆಗಳು ಮಹತ್ತರವಾದವು. ಅಥೆನ್ಸ್ ಪ್ರಜಾಪ್ರಭುತ್ವವು ಯಶಸ್ವಿಯಾಯಿತು. ಎಲ್ಲರಿಗೂ ಸರಿಸಮಾನ ಹಕ್ಕು, ಹೊಣೆಗಾರಿಕೆ ಸೇರಿ ಎಲ್ಲರೂ ರಾಷ್ಟ್ರದ ಹಿತಕ್ಕೆ ಒಂದೇ ಸಮನಾಗಿ ದುಡಿಯಲು ಅವಕಾಶವಾಯಿತು. ರಾಷ್ಟ್ರವೂ ಪ್ರಜೆಯೂ ಒಂದೇ ಎಂಬ ಮನೋಭಾವನೆಯು ಬೆಳೆದು ಶಾಂತಿ, ಸಹನೆ, ತೃಪ್ತಿ ನೆಲಸಿದವು.

ಅಧ್ಯಾಯ ೧೬

ಅಥೆನ್ಸ್ ಸಾಮ್ರಾಜ್ಯದ ಬೆಳವಣಿಗೆ

ಪೆರಿಕ್ಲಿಸನು ಅಥೆನ್ಸ್ ಸಾಮ್ರಾಜ್ಯವನ್ನು ವಿಸ್ತರಿಸಿ, ಎಲ್ಲೆಲ್ಲಿಯೂ ಅಥೀನಿಯನರು ನೆಲಸಿ ರಾಜಕೀಯ ಹತೋಟಿಯನ್ನು ಹೊಂದಿ ಆಡಳಿತವನ್ನು ನಡೆಸಬೇಕೆಂದು ಅಭಿಲಾಷೆಪಟ್ಟನು. ತನ್ನ ರಾಷ್ಟ್ರವು ಯಾವ ರೀತಿಯಲ್ಲಾದರೂ ಪ್ರಗತಿಗೆ ಬರಬೇಕೆಂದು ಹಾತೊರೆಯುತ್ತಿದ್ದನು. ಅಥೆನ್ಸ್ ರಾಷ್ಟ್ರವು ಗ್ರೀಸ್‌ದೇಶದಲ್ಲಿ ನಾಯಕತ್ವವನ್ನು ಹೊಂದಿ ಈಜಿಪ್ಟ್ ಮತ್ತು ಇತರ ದೇಶಗಳಲ್ಲಿಯೂ ಪ್ರಬಲವಾಯಿತು. ಪೆರಿಕ್ಲಿಸನ ಉಜ್ವಲ ರಾಷ್ಟ್ರಪ್ರೇಮವು ಶ್ಲಾಘನೀಯವಾದದ್ದು.

ಅಥೆನ್ಸ್ ವಿದೇಶ ನೀತಿ—ಮುಖ್ಯವಾಗಿ ಕೈಮನಿನ ಬಹಿಷ್ಕಾರದ ತರುವಾಯ ಅಥೆನ್ಸ್ ರಾಷ್ಟ್ರವು ತನ್ನ ವಿದೇಶ ನೀತಿಯನ್ನು ಬದಲಾಯಿಸಿ ಸ್ಪಾರ್ಟ ರಾಷ್ಟ್ರದ ವಿರೋಧಿಯಾಯಿತು. ಸ್ಪಾರ್ಟ ರಾಷ್ಟ್ರದ ಶತ್ರುಗಳಾದ ಆರ್ಗಸ್ ಮತ್ತು ಥೆಸ್ಸಲಿ ರಾಷ್ಟ್ರಗಳೊಡನೆ ಹೊಸ ಒಪ್ಪಂದವನ್ನು ಮಾಡಿ

ಕೊಂಡಿತು. ತನ್ನ ನೌಕಾಶಕ್ತಿಯಿಂದ ಕಾರಿಂತ್ ಮತ್ತು ಎಜಿನ ರಾಷ್ಟ್ರಗಳ ಶತ್ರುವಾಯಿತು. ಕಾರಿಂತ್‌ಕೊಲ್ಲಿಯ ವ್ಯಾಪಾರ ವಹಿವಾಟುಗಳನ್ನು ತನ್ನ ಹತೋಟಿಗೆ ಬರುವ ಹಾಗೆ ಮಾಡಿಕೊಂಡಿತು. ಮೆಗರ ರಾಷ್ಟ್ರವು ಕ್ರಿ. ಪೂ. ೪೫೯ ರಲ್ಲಿ ಅಥೆನ್ಸ್ ರಾಷ್ಟ್ರದೊಡನೆ ಒಪ್ಪಂದ ಮಾಡಿಕೊಂಡಿತು. ಇದರಿಂದ ರಾಷ್ಟ್ರದ ಗಡಿಯ ರಕ್ಷಣೆಗೆ ಅನುಕೂಲವಾಯಿತು. ಭೂ ಪ್ರದೇಶದ ರಕ್ಷಣೆಗೆ ಬಹಳ ಅನುಕೂಲವಾಗಿ ಯಾವ ಶತ್ರುವೂ ಭೂಪ್ರದೇಶದಿಂದ ದಂಡಯಾತ್ರೆ ಮಾಡಲು ಸಾಧ್ಯವಾಗಲಿಲ್ಲ. ಸೆಕ್ರಿಫೇಲಿಯ ಎಂಬ ದ್ವೀಪದಲ್ಲಿ ಸ್ಪಾರ್ಟನರ ನೌಕೆಯನ್ನು ಸೋಲಿಸಲಾಯಿತು. ಎಜಿನ ರಾಷ್ಟ್ರವು ಎದುರಿಸಲು ಕ್ರಿ. ಪೂ. ೪೫೮ ರಲ್ಲಿ ಅಥಿನಿಯನರ ಸೈನ್ಯವು ಎಜಿನ ಪಟ್ಟಣವನ್ನು ಮುತ್ತಿಗೆ ಹಾಕಿತು. ಎಜಿನ ರಾಷ್ಟ್ರಕ್ಕೆ ಸಹಾಯಮಾಡಲು ಕಾರಿಂತ್ ರಾಷ್ಟ್ರವು ಮೆಗರ ನಗರದ ಮೇಲೆ ದಂಡಯಾತ್ರೆ ಮಾಡಿತು. ಈ ವೇಳೆಯಲ್ಲಿ ಟಾಲ್ಮೈಡ್ಸ್ ಎಂಬ ಅಥಿನಿಯನರ ಸೇನಾನಾಯಕನು ತಕ್ಷಣವೇ ಸೈನ್ಯವನ್ನು ಒಟ್ಟುಗೂಡಿಸಿ ಕಾರಿಂತನಿಯರನ್ನು ಸೋಲಿಸಿದನು. ಎಜಿನ ನಗರದ ಮುತ್ತಿಗೆ ಮುಂದುವರಿದು ಕೊನೆಗೆ ಎಜಿನಿಯನರು ಶರಣಾಗತರಾಗಿ ಕಪ್ಪಕೊಡಲು ಒಪ್ಪಿದರು.

ಉತ್ತರ ಗ್ರೀಸಿನಲ್ಲಿ ಆಕ್ರಮಣ—ಸ್ಪಾರ್ಟ ರಾಷ್ಟ್ರವು ಉತ್ತರ ಗ್ರೀಸಿನಲ್ಲಿ ಅಥೆನ್ಸ್‌ಗೆ ವಿರೋಧವಾಗಿ ಭೋಷಿಯ ಮತ್ತು ಇತರ ರಾಷ್ಟ್ರಗಳೊಡನೆ ಸಂಧಾನಮಾಡಿತು. ಥೀಬ್ಸ್ ರಾಷ್ಟ್ರವು ಭೋಷಿಯಸ್ ಒಕ್ಕೂಟಕ್ಕೆ ನಾಯಕತ್ವವನ್ನು ವಹಿಸುವ ಹಾಗೆ ಮಾಡಿ ಅಥೆನ್ಸ್ ರಾಷ್ಟ್ರವು ಉತ್ತರಗ್ರೀಸಿನಲ್ಲಿ ಯಾವ ರಾಜಕೀಯ ಹತೋಟಿಯನ್ನು ಹೊಂದದೆ ಇರಲು ಪ್ರಯತ್ನಮಾಡಿತು. ಕ್ರಿ. ಪೂ. ೪೫೭ ರಲ್ಲಿ ಟನಗ್ರ ಎಂಬ ಕದನದಲ್ಲಿ ಸ್ಪಾರ್ಟನರ ಸೈನ್ಯವು ಜಯವನ್ನು ಹೊಂದಿದರೂ ಅಥಿನಿಯನರ ಸೈನ್ಯದ ಸಾಹಸವನ್ನು ಮೆಚ್ಚಿ ಹಿಂದಕ್ಕೆ ಹೋಯಿತು. ಇವೇ ಸಮಯದಲ್ಲಿ ಮಿರನೈಡಸ್ ಎಂಬ ಅಥಿನಿಯನರ ನಾಯಕನು ಮಧ್ಯಗ್ರೀಸಿಗೆ ದಂಡೆತ್ತಿ ಹೋಗಿ, ಒನೋಫೀಟ ಎಂಬ ಕದನದಲ್ಲಿ ಭೋಷಿಯನರನ್ನು ಸಂಪೂರ್ಣವಾಗಿ ಸೋಲಿಸಿ ಮಧ್ಯಗ್ರೀಸಿನಲ್ಲಿ ಅಥಿನಿಯನರ ಸ್ನೇಹವನ್ನು ಬೆಳೆಸಿದರು. ಅಥೆನ್ಸ್ ರಾಷ್ಟ್ರವು ಗ್ರೀಸಿನಲ್ಲಿ ಭೂ ಸಾಮ್ರಾಜ್ಯವನ್ನು ಕಟ್ಟಿತು. ಕಾರಿಂತ

ಕೊಲ್ಲಿಯಲ್ಲಿ ಚಾಲ್ಸಿಸ್ ಎಂಬ ರೇವುಪಟ್ಟಣವನ್ನು ಹಿಡಿದು ಕಾರಿಂತ ಕೊಲ್ಲಿಯನ್ನು ಅಟಿಕ ಸರೋವರವನ್ನಾಗಿ ಮಾಡಿತು. ಕಾರಿಂತ ರಾಷ್ಟ್ರವೂ ಕೂಡ ಅಥೆನ್ಸ್ ರಾಷ್ಟ್ರದ ಅಧೀನವಾಯಿತು.

ಈಜಿಪ್ಟಿನ ದಂಡಯಾತ್ರೆ—ಅಥಿನಿಯನರು ಗ್ರೀಸ್ ಪ್ರದೇಶದಲ್ಲಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುತ್ತಿದ್ದ ಹಾಗೆ ಅವರ ನೌಕಾಬಲವೂ ಹೊರಗೆ ಆಕ್ರಮಣ ಮಾಡುತ್ತಿದ್ದಿತು. ಕೈಪ್ರಿಯನ್ ಸಮುದ್ರದಲ್ಲಿ ಅಥಿನಿಯನರ ಇನ್ನೂರು ನೌಕೆಗಳು ಪರ್ಷಿಯನರನ್ನು ಎದುರಿಸುತ್ತಿದ್ದವು. ಇನರಸ್ ಎಂಬ ಈಜಿಪ್ಟಿನ ಲಿಬಿಯನ್ ದೇಶದ ರಾಜನು ಪರ್ಷಿಯನರಿಗೆ ವಿರೋಧವಾಗಿ ಅಥಿನಿಯನರ ನೌಕಾಸಹಾಯವನ್ನು ಅಪೇಕ್ಷಿಸಿದನು. ಅಥಿನಿಯನರು ತಮ್ಮ ವಿದೇಶ ವ್ಯಾಪಾರವನ್ನು ಅಭಿವೃದ್ಧಿಪಡಿಸಲು ಇದು ಒಳ್ಳೆ ಸಮಯವಾಯಿತು. ಅಥೀನಿಯನರು ನೈಲ್‌ಕಣಿವೆಯನ್ನು ಪ್ರವೇಶಿಸಿ ಇನಾರಸಿನಿಗೆ ಸಹಾಯಮಾಡಿದರು. ಕ್ರಿ. ಪೂ. ೪೫೮ ರಲ್ಲಿ ಮೆಂಫಿಸ್ ಎಂಬ ಪಟ್ಟಣವನ್ನು ಹಿಡಿದು ಪರ್ಷಿಯನರನ್ನು ಓಡಿಸಿದರು. ಆದರೂ ಅಥಿನಿಯನರು ಒಂದೇ ಕಾಲದಲ್ಲಿ ಎರಡು ಕಡೆಯಲ್ಲಿ ಯುದ್ಧಮಾಡುವುದು ಬಹಳ ಕಷ್ಟವಾಯಿತು. ಗ್ರೀಸ್ ದೇಶದಲ್ಲಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುವುದೂ ಈಜಿಪ್ಟಿನಲ್ಲಿ ಯುದ್ಧಮಾಡುವುದೂ ಸಾಧ್ಯವಾಗಲಿಲ್ಲ. ಪರ್ಷಿಯನರ ರಾಜನಾದ ಆರ್ಟಕ್ಸೆರ್ಸಸನು ಮೆಗಬಿಸ್ಸಸ್ ಎಂಬ ನಾಯಕನನ್ನು ದೊಡ್ಡ ಸೈನ್ಯದೊಡನೆ ಈಜಿಪ್ಟಿಗೆ ಕಳುಹಿಸಿದನು. ಮೆಂಫಿಸ್ ನಗರದಿಂದ ಅಥಿನಿಯನರನ್ನು ಓಡಿಸಲಾಯಿತು. ಪ್ರಾಸೊಪಿಟಿಸ್ ಎಂಬ ದ್ವೀಪದಲ್ಲಿ ಅಥಿನಿಯನರು ಹದಿನೆಂಟು ತಿಂಗಳುವರೆವಿಗೂ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿಲ್ಲದೆ ಕೊನೆಗೆ ಪರ್ಷಿಯನರಿಗೆ ಶರಣಾಗತರಾಗಬೇಕಾಯಿತು. ಕೈಮನನು ನಾಯಕತ್ವವನ್ನು ವಹಿಸಿದರೂ ಪ್ರಯೋಜನವಾಗದೆ ಕ್ರಿ. ಪೂ. ೪೫೦ರಲ್ಲಿ ಸಿಟಿಯಮ ಎಂಬ ಮುತ್ತಿಗೆಯಲ್ಲಿ ಕೈಮನನು ಮಡಿದನು. ಅಥಿನಿಯನರು ಪರ್ಷಿಯನರ ಒಪ್ಪಂದಕ್ಕೆ ಒಪ್ಪಬೇಕಾಯಿತು. ಕ್ರಿ. ಪೂ. ೪೪೮ ರಲ್ಲಿ ಪರ್ಷಿಯನರೊಡನೆ ಒಪ್ಪಂದವಾಯಿತು. ಪರ್ಷಿಯನರ ರಾಜನು ಏಜಿಯನ್ ಸಮುದ್ರ ಪ್ರದೇಶಕ್ಕೆ ಯುದ್ಧನೌಕೆಗಳನ್ನು ಕಳುಹಿಸುವುದಿಲ್ಲವೆಂದು ಒಪ್ಪಿದನು. ಅಥೆನ್ಸ್ ರಾಷ್ಟ್ರವು ಪರ್ಷಿಯ ಸಾಮ್ರಾಜ್ಯದ ರೇವು

ಪಟ್ಟಣಗಳನ್ನು ಆಕ್ರಮಣ ಮಾಡುವುದಿಲ್ಲವೆಂದು ಒಪ್ಪಿತು. ಈ ಒಪ್ಪಂದ ದಿಂದ ಪಶ್ಚಿಮ ಏಸ್ಯದ ಗ್ರೀಕರ ರಾಷ್ಟ್ರಗಳು ಸ್ವಾತಂತ್ರ್ಯವನ್ನು ಹೊಂದಿ ತಮ್ಮ ಮಾತೃಭೂಮಿಯೊಡನೆ ಐಕ್ಯತೆಯನ್ನು ಪಡೆಯಲು ಅವಕಾಶ ವಾಯಿತು.

ಮೂವತ್ತು ವರ್ಷದ ಕೌಲು—ಮಧ್ಯಗ್ರೀಸಿನಲ್ಲಿ ಎಲ್ಲೆಲ್ಲಿಯೂ ಅಸಮಾಧಾನವುಂಟಾಗಿ ಅಥೆನ್ಸ್ ನಾಯಕತ್ವಕ್ಕೆ ವಿರೋಧ ಪ್ರಬಲ ವಾಯಿತು. ಆರ್ಕೋಮಿನಸ್, ಖರೋನಿಯಾ ಮತ್ತು ಇತರ ನಗರಗಳಲ್ಲಿ ಶ್ರೀಮಂತರು ಹಿಂತಿರುಗಿ ದಂಗೆಯೆಬ್ಬಿಸಿದರು. ಅಥೆನ್ಸ್ ಸೇನಾನಾಯಕ ನಾದ ಟಾಲ್‌ಮೈಡಸನು ಖರೋನಿಯಾ ನಗರವನ್ನು ಆಕ್ರಮಿಸಿದನು. ಆದರೆ ಕ್ರಿ. ಪೂ. ೪೪೭ ರಲ್ಲಿ ಕೊರೋನಿಯ ಎಂಬ ಕದನದಲ್ಲಿ ಶ್ರೀಮಂತರಿಂದ ಸೋಲಲ್ಪಟ್ಟು ರಣರಂಗದಲ್ಲಿ ಮಡಿದನು. ಅಥಿನಿಯನರು ಭೋಷಿಯಾ ಪ್ರದೇಶವನ್ನು ತ್ಯಜಿಸಿದರು. ಫೋಸಿಸ್ ಮತ್ತು ಲೋಕ್ರಿಸ್ ಪ್ರದೇಶಗಳೂ ಸ್ವತಂತ್ರವಾದವು. ಇಬಿಯಾ, ಮಿಗರ ರಾಷ್ಟ್ರಗಳಲ್ಲಿಯೂ ದಂಗೆಗಳು ಎದ್ದವು. ಪೆರಿಕ್ಲಿಸನು ಮಿಗರರಾಷ್ಟ್ರದಲ್ಲಿ ದಂಗೆಯನ್ನು ನಿರ್ಮೂಲಮಾಡಿ ದರೂ ಸ್ಪಾರ್ಟನರ ಸೈನ್ಯವು ಅಥೆನ್ಸ್ ನಗರದ ಮೇಲೆ ದಂಡೆತ್ತಿ ಬಂದಿತು. ಪೆರಿಕ್ಲಿಸನು ಅಥೆನ್ಸ್ ನಗರಕ್ಕೆ ವಾಪಸು ಬಂದನು. ಸ್ಪಾರ್ಟನರ ಸೈನ್ಯವು ಹಿಂದಕ್ಕೆ ಹೋಯಿತು. ಆದರೂ ಅಥೆನ್ಸ್ ರಾಷ್ಟ್ರವು ಎಲ್ಲೆಲ್ಲಿಯೂ ತೊಂದರೆಗೊಳಗಾಗಿ ತನ್ನ ಸಾಮ್ರಾಜ್ಯವನ್ನು ಹತೋಟಿಯಲ್ಲಿ ಡಲು ಕಷ್ಟವಾಯಿತು. ಪೆರಿಕ್ಲಿಸನು ಕ್ರಿ. ಪೂ. ೪೪೬ ರಲ್ಲಿ ಸ್ಪಾರ್ಟರಾಷ್ಟ್ರ ದೊಡನೆ ಮೂವತ್ತು ವರ್ಷದ ಕೌಲನ್ನು ಮಾಡಬೇಕಾಯಿತು. ಈ ಕೌಲನ್ನು ಎರಡು ರಾಷ್ಟ್ರಗಳೂ ಮೂವತ್ತು ವರ್ಷದವರೆವಿಗೂ ಉಲ್ಲಂ ಘಿಸುವುದಿಲ್ಲವೆಂದು ಘೋಷಿಸಿದರೂ ಅದು ಕೇವಲ ಕಾಗದದ ಪ್ರಕಟಣೆ ಯಾಯಿತು. ಅಥೆನ್ಸ್ ಸ್ಪಾರ್ಟ ರಾಷ್ಟ್ರಗಳು ಗ್ರೀಸಿನ ಇತರ ರಾಷ್ಟ್ರಗಳ ವಿಚಾರದಲ್ಲಿ ತಲೆ ಹಾಕುವುದಿಲ್ಲವೆಂದು ಒಪ್ಪಿದವು. ಯಾವ ರಾಷ್ಟ್ರ ವನ್ನೂ ಬಲವಂತದಿಂದ ತಮ್ಮ ಪರವಾಗಿ ಸ್ನೇಹ ಬೆಳೆಯಿಸುವ ಹಾಗೆ ಒತ್ತಾಯ ಮಾಡುವುದಿಲ್ಲವೆಂದೂ ಒಪ್ಪಿದವು. ತಟಸ್ಥರಾಷ್ಟ್ರಗಳು ತಮ್ಮ ಇಚ್ಛೆಯಂತೆ ನಡೆಯಲು ಅವಕಾಶವಾಯಿತು. ಈ ಮೂವತ್ತು ವರ್ಷದ

ಕೌಲು ಅಥೆನ್ಸ್ ಸಾಮ್ರಾಜ್ಯಕ್ಕೆ ಧಕ್ಕೆಯುಂಟುಮಾಡಿತು. ಅಥಿನಿಯನರ ಗರ್ವ ತಗ್ಗಿಸಿತು. ಸ್ಪಾರ್ಟ ರಾಷ್ಟ್ರದ ಭೂಪ್ರದೇಶದ ನಾಯಕತ್ವವನ್ನು ಒಪ್ಪಿಕೊಂಡಹಾಗಾಯಿತು. ಎಲ್ಲೆಲ್ಲಿಯೂ ಅಥೆನ್ಸ್ ಪ್ರಭುತ್ವಕ್ಕೆ ಚ್ಯುತಿಯುಂಟಾಗಿ ಯಾವ ಕಾರಣದಿಂದಲಾದರೂ ಅಥೆನ್ಸ್ ಸಾಮ್ರಾಜ್ಯವನ್ನು ನಾಶಮಾಡಬೇಕೆಂಬ ಮನೋಭಾವವು ಹರಡಿತು. ಬಹು ಬೇಗ ದಂಥಸಮಯವು ಒದಗಿ ಪೆಲಪೊನಿಸಿಯನ್ ಯುದ್ಧವು ಅಥೆನ್ಸ್ ಸಾಮ್ರಾಜ್ಯವನ್ನು ನಾಶಗೊಳಿಸಿತು.

ಅಧ್ಯಾಯ ೧೭

ಪೆರಿಕ್ಲಿಸನ ಸಾಮ್ರಾಜ್ಯಶಾಹಿ

ಪೆರಿಕ್ಲಿಸನ ಸಾಹಸದಿಂದ ಅಥೆನ್ಸ್ ಸಾಮ್ರಾಜ್ಯವು ವಿಸ್ತರಿಸಿತು. ಪೆರಿಕ್ಲಿಸನು ಗ್ರೀಸ್‌ದೇಶದ ಎಲ್ಲಾ ರಾಷ್ಟ್ರಗಳನ್ನೂ ಒಟ್ಟುಗೂಡಿಸಿ, ರಾಷ್ಟ್ರದ ನಾಯಕತ್ವದಲ್ಲಿ ಅಥೆನ್ಸ್ ಸಂಸ್ಕೃತಿಯ ಕೇಂದ್ರವಾಗಬೇಕೆಂದು ಪ್ರಯತ್ನಿಸಿದನು. ಆದರೆ ಗ್ರೀಕರು ಸ್ವಾತಂತ್ರಪ್ರಿಯರು. ಅಥೆನ್ಸ್ ಸಾಮ್ರಾಜ್ಯವು ಎಷ್ಟೇ ಪ್ರಗತಿದಾಯಕವಾಗಿದ್ದರೂ ಅದು ತಮ್ಮ ಸ್ವಾತಂತ್ರ್ಯಕ್ಕೆ ಚ್ಯುತಿಯಾಯಿತು. ಸಾಧಾರಣವಾಗಿ ಸಾಮ್ರಾಜ್ಯತ್ವವೆಂದರೆ ಒಂದು ರಾಷ್ಟ್ರವು ರಾಜಕೀಯ ಮತ್ತು ಸೇನಾಃಶಕ್ತಿಯಿಂದ ಇತರ ರಾಷ್ಟ್ರಗಳನ್ನು ದಬ್ಬಾಳಿಕೆಯಿಂದ, ಹತೋಟಿಯಲ್ಲಿ ಆಡಳಿತ ನಡೆಯಿಸುವುದು. ದಬ್ಬಾಳಿಕೆ, ಸುಲಿಗೆ, ಆರ್ಥಿಕ ನಿಯಂತ್ರಣ, ರಾಜಕೀಯ ಹತೋಟಿ — ಇವೇ ಸಾಮ್ರಾಜ್ಯಶಾಹಿಯ ಕುರುಹುಗಳು. ಪೆರಿಕ್ಲಿಸನ ಸಾಮ್ರಾಜ್ಯಶಾಹಿಯು ಈ ಲಕ್ಷಣಗಳನ್ನು ಹೊಂದಿದ್ದರೂ ಇನ್ನೂ ಉನ್ನತ ಧ್ಯೇಯಗಳನ್ನು ತೋರ್ಪಡಿಸಿತು. ಪೆರಿಕ್ಲಿಸನು ಅಥೆನ್ಸ್ ರಾಷ್ಟ್ರವನ್ನು ಗ್ರೀಸ್ ದೇಶದ ಶಿಕ್ಷಣ ಸಂಸ್ಥೆಯನ್ನಾಗಿ ಮಾಡಬೇಕೆಂದು ಪ್ರಯತ್ನಿಸಿದನು. ಅಥೆನ್ಸ್ ನಗರವು ಸಂಸ್ಕೃತಿಯ ಕೇಂದ್ರವಾಗಿ ಬುದ್ಧಿಶಕ್ತಿಯ ನಾಯಕತ್ವವನ್ನು ವಹಿಸಬೇಕೆಂದು ಆಶಿಸಿದನು. ಮಾನವನ ಆಧ್ಯಾತ್ಮಿಕ ಬೆಳವಣಿಗೆಗೆ ಎಲ್ಲಾ ವಿಧವಾದ ಪ್ರೋತ್ಸಾಹವನ್ನು ಕೊಟ್ಟನು. ಕಲೆ,

ಸಾಹಿತ್ಯ, ನಾಟಕ, ತತ್ತ್ವಶಾಸ್ತ್ರ, ವಿಜ್ಞಾನ–ಇವುಗಳು ವಿಕಾಸ ಹೊಂದಿದವು. ರಾಜಕೀಯದಲ್ಲಿ ಅಥೆನ್ಸ್ ರಾಷ್ಟ್ರವು ಪ್ರಜಾಪ್ರಭುತ್ವವನ್ನು ಸ್ಥಾಪಿಸಿತು. ಆದರೂ ಗ್ರೀಕರು ಅಥೆನ್ಸ್ ಸಾಮ್ರಾಜ್ಯತ್ವವನ್ನು ದ್ವೇಷಿಸಿ ಅದನ್ನು ನಾಶಮಾಡಲು ನಿಶ್ಚಯಿಸಿದರು.

ಪೆರಿಕ್ಲಿಸನ ದಬ್ಬಾಳಿಕೆ—ಅಥೆನ್ಸ್ ಸಾಮ್ರಾಜ್ಯವು ಎಷ್ಟೇ ಪ್ರಗತಿದಾಯಕವಾಗಿದ್ದರೂ ಜನಪ್ರಿಯವಲ್ಲದಾಗಿತ್ತು. ಮುಖ್ಯವಾಗಿ ಅದು ಬಲ ಶಕ್ತಿಯಿಂದ ಹುಟ್ಟಿತು. ಅಥಿನಿಯನರ ನ್ಯಾಯಾಲಯಗಳು ಇತರ ರಾಷ್ಟ್ರಗಳಲ್ಲಿ ಅಧಿಕಾರ ಹೊಂದಿದ್ದವು. ಈ ನ್ಯಾಯಾಲಯಗಳು ಎಷ್ಟೇ ಪ್ರಾಮಾಣಿಕವಾಗಿ ನ್ಯಾಯ ತೀರ್ಪನ್ನು ಕೊಟ್ಟರೂ ಅವು ಪರಕೀಯರ ನ್ಯಾಯವೆಂದು ತಾತ್ಸಾರವುಂಟಾಯಿತು. ಮಾನವನಿಗೆ ತನ್ನ ನ್ಯಾಯ, ನ್ಯಾಯಾಡಳಿತ ಎಷ್ಟೇ ಅಪರಿಷ್ಕೃತವಾಗಿದ್ದರೂ ಶ್ರೇಷ್ಠವೆಂಬ ಭಾವನೆಯು ಸ್ವಾಭಾವಿಕ. ಅಥಿನಿಯನರ ನ್ಯಾಯಾಲಯಗಳು ಇತರ ರಾಷ್ಟ್ರಗಳಲ್ಲಿ ಒಳ ಜಗಳಗಳಿಗೆ ಆಸ್ಪದಕೊಟ್ಟುವು, ರಾಜಕೀಯ ನಿರ್ಬಂಧಕ್ಕೆ ಸಹಾಯಕವಾದವು. ಎರಡನೆಯದಾಗಿ ಅಥೆನ್ಸ್ ರಾಷ್ಟ್ರವು ಪ್ರೊಗದಿಯ ಹಣವನ್ನು ತನ್ನ ಸ್ವಾರ್ಥಕ್ಕೆ ಉಪಯೋಗಿಸಿದ್ದು ಗ್ರೀಕರಿಗೆ ಜುಗುಪ್ಸೆಯನ್ನುಂಟು ಮಾಡಿತು. ಡೆಲಾಸ್ ಒಕ್ಕೂಟದ ಖಜಾನೆಯು ಅಥೆನ್ಸ್ ರಾಷ್ಟ್ರದ ಹತೋಟಿಯಲ್ಲಿತ್ತು. ಪರ್ಷಿಯನರನ್ನು ಅಣಗಿಸಿ ಪಶ್ಚಿಮ ಏಷ್ಯದ ಗ್ರೀಕರನ್ನು ಬಿಡುಗಡೆಮಾಡಿದ ಮೇಲೆ ಪೆರಿಕ್ಲಿಸನು ಪ್ರೊಗದಿಯ ಹಣವನ್ನು ಯಾವ ರೀತಿಯಾಗಿಬೇಕಾದರೂ ಉಪಯೋಗಿಸಬಹುದೆಂದು ನಂಬಿದನು. ದೇವಸ್ಥಾನಗಳನ್ನು ಕಟ್ಟಿಸುವುದು, ಸುಂದರವಾದ ಭವ್ಯಗಳನ್ನು ನಿರ್ಮಿಸುವುದು, ಪೈರಸ್ ಬಂದರನ್ನು ದುರಸ್ತುಮಾಡುವುದು – ಈ ರೀತಿಯಾಗಿ ಹಣವನ್ನು ಉಪಯೋಗಿಸಿದನು. ಇವು ಸ್ವಾರ್ಥತೆಯಿಂದ ಕೂಡಿದ್ದರೂ ಕೊನೆಗೆ ಗ್ರೀಸ್ ದೇಶದ ನಾಗರಿಕತೆಗೆ ಅನುಕೂಲವಾಯಿತು. ಆದರೆ ಗ್ರೀಕರು ಇದಕ್ಕೆ ಒಪ್ಪಲಿಲ್ಲ. ಅಥೆನ್ಸ್ ನಗರದಲ್ಲೇ ಪೆರಿಕ್ಲಿಸನ ವಿರೋಧಿಗಳು ಆತನ ನೀತಿಯನ್ನು ಟೀಕೆಮಾಡಿ ಅಥೆನ್ಸ್ ನಗರವನ್ನು ವೈಯ್ಯಾರದ ವೇಶ್ಯೆಗೆ ಹೋಲಿಸಿದರು. ಥೂಸಿಡೈಡಿಸ್ ಎಂಬ ವಿರೋಧಪಕ್ಷದ ನಾಯಕನು ಪ್ರೊಗದಿಯ ಹಣವನ್ನು ಪರ್ಷಿಯ ದೇಶದ ಮೇಲೆ ಯುದ್ಧಮಾಡಲೂ

ಗ್ರೀಸ್ ದೇಶದ ರಕ್ಷಣೆಗಾಗಿ ವಿನಿಯೋಗಿಸಲಾಗಿಡಬೇಕೆಂದೂ ಸೂಚಿಸಿದನು. ಇದು ನ್ಯಾಯವಾದ ಟೀಕೆ. ಆದರೆ ಬ್ಯೂರಿ ಎಂಬ ಸುಪ್ರಸಿದ್ಧ ಇತಿಹಾಸ ಕಾರನು ಹೇಳುವ ಹಾಗೆ ನ್ಯಾಯಕ್ಕೂ, ರಾಜಕೀಯ ದೊಡ್ಡಸ್ತಿಕೆಗೂ ಹೊಂದಿಕೆ ಇರುವುದಿಲ್ಲ. ಪೆರಿಕ್ಲಿಸನು ತನ್ನ ರಾಷ್ಟ್ರದ ರಾಜಕೀಯ ಶ್ರೇಷ್ಠ ತೆಗೆ ದುಡಿಯುತ್ತಿದ್ದನೆಂಬುದು ನಿಸ್ಸಂದೇಹವಾಗಿ ಒಪ್ಪಬೇಕು. ಪರ್ಷಿ ಯನರ ಸೊಲ್ಲನ್ನು ಅಡಗಿಸಿದ ಮೇಲೆ ಪೊಗದಿಯ ಹಣವನ್ನು ಯಾವ ರೀತಿಯಾಗಿ ಬೇಕಾದರೂ ಉಪಯೋಗಿಸಲು ಅಥೆನ್ಸ್ ರಾಷ್ಟ್ರಕ್ಕೆ ಹಕ್ಕಿದೆ ಎಂಬುದೇ, ಟೀಕೆಗಳಿಗೆ ಪೆರಿಕ್ಲಿಸನ ಉತ್ತರ. ಅಥೆನ್ಸ್ ಸಾಮ್ರಾಜ್ಯತ್ವಕ್ಕೆ ಇನ್ನೊಂದು ಆಕ್ಷೇಪಣೆಯಿತ್ತು. ಅದೇನೆಂದರೆ ಅಥಿನಿಯನರ ವಸಾಹತು. ಅಥಿನಿಯನರು ಬಹಳ ಹಿಂದೆಯೇ ವಸಾಹತುಗಳನ್ನು ಸ್ಥಾಪಿಸಿದ್ದರೂ ಪೆರಿಕ್ಲಿಸನು ಒಂದು ವ್ಯವಸ್ಥಿತರೀತಿಯಲ್ಲಿ ಅಥಿನಿಯನರು ಹೊರಪ್ರದೇಶ ಗಳಿಗೆ ಹೋಗಿ ನೆಲಸಲು ಉತ್ತೇಜನಕೊಟ್ಟನು. ಈ ವಸಾಹತುಗಳು ಅಥೆನ್ಸ್ ಸಾಮ್ರಾಜ್ಯದ ಭದ್ರತೆಗೆ ಸಹಾಯಕವಾದವು. ಇವು ಅಥೆನ್ಸ್ ರಾಷ್ಟ್ರದ ರಕ್ಷಕ ಸೈನ್ಯದ ಠಾಣ್ಯಗಳಾದವು. ಆರ್ಥಿಕ ದೃಷ್ಟಿಯಿಂದ ನಿರು ದ್ಯೋಗವನ್ನು ಬಗೆಹರಿಸಿತು. ಅಥೆನ್ಸ್ ನಗರದ ಹೆಚ್ಚು ಜನಸಂಖ್ಯೆಯು ವಸಾಹತುಗಳಲ್ಲಿ ನೆಲಸಲು ಅನುಕೂಲವಾಯಿತು. ವಸಾಹತುಗಳಲ್ಲಿ ನೆಲಸಿದ ಅಥಿನಿಯರು ಗೌರವದ ಸ್ಥಾನವನ್ನು ಹೊಂದಿ ವಿಶೇಷ ಹಕ್ಕು ಬಾಧ್ಯತೆಗಳನ್ನು ಅನುಭವಿಸಿದರು. ಆದರೆ ಈ ವಸಾಹತುಗಳು ಪರರಾಷ್ಟ್ರ ಗಳ ದ್ವೇಷವನ್ನು ಬೆಳೆಸಿ, ಅಥೆನ್ಸ್ ಸಾಮ್ರಾಜ್ಯದ ಪತನಕ್ಕೆ ಮುಖ್ಯಕಾರಣ ವಾದವು.

ಪೆರಿಕ್ಲಿಸನ ಸಾಮ್ರಾಜ್ಯಶಾಹಿಯ ಕೀರ್ತಿ—ಪೆರಿಕ್ಲಿಸನು ದಬ್ಬಾ ಳಿಕೆಯಿಂದ ಅಥೆನ್ಸ್ ಸಾಮ್ರಾಜ್ಯವನ್ನು ವಿಸ್ತರಿಸಿದರೂ ಆತನ ಆಡಳಿತವು ಪ್ರಗತಿಪರವಾಗಿತ್ತು. ಪೆರಿಕ್ಲಿಸನು ಅಥೆನ್ಸ್ ನಗರವನ್ನು ಸಂಸ್ಕೃತಿಯ ಬೀಡಾಗಿ ಮಾಡಬೇಕೆಂದು ಹಾತೊರೆಯುತ್ತಿದ್ದನು. ಮುಖ್ಯವಾಗಿ ಪರ್ಷಿ ಯನರು ಅಥೆನ್ಸ್ ನಗರವನ್ನು ನಾಶಮಾಡಿ ಅನೇಕ ದೇವಸ್ಥಾನಗಳನ್ನು ನಿರ್ಮೂಲಮಾಡಿದ್ದರು. ಮೊದಲು ದೇವತೆಗಳಿಗೆ ತಮ್ಮ ಕೃತಜ್ಞತೆಯನ್ನು ತೋರಿಸಬೇಕೆಂದು ಸಂಕಲ್ಪ ಮಾಡಿದನು. ಭವ್ಯವಾದ ದೇವಸ್ಥಾನಗಳನ್ನು

ಕಟ್ಟಿಸಿ ಅಥಿನಿಯನರ ಶಕ್ತಿ, ಉನ್ನತ ಧ್ಯೇಯವನ್ನು ಶಾಶ್ವತಗೊಳಿಸಿದನು. ಫೀಡಿಯಸ್ ಎಂಬ ಪ್ರತಿಭೆಯುಳ್ಳ ಶಿಲ್ಪಿಯು ಅಥೆನ ಎಂಬ ದೇವತೆಯ ದೊಡ್ಡ ವಿಗ್ರಹವನ್ನು ಕಂಚಿನಲ್ಲಿ ಮಾಡಿದ್ದು ಈಗಲೂ ಪ್ರಸಿದ್ಧಿಯಾಗಿದೆ. ಅಥೆನ್ಸ್ ನಗರವು ಕಲೆಯ ರಾಣಿಯಾಗದೇ ಇದ್ದರೂ ಶಿಕ್ಷಕಿಯ ಸ್ಥಾನವನ್ನು ಹೊಂದಿತು. ಫೀಡಿಯಸನು ಒಲಂಪಿಯ ನಗರದಲ್ಲಿ ಸ್ಯೂಸ್ ದೇವರಿಗೆ ಸುಂದರವಾದ ವಿಗ್ರಹವನ್ನು ನಿರ್ಮಿಸಿದನು. ಈ ಮೂರ್ತಿಯ ಸೌಮ್ಯ ತೆಯು ಭಕ್ತರನ್ನು ಮುಗ್ಧರನ್ನಾಗಿ ಮಾಡುತ್ತಲಿತ್ತು. ಒಬ್ಬ ಕವಿಯು ವರ್ಣಿ ಸಿರುವ ಹಾಗೆ, ಕಷ್ಟಕಾರ್ಪಣ್ಯದಲ್ಲಿ ಸಿಕ್ಕಿರುವ ಯಾವ ಮನುಷ್ಯನೇ ಆಗಲಿ, ಆ ಕಷ್ಟದಿಂದ ವರ್ಷಾನುಗಟ್ಟಲೆ ನಿದ್ರೆ ಬರದೇ ಇದ್ದರೂ ಈ ಮೂರ್ತಿಯ ಮುಂದೆ ನಿಂತಿಪ್ಪೇ ಆದರೆ, ಆತನು ತನ್ನ ಜೀವನದ ಕಾರ್ಪಣ್ಯ ಗಳನ್ನು ಮರೆತು ದೈವಿಕ ಸಂಪರ್ಕವನ್ನು ಹೊಂದುವುದರಲ್ಲಿ ಸಂಶಯವಿಲ್ಲ. ಮೂವತ್ತು ವರ್ಷದ ಇವನ ಆಳ್ವಿಕೆಯಲ್ಲಿ ಅಥೆನ್ಸ್ ನಗರದಲ್ಲಿ ಎಂದೂ ಮರೆಯಲಾರದಂಥ ಭವ್ಯಮಂದಿರಗಳನ್ನು ಕಟ್ಟಿಸಿದನು. ತನ್ನ ಉನ್ನತ ಸ್ತಂಭಗಳಿಂದಲೂ, ಭವ್ಯತೆಯಿಂದಲೂ ಗ್ರೀಕ್ ಶಿಲ್ಪವು ಚಿರಸ್ಥಾಯಿಯಾದ ಕೀರ್ತಿಯನ್ನು ಪಡೆಯಿತು. ನಾಟಕಕಲೆಯು ಉನ್ನತಸ್ಥಿತಿಯನ್ನು ಮುಟ್ಟಿತು. ಎಸ್ಕೈಲಸ್, ಸಾಫೋಕ್ಲಿಸ್, ಇರೀಪಿಡಿಸ್, ಎಂಬ ಪ್ರಸಿದ್ಧ ನಾಟಕಕಾರರು ಇವತ್ತಿಗೂ ಪಾಶ್ಚಾತ್ಯನಾಟಕಕ್ಕೆ ಸ್ಫೂರ್ತಿಯುಂಟುಮಾಡು ತ್ತಾರೆ. ಇತಿಹಾಸ, ಗದ್ಯ ಮುಖ್ಯಸ್ಥಾನವನ್ನು ಪಡೆದವು. ಹೆರೆಡೋಟಸ್, ಥೂಸಿಡೈಡಿಸ್ ಎಂಬ ಪ್ರಸಿದ್ಧ ಇತಿಹಾಸಕಾರರ ಬರವಣಿಗೆಗಳು ಆಧು ನಿಕ ಇತಿಹಾಸದ ಮೂಲವೆಂದು ಹೇಳಬಹುದು. ತತ್ತ್ವಜ್ಞಾನದಲ್ಲಿ ಸಾಕ್ರಟೀಸನ ಹೆಸರನ್ನು ಯಾರೂ ಮರೆಯುವ ಹಾಗಿಲ್ಲ. ಕ್ರಿ. ಪೂ. ೪೬೯ ರಲ್ಲಿ ಜನಿಸಿದ ಸಾಕ್ರಟೀಸನು ಅಥೆನ್ಸ್ ನಗರದಲ್ಲಿ ಎಲ್ಲರಿಗೂ ಪರಿಚಯಸ್ಥನಾಗಿದ್ದನು. ಅವನು ಬರಹಗಾರನಲ್ಲ, ಕವಿಯಲ್ಲ; ಒಳ್ಳೆಯ ವಾಗ್ಮಿಯಾಗಿದ್ದನು. ಆಗಿನ ಕಾಲದಲ್ಲಿ ಗ್ರೀಕ್ ಜನರು ಜ್ಞಾನಕ್ಕಾಗಿ ಬಾಯಿಬಿಡುತ್ತಿದ್ದರು. ಆಗಾಗ ಸಭೆಯನ್ನು ಜರುಗಿಸಿ ವಿದ್ವಾಂಸರಿಂದ ತರ್ಕ ನಡೆಯಿಸಿ, ತಾವು ಅದರಲ್ಲಿ ಭಾಗಿಗಳಾಗುತ್ತಿದ್ದರು. ಈ ತರ್ಕ ರಂಗದಲ್ಲಿ ಸಾಕ್ರಟಿಸನು ಭಾಗವಹಿಸಿದನು. "ಸತ್ಯ, ಕರ್ತವ್ಯ, ಬಾಳ್ವೆ,

ಸೌಂದರ್ಯ" ಮೊದಲಾದ ವಿಷಯಗಳಿಗೂ, ಜೀವನಕ್ಕೂ ಇರುವ ಸಂಬಂಧಗಳನ್ನು ಅವನು ಪ್ರೌಢವಾಗಿ ಚರ್ಚಿಸಿದನು. ಸೂಕ್ಷ್ಮಪ್ರಶ್ನೆಗಳಿಂದ ತರುಣರ ಅಲ್ಪವಿದ್ಯೆಯನ್ನೂ, ಪ್ರತಿಷ್ಠೆಯನ್ನೂ ಪ್ರದರ್ಶಿಸಿದನು. ಜ್ಞಾನ ಮತ್ತು ಸತ್ಯದ ತಳಹದಿಯ ಮೇಲೆ ಮಾನವನು ತನ್ನ ಪ್ರಗತಿಯನ್ನು ಸಾಧಿಸಬೇಕು. ಎಷ್ಟೋ ತರುಣರು ಆತನ ಶಿಷ್ಯರಾದರು. ಮುದುಕರು, ಹಿರಿಯರು, ಸ್ವಾರ್ಥಿಗಳು, ಅಧಿಕಾರಪ್ರಿಯರು–ಸಾಕ್ರಟೀಸನ ವೈರಿಗಳಾದರು. ತರುಣರ ಬುದ್ಧಿ ಕೆಡಿಸದವನೆಂದು ಕ್ರಿ. ಪೂ. ೩೯೯ ರಲ್ಲಿ ಅವನ ಕೈಗೆ ವಿಷದ ಬಟ್ಟಲನ್ನು ಕೊಡಿಸಿ ಅವನನ್ನು ಮೃತ್ಯುವಿಗೆ ವಶಮಾಡಿದರು. ಸಾಕ್ರಟಿಸನ ಶಿಷ್ಯನಾದ ಪ್ಲೇಟೊ, ಅರಿಸ್ಟೋಟಲ್ ಎಂಬ ತತ್ತ್ವಜ್ಞಾನಿಗಳು ಸಾಕ್ರಟಿಸನ ಹೆಸರನ್ನು ಚಿರಸ್ಥಾಯಿಯಾಗಿ ಮಾಡಿದರು. ಗ್ರೀಸಿನಲ್ಲಿ ನವಯುಗವು ಉದಯಿಸಿತು. ಗ್ರೀಕ್ ಸಾಹಿತ್ಯ, ತತ್ತ್ವಜ್ಞಾನ ವಿಚಾರಗಳು ಯೂರೋಪಿನ ಸಾಹಿತ್ಯ, ಕಲೆ, ವಿಜ್ಞಾನಗಳ ಬೆಳವಣಿಗೆಗೆ ಮೊದಲಿನ ಮೆಟ್ಟಲಾದುವೆನ್ನಬಹುದು. ಅಥೆನ್ಸ್ ಸಾಮ್ರಾಜ್ಯತ್ವವು ಉದಾರತೆಯಿಂದ ಕೂಡಿತ್ತು. ಸಂಕುಚಿತಭಾವನೆಗೆ ಅವಕಾಶವಿರಲಿಲ್ಲ. ರಾಜಕೀಯ ಎಷ್ಟೇ ದಬ್ಬಾಳಿಕೆಯಿಂದ ಕೂಡಿದ್ದರೂ ಮಾನವನ ಅಂತರಾತ್ಮಶಕ್ತಿಯನ್ನು ಬೆಳೆಯಿಸಲು ಅವಕಾಶವಿತ್ತು. ಭೌತಿಕ ದೃಷ್ಟಿಯಿಂದಲೂ ಸಾಮಾನ್ಯಜನರ ಜೀವನದ ಮಟ್ಟವು ಹೆಚ್ಚಿ ಅವರು ಸುಖದಿಂದ ಬಾಳಲು ಅವಕಾಶವಾಯಿತು. ಹೊರದೇಶಗಳೊಡನೆ ವ್ಯಾಪಾರವು ವಿಸ್ತರಿಸಿ, ಐಶ್ವರ್ಯವು ಬೆಳೆದು, ಅಥೆನ್ಸ್ ರಾಷ್ಟ್ರದ ಕೀರ್ತಿಯು ಎಲ್ಲೆಲ್ಲಿಯೂ ಹಬ್ಬಿತು. ಪೆರಿಕ್ಲಿಸನ ಕಾಲವನ್ನು ಗ್ರೀಸ್ ದೇಶದ ಇತಿಹಾಸದಲ್ಲಿ ಸುವರ್ಣಯುಗವೆಂದು ಧಾರಾಳವಾಗಿ ಹೇಳಬಹುದು.


ಅಥೆನ್ಸ್ ನಗರ

ಅಧ್ಯಾಯ ೧೮

ಪೆಲಪೊನಿಸಿಯನ್ ಯುದ್ಧ (ಕ್ರಿ. ಪೂ. ೪೩೧-೪೦೪)

ಪೆರಿಕ್ಲಿಸನ ಸಾಮ್ರಾಜ್ಯತ್ವಶಾಹಿಯು ಎಷ್ಟೇ ಪ್ರಗತಿಹೊಂದಿದ್ದರೂ ರಾಜಕೀಯ ದೃಷ್ಟಿಯಲ್ಲಿ ಗ್ರೀಕರಿಗೆ ಅಸಮಾಧಾನವುಂಟುಮಾಡಿತು. ಮುಖ್ಯವಾಗಿ ತಮ್ಮ ಸ್ವಾತಂತ್ರ್ಯಕ್ಕೆ ಚ್ಯುತಿಯುಂಟಾಯಿತು ಎಂಬುದೇ ಅವರ ಅತೃಪ್ತಿಗೆ ಕಾರಣವಾಯಿತು. ಗ್ರೀಕ್‌ರಾಷ್ಟ್ರಗಳು ಒಟ್ಟುಗೂಡಿ ಅಥೆನ್ಸ್ ಸಾಮ್ರಾಜ್ಯವನ್ನು ನಾಶಮಾಡಲು ಎಲ್ಲಾ ಪ್ರಯತ್ನಗಳನ್ನೂ ಮಾಡಿದವು. ಹಾಗೆ ಮಾಡಿದ್ದರಿಂದ ತಮ್ಮ ಸ್ವಾತಂತ್ರ್ಯವು ಲಭಿಸುವುದೆಂದು ಯೋಚಿಸಿದ್ದು ಕೇವಲ ಭ್ರಮೆಯಾಯಿತು. ಪೆಲಪೊನಿಸಿಯನ್ ಯುದ್ಧವು ಅಥೆನ್ಸ್ ಸಾಮ್ರಾಜ್ಯದ ನಾಶಕ್ಕೆ ಮೂಲಕಾರಣವಾಯಿತು. ಈ ಯುದ್ಧದ ವಿಮರ್ಶೆಯು ಬಹಳ ಸಂಕಟಕರ. ಅಥೆನ್ಸ್ ರಾಷ್ಟ್ರವು ಸಂಸ್ಕೃತಿಯ ನೆಲೆಯಾಗಿ ಕೊನೆಗೆ ಪರರಾಷ್ಟ್ರಗಳ ದ್ವೇಷಾಸೂಯೆಗಳಿಂದ ನಾಶವಾಗಿದ್ದು ತೀವ್ರ ದುಃಖವನ್ನುಂಟುಮಾಡುತ್ತದೆ.

ಪೆಲಪೊನಿಸಿಯನ್ ಯುದ್ಧಕ್ಕೆ ಮುಖ್ಯಕಾರಣಗಳು—ಪೆಲಪೊನಿಸಿಯನ್ ಯುದ್ಧವು ಅಥೆನ್ಸ್ ರಾಷ್ಟ್ರಕ್ಕೆ ಮಹಾ ವಿಪತ್ತನ್ನುಂಟುಮಾಡಿತು. ಅಥೆನ್ಸ್ ರಾಷ್ಟ್ರವು ಗ್ರೀಸಿನಲ್ಲಿ ತನ್ನ ನಾಯಕತ್ವವನ್ನು ಕಳೆದುಕೊಂಡು ಕೇವಲ ಎರಡನೆಯ ದರ್ಜೆಯ ರಾಷ್ಟ್ರವಾಯಿತು. ಈ ಯುದ್ಧವನ್ನು ಘೋಷಿಸಿದಾಗ ಅನೇಕ ರಾಷ್ಟ್ರಗಳು ಉಲ್ಲಾಸದಿಂದ ಜಯಗಾನಮಾಡಿದವು. ಅವು ಅಥೆನ್ಸ್ ರಾಷ್ಟ್ರವು ನಾಶವಾದರೆ ತಮ್ಮ ಸ್ವಾತಂತ್ರ್ಯವನ್ನು ಗಳಿಸಬಹುದೆಂದು ನಂಬಿದವು. ಆದರೆ ಅದು ನಿರಾಶೆಯಾಯಿತು. ಅಥೆನ್ಸ್ ರಾಷ್ಟ್ರದ ಬದಲು ಸ್ಪಾರ್ಟರಾಷ್ಟ್ರವು ಗ್ರೀಸಿನಲ್ಲಿ ನಾಯಕತ್ವವನ್ನು ವಹಿಸಿ ಇನ್ನೂ ದಬ್ಬಾಳಿಕೆಯಿಂದ ಆಡಳಿತವನ್ನು ವಹಿಸಿದ್ದು ಗ್ರೀಕರಿಗೆ ದುಃಖಕರವಾದ ಅನುಭವವಾಯಿತು. ಈ ಯುದ್ಧಕ್ಕೆ ಅನೇಕ ಕಾರಣಗಳಿದ್ದವು.

i. ಅಥೆನ್ಸ್ ಸಾಮ್ರಾಜ್ಯದ ಅಸ್ತಿತ್ವವೇ ಮೂಲಭೂತ ಕಾರಣವೆಂದು ಹೇಳಬಹುದು. ಪ್ರತಿಯೊಂದು ರಾಷ್ಟ್ರವೂ ಅಥೆನ್ಸ್ ನಾಯಕತ್ವ

ದಲ್ಲಿ ಯಾವುದಾದರೂ ರೀತಿಯಲ್ಲಿ ದ್ವೇಷವನ್ನು ತೋರಿಸಿತು. ಕಾರಿಂತ ರಾಷ್ಟ್ರವು ಅಥೆನ್ಸ್ ರಾಷ್ಟ್ರದ ವಾಣಿಜ್ಯಶತ್ರು. ಸ್ಪಾರ್ಟ ರಾಷ್ಟ್ರವು ಅಥೆನ್ಸ್ ರಾಷ್ಟ್ರದ ಪ್ರಗತಿಗೆ ವಿರೋಧತೋರಿಸಿತು. ತನ್ನ ಸೈನಿಕಶಕ್ತಿಯಿಂದ ನಾಯಕತ್ವವನ್ನು ಪಡೆಯಬೇಕೆಂದು ಆಶಿಸಿತು. ಥೀಬ್ಸ್, ಏಜಿನ, ಮಿಗರ ರಾಷ್ಟ್ರಗಳು ಅಥೆನ್ಸ್ ರಾಷ್ಟ್ರದ ರಾಜಕೀಯ ದಬ್ಬಾಳಿಕೆಯನ್ನು ನಿರ್ಮೂಲ ಮಾಡಬೇಕೆಂದು ಗುಟ್ಟಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದವು.

ii. ಅಥೆನ್ಸ್ ರಾಷ್ಟ್ರಕ್ಕೂ ಪೆಲಪೊನಿಸಿಯನರಿಗೂ ಕುಲದ್ವೇಷವಿತ್ತು. ಪೆಲಪೊನಿಸಿಯನ್ ಯುದ್ಧವನ್ನು ಮೂಲತತ್ತ್ವದ ಯುದ್ಧವೆಂದು ಹೇಳಬಹುದು (A War of Principles). ಅಂದರೆ ಈ ಯುದ್ಧವು ಎರಡು ಬೇರೆ ಕುಲಗಳ, ಎರಡು ಬೇರೆ ರಾಜ್ಯಾಡಳಿತಗಳ, ಎರಡು ಬೇರೆ ರಾಷ್ಟ್ರಗಳ ಯುದ್ಧ; ಅಯೋನಿಯನರಿಗೂ ಡೋರಿಯನರಿಗೂ, ಪ್ರಜಾಪ್ರಭುತ್ವಕ್ಕೂ ಶ್ರೀಮಂತರಪ್ರಭುತ್ವಕ್ಕೂ, ನೌಕಾಶಕ್ತಿಯ ರಾಷ್ಟ್ರಕ್ಕೂ ಭೂಶಕ್ತಿಯ ರಾಷ್ಟ್ರಕ್ಕೂ ನಡೆದ ಯುದ್ಧ. ಅಥೆನ್ಸ್ ರಾಷ್ಟ್ರವು ಅಯೋನಿಯನರ ಕುಲದ ನಾಯಕತ್ವವನ್ನು ಹೊಂದಿತ್ತು. ಸ್ಪಾರ್ಟ ರಾಷ್ಟ್ರವು ಡೋರಿಯನರ ಕುಲದ ನಾಯಕತ್ವವನ್ನು ವಹಿಸಿತ್ತು. ಅಥೆನ್ಸ್‌ರಾಷ್ಟ್ರವು ಪ್ರಜಾಪ್ರಭುತ್ವದ ಬೀಡಾಗಿತ್ತು. ಸ್ಪಾರ್ಟ ರಾಷ್ಟ್ರವು ಶ್ರೀಮಂತರಪ್ರಭುತ್ವದ ಬೀಡಾಗಿತ್ತು. ಅಥೆನ್ಸ್ ರಾಷ್ಟ್ರವು ಪ್ರಬಲವಾದ ನೌಕಾಶಕ್ತಿಯನ್ನು ಬೆಳೆಸಿತ್ತು. ಸ್ಪಾರ್ಟ ರಾಷ್ಟ್ರವು ತನ್ನ ಸೇನಾಬಲದಿಂದ ಭೂಪ್ರದೇಶದಲ್ಲಿ ತನ್ನ ಶಕ್ತಿಯನ್ನು ಹರಡಿತ್ತು. ಭೂ ರಾಷ್ಟ್ರವು ತನ್ನ ಶತ್ರುವಿನ ಭೂ ಪ್ರದೇಶದ ಮೇಲೆ ದಂಡಯಾತ್ರೆ ಮಾಡಿತು. ನೌಕಾರಾಷ್ಟ್ರವು ತನ್ನ ಶತ್ರುವಿನ ಸಮುದ್ರದ ಪ್ರದೇಶದ ಮೇಲೆ ಆಕ್ರಮಣಮಾಡಲು ಪ್ರಯತ್ನಿಸಿತು. ಅಟಿಕ, ಥ್ರೇಸ್, ಪಶ್ಚಿಮ ಗ್ರೀಸ್ ಇವೇ ಈ ಯುದ್ಧದ ಮುಖ್ಯ ರಂಗಭೂಮಿಯಾಗಿದ್ದವು.

iii. **ತಾತ್ಕಾಲಿಕ ಕಾರಣಗಳು**—ಮೇಲೆ ಹೇಳಿದ ಮೂಲಕಾರಣಗಳಲ್ಲದೆ ಅನೇಕ ತಾತ್ಕಾಲಿಕ ಕಾರಣಗಳಿದ್ದವು.

a. ಕಾರ್ಸಿರ ಮತ್ತು ಇಪಿಡಾಮ್ನಸ್‌ನ ಅಂತರ್ಯುದ್ಧ—ಇಪಿಡಾಮ್ನಸ್ ಎಂಬ ರಾಷ್ಟ್ರವು ಕಾರ್ಸಿರ ಸ್ಥಾಪಿಸಿದ ವಸಾಹತುವಾಗಿತ್ತು. ಕಾರ್ಸಿರ ರಾಷ್ಟ್ರವು ಕಾರಿಂತ ಸ್ಥಾಪಿಸಿದ ವಸಾಹತುವಾಗಿತ್ತು. ಇಪಿಡಾಮ್ನಸ್ ನಗರ

ದಲ್ಲಿ ಪ್ರಜೆಗಳಿಗೂ ಕುಲೀನರಿಗೂ ಘರ್ಷಣೆಯುಂಟಾಯಿತು. ಪ್ರಜೆಗಳು ತಮ್ಮ ಮಾತೃರಾಷ್ಟ್ರವಾದ ಕಾರ್ಸಿರದ ಸಹಾಯವನ್ನು ಅಪೇಕ್ಷಿಸಿದರು. ಆದರೆ ಕಾರ್ಸಿರ ಸಹಾಯಮಾಡಲಿಲ್ಲ. ಆಗ ಇಪಿಡಾಮ್ನುಸಿನ ಪ್ರಜೆಗಳು ಕಾರಿಂತನ ಸಹಾಯವನ್ನು ಹೊಂದಬೇಕಾಯಿತು. ಕಾರ್ಸಿರ ಇದಕ್ಕೆ ವಿರೋಧಿಸಿ ಕಾರಿಂತ ರಾಷ್ಟ್ರವು ಇಪಿಡಾಮ್ನುಸಿಗೆ ಸಹಾಯಮಾಡಕೂಡದೆಂದು ಪ್ರತಿಭಟಿಸಿತು. ಕಾರ್ಸಿರ ಇಪಿಡಾಮ್ನುಸ್ ನಗರಕ್ಕೆ ಮುತ್ತಿಗೆ ಹಾಕಿ ಕ್ರಿ. ಪೂ. ೪೩೫ ರಲ್ಲಿ ಅಂಬ್ರೇಸಿಯನ್ ಕೊಲ್ಲಿಯ ಹತ್ತಿರ ಕಾರಿಂತ ನೌಕೆಯನ್ನು ಸೋಲಿಸಿತು. ಇಪಿಡಾಮ್ನುಸ್ ನಗರವನ್ನು ಆಕ್ರಮಿಸಿತು. ಕಾರಿಂತ್ ರಾಷ್ಟ್ರವು ಕಾರ್ಸಿರ ರಾಷ್ಟ್ರದ ಮೇಲೆ ಯುದ್ಧಮಾಡಲು ತಕ್ಷಣವೇ ಸಿದ್ಧಮಾಡಿಕೊಂಡಿತು. ಕಾರ್ಸಿರ ರಾಷ್ಟ್ರವು ಅಥೆನ್ಸ್ ರಾಷ್ಟ್ರದ ಸಹಾಯವನ್ನು ಹೊಂದಿ ಕೇವಲ ತನ್ನ ರಕ್ಷಣೆಗೋಸ್ಕರ ಒಪ್ಪಂದವನ್ನು ಮಾಡಿಕೊಂಡಿತು. ಕ್ರಿ. ಪೂ. ೪೩೩ ರಲ್ಲಿ ಸಿಬೋಟ ಎಂಬ ನೌಕಾಕದನದಲ್ಲಿ ಹತ್ತು ಅಥೆನ್ಸ್ ನೌಕೆಯ ಸಹಾಯದಿಂದ ಕಾರಿಂತ್ ನೌಕೆಯನ್ನು ಸೋಲಿಸಲು ಸಾಧ್ಯವಾಯಿತು. ಕಾರಿಂತ್ ರಾಷ್ಟ್ರವು ತಕ್ಷಣವೇ ಸ್ಪಾರ್ಟ ರಾಷ್ಟ್ರಕ್ಕೆ ಅಥೆನ್ಸ್ ರಾಷ್ಟ್ರವು ಮೂವತ್ತು ವರ್ಷದ ಕೌಲನ್ನು ಉಲ್ಲಂಘಿಸಿದೆ ಎಂದು ಆರೋಪಿಸಿತು. ಆದರೆ ಅಥೆನ್ಸ್ ರಾಷ್ಟ್ರವು ಕಾರ್ಸಿರ ರಾಷ್ಟ್ರದೊಡನೆ ಕೇವಲ ರಕ್ಷಣೆಯ ಕೌಲನ್ನು ಮಾಡಿಕೊಂಡಿತ್ತು. ಕಾರಿಂತ್ ದೂಷಣೆಯ ನೆಪದಿಂದ ಸ್ಪಾರ್ಟ ರಾಷ್ಟ್ರವು ಅಥೆನ್ಸ್ ರಾಷ್ಟ್ರದ ಮೇಲೆ ಯುದ್ಧಮಾಡಲು ಅವಕಾಶ ಸಿಕ್ಕಿತು.

b. **ಪೊಟಿಡಿಯನ್ ಘಟನೆ**—ಪೊಟಿಡಿಯ ಎಂಬ ನಗರರಾಷ್ಟ್ರವು ಕಾರಿಂತ ರಾಷ್ಟ್ರದ ವಸಾಹತುವಾಗಿತ್ತು. ಆದರೆ ಪೊಟಿಡಿಯ ಡೆಲಾಸ್ ಒಕ್ಕೂಟವನ್ನು ಸೇರಿತ್ತು. ಪೊಟಿಡಿಯ ರಾಷ್ಟ್ರವು ಪ್ರತಿಯೊಂದು ವರ್ಷವೂ ಕಾರಿಂತ ರಾಷ್ಟ್ರದಿಂದ ನ್ಯಾಯಾಧಿಕಾರಿಗಳನ್ನು ನೇಮಿಸುತಿತ್ತು. ಅಥೆನ್ಸ್ ರಾಷ್ಟ್ರಕ್ಕೂ ಕಾರಿಂತ ರಾಷ್ಟ್ರಕ್ಕೂ ಘರ್ಷಣೆಯಾದಮೇಲೆ ಅಥೆನ್ಸ್ ರಾಷ್ಟ್ರವು ಕಾರಿಂತ ರಾಷ್ಟ್ರದಿಂದ ನ್ಯಾಯಾಧಿಕಾರಿಗಳನ್ನು ನೇಮಿಸಬಾರದೆಂದು ಪೊಟಿಡಿಯಕ್ಕೆ ಆಜ್ಞೆಮಾಡಿತು. ಪೊಟಿಡಿಯ ಇದಕ್ಕೆ ಒಪ್ಪಲಿಲ್ಲ. ಅಥೆನ್ಸ್ ಪೊಟಿಡಿಯ ಮೇಲೆ ದಂಡಯಾತ್ರೆಗೆ ಸಿದ್ಧವಾಯಿತು. ಅಥೆನ್ಸ್ ಕಾರಿಂತನ ಸೈನ್ಯವನ್ನು

ಸೋಲಿಸಿ ಪ್ರೊಟಿಡಿಯ ನಗರಕ್ಕೆ ಮುತ್ತಿಗೆ ಹಾಕಿತು. ಪ್ರೊಟಿಡಿಯ ಸ್ಪಾರ್ಟ ರಾಷ್ಟ್ರಕ್ಕೆ ಮನವಿಮಾಡಿಕೊಂಡಿತು. ಆದರೆ ಪ್ರೊಟಿಡಿಯ ದಂಗೆ ಏಳಲು ಕಾರಿಂತ್ ಮತ್ತು ಸ್ಪಾರ್ಟರಾಷ್ಟ್ರಗಳು ಗುಟ್ಟಾಗಿ ಉತ್ತೇಜನ ಕೊಟ್ಟಿದ್ದವು.

c. **ಮೆಗರಿಯನ್ ಶಾಸನ**—ಅಥೆನ್ಸ್ ರಾಷ್ಟ್ರವು ಮೆಗರವನ್ನು ತನ್ನ ಬಂದರುಗಳಲ್ಲಿ ವ್ಯಾಪಾರ ನಡೆಸಕೂಡದೆಂದು ಒಂದು ಶಾಸನ ಮಾಡಿತು. ಕ್ರಿ. ಪೂ. ೪೩೨ ರಲ್ಲಿ ಮೆಗರನಿಯನರು ಸ್ಪಾರ್ಟಕ್ಕೆ ಮನವಿ ಮಾಡಿಕೊಂಡರು. ಆದರೆ ಅಥೆನ್ಸ್ ಮಾಡಿದ್ದು ಸರಿ. ಮೆಗರ ಕಾರಿಂತ್‌ಗೆ ಸಿಬೋಟ ನೌಕಾಕದನದಲ್ಲಿ ಸಹಾಯಮಾಡಿತ್ತು.

ಸ್ಪಾರ್ಟನಗರದಲ್ಲಿ ಅಥೆನ್ಸ್‌ನ ವಿರೋಧಿಗಳು ಒಟ್ಟುಗೂಡಿ ಸಮಾಲೋಚನೆ ನಡೆಸಿದರು. ಇದು ಒಂದು ರೀತಿಯ ಕಾಂಗ್ರೆಸ್ ಸಂಸ್ಥೆಯಾಯಿತು. ಸ್ಪಾರ್ಟ ನಾಯಕತ್ವವನ್ನು ವಹಿಸಿತು. ಮುಖ್ಯವಾಗಿ ಅಥೆನ್ಸಿನ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂಬುದೇ ಉದ್ದೇಶ. ಅನೇಕ ಪ್ರತಿನಿಧಿಗಳು ಅಥೆನ್ಸಿನ ಮೇಲೆ ಆರೋಪಣೆ ಮಾಡಿ ಶಿಕ್ಷಿಸಬೇಕೆಂದು ಒತ್ತಾಯಪಡಿಸಿದರು. ಸ್ಪಾರ್ಟ ಅಥೆನ್ಸಿನ ಮೇಲೆ ಎಲ್ಲಾ ತಪ್ಪನ್ನೂ ಹಾಕಿ ಯುದ್ಧ ಘೋಷಿಸುವುದಕ್ಕೆ ಮುಂಚೆ ಅನೇಕ ಶರತ್ತುಗಳನ್ನು ವಿಧಿಸಿತು. ಮುಖ್ಯವಾಗಿ ಪೆರಿಕ್ಲಿಸನನ್ನು ಬಹಿಷ್ಕಾರ ಮಾಡುವುದು, ಪ್ರೊಟಿಡಿಯದಿಂದ ಸೈನ್ಯವನ್ನು ಹಿಂತೆಗೆಯುವುದು, ಎಜಿನ ರಾಷ್ಟ್ರಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು ಕೊಡುವುದು, ಮೆಗರಿಯನ್ ಶಾಸನವನ್ನು ರದ್ದುಮಾಡುವುದು, ತನ್ನ ಸಾಮ್ರಾಜ್ಯವನ್ನು ಕೊನೆಗಾಣಿಸುವುದು—ಇವೇ ಶರತ್ತುಗಳು. ಈ ಶರತ್ತುಗಳನ್ನು ಒಪ್ಪಿಕೊಂಡಿದ್ದೇ ಆದರೆ ಅಥೆನ್ಸ್ ರಾಷ್ಟ್ರವು ನಾಶವಾದ ಹಾಗೆ. ಪೆರಿಕ್ಲಿಸನು ಈ ವಿಚಾರಗಳನ್ನು ಪರಿಶೀಲಿಸಲು ನಿಷ್ಪಕ್ಷವಾದ ಮಧ್ಯಸ್ಥಿಕೆ ವಹಿಸಲು ಒಪ್ಪಿದನು. ಸ್ಪಾರ್ಟ ಮತ್ತು ಇತರ ರಾಷ್ಟ್ರಗಳು ಇದಕ್ಕೆ ಒಪ್ಪದೆ ಅಥೆನ್ಸ್ ಮೂವತ್ತು ವರ್ಷದ ಕೌಲನ್ನು ಉಲ್ಲಂಘಿಸಿತು ಎಂದು ಘೋಷಿಸಿ, ಯುದ್ಧಸಿದ್ಧತೆಗೆ ಪ್ರಾರಂಭಿಸಿದವು.

d. **ಪ್ಲಾಟೇಯ ಮೇಲೆ ಥೀಬನರ ದಾಳಿ**—ಕ್ರಿ. ಪೂ. ೪೩೧ ರಲ್ಲಿ ಥೀಬನರು ಕಾರಣವಿಲ್ಲದೆ ಅಕಸ್ಮಾತ್ತಾಗಿ ಪ್ಲಾಟೇಯ ನಗರದ ಮೇಲೆ ದಾಳಿಮಾಡಿದರು. ಪ್ಲಾಟೇಯನರು ಧೈರ್ಯದಿಂದ ಥೀಬನರನ್ನು

ಎದುರಿಸಿ ೧೮೦ ಥೀಬನರನ್ನು ಸೆರೆಹಿಡಿದರು. ಅವರಿಗೆ ಮರಣದಂಡನೆ ವಿಧಿಸಿದರು. ಅಥೆನ್ಸ್ ಥೀಬನರ ಸಹಾಯಕ್ಕೆ ಒಂದು ರಕ್ಷಣಾಸೇನೆಯನ್ನು ಕಳುಹಿಸಿತು. ಥೀಬನರ ದಾಳಿಯು ಮೂವತ್ತು ವರ್ಷದ ಕೌಲಿನ ಪ್ರತ್ಯಕ್ಷ ಉಲ್ಲಂಘನೆ ಎಂದು ಹೇಳಬಹುದು. ಸ್ಪಾರ್ಟನರ ಪರವಾಗಿ ಪೆಲಿಪೊನಿಸಿಯನ್ ರಾಷ್ಟ್ರಗಳು, ಮಿಗರ, ಭೋಷಿಯ, ಅಂಬ್ರೇಸಿಯ, ಲ್ಯೂಕಾಸ್ ಮತ್ತು ಅನಕ್ಟೋರಿಯಂ ಸಹಾಯ ಮಾಡಿದವು. ಅಥಿನಿಯನರ ಪರವಾಗಿ ಪ್ಲಾಟೇಯ, ನಾಪಕ್ಟಸ್, ಅಕರ್ನೇನಿಯ, ಕಾರ್ಸಿರ ಮತ್ತು ಸಾಮ್ರಾಜ್ಯದ ಸದಸ್ಯರಾಷ್ಟ್ರಗಳು ಸೇರಿದವು.

ಥೂಸಿಡೈಡಸ್ — ಥೂಸಿಡೈಡಸ್ ಎಂಬ ಅಥೆನ್ಸ್ ರಾಷ್ಟ್ರದ ಶ್ರೀಮಂತನು ಪೆಲಪೋನಿಸಿಯನ್ ಯುದ್ಧದ ಸುಪ್ರಸಿದ್ಧ ಇತಿಹಾಸಕಾರನು. ಯುದ್ಧದಲ್ಲಿ ತಾನೇ ಭಾಗವಹಿಸಿ ತನ್ನ ಸ್ವಂತ ಅನುಭವದಿಂದ ಈ ಯುದ್ಧದ ವಿವರಣೆಯನ್ನು ಬಹಳ ಚೆನ್ನಾಗಿ ಚಿತ್ರಿಸಿದ್ದಾನೆ. ಕ್ರಿ. ಪೂ. ೪೨೪ ರಲ್ಲಿ ಥ್ರೇಸ್ ಪ್ರದೇಶದಲ್ಲಿ ಅಥೆನ್ಸ್ ಸೈನ್ಯದ ನಾಯಕನಾಗಿ ದುರಾದೃಷ್ಟವಶಾತ್ ಸೋತು ದೇಶಭ್ರಷ್ಟನಾದನು. ಇಪ್ಪತ್ತು ವರ್ಷಗಳಕಾಲ ದೇಶಭ್ರಷ್ಟನಾಗಿ ಯುದ್ಧದ ಸುದ್ದಿಯನ್ನು ಸಂಗ್ರಹಿಸಿದನು. ಆತನ ಬರವಣಿಗೆಯು ಸತ್ಯಾಂಶದಿಂದ ಕೂಡಿ, ವಿಚಾರ ಪೂರ್ವಕವಾಗಿ ನಿಷ್ಪಕ್ಷಪಾತದಿಂದ ಕೂಡಿದೆ. ಥೂಸಿ ಡೈಡಸ್‌ನು ಪ್ರಪಂಚದ ಇತಿಹಾಸಕಾರರಲ್ಲಿ ಒಬ್ಬ ಶ್ರೇಷ್ಠನೆಂದು ಒಪ್ಪಬೇಕು.

ಅಧ್ಯಾಯ ೧೯

ಪೆಲಪೊನಿಸಿಯನ್ ಯುದ್ಧದ ಘಟನಾವಳಿ

ಪೆಲಪೋನಿಸಿಯನ್ ಯುದ್ಧದ ಘಟನೆಗಳನ್ನು ಮೂರು ಘಟ್ಟಗಳಾಗಿ ವಿಂಗಡಿಸಬಹುದು. ಮೊದಲನೆಯ ಘಟ್ಟವು (ಕ್ರಿ. ಪೂ. ೪೩೧–೪೨೧) ನಿಸಿಯಸನ ಕೌಲಿನವರೆವಿಗೂ, ಎರಡನೆಯ ಘಟ್ಟವು (ಕ್ರಿ. ಪೂ. ೪೨೧–೪೧೩) ಸಿರಕ್ಯೂಸನ ದಂಡಯಾತ್ರೆಯಿಂದ ಅಥೆನ್ಸ್ ರಾಷ್ಟ್ರವು ನಾಶವಾಗುವವರೆವಿಗೂ, ಮೂರನೆಯ ಘಟ್ಟವು (ಕ್ರಿ. ಪೂ. ೪೧೩–೪೦೪) ಎಗಸ್‌ಪೊಟಮಿ

ಕದನವು ಅಥೆನ್ಸ್ ರಾಷ್ಟ್ರದ ಸರ್ವನಾಶಕ್ಕೆ ಕಾರಣವಾಗುವವರೆವಿಗೂ ಎಂದು ಹೇಳಬಹುದು.

ಮೊದಲನೆಯ ಘಟ್ಟ (ಕ್ರಿ. ಪೂ. ೪೩೧-೪೨೧)—ಸ್ಪಾರ್ಟ ಆಟಿಕಪ್ರದೇಶದ ಮೇಲೆ ಐದು ಸಲ ದಂಡಯಾತ್ರೆ ಮಾಡಿತು. ಅಥೆನ್ಸ್ ನಗರದಲ್ಲಿ ಇದಕ್ಕಿಂತ ವಿನಾಶಕರವಾದ ಮತ್ತೊಂದು ಶತ್ರುವು ತಲೆದೋರಿತು. ಅದು ಪ್ಲೇಗ್ ಎಂಬ ಮಹಾವ್ಯಾಧಿ. ನಗರದಲ್ಲಿ ಅನೇಕಜನರು ಈ ವ್ಯಾಧಿಗೆ ತುತ್ತಾದರು. ಸತ್ತವರನ್ನು ದಹನ ಮಾಡುವುದಕ್ಕೆ ಸಹ ಯಾರೂ ಇರಲಿಲ್ಲ. ಪೌರರು ಪೆರಿಕ್ಲಿಸನ ಮೇಲೆ ಆಪಾದನೆ ಹೊರಿಸಿದರು. ಈ ಮಹಾವ್ಯಾಧಿಗೆ ಆತನನ್ನು ಹೊಣೆಗಾರನನ್ನಾಗಿ ಮಾಡಿದ್ದು ಕಷ್ಟಕಾಲದಲ್ಲಿ ಜನಗಳಿಗೆ ಬುದ್ಧಿಭ್ರಮಣೆ ಉಂಟಾಗುವುದನ್ನು ಸೂಚಿಸುತ್ತದೆ. ಕೊನೆಗೆ ಪೆರಿಕ್ಲಿಸನೇ ಈ ಮಹಾವ್ಯಾಧಿಗೆ ಆಹುತಿಯಾದನು. ಕ್ರಿ. ಪೂ. ೪೨೯ ರಲ್ಲಿ ಪೆರಿಕ್ಲಿಸನು ಪ್ಲೇಗಿನಿಂದ ಸತ್ತನು. ಅಥೆನ್ಸ್ ರಾಷ್ಟ್ರದಲ್ಲಿ ಸರಿಯಾದ ನಾಯಕರೇ ಇಲ್ಲದೆ ಬಹಳ ತೊಂದರೆಯಾಯಿತು. ಪ್ರಜಾಪ್ರಭುತ್ವವು ಸಾಮಾನ್ಯ ಜನರಿಗೆ ರಾಜಕೀಯದಲ್ಲಿ ಉನ್ನತಸ್ಥಾನವನ್ನು ಹೊಂದಲು ಅವಕಾಶಕೊಟ್ಟಿತು. ಇವರಿಗೆ ನಿಜವಾಗಿಯೂ ಯೋಗ್ಯತೆ ಇದ್ದರೆ ಏನೂ ತೊಂದರೆಯಿಲ್ಲ. ಆದರೆ ಅವರು ಕೇವಲ ಬಹುಮತದಿಂದ ಅಧಿಕಾರಕ್ಕೆ ಬಂದರೆ ರಾಷ್ಟ್ರಕ್ಕೆ ಹಾನಿ. ಅಥೆನ್ಸ್ ರಾಷ್ಟ್ರದಲ್ಲಿ ಪೆರಿಕ್ಲಿಸನ ತರುವಾಯ ಸಾಮರ್ಥ್ಯವುಳ್ಳ ನಾಯಕರಿಲ್ಲದೆ ಪೆಲಪೊನಿಸಿಯನ್ ಯುದ್ಧವು ಅಥಿನಿಯನರ ನಾಶಕ್ಕೆ ಕಾರಣವಾಯಿತು. ನಿಸಿಯಸ್ ಎಂಬ ಗುಲಾಮರ ವ್ಯಾಪಾರಿ, ಕ್ಲಿಯಾನ್ ಎಂಬ ಚರ್ಮದ ವ್ಯಾಪಾರಿ, ಹೈಪರ್‌ಬೋಲಸ್ ಎಂಬ ದೀಪ ಮಾಡುವವನೂ ನಾಯಕರಾದರು. ಅವರಿಗೆ ಯುದ್ಧ ಮಾಡುವ ಅನುಭವವು ಏನೇನೂ ಇರಲಿಲ್ಲ. ಅವರ ಅವಿವೇಕವೇ ಅಥೆನ್ಸ್ ನಾಶಕ್ಕೆ ಕಾರಣವಾಯಿತು.

ಥೀಬನರು ಪ್ಲಾಟೀಯ ನಗರಕ್ಕೆ ಮುತ್ತಿಗೆ ಹಾಕಿದರು. ಪ್ಲಾಟೀಯನರು ಎಷ್ಟೇ ಧೈರ್ಯದಿಂದ ಎದುರಿಸಿದರೂ ಕ್ರಿ. ಪೂ. ೪೨೭ ರಲ್ಲಿ ಪ್ಲಾಟೀಯ ನಗರವು ನಾಶವಾಯಿತು. ಪ್ಲಾಟೀಯ ನಗರವು ಪರ್ಷಿಯನರನ್ನು ಸಾಹಸದಿಂದ ಎದುರಿಸಿದ್ದು ಈಗ ಥೀಬನರ ದೌರ್ಜನ್ಯದಿಂದ ಪತನ

ವಾಯಿತು. ಇದೇ ಸಮಯದಲ್ಲಿ ಲೆಸ್‌ಬಾಸ್ ದ್ವೀಪದಲ್ಲಿ ಮಿಟಿಲಿನೆ ಎಂಬ ನಗರವು ಅಥೆನ್ಸ್ ರಾಷ್ಟ್ರಕ್ಕೆ ವಿರೋಧವಾಗಿ ದಂಗೆ ಎದ್ದಿತು. ಅಥೆನ್ಸ್ ಸೈನ್ಯವು ಮಿಟಿಲಿನೆ ನಗರಕ್ಕೆ ಹೋಗಿ ದಂಗೆಯನ್ನು ಮಟ್ಟಹಾಕಿತು. ಪಶ್ಚಿಮ ಗ್ರೀಸಿನ ಕಾರ್ಸಿರ ದ್ವೀಪದಲ್ಲಿ ಅಥಿನಿಯನರ ಸಹಾಯದಿಂದ ಶ್ರೀಮಂತರನ್ನು ಅಡಗಿಸಲಾಯಿತು. ಈ ಒಳಜಗಳದಲ್ಲಿ ಅಥಿನಿಯನರು ತೋರಿಸಿದ ಹಿಂಸೆ, ದೌರ್ಜನ್ಯ, ಅವರ ಹಿಂದಿನ ಕೀರ್ತಿಗೆ ಕಳಂಕವನ್ನುಂಟುಮಾಡಿತು. ಕ್ರಿ. ಪೂ. ೪೨೫ ರಲ್ಲಿ ಅಥಿನಿಯನರ ನೌಕೆಯು ಪೈಲಸ್ ಮತ್ತು ಸ್ಪೆಕ್ಟೇರಿಯಾ ಎಂಬ ಸಣ್ಣ ದ್ವೀಪಗಳನ್ನು ಹಿಡಿದವು. ಸ್ಪಾರ್ಟನರು ಎಷ್ಟೇ ಸಾಹಸದಿಂದ ಕಾದಾಡಿದರೂ ಅನುಕೂಲವಾಗಲಿಲ್ಲ. ಅನೇಕ ಸ್ಪಾರ್ಟನರನ್ನು ಸೆರೆಹಿಡಿದು ಅಥೆನ್ಸ್ ನಗರಕ್ಕೆ ಕಳುಹಿಸಲಾಯಿತು. ಮಧ್ಯಗ್ರೀಸಿನಲ್ಲಿ ಅಥಿನಿಯನರ ಸೈನ್ಯವು ಭೋಷಿಯ ಪ್ರದೇಶಕ್ಕೆ ಮುತ್ತಿಗೆ ಹಾಕಿತು. ಆದರೆ ಕ್ರಿ. ಪೂ. ೪೨೪ ರಲ್ಲಿ ಡೇಲಿಯಂ ಎಂಬ ಕದನದಲ್ಲಿ ಅಥಿನಿಯನರು ಸೋತರು. ಅಥೆನ್ಸ್ ರಾಷ್ಟ್ರವು ಭೋಷಿಯ ಪ್ರದೇಶದಲ್ಲಿ ನಾಯಕತ್ವವನ್ನು ಸ್ಥಾಪಿಸಲು ಸಾಧ್ಯವಾಗಲಿಲ್ಲ. ಥ್ರೇಸ್ ಪ್ರದೇಶದಲ್ಲಿ ಬ್ರಾಸಿಡಸ್ ಎಂಬ ಸ್ಪಾರ್ಟನರ ಸೇನಾನಾಯಕನು ಅಥಿನಿಯನರಿಗೆ ಸೇರಿದ ಆಂಫಿಪಾಲಿಸ್ ಎಂಬ ನಗರಕ್ಕೆ ಕ್ರಿ. ಪೂ. ೪೨೪ ರಲ್ಲಿ ಮುತ್ತಿಗೆ ಹಾಕಿದನು. ಈ ನಗರದ ಮುಖ್ಯ ಸೈನ್ಯಾಧಿಕಾರಿಯಾದ ಥೂಸಿಡೈಡಸ್ ಎಂಬುವನು ಆ ಸಮಯದಲ್ಲಿ ನಗರದಲ್ಲಿಲ್ಲದೆ ನಗರವು ಸ್ಪಾರ್ಟನರ ವಶವಾಯಿತು. ಥೂಸಿಡೈಡಸನ ಅಜಾಗ್ರತೆಗೋಸ್ಕರ ಅವನನ್ನು ಗಡಿಪಾರು ಮಾಡಿದರು. ಇದೇ ವೇಳೆಯಲ್ಲಿ ಥೂಸಿ ಡೈಡಸನು ಪೆಲಪೊನಿಸಿಯನ್ ಯುದ್ಧದ ಇತಿಹಾಸವನ್ನು ಬರೆದನು. ಅಥೆನ್ಸ್ ರಾಷ್ಟ್ರಕ್ಕೆ ಎಲ್ಲೆಲ್ಲೂ ವಿಪತ್ತುಂಟಾಯಿತು. ಯುದ್ಧ ನಡೆಸುವುದು ಸಾಧ್ಯವಾಗಲಿಲ್ಲ. ನಿಷಿಯಸ್ ಎಂಬ ನಾಯಕನು ಸ್ಪಾರ್ಟನರೊಡನೆ ಸಂಧಾನ ನಡೆಸಿ ಕ್ರಿ. ಪೂ. ೪೨೧ ರಲ್ಲಿ ನಿಷಿಯಸ್‌ನ ಕೌಲನ್ನು ಮಾಡಿಕೊಂಡನು. ಈ ಕೌಲಿನಿಂದ ಅಥೆನ್ಸ್ ಮತ್ತು ಸ್ಪಾರ್ಟರಾಷ್ಟ್ರಗಳು ತಾವು ಗೆದ್ದ ಪ್ರದೇಶಗಳನ್ನು ಹಿಂದಕ್ಕೆ ಕೊಡುವುದಾಗಿ ಒಪ್ಪಿದವು. ಸೆರೆಹಿಡಿದವರನ್ನೆಲ್ಲಾ ಬಿಟ್ಟುಕೊಡುವುದಾಗಿಯೂ, ಕಾರಣವಿಲ್ಲದೆ ಯುದ್ಧಮಾಡುವುದಿಲ್ಲವೆಂದೂ ಒಪ್ಪಿದವು. ಆದರೆ ಈ ನಿಷಿಯಸ್‌ನ ಕೌಲು ತಾತ್ಕಾಲಿಕ

ವಾದದ್ದು. ಎರಡು ರಾಷ್ಟ್ರಗಳೂ ಶಾಂತಿಯನ್ನು ಸ್ಥಾಪಿಸಲು ಉತ್ಸಾಹ ತೋರಿಸಲಿಲ್ಲ. ಬಲುಬೇಗ ಈ ಎರಡು ರಾಷ್ಟ್ರಗಳಿಗೆ ತಿಕ್ಕಾಟವುಂಟಾಗಿ ಯುದ್ಧವು ಮುಂದುವರಿಯಿತು. ನಿಸಿಯಸ್‌ನ ರಾಜ್ಯತಂತ್ರವು ಫಲಿಸಲಿಲ್ಲ.

ಎರಡನೆಯ ಘಟ್ಟ (ಕ್ರಿ. ಪೂ. ೪೨೧-೪೧೩)—ಎರಡನೆಯ ಘಟ್ಟದಲ್ಲಿ (ಕ್ರಿ. ಪೂ. ೪೨೧–೪೧೩) ಸಿರಕ್ಯೂಸನ ದಂಡಯಾತ್ರೆಯು ನಡೆಯಿತು. ಈ ದಂಡಯಾತ್ರೆಯು ಅಥೆನ್ಸ್ ರಾಷ್ಟ್ರದ ಪ್ರತಿಷ್ಠೆಗೆ ಸಾವಿನ ಪೆಟ್ಟು ಎಂದು ಹೇಳಬಹುದು. ಅಥೆನ್ಸ್ ರಾಷ್ಟ್ರವು ಈ ದಂಡಯಾತ್ರೆಯನ್ನು ವಿಪರೀತ ಜಾಗರೂಕತೆಯಿಂದ ಕ್ರಮಪಡಿಸಿತು. ಸಿಸಿಲಿ ದ್ವೀಪದಲ್ಲಿ ಅಯೋನಿಯನರೂ ಡೋರಿಯನರೂ ತಮ್ಮ ವಸಾಹತುಗಳನ್ನು ಸ್ಥಾಪಿಸಿದ್ದರು. ಸೆಜೆಸ್ಟ, ಲಿಯಾಂಟಿನಿ ಮತ್ತು ರೀಜಿಯಂ ಎಂಬ ಅಯೋನಿಯನರ ನಗರ ರಾಷ್ಟ್ರಗಳು ಅಥೆನ್ಸ್ ರಾಷ್ಟ್ರದೊಡನೆ ಒಪ್ಪಂದವನ್ನು ಮಾಡಿಕೊಂಡಿದ್ದವು. ಸಿಸಿಲಿ ದ್ವೀಪವು ಪ್ರಾಚೀನಕಾಲದ ಸುವರ್ಣಭೂಮಿ ಎಂದು ಹೇಳುತ್ತಿದ್ದರು. ದ್ವೀಪವು ಫಲವತ್ತಾಗಿತ್ತು. ಅಲ್ಲಿ ಸ್ಥಾಪಿಸಿದ ವಸಾಹತುಗಳೂ ಐಶ್ವರ್ಯದಿಂದ ಏಳಿಗೆ ಹೊಂದಿದ್ದವು. ಡೋರಿಯನರ ವಸಾಹತುಗಳಲ್ಲಿ ಸಿರಾಕ್ಯೂಸ್ ಎಂಬ ನಗರ ರಾಷ್ಟ್ರವು ಪ್ರಸಿದ್ಧವಾದದ್ದು. ಸಿರಾಕ್ಯೂಸ್ ಆಕ್ರಮಣ ನೀತಿಯನ್ನು ಅನುಸರಿಸಿ ಅಯೋನಿಯನರ ವಸಾಹತುಗಳ ಮೇಲೆ ದಬ್ಬಾಳಿಕೆಯನ್ನು ತೋರಿಸಿತು. ಕ್ರಿ. ಪೂ. ೪೨೭ ರಲ್ಲಿ ಲಿಯಾಂಟಿನಿ ಅಥೆನ್ಸ್‌ಗೆ ತನ್ನ ರಾಯಬಾರಿಯನ್ನು ಕಳುಹಿಸಿ ಸಿರಾಕ್ಯೂಸ್ ದಬ್ಬಾಳಿಕೆಯನ್ನು ತಡೆಗಟ್ಟಲು ಸಹಾಯವನ್ನು ಅಪೇಕ್ಷಿಸಿತು. ಅಯೋನಿಯನರ ಇತರ ವಸಾಹತುಗಳೂ–ರೀಜಿಯಂ, ಕಟನೆ, ನ್ಯಾಕ್ಸಸ್, ಕಾಮರಿನ –ಲಿಯಾಂಟಿನಿಗೆ ಬೆಂಬಲ ಕೊಟ್ಟವು. ಅಥೆನ್ಸ್ ಈ ಸದವಕಾಶವನ್ನು ಉಪಯೋಗಿಸಿಕೊಳ್ಳಲು ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಂಡಿತು. ಇದೇ ಸಮಯದಲ್ಲಿ ಸಿಸಿಲಿ ದ್ವೀಪದಲ್ಲಿ ಡೋರಿಯನರು ಒಟ್ಟುಗೂಡಿ ಗೀಲ ಎಂಬ ಸ್ಥಳದಲ್ಲಿ ರಾಷ್ಟ್ರೀಯ ಸಭೆಯನ್ನು ಕರೆದರು. ಈ ಸಭೆಯಲ್ಲಿ ತಮ್ಮ ಒಳ ಜಗಳಗಳನ್ನು ತಾವೇ ನಿಷ್ಕರ್ಷೆಮಾಡಬೇಕೆಂದೂ ಪರರಾಷ್ಟ್ರಗಳು ಸಿಸಿಲಿ ದ್ವೀಪದಲ್ಲಿ ಮಧ್ಯಸ್ಥಿಕೆ ವಹಿಸಕೂಡದೆಂದೂ ನಿರ್ಣಯಿಸಿದರು. ಆದರೆ ಲಿಯಾಂಟಿನಿ ನಗರದಲ್ಲಿ ಒಂದು ಪಿತೂರಿಯು ನಡೆದು ಸಿರಕ್ಯೂಸ್ ಸೈನ್ಯವು

ನಗರವನ್ನು ಆಕ್ರಮಿಸಿತು.

ಕ್ರಿ. ಪೂ. ೪೧೭ ರಲ್ಲಿ ಸೆಜೆಸ್ಟ ಎಂಬ ನಗರ ರಾಷ್ಟ್ರವು ಸೆಲಿನಸ್ ರಾಷ್ಟ್ರದ ದಾಳಿಯನ್ನು ತಡೆಯಲು ಅಥೆನ್ಸಿನ ಸಹಾಯವನ್ನು ಅಪೇಕ್ಷಿಸಿತು. ಅಥೆನ್ಸ್ ಸಿಸಿಲಿ ದ್ವೀಪಕ್ಕೆ ತನ್ನ ರಾಯಭಾರಿಗಳನ್ನು ಕಳುಹಿಸಿತು. ಈ ರಾಯಭಾರಿಗಳು ಅಯೋನಿಯನರ ನಗರಗಳು ಎಷ್ಟರಮಟ್ಟಿಗೆ ಸೇನಾಶಕ್ತಿಯನ್ನು ಹೊಂದಿ ಅಥೆನ್ಸ್ ದಂಡಯಾತ್ರೆಯ ಖರ್ಚನ್ನು ವಹಿಸಲು ಶಕ್ಯವಾಗಿವೆ ಎಂಬುದನ್ನು ತಿಳಿಯಬೇಕಾಗಿತ್ತು. ನಿಜವಾಗಿ ಈ ರಾಷ್ಟ್ರಗಳು ಪ್ರಬಲವಾಗಿರಲಿಲ್ಲ. ಸಾಕಾದಷ್ಟು ಐಶ್ವರ್ಯವಿರಲಿಲ್ಲ. ಆದರೆ ಸೆಜೆಸ್ಟ ನಗರಕ್ಕೆ ಬಂದ ಅಥೆನ್ಸ್ ರಾಯಭಾರಿಗಳಿಗೆ ತಾತ್ಕಾಲಿಕವಾಗಿ ಸತ್ಕಾರವನ್ನು ಏರ್ಪಡಿಸಿ ಅವರ ಒಳ್ಳೆಯ ಅಭಿಪ್ರಾಯವನ್ನು ಪಡೆದವು. ರಾಯಭಾರಿಗಳು ಅಥೆನ್ಸಿಗೆ ಹಿಂತಿರುಗಿ ಸಿಸಿಲಿ ದ್ವೀಪದ ಅಯೋನಿಯನರ ಐಶ್ವರ್ಯವನ್ನು ಉತ್ಪ್ರೇಕ್ಷೆ ಮಾಡಿದರು. ಅಥೆನ್ಸ್ ನಗರದಲ್ಲಿ ಸಿಸಿಲಿಯ ದಂಡಯಾತ್ರೆಗೆ ಉತ್ಸಾಹದಿಂದ ಸಿದ್ಧತೆಗಳಾದವು. ಅನೇಕ ಸ್ವಯಂಸೇವಕರೂ ಸೈನ್ಯಕ್ಕೆ ಸೇರಿದರು. ಆದರೆ ನಿಸಿಯಸ್ ಈ ದಂಡಯಾತ್ರೆಯನ್ನು ವಿರೋಧಿಸಿದನು. ಆತನ ಮಾತನ್ನು ಯಾರೂ ಲಕ್ಷಿಸಲಿಲ್ಲ. ಆತನನ್ನೇ ನಾಯಕನನ್ನಾಗಿ ಮಾಡಿದ್ದು ದೊಡ್ಡ ತಪ್ಪು. ಆಲ್ಕಿಬಿಯೆಡಿಸ್ ಮತ್ತು ಲಾಮಖಸ್ ಎಂಬ ಇನ್ನೂ ಇಬ್ಬರು ನಾಯಕರನ್ನು ನೇಮಿಸಿದರು. ಆಲ್ಕಿಬಿಯಡಿಸ್ ಎಂಬ ನಾಯಕನು ತನ್ನ ಸೌಂದರ್ಯತೆಯಿಂದ ಅಥೀನಿಯರನ್ನು ಮುಗ್ಧರನ್ನಾಗಿ ಮಾಡಿದ್ದನು. ಆತನು ಅಥೆನ್ಸ್ ಸಮಾಜದಲ್ಲಿ ಮಹಿಳೆಯರಿಗೆ ತೋರಿಸುವ ಗೌರವವನ್ನು ಹೊಂದಿದ್ದನು. ಆತನ ಕಲ್ಪನಾಶಕ್ತಿ, ಪರಿಜ್ಞಾನ, ವಾಕ್ಪಟುತ್ವ, ವೈಯಕ್ತಿಕ ಪ್ರತಿಷ್ಠೆ ಚಿತ್ತವಾದಕವಾಗಿದ್ದರೂ ಮುಖ್ಯವಾಗಿ ಶೀಲವಿಲ್ಲದೆ ಅವು ಶೋಭಿಸಲಿಲ್ಲ. ಆತನ ನ್ಯೂನತೆಗಳೇ ಆ ಕಾಲದ ಸಂಪ್ರದಾಯವಾದವು. ಆತನ ರಾಷ್ಟ್ರಪ್ರೇಮವು ತನ್ನ ಸ್ವಾರ್ಥವನ್ನು ಸಾಧಿಸುವಮಟ್ಟಿಗೆ ಕೂಡಿತ್ತು. ಈ ಮೂರು ನಾಯಕರಲ್ಲಿ ಲ್ಯಾಮಖಸನೇ ನಿಜವಾದ ಸೇನಾನಾಯಕನು. ಕ್ರಿ. ಪೂ. ೪೧೫ ರಲ್ಲಿ ಒಂದು ರಹಸ್ಯಗರ್ಭಿತವಾದ ಘಟನೆಯು ನಡೆಯಿತು. ಅಥೆನ್ಸ್ ನಗರದಲ್ಲಿ ದೇವಸ್ಥಾನಗಳ ಮುಂದೆಯೂ ಪುರಜನರ ಗೃಹಗಳ ಮುಂದೆಯೂ ಇದ್ದ ಹೆರ್ಮೆ

ಎಂಬ ಚೌಕ ಕಲ್ಲಿನ ಪ್ರತಿಮೆಗಳನ್ನು ಯಾರೋ ದುರಾತ್ಮರು ಊನ ಮಾಡಿದರು. ದಂಡಯಾತ್ರೆಗೆ ಮುಂಚೆ ನಡೆದ ಈ ಘಟನೆಯು ಅಶುಭ ವೆಂದು ಆಲ್ಕಿಬಿಯಡಿಸನ ಶತ್ರುಗಳು ಅವನ ಮೇಲೆ ತಪ್ಪನ್ನು ಹೊರಿಸಿದರು. ಆತನ ವಿಚಾರಣೆಯನ್ನು ಮುಂದಕ್ಕೆ ನಡೆಯಿಸುವಂತೆ ನಿಷ್ಕರ್ಷೆಮಾಡಿ ಆತನನ್ನು ಬಲವಂತದಿಂದ ಸಿಸಿಲಿಗೆ ಕಳುಹಿಸಿದರು. ಆಲ್ಕಿಬಿಯಡಿಸನಿಗೆ ಉತ್ಸಾಹವು ಕುಗ್ಗಿ ಅವನು ಬಲವಂತದಿಂದ ನಾಯಕತ್ವವನ್ನು ವಹಿಸಬೇಕಾ ಯಿತು. ಅಥೆನ್ಸ್ ನೌಕೆಯು ಸಮರ್ಥವಾಗಿತ್ತು. ಸುಮಾರು ೧೩೪ ಹಡಗು ಗಳೂ, ೫೧೦೦ ಕಾಲಾಳುಗಳೂ, ೩೦,೦೦೦ ಯೋಧರೂ ಇರುವ ಅಥೆನ್ಸ್ ಸೈನ್ಯಪಡೆ ಮೊದಲು ರೀಜಿಯಂ ನಗರವನ್ನು ಸೇರಿತು. ಆದರೆ ಆ ನಗರದ ಪೌರರು ವಿಶೇಷವಾಗಿ ಮಾತಾಡದೆ ಮೌನವನ್ನು ಸೂಚಿಸಿದರು. ಸೆಜೆಸ್ಟ ನಗರದ ಐಶ್ವರ್ಯವು ಕೇವಲ ಭ್ರಮೆಯಾಯಿತು. ರೀಜಿಯಂನಲ್ಲಿ ಯುದ್ಧದ ಸಭೆಯನ್ನು ಮಾಡಿ ಮುಂದಿನ ಕಾರ್ಯಕ್ರಮವನ್ನು ಯೋಚಿಸಿದರು. ಈ ಸಭೆಯಲ್ಲಿ ಆಲ್ಕಿಬಿಯಡಿಸನ ಸಲಹೆಯನ್ನು ಒಪ್ಪಬೇಕಾಯಿತು. ಸಿಸಿಲಿಯ ನಗರಗಳನ್ನು ರಾಜ್ಯತಂತ್ರದಿಂದ ಗೆಲ್ಲಬೇಕೆಂದೂ, ಸೆಲಿನಸ್ ಮತ್ತು ಸಿರಾ ಕ್ಯೂಸ್ ನಗರಗಳು ಬಲವಂತದಿಂದ ನ್ಯಾಯತೀರ್ಪಿಗೆ ಬರಬೇಕೆಂದೂ ಆತನ ಸಲಹೆಯಾಗಿತ್ತು. ಲಾಮಕಸನು ಸಿರಾಕ್ಯೂಸ್ ಸಿದ್ಧತೆ ಮಾಡಿ ಕೊಳ್ಳುವುದಕ್ಕೆ ಮುಂಚೆಯೇ ದಂಡಯಾತ್ರೆ ಮಾಡಬೇಕೆಂದು ಸೂಚಿಸಿದನು. ಈ ಸಲಹೆಯೂ ವಿಹಿತವಾಗಿದ್ದರೂ ಒಪ್ಪಲಿಲ್ಲ. ನ್ಯಾಕ್ಸಸ್ ಮತ್ತು ಕಟನೆ ನಗರಗಳನ್ನು ಕುಶಲತೆಯಿಂದ ಗೆದ್ದರು. ಅಥೆನ್ಸ್ ನೌಕೆಯು ಸಿರಾ ಕ್ಯೂಸ್‌ನ ಬಂದರಿನಲ್ಲಿ ನೆಲಸಿತು. ಈ ವೇಳೆಯಲ್ಲಿ ಆಲ್ಕಿಬಿಯಡಿಸನು ತನ್ನ ವಿಚಾರಣೆಗೋಸ್ಕರ ಹಿಂದಕ್ಕೆ ಬರಬೇಕೆಂದು ಆಜ್ಞೆಯಾಯಿತು. ಆಲ್ಕಿಬಿಯಡಿಸನು ತಾನು ಹಿಂದಕ್ಕೆ ಹೋದರೆ ಶಿಕ್ಷೆಯನ್ನು ಅನುಭವಿಸ ಬೇಕೆಂದು ಯೋಚಿಸಿ ಒಳ್ಳೆ ಸಂದಿಗ್ಧ ಸಮಯದಲ್ಲಿ ಅಥೆನ್ಸ್ ರಾಷ್ಟ್ರಕ್ಕೆ ರಾಜದ್ರೋಹಿಯಾದನು; ತನಗೆ ಬಂದ ಆಜ್ಞೆಯನ್ನು ಉಲ್ಲಂಘಿಸಿ, ನಾಯಕತ್ವವನ್ನು ಬಿಟ್ಟು, ದೇಶಭ್ರಷ್ಟನಾದನು; ಸ್ಪಾರ್ಟನರ ಆಶ್ರಯ ವನ್ನು ಹೊಂದಿ ಅಥೆನ್ಸ್ ರಾಷ್ಟ್ರದ ವಿರೋಧಿಯಾದನು.

ಸಿರಾಕ್ಯೂಸ್ ಮೇಲೆ ಮೊದಲನೆಯ ಮುತ್ತಿಗೆ. ಕ್ರಿ. ಪೂ.

೪೧೪—ಆಲ್ಕಿಬಿಯಡಿಸನನ್ನು ಹಿಂದಕ್ಕೆ ಕರೆದಿದ್ದು ಎರಡನೆಯ ದೊಡ್ಡ ತಪ್ಪು. ಆತನ ಸಲಹೆಯಂತೆ ಸ್ಪಾರ್ಟನರು ಸಿರಾಕ್ಯೂಸಿಗೆ ಸಹಾಯ ಮಾಡಲು ಗಿಲಿಪ್ಪಸ್ ಎಂಬ ಪ್ರಬಲವಾದ ಸೇನಾನಾಯಕನನ್ನು ಕಳುಹಿಸಿದರು. ಅಥಿನಿಯನರ ಸೈನ್ಯವು ಸಿರಾಕ್ಯೂಸ್ ನಗರದ ಉತ್ತರಕ್ಕೆ ಇಪಿಪೊಲೆ ಎಂಬ ಗುಡ್ಡದ ಬಳಿ ನೆಲಸಿತು. ಈ ಗುಡ್ಡದಿಂದ ದಕ್ಷಿಣಕ್ಕೆ ಬಂದರಿನವರೆವಿಗೂ ಒಂದು ಉದ್ದವಾದ ಗೋಡೆಯನ್ನು ಕಟ್ಟಲು ಆರಂಭಿಸಿದರು. ಸಿರಾಕ್ಯೂಸನರು ಈ ಗೋಡೆಯ ಮಧ್ಯದಲ್ಲಿ ಇನ್ನೊಂದು ಗೋಡೆಯನ್ನು ಕಟ್ಟಲು ಪ್ರಯತ್ನಸಿದರು. ಅಥಿನಿಯನರು ಜವುಗು ಪ್ರದೇಶಕ್ಕೆ ಇಳಿದು ಬಂದು ಸಿರಾಕ್ಯೂಸನರು ಕಟ್ಟಿದ ಗೋಡೆಯನ್ನು ನಾಶಮಾಡಬೇಕೆಂದು ಶತ್ರುಗಳ ಹೊಡೆತವನ್ನು ತಡೆಯಲಾರದೆ ಯುದ್ಧಮಾಡುತ್ತಿರುವಾಗ ಅಕಸ್ಮಾತ್ತಾಗಿ ಲಾಮಕಸನು ಕೊಲ್ಲಲ್ಪಟ್ಟನು. ಲಾಮಕಸನ ಮರಣವು ಮೂರನೆಯ ಮಹಾಪೆಟ್ಟು. ನಿಸಿಯಸ್‌ಗೆ ದಿಕ್ಕುತೋಚದೆ ಹಿಂದಕ್ಕೆ ಹೋಗಬೇಕೆಂದು ಯೋಚಿಸುತ್ತಿದ್ದನು. ಅಥಿನಿಯನರು ಗೋಡೆ ಕಟ್ಟುವುದನ್ನು ಕೈಬಿಟ್ಟರು. ಗಿಲಿಪ್ಪಸನು ಸಿರಾಕ್ಯೂಸ್ ನಗರವನ್ನು ಪ್ರವೇಶಿಸಲು ಅನುಕೂಲವಾಗಿ ಲಾಬ್ಡಲನ್ ಎಂಬ ಕೋಟೆಯನ್ನು ಹಿಡಿದನು. ಸಿರಾಕ್ಯೂಸನರು ಕಟ್ಟಿದ ಅಡ್ಡಗೋಡೆಯು ಪೂರ್ತಿಯಾಗಿ ಅಥಿನಿಯನರನ್ನು ಸೆರೆಹಿಡಿಯಲು ಅವಕಾಶವಾಯಿತು. ನಿಸಿಯಸನು ತನ್ನ ಸೈನ್ಯದ ವಿಪತ್ತನ್ನು ವಿವರಿಸಿ ತನ್ನನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಅಥಿನಿಯನರನ್ನು ಬೇಡಿಕೊಂಡನು. ಇನ್ನೊಂದು ಸಮರ ಸಜ್ಜಸೇನೆಯನ್ನು ಇರಿಮೆದಸ್ ಮತ್ತು ಡೆಮಾಸ್ತನಿಸ್ ಎಂಬುವರ ನಾಯಕತ್ವದಲ್ಲಿ ಕಳುಹಿಸಲಾಯಿತು.

ಸಿರಾಕ್ಯೂಸ್ ಮೇಲೆ ಎರಡನೆಯ ಮುತ್ತಿಗೆ ಕ್ರಿ.ಪೂ. ೪೧೩—ಸಿಸಿಲಿಯನ್ ದಂಡಯಾತ್ರೆಯು ಮಹಾಘಟನೆಯಾಯಿತು. ಗಿಲಿಪ್ಪಸ್‌ನು ಅಥಿನಿಯನರು ನೆಲಸಿದ ಪ್ರದೇಶದ ಮೇಲೆ ದಾಳಿಮಾಡಿ ಅವರ ಕೋಟೆಗಳನ್ನು ಹಿಡಿದನು. ಭೂ ಪ್ರದೇಶದಲ್ಲಿಯೂ ಅಥಿನಿಯನರು ತಪ್ಪಿಸಿಕೊಳ್ಳಲು ಅವಕಾಶವಿರಲಿಲ್ಲ. ನಿಸಿಯಸ್‌ನಿಗೆ ಹೆಚ್ಚು ಸಹಾಯ ಬರುವುದಕ್ಕೆ ಮೊದಲೆ ಸಿರಾಕ್ಯೂಸನರು ಆಕ್ರಮಣ ನಡೆಸಿದರು. ಕೊನೆಗೆ ನಿಸಿಯಸ್‌ನನ್ನು ಸಂಪೂರ್ಣವಾಗಿ ಸೋಲಿಸಲಾಯಿತು. ಡೆಮಾಸ್ತಿನಸ್‌ನು

ಸಿರಾಕ್ಯೂಸ್‌ನಗರಕ್ಕೆ ಬರುವುದಕ್ಕೆ ಮೊದಲೇ ಅಥಿನಿಯನರು ಸೋತು ಶತ್ರುವಿಗೆ ಶರಣಾಗತರಾದರು. ಅಥೆನ್ಸ್ ನೌಕೆಯೂ ಕೂಡ ಬಂದರಿನಲ್ಲಿ ಮುತ್ತಿಗೆ ಹಾಕಲ್ಪಟ್ಟಿತು. ಈ ವೇಳೆಯಲ್ಲಿ ಚಂದ್ರಗ್ರಹಣವಾಯಿತು. ಮೂಢಭಕ್ತಿಯುಳ್ಳ ನಿಸಿಯಸನು ಇದು ಅಪಶಕುನವೆಂದು ಯೋಚಿಸಿ ಸಿರಾಕ್ಯೂಸನರಿಗೆ ಶರಣಾಗತನಾದನು. ನಿಸಿಯಸನೂ ಏಳು ಸಾವಿರ ಅಥಿನಿಯನರೂ ಸೆರೆಯಾಳುಗಳಾದರು. ಅವರನ್ನು ಕಲ್ಲುಗಣಿಯಲ್ಲಿ ಉರಿಯುವ ಬಿಸಿಲಿನಲ್ಲಿ ಕೆಲಸಮಾಡಲು ನೇಮಿಸಿದರು. ಸಿರಾಕ್ಯೂಸ್‌ನ ದಂಡಯಾತ್ರೆಯು ಅಥೆನ್ಸ್‌ರಾಷ್ಟ್ರದ ಪತನಕ್ಕೆ ಮೂಲಕಾರಣ. ಈ ವಿಪತ್ತಿಗೆ ನಿಸಿಯಸ್‌ನ ಅನರ್ಹತೆಯೇ ಮುಖ್ಯಕಾರಣ. ಆದರೂ ಅಥಿನಿಯನರು ಇಂಥ ಅಸಾಮರ್ಥ್ಯವುಳ್ಳ ನಾಯಕನನ್ನು ನೇಮಿಸಿದ್ದು ಅಕ್ಷಮ್ಯ.

ಮೂರನೆಯ ಘಟ್ಟ (ಕ್ರಿ. ಪೂ. ೪೧೩-೪೦೪)—ಸಿರಾಕ್ಯೂಸಿನ ದಂಡಯಾತ್ರೆಯು ವಿಫಲವಾದ ಮೇಲೆ ಅಥೆನ್ಸ್ ರಾಷ್ಟ್ರದ ಕೀರ್ತಿ ಕಳಂಕವುಂಟಾಗಿ ಅಥೆನ್ಸ್ ಸಾಮ್ರಾಜ್ಯದ ಪತನವು ನಿಶ್ಚಿತವಾಯಿತು. ಆದರೂ ಅಥಿನಿಯನರೂ ಧೈರ್ಯಗುಂದದೆ ಯುದ್ಧವನ್ನು ಮುಂದುವರಿಸಿದರು. ಪ್ರಜಾಪ್ರಭುತ್ವವು ಯುದ್ಧವನ್ನು ಮಾಡಲು ಸಾಧ್ಯವಿಲ್ಲವೆಂದು ಅನುಭವದಿಂದ ತಿಳಿದು ಶ್ರೀಮಂತರ ಪ್ರಭುತ್ವವನ್ನು ಸ್ಥಾಪಿಸಿದರು. ಎಲ್ಲಾ ಆಡಳಿತ ಹೊಣೆಗಾರಿಕೆಯನ್ನು ಮೂವತ್ತು ಸದಸ್ಯರಿರುವ ಸಂಸ್ಥೆಗೆ ವಹಿಸಿದರು. ಕಾನೂನು ಮಾಡಲು ಶಕ್ತಿವಂತರಾಗಿ, ಶ್ರೀಮಂತರಾಗಿರುವ ಐದು ಸಾವಿರ ಸದಸ್ಯರಿರುವ ಇನ್ನೊಂದು ಸಂಸ್ಥೆಯನ್ನು ಸ್ಥಾಪಿಸಿದರು. ತಮ್ಮ ಸಾಮ್ರಾಜ್ಯದ ರಾಜನಿಷ್ಠೆಯನ್ನು ಪಡೆಯಲು ಪ್ರೊಗದಿಯನ್ನು ರದ್ದುಮಾಡಿ ಶೇಖಡ ಐದರಂತೆ ತೆರಿಗೆಯನ್ನು ವಿಧಿಸಿದರು. ಆದರೂ ಎಲ್ಲೆಲ್ಲಿಯೂ ಅಥೆನ್ಸ್ ಸಾಮ್ರಾಜ್ಯಕ್ಕೆ ವಿರೋಧವು ಹರಡಿತು.

ಸ್ಪಾರ್ಟರಾಷ್ಟ್ರವು ಪರ್ಷಿಯನರ ಸಹಾಯದಿಂದ ಅಥೆನ್ಸ್ ಸಾಮ್ರಾಜ್ಯವನ್ನು ನಾಶಮಾಡಬೇಕೆಂದು ಪ್ರಯತ್ನಿಸಿದ್ದು ನಾಚಿಕೆಗೇಡು. ಪರ್ಷಿಯ ಯಾವುದಾದರೂ ರೀತಿಯಲ್ಲಿ ಗ್ರೀಕರಲ್ಲಿ ಯಾದವೀ ಕಲಹವನ್ನು ಹೂಡಿ ಮತ್ತೊಮ್ಮೆ ಏಷ್ಯ ಮೈನರಿನಲ್ಲಿ ಪ್ರಾಬಲ್ಯಕ್ಕೆ ಬರಬೇಕೆಂದು ಹಾತೊರೆಯುತ್ತಿತ್ತು. ಕ್ರಿ. ಪೂ. ೪೧೨ ರಲ್ಲಿ ಸ್ಪಾರ್ಟ ಮತ್ತು ಪರ್ಷಿಯ ಮಿಲೆಟಸ್

ಕೌಲನ್ನು ಮಾಡಿಕೊಂಡವು. ಸ್ಪಾರ್ಟ ತನ್ನ ಸ್ವಾರ್ಥಸಾಧನೆಗೋಸ್ಕರ ಪಶ್ಚಿಮ ಏಷ್ಯದ ಗ್ರೀಕರ ಸ್ವಾತಂತ್ರ್ಯವನ್ನು ಪರ್ಷಿಯ ದೇಶಕ್ಕೆ ಆಹುತಿ ಕೊಟ್ಟು ಪರ್ಷಿಯನರ ಸಹಾಯವನ್ನು ಹೊಂದಿತು. ಪರ್ಷಿಯಾ ದೇಶದ ರಾಜನು ಗ್ರೀಕರ ರಾಜಕೀಯದಲ್ಲಿ ಮಧ್ಯಸ್ತಿಕೆ ವಹಿಸಲು ಅವಕಾಶ ವಾಯಿತು. ಅಥೆನಿಯನರಿಗೆ ಎಲ್ಲೆಲ್ಲಿಯೂ ತೊಂದರೆಯುಂಟಾಗಿ ದಿಕ್ಕು ತೋಚದಂತಾಯಿತು. ಸಾಮಸ್, ಇಬಿಯ ಮತ್ತು ಇತರ ಸದಸ್ಯ ರಾಷ್ಟ್ರ ಗಳು ದಂಗೆಯೆದ್ದವು. ಸ್ಪಾರ್ಟ ನೌಕೆಯು ಏಜಿಯನ್ ಸಮುದ್ರದಲ್ಲಿ ಪ್ರಬಲವಾಗಿತ್ತು. ಲೈಸಂಡರ್ ಎಂಬ ಸ್ಪಾರ್ಟ ನೌಕಸೇನಾಪತಿಯು ಡೇರಿಯಸ್‌ನ ಮಗನಾದ ಸೈರಸ್‌ನೊಡನೆ ಸ್ನೇಹಬೆಳೆಸಿ ಅಥೆನಿಯನರನ್ನು ಎದುರಿಸಿದನು. ಕ್ರಿ. ಪೂ. ೪೦೭ ರಲ್ಲಿ ಲೈಸಂಡರ್‌ನು ಅಥೆನಿಯನರ ನೌಕೆಯನ್ನು ಸೇಮಸ್ ದ್ವೀಪದ ಹತ್ತಿರ ನೋಷನ್ ಎಂಬ ಸ್ಥಳದಲ್ಲಿ ಸೋಲಿಸಿದನು. ಅಥೆನಿಯನರು ಕೋನನ್ ಎಂಬುವನನ್ನು ನೌಕಾಸೇನಾ ಪತಿಯಾಗಿ ನೇಮಿಸಿದರು. ಈ ವೇಳೆಯಲ್ಲಿ ಸೈರಸನು ತನ್ನ ತಂದೆ ಕಾಯಿಲೆ ಯೆಂದು ತಿಳಿದು ತಕ್ಷಣವೇ ಪರ್ಷಿಯಾದೇಶಕ್ಕೆ ಹೋಗಬೇಕಾದ್ದರಿಂದ ಸ್ಪಾರ್ಟನರ ನಾಯಕನಾದ ಲೈಸಂಡರನನ್ನು ಸಾರ್ಡಿಸ್‌ನಲ್ಲಿ ಸತ್ರಪನಾಗಿ ನೇಮಿಸಿದನು. ಲೈಸಂಡರನಿಗೆ ಒಳ್ಳೆ ಅವಕಾಶ ಸಿಕ್ಕಿತು. ತನ್ನ ನೌಕೆಯನ್ನು ಹೆಲೆಸ್ಪಾಂಟ್ ಪ್ರದೇಶಕ್ಕೆ ತೆಗೆದುಕೊಂಡು ಹೋದನು. ಅಥೆನಿಯನರ ನೌಕೆಯು ಹೆಲೆಸ್ಪಾಂಟ್ ಪ್ರದೇಶದಲ್ಲಿ ಎಗೆಸ್‌ಪಾಟಮಿ (Aegospotami) ಎಂಬ ಸ್ಥಳದಲ್ಲಿ ಬಂದು ನೆಲಸಿತು. ಆದರೆ ಈ ಸ್ಥಳದಲ್ಲಿ ಹಡಗುಗಳು ನಿಲ್ಲಲು ಸರಿಯಾದ ಬಂದರಿಲ್ಲದೆ ಬಹಳ ಕಷ್ಟವಾಯಿತು. ಕ್ರಿ. ಪೂ. ೪೦೫ ರಲ್ಲಿ ಎಗೆಸ್‌ಪಾಟಮಿ ಕದನದಲ್ಲಿ ಅಥೆನಿಯನರು ಸಂಪೂರ್ಣವಾಗಿ ಸೋತರು. ಅಥೆನಿಯನರ ನೌಕೆಯು ನಾಶವಾಯಿತು. ಸ್ಪಾರ್ಟನರು ಸ್ವಲ್ಪವೂ ಕಷ್ಟವಿಲ್ಲದೆ ಸಂಪೂರ್ಣ ವಿಜಯವನ್ನು ಪಡೆದರು. ಈ ಯುದ್ಧ ವನ್ನು "ಆಡಿನ ಕತ್ತಿನ" (Goat's neck) ಯುದ್ಧವೆಂದೂ ಹೇಳು ತ್ತಾರೆ. ಅಂದರೆ ಯುದ್ಧವೇ ನಡೆಯದೆ ಅಥೆನಿಯನರು ಸೋತರು.

ಎಗೆಸ್ ಪಾಟಮಿ ಕದನವು ಅಥೆನಿಯನರ ಸಂಪೂರ್ಣ ನಾಶಕ್ಕೆ ಕಾರಣವಾಯಿತು. ಲೈಸಂಡರನು ಅಥೆನಿಜುನರನ್ನು ಚದುರಿಸಿ ಅವರೆಲ್ಲಾ

ಅಥೆನ್ಸ್ ನಗರದಲ್ಲಿ ಆಶ್ರಯವನ್ನು ಹೊಂದುವಹಾಗೆ ಮಾಡಿದನು. ನಗರದಲ್ಲಿ ಜನಸಂಖ್ಯೆಯು ವಿಪರೀತ ಹೆಚ್ಚಾಗಿ ಆಹಾರದ ಅಭಾವವುಂಟಾಯಿತು. ಲೈಸಂಡರನು ಪೈರಸ್ ಬಂದರಿನಲ್ಲಿ ತನ್ನ ನೌಕೆಯನ್ನು ನೆಲಸಿ ಅಥೆನ್ಸ್ ನಗರಕ್ಕೆ ಆಹಾರ ಸರಬರಾಜು ಇಲ್ಲದೇ ಇರುವ ಹಾಗೆ ನೋಡಿಕೊಂಡನು. ಅಥೆನ್ಸ್ ನಗರದಲ್ಲಿ ಕ್ಷಾಮವುಂಟಾಯಿತು. ಕೊನೆಗೆ ಅಥಿನಿಯನರು ಹುಚ್ಚು ಹಿಡಿದ ಹಾಗೆ ಯಾವ ಷರತ್ತಿಗಾದರೂ ಒಪ್ಪಂದ ಮಾಡಿಕೊಳ್ಳಲು ಸಮ್ಮತಿಸಿದರು. ಸ್ಪಾರ್ಟನಗರದಲ್ಲಿ ಗ್ರೀಕರ ಸಭೆಯು ಸೇರಿತು. ಈ ಸಭೆಯಲ್ಲಿ ಅನೇಕ ಗ್ರೀಕರು ಅಥೆನ್ಸ್ ನಗರವನ್ನೇ ನಿರ್ಮೂಲಮಾಡಬೇಕೆಂದು ಸೂಚಿಸಿದರು. ಅವರಿಗೆ ಅಥೆನ್ಸ್ ರಾಷ್ಟ್ರದ ಮೇಲೆ ಎಷ್ಟರಮಟ್ಟಿಗೆ ದ್ವೇಷವಿತ್ತೆಂಬುದು ತಿಳಿಯುತ್ತದೆ. ಆದರೆ ಸ್ಪಾರ್ಟನರು ತಮ್ಮ ಉದಾರತ್ವವನು ತೋರಿಸಿ ಅಥೆನ್ಸ್ ರಾಷ್ಟ್ರವು ಪರ್ಷಿಯನರ ದಂಡಯಾತ್ರೆಯಲ್ಲಿ ಮಾಡಿದ ಅದ್ಭುತ ಸಹಾಯವನ್ನು ನೆನಪು ಮಾಡಿಕೊಂಡು ಕನಿಕರವನ್ನು ತೋರಿಸಿದರು. ಕ್ರಿ. ಪೂ. ೪೦೪ ರಲ್ಲಿ ಅಥೆನ್ಸ್ ರಾಷ್ಟ್ರವು ಕೌಲನ್ನು ಒಪ್ಪಿತು. ಪೈರಸ್ ಬಂದರಿನ ಉದ್ದವಾದ ಗೋಡೆಗಳನ್ನೂ ನಾಶಮಾಡಬೇಕೆಂದೂ, ಅಥೆನ್ಸ್ ಸಾಮ್ರಾಜ್ಯವನ್ನು ಕೊನೆಗಾಣಿಸಬೇಕೆಂದೂ, ತಮ್ಮ ನೌಕೆಯನ್ನು ಶತ್ರುವಿಗೆ ಮುಟ್ಟಗೋಲು ಹಾಕಬೇಕೆಂದೂ, ದೇಶಭ್ರಷ್ಟರನ್ನೆಲ್ಲಾ ಹಿಂದಕ್ಕೆ ಕರೆಯಬೇಕೆಂದೂ, ಅಥೆನ್ಸ್ ರಾಷ್ಟ್ರವು ಸ್ಪಾರ್ಟ ರಾಷ್ಟ್ರದ ನಾಯಕತ್ವವನ್ನು ಒಪ್ಪಬೇಕೆಂದೂ—ಇವೇ ಅಥೆನ್ಸ್ ಒಪ್ಪಿದ ಕೌಲಿನ ಶರತ್ತುಗಳು. ಅಥೆನ್ಸ್ ಪತನದಿಂದ ಗ್ರೀಕರು ಜಯಗಾನ ಮಾಡಿದರು. ಅವರು ತಮ್ಮ ಸ್ವಾತಂತ್ರ್ಯ ಲಭಿಸುವುದೆಂದು ನಿರೀಕ್ಷಿಸಿದರು. ಆದರೆ ಇದು ಕೇವಲ ಭ್ರಮೆಯಾಗಿ ಅಥೆನ್ಸ್ ನಾಯಕತ್ವದ ಬದಲು ಸ್ಪಾರ್ಟ ನಾಯಕತ್ವವು ಉದ್ಭವಿಸಿತು.



ಸಿಸಿಲಿ

ಅಧ್ಯಾಯ ೨೦

ಸ್ಪಾರ್ಟ ಪ್ರಭುತ್ವ (ಕ್ರಿ. ಪೂ. ೪೦೪-೩೭೧)

ಅಥೆನ್ಸ್ ಸಾಮ್ರಾಜ್ಯವು ನಾಶವಾದ ಮೇಲೆ ಗ್ರೀಕರು ತಮ್ಮ ಸ್ವಾತಂತ್ರ್ಯವನ್ನು ಹೊಂದದೆ ಸ್ಪಾರ್ಟ ನಾಯಕತ್ವಕ್ಕೆ ಒಳಗಾದರು ಸ್ಪಾರ್ಟ ನಾಯಕತ್ವವು ಅಥೆನ್ಸ್ ನಾಯಕತ್ವಕ್ಕಿಂತ ಹೆಚ್ಚಾಗಿ ದಬ್ಬಾಳಿಕೆಯಿಂದ ಕೂಡಿತ್ತು. ಅಥೆನ್ಸ್ ಆಡಳಿತವು ಪ್ರಜಾಪ್ರಭುತ್ವವನ್ನು ಸ್ಥಾಪಿಸಿ ಎಲ್ಲೆಲ್ಲಿಯೂ ಪ್ರಗತಿಪರವಾಗಿತ್ತು. ಆದರೆ ಸ್ಪಾರ್ಟರಾಷ್ಟ್ರವು ಶ್ರೀಮಂತರ ಆಡಳಿತವನ್ನು ಒತ್ತಾಯ ಮಾಡಿ ಪ್ರಜೆಗಳನ್ನು ತನ್ನ ಹತೋಟಿಯಲ್ಲಿಡಲು ಪ್ರಯತ್ನಿಸಿತು. ಸ್ಪಾರ್ಟ ದಬ್ಬಾಳಿಕೆಯಿಂದ ಅಥೆನ್ಸ್ ನಾಯಕತ್ವಕ್ಕೂ ಸ್ಪಾರ್ಟನಾಯಕತ್ವಕ್ಕೂ ಇದ್ದ ತಾರತಮ್ಯ ಗ್ರೀಕರಿಗೆ ಚೆನ್ನಾಗಿ ಮನದಟ್ಟಾಯಿತು. ಸ್ಪಾರ್ಟನರು ಪ್ರಜೆಗಳನ್ನು ಅನ್ಯಾಯವಾಗಿ ಪೀಡಿಸಿ ದುರಾಶೆಯಿಂದ ಹಣವನ್ನು ಸುಲಿಗೆಮಾಡಿದರು. ತಮ್ಮ ಅಧೀನದಲ್ಲಿದ್ದ ರಾಷ್ಟ್ರಗಳಲ್ಲಿ ಡಿಕಾರ್ಕಿ ಎಂಬ ಹತ್ತು ಜನ ಸದಸ್ಯರಿರುವ ಮಂಡಲವನ್ನು ನೇಮಿಸಿದರು. ಹಾರ್ಮಸ್ಟ್ ಎಂಬ ಸ್ಪಾರ್ಟನರ ರಾಜ್ಯಪಾಲನು ನಿರಂಕುಶ ಪ್ರಭುವಾಗಿ ಆಡಳಿತ ನಡೆಸುತ್ತಿದ್ದನು. ಎಲ್ಲೆಲ್ಲಿಯೂ ತಮ್ಮದೇ ಆದ ರಕ್ಷಣಾಸೇನೆಯನ್ನೂ ಇಟ್ಟರು. ಸ್ಪಾರ್ಟ ಪ್ರಭುತ್ವವು ತನ್ನ ಕ್ರೂರತನದಿಂದ ಬಹುಬೇಗ ನಾಶವಾಯಿತು.

ಮೊದಲನೆಯ ಘಟ್ಟ (ಕ್ರಿ. ಪೂ. ೪೦೪–೩೮೭)–ಸ್ಪಾರ್ಟ ಪ್ರಭುತ್ವವನ್ನು ಎರಡು ಘಟ್ಟಗಳಾಗಿ ವಿಂಗಡಿಸಬಹುದು. ಮೊದಲನೆಯ ಘಟ್ಟದಲ್ಲಿ (ಕ್ರಿ. ಪೂ. ೪೦೪–೩೮೬) ಸ್ಪಾರ್ಟ ತನ್ನ ದಬ್ಬಾಳಿಕೆಯಿಂದ ಗ್ರೀಕರನ್ನು ಅಡಗಿಸಿ ಎಲ್ಲೆಲ್ಲಿಯೂ ತನ್ನ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಿತು. ಪಶ್ಚಿಮ ಏಷ್ಯದ ಗ್ರೀಕರೂ ಸ್ಪಾರ್ಟನರಿಗೆ ಅಡಿಯಾಳಾದರು. ಗ್ರೀಕರು ಸ್ಪಾರ್ಟನರ ದೌರ್ಜನ್ಯವನ್ನು ಸಹಿಸದೆ ವಿರೋಧಿಗಳಾದರು. ಅವರನ್ನು

ಅಡಗಿಸಲು ಸ್ಪಾರ್ಟ ಪರ್ಷಿಯಾ ದೇಶದ ಸಹಾಯವನ್ನು ಹೊಂದಬೇಕಾಯಿತು. ಇದು ನಾಚಿಕೆಗೇಡಿನ ಘಟನೆ.

ಹತ್ತು ಸಾವಿರದ ದಂಡೆಯಾತ್ರೆ—ಕ್ರಿ. ಪೂ. ೪೦೧ ರಲ್ಲಿ ಒಂದು ವಿಚಿತ್ರ ಘಟನೆ ನಡೆಯಿತು. ಪರ್ಷಿಯಾ ದೇಶದ ರಾಜನಾದ ಡೇರಿಯಸನು ಕ್ರಿ. ಪೂ. ೪೦೪ರಲ್ಲಿ ಕಾಲವಾಗಲು ಆತನ ಹಿರಿಯ ಮಗನಾದ ಆರ್ಟಕ್ಸರ್ಸನು ರಾಜನಾದನು. ಆದರೆ ಸೈರಸ್ ಎಂಬ ಕಿರಿಯ ಮಗನು ತಾನೇ ರಾಜನಾಗಬೇಕೆಂದು ಒಳಸಂಚು ಮಾಡಿದನು. ಸೈರಸನು ಸಾರ್ಡಿಸ್‌ನಲ್ಲಿ ಸತ್ರಪನಾಗಿದ್ದನು, ಸ್ಪಾರ್ಟ ಸೇನಾನಾಯಕನಾದ ಲೈಸಂಡರನು ಅವನ ಸ್ನೇಹಿತನು. ಗ್ರೀಕರ ಸೈನ್ಯವು ಒಳ್ಳೆ ಶಿಸ್ತಿನಿಂದ ಕೂಡಿದೆ ಎಂಬುದು ಅವನಿಗೆ ಸ್ವಂತ ಅನುಭವದಿಂದ ತಿಳಿದಿತ್ತು. ಕ್ರಿ. ಪೂ. ೪೦೧ರಲ್ಲಿ ಕ್ಲಿಯಾರ್ಕಸ್ ಎಂಬ ಸ್ಪಾರ್ಟಸೇನಾನಾಯಕನ ಸಹಾಯದಿಂದ ಗುಟ್ಟಾಗಿ ೧೩,೦೦೦ ಗ್ರೀಕರನ್ನು ವೇತನದಮೇಲೆ ಒಟ್ಟುಗೂಡಿಸಿದನು. ಈ ಸೈನ್ಯವನ್ನು ಪರ್ಷಿಯಾ ದೇಶದ ಮೇಲೆ ದಂಡಯಾತ್ರೆಗೆ ಏರ್ಪಡಿಸಿದ್ದರೂ ಗ್ರೀಕರಿಗೆ ಈ ವಿಚಾರವು ಗೊತ್ತಿರಲಿಲ್ಲ. ಪಕ್ಕದಲ್ಲಿ ತಾರಸ್ ಬೆಟ್ಟದ ಗುಡ್ಡಗಾಡಿನವರ ಮೇಲೆ ದಂಡಯಾತ್ರೆ ಮಾಡಬೇಕೆಂದು ಥೊಂಗು ಹೊಡೆದು ಗ್ರೀಕರನ್ನು ಕರೆದುಕೊಂಡು ಹೋದನು. ಆದರೆ ತಾರಸ್ ಬೆಟ್ಟವನ್ನು ದಾಟಿದ ಮೇಲೆ ಗ್ರೀಕರಿಗೆ ಸಂಶಯವುಂಟಾಗಿ ದಂಗೆ ಏಳುವುದರಲ್ಲಿದ್ದರು. ಅವರನ್ನು ಬಲಾತ್ಕಾರದಿಂದ ಮುಂದೆ ಹೋಗುವಹಾಗೆ ಮಾಡಿ ಈಫ್ರುಟಸ್ ನದಿಯನ್ನು ದಾಟಿ ಥಾಪ್ಸಕಸ್ ಎಂಬ ಸ್ಥಳವನ್ನು ಸೇರಿದ ಮೇಲೆ ದಂಡಯಾತ್ರೆಯ ಸತ್ಯಾಂಶವನ್ನು ಹೊರಪಡಿಸಿದನು. ಹಿಂತೆರಳುವ ಅವಕಾಶವಿಲ್ಲದೆ ಗ್ರೀಕರ ಸೈನ್ಯವು ನದಿಯ ಉತ್ತರದಡಕ್ಕೆ ಸಾಗಿತು. ಬಾಬಿಲನ್ ನಗರದ ಹತ್ತಿರ ಕ್ಯೂನಕ್ಸ ಎಂಬ ಸ್ಥಳದಲ್ಲಿ ಆರ್ಟಕ್ಸರ್ಸನು ದೊಡ್ಡ ಸೈನ್ಯವನ್ನು ಜಮಾಯಿಸಿದನು. ಗ್ರೀಕರ ಸೈನ್ಯವು ಶಿಸ್ತಿನಿಂದ ಕಾದಾಡಿ ಜಯವನ್ನು ಹೊಂದುವುದರಲ್ಲಿತ್ತು. ಆದರೆ ಸೈರಸನು ಎದುರುಗಡೆ ತನ್ನ ಅಣ್ಣನಾದ ಆರ್ಟಕ್ಸರ್ಸನನ್ನು ನೋಡಿದ ತಕ್ಷಣ ಒಬ್ಬನೇ ಅವನ ಮೇಲೆ ನುಗ್ಗಿದನು. ಪರ್ಷಿಯನರು ಸೈರಸನನ್ನು ಹಿಡಿದು ಕೊಂದುಹಾಕಿದರು. ಅವನ ಅಜಾಗರೂಕತೆಯಿಂದ ಗ್ರೀಕರ ಸೈನ್ಯವು ದಿಕ್ಕಿಲ್ಲದೆ ಚದುರಿಸಲ್ಪಟ್ಟಿತು. ಸುಮಾರು

೧೦,೦೦೦ ಗ್ರೀಕರು ಈ ಸಂದಿಗ್ಧ ಸಮಯದಲ್ಲಿ ತೋರಿಸಿದ ಶಿಸ್ತು, ಧೈರ್ಯ, ಸಹನೆ ಪ್ರಶಂಸನೀಯವಾದುದು. ಅವರು ವ್ಯವಸ್ಥಾಪಕರಿಲ್ಲದೆ, ಪರಿಚಯ ವಿಲ್ಲದ ಪ್ರದೇಶದಿಂದ ಹಿಂತಿರುಗಲು ನಿಶ್ಚಯಿಸಿದ್ದು ಮೆಚ್ಚಿಕೆಗೆ ಅರ್ಹ ವಾದುದು. ಕ್ಸೆನೋಫನ್ ಎಂಬ ಅಥೆನಿಯನನ್ನು ಸೇನಾನಾಯಕನಾಗಿ ಚುನಾಯಿಸಿದರು. ಈತನೇ ಈ ದಂಡಯಾತ್ರೆಯ ವಿವರವನ್ನು **ಅನಬಸಿಸ್** ಅಥವಾ **ಹತ್ತು ಸಾವಿರದ ವರಸೆ ಮತ್ತು ಹಿನ್ನೆಟ್ಟುವಿಕೆ** ಎಂಬ ಸೊಗಸಾದ ಗ್ರಂಥದಲ್ಲಿ ವರ್ಣಿಸಿದ್ದಾನೆ. ಟೈಗ್ರಿಸ್ ನದಿಯನ್ನು ದಾಟಿ ಮಿಡಿಯ ಪ್ರದೇಶಕ್ಕೆ ಬಂದರು. ಹಸಿವಿನಿಂದಲೂ ಚಳಿಯಿಂದಲೂ ಕುಗ್ಗಿದರೂ ಸಾಹಸದಿಂದ ಕಾರ್ಡೂಚಿಯಂ ಬೆಟ್ಟವನ್ನು ಸೇರಿದರು. ಆ ಬೆಟ್ಟದಮೇಲೆ ನೋಡಿದಾಗ ಬಹು ದೂರ ದೃಶ್ಯವು ಅವರಿಗೆ ಸಂತೋಷವನ್ನುಂಟು ಮಾಡಿತು. ಎಲ್ಲರೂ ಒಂದೇ ಧ್ವನಿಯಿಂದ "ಸಮುದ್ರ, ಸಮುದ್ರ" ಎಂದು ಕೂಗಿದರು. ಸಮುದ್ರವನ್ನು ನೋಡಿದ್ದು ಅವರ ಕಷ್ಟ ನಿವಾರಣೆ ಮಾಡಿ ಉಲ್ಲಾಸವನ್ನುಂಟುಮಾಡಿತು. ಮುಂದಕ್ಕೆ ಬೆಟ್ಟವನ್ನು ಇಳಿದು ಕಪ್ಪುಸಮುದ್ರದ ತೀರದಲ್ಲಿ ಟ್ರಪೆಸ್ಸಸ್ ಎಂಬ ಗ್ರೀಕರ ವಲಸೆಯನ್ನು ಸೇರಿದರು. ಅಲ್ಲಿಂದ ಬಾಸ್ಪರಸ್ ಪ್ರದೇಶಕ್ಕೆ ಹೋಗಿ ಗ್ರೀಸ್‌ದೇಶದ ತಮ್ಮ ರಾಷ್ಟ್ರಗಳಿಗೆ ವಾಪಸು ಹೋದರು. ಈ ಘಟನೆಯು ಗ್ರೀಕರ ಚರಿತ್ರೆಯಲ್ಲಿ ಅದ್ಭುತವಾದದ್ದು. ಗ್ರೀಕರ ಸೈನ್ಯವು ಶಿಸ್ತಿನಿಂದ ಎಷ್ಟೇ ಕಷ್ಟಗಳನ್ನಾದರೂ ಎದುರಿಸಬಲ್ಲದು ಎಂಬುದು ಸ್ಥಿರವಾಯಿತು. ಈ ಘಟನೆಯ ತಕ್ಷಣದ ಪರಿಣಾಮವು ಪರ್ಷಿಯಾ ಸ್ಪಾರ್ಟರಾಷ್ಟ್ರದ ಮೇಲೆ ಹೂಡಿದ ಯುದ್ಧ. ಪರ್ಷಿಯಾ ದೇಶದ ರಾಜನು ಟಿಸ್ಸಫರ್ನೆಸ್ ಎಂಬುವನನ್ನು ಸಾರ್ಡಿಸಿಗೆ ಸತ್ರಪನಾಗಿ ಕಳುಹಿಸಿ ಏಷ್ಯ ಮೈನರಿನ ಗ್ರೀಕರನ್ನು ಜಯಿಸಿ ಸ್ಪಾರ್ಟನರ ಮೇಲೆ ಯುದ್ಧಮಾಡಬೇಕೆಂದು ಸೂಚಿಸಿದನು.

ಪಶ್ಚಿಮ ಏಷ್ಯದಲ್ಲಿ ಸ್ಪಾರ್ಟನರ ದಾಳಿ— ಟಿಸ್ಸಫರ್ನೆಸ್‌ನು ಏಜಿಯನ್ ಸಮುದ್ರದ ತೀರದಲ್ಲಿದ್ದ ಗ್ರೀಕ್ ನಗರಗಳನ್ನು ವಶಪಡಿಸಿ ಕೊಳ್ಳಲು ಯತ್ನಿಸಿದನು. ಕೈಮೆ ನಗರದ ಮೇಲೆ ದಂಡೆತ್ತಿ ಹೋದನು. ಪಶ್ಚಿಮ ಏಷ್ಯದ ಗ್ರೀಕರು ಸ್ಪಾರ್ಟನರ ಸಹಾಯವನ್ನು ಕೋರಿದರು. ಸ್ಪಾರ್ಟ ಇದೇ ಸಮಯವನ್ನು ತನ್ನ ಸ್ವಾರ್ಥಕ್ಕೆ ಉಪಯೋಗಿಸಿಕೊಂಡಿತು.

ಪರ್ಷಿಯನರ ಸ್ನೇಹವನ್ನು ಬೆಳೆಸಿ ಪಶ್ಚಿಮ ಏಷ್ಯದ ಗ್ರೀಕರ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಬೇಕೆಂಬುದೇ ಮುಖ್ಯ ಉದ್ದೇಶ. ಆದರೆ ಪರ್ಷಿಯ ಸ್ಪಾರ್ಟರಾಷ್ಟ್ರದೊಡನೆ ಸ್ನೇಹ ಮಾಡಲು ಇಷ್ಟಪಡಲಿಲ್ಲ. ಪರ್ಷಿಯ ನೌಕೆಯ ನಾಯಕತ್ವವನ್ನು ಕೋನನ್ ಎಂಬ ಅಥಿನಿಯನರ ನೌಕ ಸೇನಾ ಪತಿಯು ವಹಿಸಿದನು. ಈ ವೇಳೆಯಲ್ಲಿ ಎಜಿಸಿಲಸ್ ಎಂಬ ಸ್ಪಾರ್ಟನರ ರಾಜನು ಪಶ್ಚಿಮ ಏಷ್ಯದ ಸೈನ್ಯದ ನಾಯಕತ್ವವನ್ನು ವಹಿಸಿ ಲೈಸೆಂಡರ್ ಜೊತೆಯಲ್ಲಿ ಪಶ್ಚಿಮ ಏಷ್ಯಕ್ಕೆ ಹೊರಟನು. ಎಜಿಸಿಲಸನು ಸಮರ್ಥನು. ತನ್ನ ಸಾಹಸದಿಂದ ಪ್ರಿಜಿಯ ಮತ್ತು ಇತರ ಪ್ರದೇಶಗಳನ್ನು ಆಕ್ರಮಿಸಿದನು. ಪರ್ಷಿಯನರು ಏಷ್ಯಮೈನರಿನಲ್ಲಿ ತಲೆ ಎತ್ತಲು ಅವಕಾಶವೇ ಇರಲಿಲ್ಲ. ಅಯೋನಿಯನರು ಅವನ ಸೈನ್ಯಕ್ಕೆ ಸೇರಿದರು. ನೌಕೆಯನ್ನೂ ವಿಸ್ತರಿಸಿ ತನ್ನ ಭಾವನಾದ ಪೈಸಂಡರ್ ಎಂಬುವನನ್ನು ನಾಯಕನಾಗಿ ಮಾಡಿದನು. ಕೋನನ್‌ನು ಸ್ಪಾರ್ಟನರ ದಬ್ಬಾಳಿಕೆಯನ್ನು ತಡೆಯಲು ಸಂಕಲ್ಪಿಸಿ ರೋಡ್‌ಸ್ ದ್ವೀಪದಲ್ಲಿ ದಂಗೆ ಎಬ್ಬಿಸಿದನು. ಕ್ರಿ. ಪೂ. ೩೯೪ ರಲ್ಲಿ ಕ್ನಿಡಸ್ ಎಂಬ ಕದನದಲ್ಲಿ ಪೈಸಂಡರನು ಮಡಿದನು. ಇದರ ಪರಿಣಾಮವಾಗಿ ಏಷ್ಯದ ಗ್ರೀಕರು ಸ್ಪಾರ್ಟನರ ರಕ್ಷಣಾಸೇನೆಯನ್ನು ಓಡಿಸಿ ಪರ್ಷಿಯಾ ದೇಶದ ಸಾರ್ವಭೌಮತ್ವವನ್ನು ಅಂಗೀಕರಿಸಿದರು. ಸ್ಪಾರ್ಟ ನೌಕಾ ಶಕ್ತಿಯು ನಾಶವಾಯಿತು.

ಗ್ರೀಸಿನಲ್ಲಿ ಸ್ಪಾರ್ಟನರ ದಬ್ಬಾಳಿಕೆ—ಗ್ರೀಸಿನಲ್ಲಿ ಸ್ಪಾರ್ಟ ನಡೆಸಿದ ದಬ್ಬಾಳಿಕೆಯು ಮಿತಿಮೀರಿತು. ತನ್ನ ನಿರಂಕುಶ ಸ್ವಭಾವದಿಂದ ಎಲ್ಲೆಲ್ಲಿಯೂ ವಿರೋಧಶಕ್ತಿಗಳು ಬೆಳೆಯುವಹಾಗೆ ಮಾಡಿಕೊಂಡಿತು. ಎಲಿಸ್ ರಾಷ್ಟ್ರದ ಮೇಲೆ ದಾಳಿನಡಸಿ ಪೌರರನ್ನು ಶಿಕ್ಷಿಸಿತು. ಮೆಸಿನಿಯನರನ್ನು ನಾಪಕ್ಟಸ್ ಮತ್ತು ಸಿಫಲೇನಿಯಾ ನಗರಗಳಿಂದ ಓಡಿಸಿತು. ಪರ್ಷಿಯಾ ದೇಶವು ರಹಸ್ಯವಾಗಿ ಗ್ರೀಸಿನಲ್ಲಿ ಸ್ಪಾರ್ಟರಾಷ್ಟ್ರಕ್ಕೆ ವಿರೋಧವಾಗಿ ಇತರ ರಾಷ್ಟ್ರಗಳೊಡನೆ ಸಂಧಾನ ನಡಸುತಿತ್ತು. ಮಧ್ಯ ಗ್ರೀಸಿನಲ್ಲಿ ಸ್ಪಾರ್ಟನರ ಸೈನ್ಯವು ಭೋಷಿಯಾ ಪ್ರದೇಶದ ಮೇಲೆ ದಂಡಯಾತ್ರೆ ಮಾಡಿತು. ಥೀಬಸ್ ಅಥಿನಿಯನರ ಸಹಾಯವನ್ನು ಹೊಂದಿ ಕ್ರಿ. ಪೂ. ೩೯೫ ರಲ್ಲಿ ಹಾಲಿಯಾರ್ಟಸ್ ಎಂಬ ಕದನದಲ್ಲಿ ಸ್ಪಾರ್ಟನರನ್ನು ಸೋಲಿಸಿತು. ಈ

ಕದನದಲ್ಲಿ ಸ್ಪಾರ್ಟನರ ನಾಯಕನಾದ ಲೈಸಂಡರನು ಸತ್ತನು. ಥೀಬ್ಸ್, ಅಥೆನ್ಸ್, ಕಾರಿಂತ್ ಮತ್ತು ಆರ್ಗಸ್‌ರಾಷ್ಟ್ರಗಳು ಒಟ್ಟುಗೂಡಿ ಕಾರಿಂತ್ ಭೂಶಿರದ ಹತ್ತಿರ ಸ್ಪಾರ್ಟನರ ಮೇಲೆ ಯುದ್ಧ ಮಾಡಿದವು. ಆದರೆ ಈ ಕದನದಲ್ಲಿ ಸ್ಪಾರ್ಟನರು ಜಯಶೀಲರಾದರು. ಎಜಿಸಿಲಸನು ಪಶ್ಚಿಮ ಏಷ್ಯದಿಂದ ವಾಪಸು ಬಂದು ಮಧ್ಯಗ್ರೀಸಿನಲ್ಲಿ ಸ್ಪಾರ್ಟನರ ಸೈನ್ಯದ ನಾಯಕತ್ವವನ್ನು ವಹಿಸಿದನು. ಕ್ರಿ. ಪೂ. ೩೯೪ ರಲ್ಲಿ ಕೊರೋನಿಯ ಎಂಬ ಕದನದಲ್ಲಿ ಎಜಿಸಿಲಸನು ಜಯವನ್ನು ಹೊಂದಿದನು. ಆದರೂ ಎಜಿಸಿಲಸನು ಭೋಷಿಯವನ್ನು ತ್ಯಜಿಸಿ ಹಿಂದಕ್ಕೆ ಹೋದನು. ಈ ವೇಳೆಯಲ್ಲಿ ಅಥೆನ್ಸ್‌ರಾಷ್ಟ್ರವು ಪರ್ಷಿಯಾ ದೇಶದ ಸಹಾಯದಿಂದ ಕ್ರಮೇಣ ಪ್ರಾಬಲ್ಯಕ್ಕೆ ಬಂದು ಸ್ಪಾರ್ಟರಾಷ್ಟ್ರದ ದಬ್ಬಾಳಿಕೆಯನ್ನು ನಿರ್ಮೂಲ ಮಾಡಲು ಪ್ರಯತ್ನಿಸಿತು. ಸ್ಪಾರ್ಟರಾಷ್ಟ್ರಕ್ಕೆ ಎಲ್ಲೆಲ್ಲಿಯೂ ತೊಂದರೆಯಾಗಿ ಕೊನೆಗೆ ಪರ್ಷಿಯಾದೇಶದ ಸಹಾಯದಿಂದ ಜೀತರಿಸಿಕೊಳ್ಳಬೇಕಾಯಿತು. ಅಥೆನ್ಸ್‌ನೌಕೆಯು ಹೆಲೆಸ್ಪಾಂಟ್ ಪ್ರದೇಶದಲ್ಲಿ ಆಕ್ರಮಣ ನಡೆಸಿ ಪ್ರಬಲವಾಯಿತು. ಹಿಂದೆ ಒಕ್ಕೂಟಕ್ಕೆ ಸೇರಿದ್ದ ಲೆಸ್‌ಬಾಸ್, ಥೇಸಸ್, ಚೆರ್ಸನೆಸಸ್, ಬೈಸಂಟಿಯಂ, ಚಾಲ್ಸಿಡನ್ ಪುನಃ ಅಥೆನ್ಸ್ ರಾಷ್ಟ್ರದೊಡನೆ ಸ್ನೇಹ ಬೆಳೆಸಿದವು. ಈ ಸಂದಿಗ್ಧ ಸ್ಥಿತಿಯಲ್ಲಿ ಸ್ಪಾರ್ಟ ರಾಷ್ಟ್ರವು ಆಂಟೆಲ್‌ಸಿಡಸ್ ಎಂಬ ರಾಯಭಾರಿಯನ್ನು ಪರ್ಷಿಯಾ ದೇಶಕ್ಕೆ ಕಳುಹಿಸಿ ಪರ್ಷಿಯಾ ದೇಶದ ರಾಜನಾದ ಆರ್ಟಕ್ಸರ್ಕ್ಸನು ಮಧ್ಯಸ್ತಿಕೆ ವಹಿಸಿ ಗ್ರೀಸಿನಲ್ಲಿ ಶಾಂತಿಯನ್ನು ಸ್ಥಾಪಿಸಬೇಕೆಂದು ಬೇಡಿಕೊಂಡಿತು. ಈ ರೀತಿಯಾಗಿ ಮಾಡಿದ್ದು ಸ್ಪಾರ್ಟರಾಷ್ಟ್ರಕ್ಕೆ ಎಳ್ಳಷ್ಟೂ ಗೌರವವನ್ನು ತರಲಿಲ್ಲ. ಸ್ಪಾರ್ಟ ತನ್ನ ಸ್ವಾರ್ಥಕ್ಕೋಸ್ಕರ ಸ್ವಾತಂತ್ರ್ಯವನ್ನು ಮಾರುವುದಕ್ಕೂ ಸಿದ್ಧವೆಂಬುದು ಸ್ಥಿರಪಟ್ಟಿತು.

ರಾಜನ ಕೌಲು. ಕ್ರಿ. ಪೂ. ೩೮೬—ಪರ್ಷಿಯಾ ದೇಶದ ರಾಜನಾದ ಆರ್ಟಕ್ಸರ್ಕ್ಸನು ಕ್ರಿ. ಪೂ. ೩೮೬ ರಲ್ಲಿ ರಾಜನ ಕೌಲು ಅಥವಾ ಆಂಟಲ್‌ಸಿಡಸ್‌ನ ಕೌಲು ಎಂಬುದನ್ನು ಗ್ರೀಕರ ಮೇಲೆ ವಿಧಿಸಿದನು. ಈ ಕೌಲಿನಲ್ಲಿ ಏಷ್ಯದ ಗ್ರೀಕ್ ರಾಷ್ಟ್ರಗಳು ನ್ಯಾಯವಾಗಿ ತನಗೆ ಸೇರಿವೆಯೆಂದೂ, ಎಲ್ಲಾ ಗ್ರೀಕ್ ರಾಷ್ಟ್ರಗಳೂ ಸ್ವತಂತ್ರವಾಗಿವೆಯೆಂದೂ,

ಲೆಮ್ನಸ್, ಇಂಬ್ರಸ್ ಮತ್ತು ಸ್ಕೈರಸ್, ಅಥೆನ್ಸಿಗೆ ಸೇರಬೇಕೆಂದೂ ಈ ಕೌಲನ್ನು ಯಾರಾದರೂ ವಿರೋಧಿಸಿದ್ದೇ ಆದರೆ ಅವರ ಮೇಲೆ ಯುದ್ಧ ಮಾಡುವುದು ಖಚಿತವೆಂದೂ ಬೆದರಿಸಿದನು. ಈ ಕೌಲನ್ನು ಜಾರಿಗೆ ತರುವುದು ಸ್ಪಾರ್ಟನರ ಹೊಣೆಗಾರಿಕೆಯಾಯಿತು. ಪರ್ಷಿಯಾ ದೇಶದ ಮಧ್ಯಸ್ಥಿಕೆಯಿಂದ ಶಾಂತಿಸ್ಥಾಪಿಸುವುದು ಕೇವಲ ನಾಚಿಕೆಗೇಡು. ಸ್ಪಾರ್ಟ ರಾಷ್ಟ್ರವು ತನ್ನ ಗೌರವವನ್ನು ಕಳೆದುಕೊಂಡಿತು. ಪಶ್ಚಿಮ ಏಷ್ಯದ ಗ್ರೀಕರು ಮತ್ತೊಮ್ಮೆ ಪರ್ಷಿಯ ದೇಶದ ಹತೋಟಿಗೆ ತಲೆಬಾಗಿಸಬೇಕಾಯಿತು.

ಎರಡನೆಯ ಘಟ್ಟ (ಕ್ರಿ. ಪೂ. ೩೮೭-೩೭೧) —ರಾಜನ ಕೌಲಿನಿಂದ ಸ್ಪಾರ್ಟ ರಾಷ್ಟ್ರವು ಮತ್ತೊಮ್ಮೆ ಪ್ರಬಲವಾಗಲು ಸಾಧ್ಯವಾಯಿತು. ಈ ಕೌಲನ್ನು ಕಾರ್ಯಾಚರಣೆಗೆ ತರುವುದು ಸ್ಪಾರ್ಟ ರಾಷ್ಟ್ರದ ಹೊಣೆಗಾರಿಕೆಯಾಗಿ ದಬ್ಬಾಳಿಕೆಯನ್ನು ನಡೆಸಲು ಅನುಕೂಲವಾಯಿತು. ಸ್ಪಾರ್ಟ ರಾಷ್ಟ್ರವು ಎಲ್ಲೆಲ್ಲಿಯೂ ನಿರಂಕುಶ ಪ್ರಭುತ್ವದಿಂದ ಗ್ರೀಕರ ಸ್ವಾತಂತ್ರ್ಯಕ್ಕೆ ಚ್ಯುತಿಯುಂಟು ಮಾಡಿತು. ಕೊನೆಗೆ ಅಥೆನ್ಸ್, ಥೀಬಸ್ ಮತ್ತು ಇತರ ರಾಷ್ಟ್ರಗಳು ಒಟ್ಟುಗೂಡಿ ಸ್ಪಾರ್ಟ ಪ್ರಭುತ್ವವನ್ನು ನಾಶಮಾಡಬೇಕಾಯಿತು.

ಛಾಲ್ಸಿಡಿಯನ್ ಒಕ್ಕೂಟ— ಉತ್ತರ ಗ್ರೀಸಿನಲ್ಲಿ ಒಲಿಂಪಸ್ ಮತ್ತು ಇತರ ನಗರ ರಾಷ್ಟ್ರಗಳು ಒಂದಾಗಿ ಛಾಲ್ಸಿಡಿಯನ್ ಒಕ್ಕೂಟವನ್ನು ರಚಿಸಿದವು. ಸ್ಪಾರ್ಟ ರಾಷ್ಟ್ರದ ದಬ್ಬಾಳಿಕೆಯನ್ನು ತಡೆಯಬೇಕೆಂಬುದೇ ಇದರ ಮುಖ್ಯ ಉದ್ದೇಶ. ಅಕಂತಸ್ ಮತ್ತು ಅಪೊಲ್ಲೊನಿಯ ನಗರಗಳು ಈ ಒಕ್ಕೂಟಕ್ಕೆ ಸೇರದೆ ಸ್ಪಾರ್ಟ ರಾಷ್ಟ್ರದ ಸಹಾಯವನ್ನು ಪಡೆದವು. ಸ್ಪಾರ್ಟ ರಾಷ್ಟ್ರವು ಗ್ರೀಸಿನಲ್ಲಿ ಐಕ್ಯತೆಗೆ ಪ್ರತಿ ಬಂಧಕವಾಗಿ ಅಕಂತಸ್ ಮತ್ತು ಅಪೊಲ್ಲೊನಿಯ ನಗರಗಳಿಗೆ ಸಹಾಯ ಮಾಡಿತು. ಇದೇ ಸಮಯದಲ್ಲಿ ಫೀಬಿಡಸ್ ಎಂಬ ಸ್ಪಾರ್ಟ ಸೇನಾ ನಾಯಕನು ಥೀಬಸ್ ನಗರದಲ್ಲಿ ಶ್ರೀಮಂತರ ಸಹಾಯದಿಂದ ಕಾಡ್ಮಿಯ ದುರ್ಗವನ್ನು ಹಿಡಿದು ಶ್ರೀಮಂತರ ಆಡಳಿತವನ್ನು ಸ್ಥಾಪಿಸಿದನು. ಥೀಬ್ಸಿನ ಸಹಾಯದಿಂದ ಸ್ಪಾರ್ಟನರು ಛಾಲ್ಸಿಡಿಯನ್ ಒಕ್ಕೂಟವನ್ನು ಕೊನೆಗಾಣಿಸಲು ಸಾಧ್ಯವಾಯಿತು.

ಸ್ಪಾರ್ಟನರ ದಬ್ಬಾಳಿಕೆಯು ದಕ್ಷಿಣ ಗ್ರೀಸಿನಲ್ಲಿ ಸಹಿಸಲಸಾಧ್ಯ

ವಾಯಿತು. ಮ್ಯಾಂಟಿನಿಯ ನಗರದಲ್ಲಿ ಪೌರರು ನಗರದ ಗೋಡೆಗಳನ್ನು ತೆಗೆದುಹಾಕಲು ನಿರಾಕರಿಸಿದ್ದರಿಂದ ಸ್ಪಾರ್ಟಸೈನ್ಯವು ನಗರವನ್ನು ಆಕ್ರಮಿಸಿ ಅದನ್ನು ಐದು ಹಳ್ಳಿಗಳಾಗಿ ವಿಂಗಡಿಸಿತು. ಫ್ಲಿಯಸ್ ಎಂಬ ನಗರದಲ್ಲಿ ತಮ್ಮ ರಕ್ಷಣಾಸೇನೆಯನ್ನು ಬಲವಂತವಾಗಿ ನೇಮಿಸಿದರು.

ಥೀಬ್ಸ್‌ನಲ್ಲಿ ಕ್ರಾಂತಿ—ಸ್ಪಾರ್ಟ ರಾಷ್ಟ್ರದ ದಬ್ಬಾಳಿಕೆಯನ್ನು ನಾಶ ಮಾಡಲು ಥೀಬ್ಸ್ ಮತ್ತು ಅಥೆನ್ಸ್ ರಾಷ್ಟ್ರಗಳು ಹಾತೊರೆಯುತ್ತಿದ್ದವು. ಥೀಬ್ಸ್‌ನಲ್ಲಿ ಸ್ಥಾಪಿಸಿದ ಶ್ರೀಮಂತರ ಆಡಳಿತವು ತನ್ನ ಹಿಂಸಾತ್ಮಕ ನೀತಿ ಯಿಂದ ಪ್ರಜೆಗಳ ವಿರೋಧಕ್ಕೆ ಆಸ್ಪದ ಕೊಟ್ಟಿತು. ಥೀಬ್ಸ್ ರಾಷ್ಟ್ರನಾಯಕ ರಾದ ಪೆಲಪಿಡಸ್ ಮತ್ತು ಆರು ಜನ ಇತರರು ಒಟ್ಟುಗೂಡಿ ಥೀಬ್ಸ್ ನಗರ ದಲ್ಲಿ ಸ್ಪಾರ್ಟ ದಬ್ಬಾಳಿಕೆಯನ್ನು ನಾಶಮಾಡಲು ಒಳಸಂಚು ಮಾಡಿದರು. ಕ್ರಿ. ಪೂ. ೩೭೮ರಲ್ಲಿ ಥೀಬ್ಸ್ ನಗರದ ರಾಜ್ಯಪಾಲರಾದ ಫಿಲಿಡಸ್ ಎಂಬು ವನು ತನ್ನ ಅರಮನೆಯಲ್ಲಿ ಬಾರಿ ಔತಣವನ್ನು ಕೊಡುತ್ತಿರುವಾಗ ಏಳುಜನ ಸೌಂದರ್ಯಯುವತಿಯರು ಬಂದಿದ್ದಾರೆಂದು ತಿಳಿಯಿತು. ಕಾಮುಕನಾದ ರಾಜ್ಯಪಾಲನು "ಆಡಳಿತದ ಕೆಲಸ ನಾಳೆ" ಎಂದು ಹೇಳಿ ಈ ಯುವತಿಯರನ್ನು ಬರಮಾಡಿಕೊಂಡನು. ಈ ಒಳಸಂಚಿನ ವಿಚಾರ ವಾಗಿ ಬಂದಿದ್ದ ಪತ್ರವನ್ನು ಕೂಡ ನೋಡಲು ನಿರಾಕರಿಸಿದನು. ಈ ಯುವತಿಯರು ಪೆಲಪಿಡಸ್ ಮತ್ತು ಆತನ ಆರು ಜನ ಸ್ನೇಹಿತರು ಹೆಂಗ ಸಿನ ವೇಷ ಹಾಕಿದ್ದವರು. ಪೆಲಪಿಡಸ್ ಮತ್ತು ಇತರ ಆರು ಶ್ರೀಮಂತರೂ ಈ ಯುವತಿಯರನ್ನು ಆಲಂಗಿಸಲು ಹೋದಾಗ ಪೆಲಿಪಿಡಸ್ ಮತ್ತು ಅವನ ಸ್ನೇಹಿತರೂ ತಮ್ಮ ಕಠಾರಿಯಿಂದ ಅವರನ್ನು ತಿವಿದರು. ಥೀಬ್ಸ್ ನಗರ ದಲ್ಲಿ ರಾಜಕೀಯ ಕ್ರಾಂತಿಯಾಗಿ ಸ್ಪಾರ್ಟ ದಬ್ಬಾಳಿಕೆಯು ಅದೃಶ್ಯ ವಾಯಿತು. ಪ್ರಜಾಪ್ರಭುತ್ವವು ಸ್ಥಾಪಿತವಾಯಿತು.

ಅಥೆನ್ಸ್ ಸ್ಥಾಪಿಸಿದ ಎರಡನೆಯ ಒಕ್ಕೂಟ — ಅಥೆನ್ಸ್ ರಾಷ್ಟ್ರವು ಕ್ರಿ. ಪೂ. ೩೭೭ ರಲ್ಲಿ ಇನ್ನೊಂದು ಒಕ್ಕೂಟವನ್ನು ಸ್ಥಾಪಿಸಿತು. ಮೊದಲನೆಯ ಒಕ್ಕೂಟಕ್ಕೆ ಪರ್ಷಿಯಾ ದೇಶದ ಮೇಲೆ ಯುದ್ಧಮಾಡಿ ಸ್ವಾತಂತ್ರ್ಯವನ್ನು ರಕ್ಷಿಸಬೇಕೆಂಬುದೇ ಘನವಾದ ಉದ್ದೇಶವಾಗಿದ್ದರೆ ಈ ಎರಡನೆಯ ಒಕ್ಕೂಟವು ಸ್ಪಾರ್ಟ ಪ್ರಭುತ್ವವನ್ನೂ, ದಬ್ಬಾಳಿಕೆಯನ್ನೂ

ನಾಶಮಾಡಬೇಕೆನ್ನುವ ಸಂಕುಚಿತ ಉದ್ದೇಶವಾಗಿತ್ತು. ಮೊದಲನೆಯ ಒಕ್ಕೂಟದಲ್ಲಿದ್ದ ನ್ಯೂನತೆಗಳನ್ನು ತಿದ್ದುಕೊಂಡು ಅಥೆನ್ಸ್ ರಾಷ್ಟ್ರವು ತನ್ನ ಉದಾರತ್ವವನ್ನು ತೋರ್ಪಡಿಸಿತು. ಎರಡನೆಯ ಒಕ್ಕೂಟವು ಕೇವಲ ರಕ್ಷಣಾರ್ಥವಾಗಿತ್ತು. ಒಕ್ಕೂಟಕ್ಕೆ ಸೇರಿದ ಸದಸ್ಯರಾಷ್ಟ್ರಗಳು ಸಮಾನತೆಯನ್ನು ಹೊಂದಿದ್ದವು. ಪೊಗದಿ ಎಂಬ ಪದವನ್ನು ಬದಲಾಯಿಸಿ ಎಲ್ಲಾ ಸದಸ್ಯರೂ ಸಂಯುಕ್ತನಿಧಿಗೆ ಚಂದಾಕೊಡಬೇಕಾಯಿತು. ಈ ಒಕ್ಕೂಟಕ್ಕೆ ಖಿಯಾಸ್, ಬೈಸ್ಸಂಟಿಯಂ, ಮಿಟಲೆನೆ, ರ್ಹೋಡಸ್, ಥೀಬಸ್ ಮತ್ತು ಇತರ ರಾಷ್ಟ್ರಗಳು ಸದಸ್ಯರಾದವು. ಆದರೆ ಈ ಒಕ್ಕೂಟವು ಕೇವಲ ತಾತ್ಕಾಲಿಕವಾದದ್ದು. ಸ್ಪಾರ್ಟ ಪ್ರಭುತ್ವವು ನಾಶವಾದ ಮೇಲೆ ಈ ಒಕ್ಕೂಟವು ತನ್ನಷ್ಟಿಗೆ ತಾನೇ ಅದೃಶ್ಯವಾಯಿತು. ಸ್ಪಾರ್ಟ ನೌಕಾಬಲವು ಕುಗ್ಗಿ ಏಜಿಯನ್ ಸಮುದ್ರಪ್ರದೇಶದಲ್ಲಿ ಸ್ಪಾರ್ಟ ಪ್ರಭುತ್ವಕ್ಕೆ ಚ್ಯುತಿಯುಂಟಾಯಿತು. ಕ್ರಿ. ಪೂ. ೩೭೬ ರಲ್ಲಿ ನಾಕ್ಸಸ್ ಕದನದಲ್ಲಿ ಅಥಿನಿಯನರ ನೌಕೆಯು ಸ್ಪಾರ್ಟನರ ನೌಕೆಯನ್ನು ಸೋಲಿಸಿತು. ಅಥೆನ್ಸ್ ಒಕ್ಕೂಟದ ನೌಕೆಯು ಪೆಲಪೊನೆಸಸ್ ಸುತ್ತಲೂ ಸಂಚಾರ ಮಾಡುತ್ತಲಿತ್ತು. ಕಾರ್ಸಿರ ಎಂಬ ಇನ್ನೊಂದು ನೌಕಾಕದನದಲ್ಲಿ (ಕ್ರಿ.ಪೂ. ೩೭೩) ಸ್ಪಾರ್ಟನರ ನೌಕೆಯು ಮತ್ತೊಮ್ಮೆ ಸೋತು ಸ್ಪಾರ್ಟ ನೌಕಾಶಕ್ತಿ ಮಾಯವಾಯಿತು.

ಕಾಲಿಯಸ್ ಕೌಲು (ಕ್ರಿ. ಪೂ. ೩೭೧) — ಸ್ಪಾರ್ಟರಾಷ್ಟ್ರವು ಎಲ್ಲೆಲ್ಲಿಯೂ ಅಪಜಯವನ್ನು ಹೊಂದಿ ಶಾಂತಿಯನ್ನು ಬಯಸಿತು. ಕ್ರಿ. ಪೂ. ೩೭೧ ರಲ್ಲಿ ಕಾಲಿಸ್ಟ್ರಾಟಸ್ ಎಂಬ ಅಥಿನಿಯನರ ನಾಯಕನ ಮಧ್ಯಸ್ಥಿಕೆಯಿಂದ ಸ್ಪಾರ್ಟ ರಾಷ್ಟ್ರವು "ಕಾಲಿಯಸ್ ಕೌಲು" ಎಂಬುದಕ್ಕೆ ಒಪ್ಪಿಕೊಂಡಿತು. ಈ ಕೌಲಿನ ಮುಖ್ಯಉದ್ದೇಶ ಎಲ್ಲಾ ನಗರಗಳೂ ಸ್ವತಂತ್ರವಾಗಬೇಕೆಂಬುದೇ ಆಗಿತ್ತು. ಆದರೆ ಸ್ಪಾರ್ಟ ತನ್ನ ಪರವಾಗಿಯೂ ಮತ್ತು ಮಿತ್ರರ ಪರವಾಗಿಯೂ ರುಜುಹಾಕಿತು. ಅಥೆನ್ಸ್ ಮತ್ತು ಒಕ್ಕೂಟದ ಸದಸ್ಯರು ಬೇರೆ ಬೇರೆ ರುಜುಹಾಕಿದರು. ಥೀಬ್ಸ್ ತನ್ನ ಪರವಾಗಿ ರುಜುಹಾಕಿತು. ಆದರೆ ಮಾರನೆಯ ದಿವಸ ಇಪಾಮಿನಾಂಡಾಸ್ ಮತ್ತು ಇತರ ಥೀಬ್ಸಿನ ಪ್ರತಿನಿಧಿಗಳು ಭೋಷಿಯನ್ ಒಕ್ಕೂಟದ ಪರವಾಗಿ ರುಜು

ಮಾಡಲು ಒತ್ತಾಯ ಮಾಡಿದರು. ಇದಕ್ಕೆ ಸ್ಪಾರ್ಟನರ ರಾಜನಾದ ಎಜಿಸಿಲಸನು ಒಪ್ಪದೆ "ನೀವು ಭೋಷಿಯನ್ ನಗರಗಳಿಗೆ ಸ್ವಾತಂತ್ರ್ಯ ಕೊಡುವುದಿಲ್ಲವೇ?" ಎಂದು ಪ್ರಶ್ನಿಸಿದನು. ಇಪಾಮಿನಾಂಡಾಸ್‌ನು ಮುಯ್ಯಿಗೆ ಮುಯ್ಯಿ ಮಾಡಲು "ನೀವು ಲೆಕೋನಿಯನ್ ನಗರಗಳಿಗೆ ಸ್ವಾತಂತ್ರ್ಯವನ್ನು ಕೊಡುವುದಿಲ್ಲವೆ?" ಎಂದು ಮರು ಪ್ರಶ್ನೆಹಾಕಿದನು. ಸ್ಪಾರ್ಟ ಮತ್ತು ಥೀಬ್ಸ್ ಯುದ್ಧಮಾಡುವುದು ಅನಿವಾರ್ಯವಾಯಿತು.

ಲ್ಯೂಕ್ಟ್ರ ಕದನ (ಕ್ರಿ. ಪೂ. ೩೭೧)—ಸ್ಪಾರ್ಟನರ ಸೈನ್ಯವು ತತ್‌ಕ್ಷಣವೇ ಭೋಷಿಯ ಮೇಲೆ ದಂಡಯಾತ್ರೆ ಮಾಡಿತು. ಸ್ಪಾರ್ಟನರ ರಾಜನಾದ ಕ್ಲಿಯಾಂಬ್ರಟಸ್‌ನು ತನ್ನ ಸೈನ್ಯವನ್ನು ಲ್ಯೂಕ್ಟ್ರ ಎಂಬ ಸ್ಥಳದಲ್ಲಿ ಸೇರಿಸಿದನು. ಲ್ಯೂಕ್ಟ್ರ ಕದನದಲ್ಲಿ ಇಪಾಮಿನಾಂಡಾಸ್‌ನು ತೋರಿಸಿದ ಸೈನ್ಯಶಕ್ತಿಯು ಅದ್ಭುತವಾದದ್ದು. ಥೀಬನರ ಸೈನ್ಯವು ಶಿಸ್ತಿನಿಂದ ಕಾದಾಡಿ ಸ್ಪಾರ್ಟನರನ್ನು ಸಂಪೂರ್ಣವಾಗಿ ಸೋಲಿಸಿತು. ಸ್ಪಾರ್ಟ ಪ್ರಭುತ್ವವು ನಾಶವಾಯಿತು. ಸ್ಪಾರ್ಟ ಥೀಬ್ಸ್ ರಾಷ್ಟ್ರದ ನಾಯಕತ್ವವನ್ನು ಒಪ್ಪಬೇಕಾಯಿತು. ಥೀಬ್ಸ್ ರಾಷ್ಟ್ರವು ಪ್ರಬಲವಾಗಿ ಗ್ರೀಸ್ ದೇಶದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿತು.

ಅಧ್ಯಾಯ ೨೧

ಥೀಬ್ಸ್ ಸಾರ್ವಭೌಮತ್ವ (ಕ್ರಿ. ಪೂ. ೩೭೧—೩೬೨)

ಲ್ಯೂಕ್ಟ್ರ ಕದನದಲ್ಲಿ ಸ್ಪಾರ್ಟಪ್ರಭುತ್ವವು ನಾಶವಾದಮೇಲೆ ಥೀಬ್ಸ್ ಗ್ರೀಸ್ ದೇಶದಲ್ಲಿ ನಾಯಕತ್ವವನ್ನು ವಹಿಸಿತು. ಥೀಬ್ಸ್ ನಾಯಕತ್ವವು ಸ್ಪಾರ್ಟ ನಾಯಕತ್ವಕ್ಕಿಂತ ಅತ್ಯಲ್ಪಕಾಲ ಬಾಳಿತು. ಆದರೂ ಪ್ರಗತಿಪರವಾಗಿ ರಚನಾತ್ಮಕ ರೀತಿಯಲ್ಲಿ ಆಡಳಿತವನ್ನು ನಡೆಯಿಸಬೇಕೆಂದು ಪ್ರಯತ್ನಿಸಿತು. ಥೀಬ್ಸ್‌ರಾಷ್ಟ್ರದ ಕೀರ್ತಿಯು ಪೆಲಿಪಿಡಸ್ ಮತ್ತು ಇಪಾಮಿನಾಂಡಾಸ್ ಎಂಬ ನಾಯಕಮಣಿಗಳಿಗೆ ಸೇರಿದ್ದು. ಇಬ್ಬರೂ ಅನುಭವಾತೀತವಾದ ಶಕ್ತಿಯನ್ನು ಹೊಂದಿದ್ದರು. ಇಬ್ಬರೂ ಉಜ್ವಲ ರಾಷ್ಟ್ರಪ್ರೇಮಿಗಳು. ಪೆಲಪಿಡಸ್‌ನು ದೌರ್ಜನ್ಯದಿಂದಲಾದರೂ ತನ್ನ

ರಾಷ್ಟ್ರವು ಸ್ವಾತಂತ್ರ್ಯವನ್ನು ಹೊಂದಬೇಕೆಂದು ನಿಶ್ಚಯಿಸಿದನು. ಅವನ ಪ್ರಯತ್ನದಿಂದಲೇ ಥೀಬ್ಸ್‌ನಲ್ಲಿ ರಕ್ತಮಯವಾದ ಕ್ರಾಂತಿಯುಂಟಾಗಿ ಸ್ಪಾರ್ಟನರ ದಬ್ಬಾಳಿಕೆಯು ನಾಶವಾಯಿತು. ಆದರೆ ಇಪಾಮಿನಾಂಡಾಸ್‌ನು ಪೆಲಪಿಡಸ್‌ನ ಸ್ನೇಹಿತನಾದರೂ ರಾಜಕೀಯದಲ್ಲಿ ನಿರ್ಮಲವಾದ ಮಾರ್ಗವನ್ನು ಅನುಸರಿಸಬೇಕೆಂಬುದೇ ಅವನ ಉದ್ದೇಶವಾಗಿತ್ತು. ಇಪಾಮಿನಾಂಡಸನ ವಿನಯ, ಆಶೆ ಇಲ್ಲದ ಸ್ವಭಾವ, ಕಸರತಿನ ಶಿಕ್ಷಣ, ತತ್ತ್ವ ವಿಚಾರತೆ, ಮೌನತ್ವ, ಐಶ್ವರ್ಯದ ಉದಾಸೀನತೆ—ಈ ಗುಣಗಳು ಎಲ್ಲರನ್ನೂ ಆಕರ್ಷಿಸಿದವು. ಆತನ ವಾಕ್ಪಟುತ್ವವು ಅಸಾಧಾರಣವಾದದು. ಮುಖ್ಯವಾಗಿ ಆತನಲ್ಲಿ ಪಂಗಡ ಮನೋಭಾವವಿಲ್ಲದೆ ಇತರ ನಾಯಕರಿಗೆ ಮೇಲ್ಪಂಕ್ತಿ ಹಾಕಿದನು.

ಪೆಲಪಿಡಸನ ಆಕ್ರಮಣ ನೀತಿ—ಥೀಬ್ಸ್ ಪ್ರಭುತ್ವವನ್ನು ಸ್ಥಾಪಿಸಲು ಪೆಲಪಿಡಸನು ಉತ್ತರ ಗ್ರೀಸಿನಲ್ಲಿ ಆಕ್ರಮಣ ನೀತಿಯನ್ನು ಅನುಸರಿಸಿದನು. ಇಪಾಮಿನಾಂಡಸನು ದಕ್ಷಿಣ ಗ್ರೀಸಿನಲ್ಲಿ ತನ್ನ ಸೈನ್ಯಶಕ್ತಿಯನ್ನು ಕೇಂದ್ರೀಕರಿಸಿದನು. ಥೆಸ್ಸಲಿಯಲ್ಲಿ ಫೀರೆ ಎಂಬ ಸಣ್ಣ ರಾಷ್ಟ್ರದ ನಾಯಕನಾದ ಜೇಸನ್ ಎಂಬುವನು ನಿರಂಕುಶಪ್ರಭುತ್ವವನ್ನು ಸ್ಥಾಪಿಸಿ ಸ್ವಲ್ಪಕಾಲದ ಮಟ್ಟಿಗೆ ತನ್ನ ರಾಷ್ಟ್ರವನ್ನು ಕೀರ್ತಿಗೆ ತಂದನು. ಜೇಸನ್‌ನು ಸ್ಪಾರ್ಟರಾಷ್ಟ್ರದ ಶತ್ರುವಾದ ಥೀಬ್ಸ್‌ನೊಡನೆ ಸ್ನೇಹ ಬೆಳೆಸಿ ಲ್ಯೂಕ್ಟ್ರ ಕದನದಲ್ಲಿ ಇಪಾಮಿನಾಂಡಸಿನ ಪರವಾಗಿ ಯುದ್ಧಮಾಡಿದನು. ಆದರೆ ಕ್ರಿ. ಪೂ. ೩೭೦ ರಲ್ಲಿ ಏಳು ಜನ ಯುವಕರು ಯಾವುದೋ ಅಹವಾಲನ್ನು ಹೇಳಿಕೊಳ್ಳುವ ನೆಪದಲ್ಲಿ ಜೇಸನನನ್ನು ಕೊಂದರು. ಜೇಸನನ ತರುವಾಯ ಅಲೆಕ್ಸಾಂಡರ್ ಎಂಬುವನು ಸಿಂಹಾಸನಕ್ಕೆ ಬಂದನು. ಥೆಸಲಿ ನಗರಗಳ ಮೇಲೆ ಮಾಡಿದ ದಬ್ಬಾಳಿಕೆಯು ಮಿತಿಮೀರಿತು. ಥೆಸಲಿ ನಗರಗಳು ಪೆಲಪಿಡಸನ ಸಹಾಯವನ್ನು ಅಪೇಕ್ಷಿಸಿದವು. ಪೆಲಪಿಡಸನು ತನ್ನ ಸೈನ್ಯದೊಡನೆ ಥೆಸಲಿಯ ಮೇಲೆ ಆಕ್ರಮಣ ನಡೆಸಿದನು. ಆದರೆ ಅಲೆಕ್ಸಾಂಡರನು ಪೆಲಪಿಡಸನನ್ನು ಸೆರೆಹಿಡಿದನು. ಈ ಸುದ್ದಿ ತಿಳಿದು ಇಪಾಮಿನಾಂಡಾಸನು ಥೆಸಲಿಗೆ ಹೋಗಿ ಪೆಲಿಪಿಡಸನನ್ನು ಸೆರೆಯಿಂದ ಬಿಡುಗಡೆ ಮಾಡಿದನು. ಅಲೆಕ್ಸಾಂಡರನ ದಬ್ಬಾಳಿಕೆಯು ಇನ್ನೂ ಹೆಚ್ಚಾಯಿತು. ಪೆಲಪಿಡಸನು

ಇನ್ನೊಂದು ಸಲ ಥೆಸಲಿಗೆ ಹೋದನು. ಕ್ರಿ. ಪೂ. ೩೬೪ ರಲ್ಲಿ ಸೈನೋಸೆಪಲೆ ಎಂಬ ಕದನದಲ್ಲಿ ಪೆಲಪಿಡಸನು ಮಡಿದರೂ ಇನ್ನೊಂದು ಥೀಬನರ ಸೈನ್ಯವು ಅಲೆಕ್ಸಾಂಡರನನ್ನು ಸೋಲಿಸಿ ಆತನು ಥೀಬಸ್ ಪ್ರಭುತ್ವವನ್ನು ಒಪ್ಪ ಬೇಕಾಯಿತು. ಪೆಲಪಿಡಸನ ಸಾವು ಥೀಬನರ ಪ್ರಭುತ್ವಕ್ಕೆ ದೊಡ್ಡ ಅಪಘಾತವಾಯಿತು.

ಇಪಾಮಿನಾಂಡಸನ ಆಕ್ರಮಣ ನೀತಿ — ಇಪಾಮಿನಾಂಡ ಸನು ದಕ್ಷಿಣ ಗ್ರೀಸಿನಲ್ಲಿ ಥೀಬ್ಸ್ ಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಿಸಿ ದನು. ಸ್ಪಾರ್ಟ ಆರ್ಕೆಡಿಯ ರಾಷ್ಟ್ರದ ಮೇಲೆ ನಡೆಸಿದ ದಬ್ಬಾಳಿಕೆಯಿಂದ ಆರ್ಕೆಡಿಯವು ಥೀಬ್ಸ್ ರಾಷ್ಟ್ರದ ಸಹಾಯವನ್ನು ಕೋರಿತು. ಇಪಾಮಿ ನಾಂಡಸನು ಈ ಸದವಕಾಶವನ್ನು ಉಪಯೋಗಿಸಿಕೊಂಡು ಸ್ಪಾರ್ಟ ಸೈನ್ಯ ವನ್ನು ಓಡಿಸಿ ಆರ್ಕೆಡಿಯವನ್ನು ಸ್ಪಾರ್ಟರಾಷ್ಟ್ರದ ಹಿಡಿತದಿಂದ ಬಿಡುಗಡೆ ಮಾಡಿದನು. ಮೆಸಿನಿಯಾವನ್ನು ಸ್ಪಾರ್ಟರಾಷ್ಟ್ರಕ್ಕೆ ವಿರೋಧವಾಗಿ ಸ್ಥಾಪಿಸಿ ದನು. ಇಪಾಮಿನಾಂಡಸನು ಸ್ಪಾರ್ಟನಗರದ ಮೇಲೆ ನಾಲ್ಕು ಸಲ (ಕ್ರಿ. ಪೂ. ೩೭೦, ೩೬೮, ೩೬೭, ೩೬೨) ದಂಡಯಾತ್ರೆ ಮಾಡಿದನು. ಸ್ಪಾರ್ಟ ಅಥೆನ್ಸ್ ರಾಷ್ಟ್ರದೊಡನೆ ಸ್ನೇಹ ಬೆಳೆಸಿತು. ಇಪಾಮಿನಾಂಡಸನು ಆಗಾಗ್ಗೆ ಆಕ್ರಮಣ ಮಾಡಿದ್ದರಿಂದ ಥೀಬ್ಸ್ ಪ್ರಭುತ್ವಕ್ಕೆ ವಿರೋಧ ಹೆಚ್ಚಾಯಿತು. ಈ ಸಮಯದಲ್ಲಿ ಅಥೆನ್ಸ್ ರಾಷ್ಟ್ರವು ತನ್ನ ನೌಕಾಶಕ್ತಿಯಿಂದ ಏಜಿಯನ್ ಪ್ರದೇಶದಲ್ಲಿ ಪ್ರಬಲವಾಯಿತು. ಥೀಬನರೂ ತಮ್ಮ ನೌಕಾಶಕ್ತಿಯನ್ನು ವಿಸ್ತರಿಸಿ ಅಥೆನ್ಸ್ ನೌಕೆಯು ಏಜಿಯನ್ ಪ್ರದೇಶದಲ್ಲಿ ಪ್ರಾಬಲ್ಯಕ್ಕೆ ಬರಲು ಅವಕಾಶ ಕೊಡಲಿಲ್ಲ. ಆರ್ಕೆಡಿಯ ಒಕ್ಕೂಟವು ಥೀಬನರ ಸಹಾಯದಿಂದ ಸದಸ್ಯ ರಾಷ್ಟ್ರಗಳ ಮೇಲೆ ತೋರಿಸಿದ ದಬ್ಬಾಳಿಕೆಯು ದಕ್ಷಿಣ ಗ್ರೀಸಿನಲ್ಲಿ ಶಾಂತಿಯನ್ನು ಕುದುರಿಸಿತು. ಕ್ರಿ. ಪೂ. ೩೬೪ರಲ್ಲಿ ಒಲಿಂಪಿಕ್ ರಾಷ್ಟ್ರ ಪಂದ್ಯ ಗಳು ಎಲಿಸ್ ರಾಷ್ಟ್ರದ ಅಧ್ಯಕ್ಷತೆಯಲ್ಲಿ ನಡೆಯುವುದಕ್ಕೆ ಬದಲಾಗಿ ಆರ್ಕೆ ಡಿಯಾ ಅಧ್ಯಕ್ಷತೆಯಲ್ಲಿ ನಡೆಯಿತು. ಇದು ಸಂಪ್ರದಾಯಕ್ಕೆ ವಿರೋಧ ವಾಗಿ ಆರ್ಕೆಡಿಯ ಮತ್ತು ಇದಕ್ಕೆ ಬೆಂಬಲವನ್ನು ಕೊಟ್ಟ ಥೀಬಸ್ ರಾಷ್ಟ್ರಗಳ ಮೇಲೆ ವೈರತ್ವವು ಹೆಚ್ಚಿತು. ಮಾಂಟಿನಿಯ ನಗರವು ಸ್ಪಾರ್ಟನರ ಪರ ವಾಗಿ ಸೇರಿತು. ಕ್ರಿ. ಪೂ. ೩೬೨ರಲ್ಲಿ ಇಪಾಮಿನಾಂಡಸನು ದಕ್ಷಿಣ

ಗ್ರೀಸಿನ ಮೇಲೆ ನಾಲ್ಕನೆಯ ಸಲ ದಂಡಯಾತ್ರೆ ಮಾಡಿದನು,

ಮಾಂಟಿನಿಯ ಕದನ. (ಕ್ರಿ. ಪೂ. ३६२)—ಇಪಾಮಿನಾಂಡಸನು ತನ್ನ ಸೈನ್ಯದಿಂದ ಮಾಂಟಿನಿಯ ನಗರದ ಮೇಲೆ ದಾಳಿ ನಡಸಿದನು. ಮಾಂಟಿನಿಯ ಪರವಾಗಿ ಸ್ಪಾರ್ಟನರು ತಮ್ಮ ಸೈನ್ಯವನ್ನೂ ತಂದಿದ್ದರು. ಲ್ಯಾಕ್ಟ್ರಾ ಕದನದಲ್ಲಿ ಇಪಾಮಿನಾಂಡಸನ ಸೈನ್ಯವು ತೋರಿಸಿದ ಶಿಸ್ತು, ಧೈರ್ಯ, ವಿಚಕ್ಷಣೆಯಿಂದ ಥೀಬನರಿಗೆ ಜಯ ಲಭಿಸುವುದರಲ್ಲಿತ್ತು. ಆದರೆ ದುರ್ದೈವದಿಂದ ಇಪಾಮಿನಾಂಡಸನ ಎದೆಗೆ ಭಲ್ಲೆಯ ಏಟು ಬಿದ್ದು ಆತನು ಮಡಿದನು. ತಾನು ಸಾಯುವುದಕ್ಕೆ ಮುಂಚೆ ತನ್ನ ಸೈನಿಕರಿಗೆ "ನೀವು ಕೌಲನ್ನು ಮಾಡಿಕೊಳ್ಳಿ" ಎಂದು ಹೇಳಿ ಸತ್ತನು. ಇಪಾಮಿನಾಂಡಸನ ಮರಣವು ಥೀಬ್ಸ್ ಪ್ರಭುತ್ವವು ನಾಶವಾಗಲು ಮುಖ್ಯ ಕಾರಣವಾಯಿತು. ಥೀಬ್ಸ್‌ರಾಷ್ಟ್ರವು ಅಭ್ಯುದಯಕ್ಕೆ ಬಂದ ರೀತಿ ದೀನಾವಸ್ಥೆಯಿಂದ ಪದವಿಗೆ ಬಂದ ವ್ಯಕ್ತಿಯ ಹಾಗೆ ಎಂಬ ಭಾವನೆ ಬೆಳೆಯಿತು. ಥೀಬ್ಸ್ ಕೀರ್ತಿಯು ಕೇವಲ ಇಬ್ಬರು ವ್ಯಕ್ತಿಗಳ ಮೇಲೆ ಅವಲಂಬಿಸಿದ್ದು ದುಃಖಕರ. ಇಪಾಮಿನಾಂಡಸನು ಎಷ್ಟೇ ಸಮರ್ಥನಾದರೂ ರಾಜನೀತಿ ನಿಪುಣನಲ್ಲವೆಂದು ಒಪ್ಪಿಕೊಳ್ಳಬೇಕು. ಆತನು ಕಟ್ಟಿದ ರಾಷ್ಟ್ರವು ಆತನ ಜೊತೆಯಲ್ಲೇ ಕ್ಷೀಣವಾಯಿತು. ಆದರೂ ಥೀಬ್ಸ್ ಪ್ರಭುತ್ವವು ಉದಾರತೆಯಿಂದ ಕೂಡಿ ಪ್ರಗತಿಪರವಾಗಿತ್ತು.

ಅಧ್ಯಾಯ ១១

ಮ್ಯಾಸಿಡೋನಿಯ ದೇಶದ ಫಿಲಿಪ್ (ಕ್ರಿ. ಪೂ. ३५೯-३३६)

ಇದುವರೆವಿಗೂ ಮ್ಯಾಸಿಡೋನಿಯ ಪ್ರದೇಶವು ಗ್ರೀಸಿನ ರಾಜಕೀಯದಲ್ಲಿ ಏನೇನೂ ಭಾಗ ವಹಿಸಿರಲಿಲ್ಲ. ಆ ಪ್ರದೇಶದ ಜನರು ಹೆಲೆನಿಕ್ ಕುಲಕ್ಕೆ ಸೇರಿದವರು. ಅವರೂ ಗ್ರೀಕ್ ಭಾಷೆಯನ್ನೇ ಮಾತನಾಡುತ್ತಿದ್ದರು. ಆದರೆ ಅವರು ಅನಾಗರಿಕರಾಗಿದ್ದರು. ಸುತ್ತಮುತ್ತಲೂ ಇಲೀನಿಯರೂ, ಥ್ರೇಸಿಯನರೂ ಪ್ರಬಲರಾಗಿ ಅವರ ಪ್ರಗತಿಗೆ ಅಡಚಣೆಯಾಗಿದ್ದರು. ಮ್ಯಾಂಟೀನಿಯ ಕದನದಲ್ಲಿ ಥೀಬ್ಸ್ ಪ್ರಭುತ್ವವು ನಾಶವಾದ

ಮೇಲೆ ಗ್ರೀಕರಿಗೆ ಸ್ವಾತಂತ್ರ್ಯ ಲಭಿಸದೆ ಮ್ಯಾಸಿಡೋನಿಯಾ ದೇಶವು ಪ್ರಾಬಲಕ್ಕೆ ಬಂದಿತು. ಇದರ ಕೀರ್ತಿಯು ಫಿಲಿಪ್‌ಗೆ ಸೇರತಕ್ಕದ್ದು. ಕೇವಲ ಇಪ್ಪತ್ತುನಾಲ್ಕು ವಯಸ್ಸಿನಲ್ಲಿಯೇ ಫಿಲಿಪ್‌ನು ಸಮರ್ಥನಾದ ಸೇನಾನಾಯಕನಾಗಿ ರಾಜನೀತಿ ಕುಶಲತೆಯನ್ನು ತೋರಿಸಿ ರಾಜನಾದನು. (ಕ್ರಿ. ಪೂ. ೩೫೯). ಇಪಾಮಿನಾಂಡಸನ ಸೈನ್ಯ ವ್ಯವಸ್ಥೆಯನ್ನು ಚೆನ್ನಾಗಿ ತಿಳಿದಿದ್ದನು. ಗ್ರೀಕ್ ರಾಷ್ಟ್ರಗಳ ಅಸೂಯೆ, ಲಂಚಕೋರತನ ಅವರ ವಿನಾಶಕ್ಕೆ ಕಾರಣವೆಂಬುದನ್ನೂ ಅರಿತಿದ್ದನು. ಫಿಲಿಪ್ ತನ್ನ ದೈಹಿಕ ಶಕ್ತಿ, ಸಾಹಸ ಮತ್ತು ಧೈರ್ಯದಿಂದ ನಿಜವಾದ ರಾಜನಾಗಿದ್ದನು. ಆದರೆ ಅವನು ತನ್ನ ಜನಗಳಹಾಗೆ ಅನಾಗರಿಕನಲ್ಲ. ಗ್ರೀಕರ ಸಾಹಿತ್ಯ, ತತ್ತ್ವ ಜ್ಞಾನ, ರಾಷ್ಟ್ರಪ್ರೇಮ–ಅವನನ್ನು ಗ್ರೀಕನನ್ನಾಗಿ ಮಾಡಿತ್ತು. ಮ್ಯಾಸಿಡೋನಿಯ ದೇಶವನ್ನು ವಿಸ್ತರಿಸಿ, ಗ್ರೀಕರನ್ನು ತನ್ನ ಹತೋಟಿಯಲ್ಲಿ ಒಟ್ಟುಗೂಡಿಸಿ, ತನ್ನ ಉದಾರತೆಯಿಂದ ಗ್ರೀಕರ ಬೆಂಬಲವನ್ನು ಪಡೆದು ಪರ್ಷಿಯಾದೇಶದ ಮೇಲೆ ದಂಡೆತ್ತಿ ಹೋಗಬೇಕೆಂಬುದೇ ಅವನ ಮುಖ್ಯ ಅಭಿಲಾಷೆಯಾಗಿತ್ತು. ಗ್ರೀಕರು ತನ್ನನ್ನು ಅನಾಗರಿಕನೆಂದು ಕಾಣದೆ ತನ್ನ ನಾಯಕತ್ವವನ್ನು ಒಪ್ಪಿಕೊಳ್ಳಬೇಕೆಂದು ಆಶಿಸಿದನು.

ಸೈನ್ಯಸುಧಾರಣೆಗಳು— ಫಿಲಿಪ್‌ನು ಮೊದಲು ಸೈನ್ಯ ಸುಧಾರಣೆಗಳನ್ನು ಮಾಡಿದನು. ಮ್ಯಾಸಿಡೊನಿಯ ಸೈನ್ಯವು ಮಿಶ್ರ ಸೈನ್ಯವಾಯಿತು. ಸೈನ್ಯಕ್ಕೆ ಸೇರಲು ಎಲ್ಲಾ ಕ್ಷಾತ್ರ ಕುಲಗಳಿಗೂ ಅವಕಾಶವಿತ್ತು. ಬೆಟ್ಟಗುಡ್ಡಗಳ ಜನರೂ, ಅಕ್ಕಪಕ್ಕದ ಶೂರರೂ ಸೈನ್ಯವನ್ನು ಸೇರಿ ಸೈನ್ಯ ಶಿಕ್ಷಣವನ್ನು ಹೊಂದಿದರು. ಸೈನ್ಯಕ್ಕೆ ಸೇರಿದವರು ಅದನ್ನೇ ವೃತ್ತಿಯನ್ನಾಗಿ ತಿಳಿದು ಶಿಸ್ತಿನಿಂದ ವರ್ತಿಸಿದರು. ರಾವುತರು, ಕಾಲಾಳುಗಳು, ರಥಿಕರು ಬೇರೆ ಬೇರೆ ತರಬೇತು ಹೊಂದಿದರು. ಮ್ಯಾಸಿಡೋನಿಯ ಸೈನ್ಯವು ಯಂತ್ರೀಕರಣ ರೀತಿಯಲ್ಲಿ ಕಾದಾಡುವುದೆಂದು ಪ್ರಸಿದ್ಧವಾಯಿತು. ಅದೃಷ್ಟವಶಾತ್ ಥ್ರೇಸಿನಲ್ಲಿ ಪಾಂಗೇಯಸ್ ಗುಡ್ಡದ ಹತ್ತಿರ ಚಿನ್ನದ ಗಣಿಗಳು ಸಿಕ್ಕಿದವು. ಫಿಲಿಪ್‌ನು ಈ ಗಣಿಗಳ ಉತ್ಪತ್ತಿಯನ್ನು ತನ್ನ ಸೈನ್ಯ ನಿರ್ಮಾಣದ ಕೆಲಸಕ್ಕೆ ಉಪಯೋಗಿಸಿದನು.

ಉತ್ತರ ಗ್ರೀಸಿನಲ್ಲಿ ಫಿಲಿಪ್‌ನ ಸಾಹಸ— ತನ್ನ ಸೇನೆಯು ವ್ಯವ

ಸ್ಥಿತ ಶಿಕ್ಷಣವನ್ನು ಪಡೆದ ಮೇಲೆ ಫಿಲಿಪ್‌ನು ಅಕ್ಕಪಕ್ಕದ ಕುಲಗಳ ಮೇಲೆ ಯುದ್ಧ ಮಾಡಿದನು. ಉತ್ತರದಲ್ಲಿ ಪೆಯೋನಿಯನರನ್ನೂ, ಇಲಿನಿಯ ನರನ್ನೂ ಸೋಲಿಸಿದನು. ಮ್ಯಾಸಿಡೋನಿಯ ದೇಶವು ಸಮುದ್ರ ಸಂಪರ್ಕ ವಿಲ್ಲದೇ ಇದ್ದರೆ ಪ್ರಗತಿಗೆ ಬರುವುದಿಲ್ಲವೆಂದು ತಿಳಿದು, ಪಿಡ್ನ ಎಂಬ ರೇವು ಪಟ್ಟಣವನ್ನು ವಶಪಡಿಸಿಕೊಂಡನು. ಮೋಸದಿಂದ ಆಂಫಿಪಾಲಿಸ್ ನಗರ ವನ್ನು ಅಥಿನಿಯನರಿಂದ ಕಸಿದುಕೊಂಡನು. ಫಿಲಿಪ್‌ನ ಆಕ್ರಮಣ ನೀತಿ ಯಿಂದ ಒಲಿಂತಸ್ ರಾಷ್ಟವು ಭಯಪಟ್ಟು ಅಥೆನ್ಸ್ ರಾಷ್ಟ್ರದೊಡನೆ ಸ್ನೇಹ ಬೆಳೆಸಿತು. ಆದರೆ ಫಿಲಿಪ್‌ನು ಪೊಟಿಡಿಯವನ್ನು ಅಥೆನ್ಸ್‌ನಿಂದ ಹಿಡಿದು ಒಲಿಂತಸ್‌ಗೆ ಕೊಟ್ಟು ತನ್ನ ವಶಮಾಡಿಕೊಂಡನು. ಥ್ರೇಸ್ ಪ್ರದೇಶವನ್ನು ಗೆದ್ದು ಫಿಲಿಪ್ಪಿ ಎಂಬ ನೂತನ ನಗರವನ್ನು ಕಟ್ಟಿದನು. ಇದೇ ಸಮಯದಲ್ಲಿ ಮಧ್ಯಗ್ರೀಸಿನಲ್ಲಿ ಧರ್ಮಯುದ್ಧ ಎಂಬ ಮತ ಯುದ್ಧವು ಫಿಲಿಪ್‌ನ ಆಕ್ರ ಮಣ ನೀತಿಗೆ ಅನುಕೂಲವಾಯಿತು. ತುಂಡು ಪಾಳೆಯಗಾರರ ಸಂತೆ ಯಾಗಿದ್ದ ಗ್ರೀಸಿನಲ್ಲಿ ಒಗ್ಗಟ್ಟಿಗೆ ಅವಕಾಶವಿರಲಿಲ್ಲ. ಕ್ರಿ. ಪೂ ೩೫೬ ರಲ್ಲಿ ಪೋಸಿಸ್ ಮತ್ತು ಥೀಬಸ್ ರಾಷ್ಟ್ರಗಳಿಗೆ ಡೆಲ್ಫಿಯ ಹತೋಟಿಯ ವಿಚಾರ ದಲ್ಲಿ ಯುದ್ಧವಾಯಿತು. ಪೋಸಿಸ್ ಡೆಲ್ಫಿಯ ಮೇಲೆ ಆಕ್ರಮಣಮಾಡಿತು. ಅಥೆನ್ಸ್, ಸ್ಪಾರ್ಟ ರಾಷ್ಟ್ರಗಳು ಪೋಸಿಸ್ ಪರವಾಗಿ ಸಹಾಯ ಮಾಡಿದವು. ಈ ಒಳಜಗಳದಿಂದ ಫಿಲಿಪನಿಗೆ ಅನುಕೂಲವಾಯಿತು. ಲರಿಸ್‌ನಗರದ ಅಲ್ಯೂಡೆ ಎಂಬುವರು ಅವನ ಸಹಾಯವನ್ನು ಅಪೇಕ್ಷಿಸಿದರು. ಫಿಲಿಪ್‌ನು ಥೆಸಲಿಯ ಮೇಲೆ ಆಕ್ರಮಣ ನಡೆಸಿ, ಒಲಿಂತಸ್‌ನನ್ನು ಹಿಡಿದು, ಪೋಸಿ ಸ್‌ನ್ನು ಸೋಲಿಸಿದನು. ಗ್ರೀಕರು ಫಿಲಿಪನನ್ನು ತಮ್ಮ ನಾಯಕನೆಂದು ಭಾವಿಸಬೇಕಾಯಿತು. ಆದರೂ ಅಥಿನಿಯನರ ಸೈನ್ಯವು ಫಿಲಿಪ್‌ನನ್ನು ಥೆರ್ಮಾಪಿಲೆಯ ಬಳಿ ಎದುರಿಸಿ ಸೋಲಿಸುವುದರಲ್ಲಿತ್ತು. ಫಿಲಿಪ್‌ನು ಸಧ್ಯಕ್ಕೆ ಯುದ್ಧವನ್ನು ಮುಂದುವರಿಸದೆ ಹಿಂತಿರುಗಿದನು.

ಅಥೆನ್ಸ್ ಪರ ಫಿಲಿಪ್‌ನ ಮನೋಭಾವ—ಫಿಲಿಪನಿಗೆ ಅಥೆನ್ಸ್ ರಾಷ್ಟ್ರವೆಂದರೆ ಮಹಾ ಗೌರವವಿತ್ತು. ಅಥೆನ್ಸ್ ರಾಷ್ಟ್ರದ ಬುದ್ಧಿಶಕ್ತಿ, ಕುಶಲತೆಯ ಶ್ರೇಷ್ಠತೆ, ಅವನನ್ನು ಮುಗ್ಧನನ್ನಾಗಿ ಮಾಡಿತು. ಅಥೆನ್ಸ್ ರಾಷ್ಟ್ರದ ಗೌರವವನ್ನು ಸಂಪಾದಿಸಲು ಹಾತೊರೆಯುತ್ತಿದ್ದನು. ತನ್ನ

ಮಗನಾದ ಅಲೆಗ್ಸಾಂಡರನಿಗೆ ಅರಿಸ್ಟೊಟಲನನ್ನು ಗುರುವಾಗಿ ನೇಮಿಸಿದನು. ತನ್ನನ್ನೂ ಗ್ರೀಕನೆಂದು ಭಾವಿಸಿ, ತನ್ನ ದೇಶವೂ, ಜನರೂ ಗ್ರೀಸ್‌ದೇಶಕ್ಕೆ ಸೇರಿದವರೆಂದು ಭಾವಿಸಬೇಕೆಂಬುದೇ ಅವನ ಆಶೆ. ತನ್ನ ಆಕ್ರಮಣ ನೀತಿಯಿಂದ ಗ್ರೀಸ್‌ದೇಶವನ್ನು ಜಯಿಸಿದ್ದರೂ ಗ್ರೀಕರನ್ನು ಔದಾರ್ಯ ದಿಂದ ಕಾಣುತ್ತಿದ್ದನು. ಆದರೆ ಅಥೆನ್ಸ್ ನಗರದಲ್ಲಿ ಡೆಮಾಸ್ತನಿಸ್ ಎಂಬುವನ ನಾಯಕತ್ವದಲ್ಲಿ ಯುದ್ಧ ಪಂಗಡವು ಫಿಲಿಪ್‌ನನ್ನು ಮೋಸಗಾರ ನೆಂದು ಭಾವಿಸಿ ಆತನಮೇಲೆ ಯುದ್ಧಮಾಡಬೇಕೆಂದು ಪ್ರೇರೇಪಿಸಿತು. ಡೆಮಾಸ್ತನಿಸನು ಮೊದಲು ವಾಕ್ಪಟುವಾಗಿರಲಿಲ್ಲ. ಬಹಿರಂಗ ಸಭೆಯಲ್ಲಿ ಮಾತನಾಡಲು ಅಭ್ಯಾಸವಿಲ್ಲದೆ ತೊದಲುತ್ತಿದ್ದನು. ಕ್ರಮೇಣ ಕನ್ನಡಿಯ ಮುಂದೆ ನಿಂತು ತನ್ನ ಅಭಿನಯವನ್ನು ತಾನೇ ನೋಡಿಕೊಂಡು ಒಳ್ಳೆ ವಾಗ್ಮಿಯಾದನು. ತನ್ನ ವಾಕ್ಚಾತುರ್ಯದಿಂದ ಆಗಾಗ್ಗೆ "ಫಿಲಿಪಿಕ್" ಎಂಬ ನಿಂದಾವಾಕ್ಯವನ್ನು ಹರಡಿ ಫಿಲಿಪ್‌ನಮೇಲೆ ಯುದ್ಧಮಾಡಲು ಪ್ರೇರಣೆಮಾಡಿದನು. ಫಿಲಿಪ್‌ನು ಥ್ರೇಸ್, ಇಲಿರಿಯ, ಛಾಲ್ಸಿಡಿಸ್ ಪ್ರದೇಶಗಳಲ್ಲಿ ದಾಳಿ ನಡೆಸಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು. ಥ್ರೇಸಿನಲ್ಲಿ ಚೆರ್ಸನೆಸ್ ಎಂಬ ಭಾಗವು ಅಥೀನಿಯನರಿಗೆ ಸೇರಿತು ಫಿಲಿಪ್‌ನು ಮೊದಲು ಈ ಪ್ರದೇಶದಮೇಲೆ ಆಕ್ರಮಣಮಾಡದೇ ಅಥೆನ್ಸ್ ತಟಸ್ಥವಾಗಿ ರುವಹಾಗೆ ಮಾಡಿದನು. ಥ್ರೇಸಿನ ಬಹು ಭಾಗವು ತನ್ನ ಹತೋಟಿಗೆ ಬಂದಮೇಲೆ ಅಥೆನ್ಸಿಗೆ ಸೇರಿದ ಚೆರ್ಸನೆಸ್‌ನ್ನೂ ಆಕ್ರಮಣಮಾಡಿದನು. ಅಥೆನ್ಸ್‌ನಲ್ಲಿ ಯುದ್ಧ ಪಂಗಡವು ಫಿಲಿಪ್‌ನಮೇಲೆ ಯುದ್ಧಮಾಡಲು ಸಿದ್ಧವಾಯಿತು.

ಖರೋನಿಯ ಕದನ. ಕ್ರಿ ಪೂ. ೩೩೮—ಕ್ರಿ. ಪೂ. ೩೩೮ ರಲ್ಲಿ ಅಥೆನ್ಸ್ ಸೈನ್ಯವು ಮಧ್ಯಗ್ರೀಸಿನಲ್ಲಿ ಯುದ್ಧಮಾಡಿತು. ಥೀಬನರು ತಮ್ಮ ಸೈನ್ಯವನ್ನು ಅಥೆನ್ಸ್ ಸಹಾಯಕ್ಕೆ ಕಳುಹಿಸಿದರು. ಖರೋನಿಯ ಎಂಬ ಸ್ಥಳದಲ್ಲಿ ಕದನವಾಯಿತು. ಗ್ರೀಕರು ಎಷ್ಟೇ ಸಾಹಸದಿಂದ ಯುದ್ಧ ಮಾಡಿದರೂ ಫಿಲಿಪ್‌ನು ಜಯಶಾಲಿಯಾದನು. ಫಿಲಿಪ್‌ನ ಮಗನಾದ ಅಲೆಕ್ಸಾಂಡರನು ಶತ್ರುವನ್ನು ಸಂಪೂರ್ಣವಾಗಿ ಸದೆಬಡಿದನು. ಈ ಕದನ ದಿಂದ ಗ್ರೀಕರ ಸ್ವಾತಂತ್ರ್ಯವು ನಾಶವಾಯಿತು. ಫಿಲಿಪ್‌ನ ಸಾರ್ವ

ಭೌಮತ್ವವನ್ನು ಎಲ್ಲರೂ ಒಪ್ಪಬೇಕಾಯಿತು. ಆದರೂ ಫಿಲಿಪ್‌ನು ತನ್ನ ಸಂಯಮದಿಂದ ಗ್ರೀಕರ ಮನಸ್ಸನ್ನು ಆಕರ್ಷಿಸಿದನು. ತನ್ನ ಔದಾರ್ಯ ದಿಂದ ಅನಾಗರಿಕನಲ್ಲನೆಂಬುದನ್ನು ಸ್ಪಷ್ಟಗೊಳಿಸಿದನು. ಅದರಲ್ಲೂ ಅಥೆನ್ಸ್‌ರಾಷ್ಟ್ರವನ್ನು ವಿಶೇಷವಾಗಿ ಸೌಮ್ಯತೆಯಿಂದ ಆದರಿಸಿ ಆ ರಾಷ್ಟ್ರದ ಕೃತಜ್ಞತೆಯನ್ನು ಗಳಿಸಿದನು.

ಕಾರಿಂತ್ ರಾಷ್ಟ್ರಸಭೆ. ಕ್ರಿ. ಪೂ. ೩೩೭—ಗ್ರೀಕರನ್ನು ಒಟ್ಟು ಗೂಡಿಸಿ ಮುಂದಕ್ಕೆ ಯಾವರೀತಿಯಾಗಿ ಶಾಂತಿಯನ್ನು ಸ್ಥಾಪಿಸ ಬೇಕೆಂಬುದೇ ಕಾರಿಂತ್‌ನಲ್ಲಿ ಸೇರಿದ ರಾಷ್ಟ್ರಸಭೆಯ ಘನ ಉದ್ದೇಶವಾಗಿತ್ತು. ಈ ರಾಷ್ಟ್ರಸಭೆಗೆ ಎಲ್ಲಾ ಗ್ರೀಕರ ರಾಷ್ಟ್ರಗಳೂ ಪ್ರತಿನಿಧಿಗಳನ್ನು ಕಳುಹಿಸಿ ದವು. ಈ ರಾಷ್ಟ್ರಸಭೆಯಲ್ಲಿ ಎಲ್ಲಾ ರಾಷ್ಟ್ರಗಳೂ ಸ್ವತಂತ್ರವೆಂದೂ ತಮ್ಮ ಇಷ್ಟದಂತೆ ಆಡಳಿತ ನಡೆಸಬಹುದೆಂದೂ ಘೋಷಿಸಲಾಯಿತು. ಪ್ರತಿ ಯೊಂದು ರಾಷ್ಟ್ರವೂ ಫಿಲಿಪ್‌ನೊಡನೆ ಸ್ನೇಹದ ಒಪ್ಪಂದಮಾಡಿಕೊಳ್ಳ ಬೇಕೆಂದೂ ಎಲ್ಲಾ ರಾಷ್ಟ್ರಗಳೂ ಒಟ್ಟಿಗೆ ಸೇರಿ ಮೆಸಿಡೋನಿಯ ಅಧ್ಯಕ್ಷತೆ ಯಲ್ಲಿ ಒಂದು ಒಕ್ಕೂಟವನ್ನು ಮಾಡಿಕೊಳ್ಳಬೇಕೆಂದೂ ನಿಶ್ಚಿತವಾಯಿತು. ಮೆಸಿಡೋನಿಯ ತನ್ನ ರಕ್ಷಣಾ ಸೈನ್ಯವನ್ನು ಅಂಬ್ರೇಸಿಯ, ಛಾಲ್ಸಿಸ್, ಕಾರಿಂತ್ ಮತ್ತು ಥೀಬ್ಸ್ ಪ್ರದೇಶಗಳಿಂದ ಹಿಂದಕ್ಕೆ ತೆಗೆದುಕೊಂಡಿತು. ಈ ರೀತಿಯಾಗಿ ಗ್ರೀಸಿನಲ್ಲಿ ಶಾಂತಿಯನ್ನು ಸ್ಥಾಪಿಸಿದಮೇಲೆ ಫಿಲಿಪ್‌ನು ಗ್ರೀಕರ ಸಂಘಟನೆಯಿಂದ ಪೌರ್ವಾತ್ಯ ದಂಡಯಾತ್ರೆಯನ್ನು ಕೈಗೊಳ್ಳಲು ಯೋಜನೆಯನ್ನು ಮುಂಡಿಸಿದನು. ಎಲ್ಲಾ ರಾಷ್ಟ್ರಗಳೂ ಉತ್ಸಾಹದಿಂದ ಒಪ್ಪಿದವು. ಪ್ರತಿಯೊಂದು ರಾಷ್ಟ್ರವೂ ತನ್ನ ಸೈನ್ಯವನ್ನು ಕಳುಹಿಸುವು ದಾಗಿಯೂ ಫಿಲಿಪನೇ ಈ ಸಂಯೋಗ ಸೈನ್ಯದ ಪೂರ್ಣನಾಯಕತ್ವವನ್ನು ಹೊಂದಬೇಕೆಂದೂ ಒಪ್ಪಿದವು. ಆದರೆ ದೈವಸಂಕಲ್ಪ ಬೇರೆಯಾಯಿತು.

ಫಿಲಿಪನ ಕೊಲೆ. ಕ್ರಿ. ಪೂ. ೩೩೬—ಮೆಸಿಡೋನಿಯ ರಾಜನು ತನ್ನ ಹೆಂಡತಿಯಮೇಲೆ ವಿಶ್ವಾಸದಿಂದ ವರ್ತಿಸುವುದನ್ನು ನಿರೀಕ್ಷಿಸಕೂಡದು ಎಂಬ ಪ್ರತೀತಿ ಇದೆ. ಫಿಲಿಪ್‌ನು ಒಲಿಂಪಿಯಸ್ ಎಂಬ ಎಪಿರಸ್ ರಾಷ್ಟ್ರದ ರಾಜಕುಮಾರಿಯನ್ನು ಮದುವೆಯಾಗಿದ್ದನು. ಈಕೆಯ ಮಗನೇ ಪ್ರಸಿದ್ಧನಾದ ಅಲೆಕ್ಸಾಂಡರನು. ಈಕೆಯ ಅಹಂಕಾರವೂ, ಆವೇಶವೂ

ಫಿಲಿಪ್‌ಗೆ ಸರಿಬೀಳಲಿಲ್ಲ. ಬರಬರುತ್ತ ಫಿಲಿಪ್‌ಗೆ ಈಕೆಯಲ್ಲಿ ಪ್ರೇಮವು ಕಮ್ಮಿಯಾಗಿ ಕೊನೆಗೆ ವಿವಾಹ ವಿಚ್ಛೇದನಮಾಡಿದನು. ತನ್ನ ಸೇನಾನಾಯಕನಾದ ಅಟ್ಟಲಸ್‌ನ ಸೋದರಸೊಸೆಯಾದ ಕ್ಲಿಯೋಪಾತ್ರ ಎಂಬುವಳನ್ನು ಮದುವೆಯಾದನು. ಒಲಿಂಪಿಯಸಳು ಸೇಡುತೀರಿಸಿಕೊಳ್ಳಲೂ ತನ್ನ ಮಗನಾದ ಅಲೆಗ್ಸಾಂಡರ್ ಮುಂದಕ್ಕೆ ರಾಜನಾಗಬೇಕೆಂಬ ಆಶೆಯಿಂದಲೂ ಒಳಸಂಚುಮಾಡಿ ಫಿಲಿಪ್‌ನನ್ನು ಕೊಲೆಮಾಡಿಸಿದಳು. ಅಲೆಗ್ಸಾಂಡರನಿಗೂ ತನ್ನ ತಂದೆಯ ಅಸಹ್ಯ ನಡತೆಯು ಸ್ವಲ್ಪವೂ ಸರಿಬೀಳಲಿಲ್ಲ. ಕ್ರಿ. ಪೂ. ೩೩೬ ರಲ್ಲಿ ಫಿಲಿಪ್‌ನು ತನ್ನ ನಲವತ್ತೇಳನೇ ವಯಸ್ಸಿನಲ್ಲಿ ಕೊಲ್ಲಲ್ಪಟ್ಟನು.

ಫಿಲಪ್‌ನ ಕೀರ್ತಿ—ಚರಿತ್ರೆಯು ಪ್ರಪಂಚದ ಮಹಾಪುರುಷರ ಪೈಕಿ ಅನ್ಯಾಯಮಾಡಿರುವುದರಲ್ಲಿ ಫಿಲಿಪ್‌ಗೆ ಹೆಚ್ಚೆಂದು ಹೇಳಬಹುದು. ತಂದೆಗಿಂತ ಮಗನ ಕೀರ್ತಿಯೇ ಹೆಚ್ಚಾದುದರಿಂದ ಫಿಲಿಪ್‌ನ ಅದ್ಭುತ ಸಾಹಸಕಾರ್ಯಗಳನ್ನು ಉಪೇಕ್ಷೆಮಾಡುವುದು ಆಶ್ಚರ್ಯವಲ್ಲ. ಆದರೂ ಫಿಲಿಪ್‌ನ ಆಯುಷ್ಯವೆಲ್ಲ ಮೆಸಿಡೋನಿಯದೇಶಕ್ಕೆ ದುಡಿದು ಭದ್ರವಾದ ರಾಜ್ಯವನ್ನು ಕಟ್ಟಬೇಕೆಂಬುದೇ ಆಗಿತ್ತು. ಅಲೆಗ್ಸಾಂಡರನ ಕೀರ್ತಿಗೆ ಫಿಲಿಪ್‌ನ ಅಸಾಧಾರಣವಾದ ಸಾಧನೆಗಳೇ ತಳಹದಿ


ಅಧ್ಯಾಯ ೨೩

ಅಲೆಗ್ಸಾಂಡರ್ ಮಹಾಶಯ (ಕ್ರಿ. ಪೂ. ೩೩೬-೩೨೩)

ಫಿಲಿಪ್‌ನು ಕಾಲವಾದ ನಂತರ ಗ್ರೀಸಿನಲ್ಲಿ ಮುಂದಕ್ಕೆ ಏನಾಗುವುದೆಂಬುದು ಯಾರಿಗೂ ತಿಳಿಯಲಿಲ್ಲ. ಅಷ್ಟು ಪ್ರಸಿದ್ಧನಾದ ತಂದೆಗೆ ಅವನಷ್ಟೆ ಪರಾಕ್ರಮಶಾಲಿಯಾದ ಮಗನಿರುವನೆಂದು ಯಾರಿಗೂ ಗೋಚರವಾಗಿರಲಿಲ್ಲ. ತಾತ್ಕಾಲಿಕವಾಗಿ ಉಪಶಾಂತಿ, ಹರ್ಷಮನೋಭಾವವುಂಟಾಯಿತು. ಆದರಲ್ಲೂ ಅಥೆನ್ಸ್ ನಗರದಲ್ಲಿ ಯುದ್ಧಪಂಗಡವು ಅಸಭ್ಯ ಉಲ್ಲಾಸವನ್ನು ತೋರಿಸಿತು. ಎಲ್ಲೆಲ್ಲಿಯೂ ದಂಗೆಯುಂಟಾಗುವ ಸೂಚನೆಗಳು ಕಂಡುಬಂದುವು. ಈ ಸ್ಥಿತಿಯಲ್ಲಿ ಫಿಲಿಪ್‌ನ ಮಗನಾದ ಅಲೆಗ್ಸಾಂಡರನು ಕೇವಲ

ಇಪ್ಪತ್ತನೆಯ ವಯಸ್ಸಿನಲ್ಲಿ ಸಿಂಹಾಸನಕ್ಕೆ ಬಂದನು. ತಾರುಣ್ಯದಲ್ಲೇ ಒಳ್ಳೆಯ ಶಿಕ್ಷಣವನ್ನು ಹೊಂದಿ ತನ್ನ ತಂದೆಯ ಹಾಗೆಯೇ ದಿಗ್ವಿಜಯವನ್ನು ಮಾಡಬೇಕೆಂದು ಹಂಬಲಿಸಿದನು. ಅವನು ನೋಡುವುದಕ್ಕೆ ಒಳ್ಳೆಯ ರಾಜಚಿಹ್ನೆಗಳನ್ನು ಹೊಂದಿ ಕಟ್ಟುಮಸ್ತಾಗಿ ಬೆಳೆದಿದ್ದನು; ಸಂಕಲ್ಪಮಾಡಿದ್ದನ್ನು ಹಟದಿಂದ ಸಾಧಿಸುತ್ತಿದ್ದನು. ತನ್ನ ತಾಯಿಯ ಬುದ್ಧಿ ವಿಚಾರಗಳು, ಅಹಂಕಾರಗಳು, ಉದ್ರೇಕಗಳು ಅವನಲ್ಲಿ ಸೇರಿದ್ದವು. ಆದರೆ ಅವನು ಗ್ರೀಕರ ನಾಗರಿಕತೆಯ ಅನುಯಾಯಿಯಾಗಿದ್ದನು. ಹೋಮರನ "ಇಲಿಯಡ್" ಎಂಬ ಪವಿತ್ರ ಗ್ರಂಥವನ್ನು ಕಂಠಪಾಠ ಮಾಡಿದ್ದನು. ಆರಿಸ್ಟೋಟಲನು ಅವನ ಗುರು. ಆತನ ಉಪದೇಶದಿಂದ ಯೋಗ್ಯವಾಗಿ ಜೀವಿಸಬೇಕೆಂದು ಆಶಿಸಿದನು. ಗ್ರೀಕರ ಸಾಹಿತ್ಯ, ಕಲೆ, ವಿಜ್ಞಾನವೆಂದರೆ ಅವನಿಗೆ ಗೌರವ. ಆಕ್ರಮಣ ನೀತಿಯಿಂದ ಗ್ರೀಕರನ್ನು ಜಯಿಸಿದರೂ ತನ್ನ ತಂದೆಯ ಉದಾರತೆಯನ್ನೇ ಅನುಸರಿಸಿ ಅವರ ಬೆಂಬಲವನ್ನು ಪಡೆದನು.

ಆಕ್ರಮಣ ನೀತಿ—ಮೊದಲು ಗ್ರೀಸಿನಲ್ಲಿ ಶಾಂತಿ ಸ್ಥಾಪಿಸಬೇಕಾಯಿತು. ತನ್ನ ಸಿಂಹಾಸನಕ್ಕೆ ವಾರಸುದಾರರಾದ ಶತ್ರುಗಳನ್ನು ನಾಶಮಾಡಿದನು. ಇದಾದಮೇಲೆ ದಕ್ಷಿಣಕ್ಕೆಹೋಗಿ ದಂಗೆಯೆದ್ದವರನ್ನು ಸಂಪೂರ್ಣವಾಗಿ ಜಯಿಸಿದನು. ಅಥೀನಿಯನರೂ ಇತರರೂ ಶರಣಾಗತರಾದರು. ಗ್ರೀಕರನ್ನು ಒಟ್ಟುಗೂಡಿಸಿ ಕಾರಿಂತ್‌ನಲ್ಲಿ ರಾಷ್ಟ್ರಸಭೆಯನ್ನು ಕರೆದನು. ತನ್ನ ಔದಾರ್ಯತ್ವದಿಂದ ಗ್ರೀಕರನ್ನು ಒಲಿಸಿ ತನ್ನ ತಂದೆಯು ಯೋಚಿಸಿದ ಪೌರ್ವಾತ್ಯ ದಿಗ್ವಿಜಯವನ್ನು ಕೈಗೊಂಡನು. ಗ್ರೀಕರು ಅಲೆಗ್ಸಾಂಡರನನ್ನು ತಮ್ಮ ಮುಖ್ಯ ಸೇನಾನಾಯಕನನ್ನಾಗಿ ನೇಮಿಸಿದರು. ಆದರೂ ಉತ್ತರ ಗ್ರೀಸಿನ ಇಲಿರಿಯಾ ಮತ್ತು ಥ್ರೇಸ್ ಪ್ರದೇಶಗಳಲ್ಲಿ ಅಲೆಗ್ಸಾಂಡರನಿಗೆ ವಿರೋಧವಾಗಿ ದಂಗೆ ಎದ್ದರು. ಆದರೆ ಅಲೆಗ್ಸಾಂಡರನು ತತ್‌ಕ್ಷಣವೇ ಆ ಪ್ರದೇಶಗಳಿಗೆ ಹೋಗಿ ದಂಗೆಗಳನ್ನು ಅಡಗಿಸಿದನು. ಅಲೆಗ್ಸಾಂಡರನನ್ನು ಥ್ರೇಸ್‌ನಲ್ಲಿ ಯಾರೋ ಕೊಂದುಹಾಕಿದರೆಂಬ ಸುಳ್ಳು ಸಮಾಚಾರವು ಥೀಬ್ಸ್ ನಗರದಲ್ಲಿ ಹರಡಿ ಥೀಬನರು ಮೆಸಿಡೋನಿಯ ರಕ್ಷಣ ಸೈನ್ಯಗಳನ್ನು ಮುತ್ತಿಗೆಹಾಕಿದರು. ಅಲೆಗ್ಸಾಂಡರನು ಥೀಬ್ಸ್ ನಗರದ ಮೇಲೆ ದಾಳಿಮಾಡಿ ನಗರವನ್ನು ನಾಶಮಾಡಿದನು. ಹೆಂಗಸರು,




ಅಲೆಗ್ಸಾಂಡರನ ಜೈತ್ರಯಾತ್ರೆ

ಮಕ್ಕಳು ಎಂದು ಲಕ್ಷಿಸದೆ ಸುಮಾರು ಮೂವತ್ತು ಸಾವಿರ ಥೀಬನರನ್ನು ಸೆರೆಹಿಡಿದು ಗುಲಾಮರನ್ನಾಗಿ ಮಾರಿದನು. ಗ್ರೀಕರ ಸೊಲ್ಲು ಅಡಗಿ ಅವರು ಅಲೆಗ್ಸಾಂಡರನನ್ನು ತಮ್ಮ ನಾಯಕನೆಂದು ಒಪ್ಪಿಕೊಳ್ಳಬೇಕಾಯಿತು. ಗ್ರೀಸ್‌ದೇಶವು ಅಲೆಗ್ಸಾಂಡರನ ಹತೋಟಿಗೆ ಒಳಗಾಯಿತು. ಅಲೆಗ್ಸಾಂಡರನನ್ನು ಹುಚ್ಚುಹುಡುಗನೆಂದು ತಿಳಿದಿದ್ದ ಗ್ರೀಕರು ತಾವೇ ಹುಚ್ಚಾದರು.

ಏಷ್ಯದ ದಂಡಯಾತ್ರೆ—ಗ್ರೀಸಿನಲ್ಲಿ ಸುಭದ್ರ ಆಡಳಿತವನ್ನು ಸ್ಥಾಪಿಸಿ ಅಲೆಗ್ಸಾಂಡರನು ತನ್ನ ಜೀವನದ ಮಹತ್ವಾಕಾಂಕ್ಷೆಯನ್ನು ಸಾಧಿಸಲು ಸಂಕಲ್ಪಮಾಡಿದನು. ಅದೇ ಏಷ್ಯದ ದಂಡಯಾತ್ರೆ. ಮೊದಲನೆಯದಾಗಿ ಪರ್ಷಿಯಾದೇಶವು ಗ್ರೀಸಿನಲ್ಲಿ ಮಾಡಿದ್ದ ದೌರ್ಜನ್ಯಕ್ಕೋಸ್ಕರ ಸೇಡು ತೀರಿಸಿಕೊಳ್ಳುವುದು, ಎರಡನೆಯದಾಗಿ ಪ್ರಪಂಚವನ್ನೇ ಪರಿಶೋಧಿಸಿ ಎಲ್ಲೆಲ್ಲಿಯೂ ಗ್ರೀಕರ ನಾಗರಿಕತೆಯನ್ನು ಸ್ಥಾಪಿಸುವುದು—ಇವೇ ಅವನ ಮುಖ್ಯ ಉದ್ದೇಶವಾಗಿದ್ದವು. ಗ್ರೀಸಿನ ಆಡಳಿತವನ್ನು ತನ್ನ ಅನುಯಾಯಿಯಾದ ಆಂಟಿಪೇಟರ್‌ಗೆ ವಹಿಸಿ ಸರಿಯಾದ ವ್ಯವಸ್ಥೆಮಾಡಿ ಅಲೆಗ್ಸಾಂಡರನು ತನ್ನ ಪ್ರಬಲವಾದ ಸೈನ್ಯದೊಡನೆ ಹೆಲೆಸ್ಪಾಂಟ್ ಪ್ರದೇಶಕ್ಕೆ ಹೋದನು. ಮೊದಲು ಪುರಾತನವಾದ ಟ್ರಾಯ್ ನಗರವನ್ನು ಪ್ರವೇಶಿಸಿ ಅಕಿಲಸ್‌ನ ಸಮಾಧಿಗೆ ಗೌರವ ಸಲ್ಲಿಸಿದನು. (ಕ್ರಿ. ಪೂ. ೩೩೪). ಹೆಲೆಸ್ಪಾಂಟ್‌ನ್ನು ದಾಟಿ ಏಷ್ಯಮೈನರಿಗೆ ಬಂದನು. ಪರ್ಷಿಯ ದೇಶದ ರಾಜನಾದ ಡೇರಿಯಸನು ಯುದ್ಧಕ್ಕೆ ಯಾವ ಸಿದ್ಧತೆಗಳನ್ನೂ ಮಾಡಿರಲಿಲ್ಲ. ಅಲೆಗ್ಸಾಂಡರನು ಕಷ್ಟವಿಲ್ಲದೆ ಫ್ರಿಜಿಯ ಪ್ರದೇಶಕ್ಕೆ ಬಂದನು.

ಗ್ರಾನಿಕಸ್ ಕದನ. ಕ್ರಿ. ಪೂ. ೩೩೪—ಗ್ರಾನಿಕಸ್ ನದಿತೀರದಲ್ಲಿ ಪರ್ಷಿಯನರು ಅಲೆಗ್ಸಾಂಡರನ ಸೈನ್ಯವನ್ನು ಎದುರಿಸಿದರು. ಗ್ರೀಕರ ಸೈನ್ಯವು ಸುವ್ಯವಸ್ಥಿತ ರೀತಿಯಲ್ಲಿ ಕಾದಾಡಿತು. ಪರ್ಷಿಯನರ ರಾವುತರನ್ನು ಚದುರಿಸಲಾಯಿತು. ಕೊನೆಗೆ ಪರ್ಷಿಯನರು ಸಂಪೂರ್ಣವಾಗಿ ಸೋತರು. ಏಷ್ಯಮೈನರನ್ನು ಪ್ರವೇಶಿಸಲು ಅಲೆಕ್ಸಾಂಡರನಿಗೆ ಯಾವ ತೊಂದರೆಯೂ ಇರಲಿಲ್ಲ. ಆದರೂ ಮೊದಲು ಫಿನಿಷಿಯನರ ನೌಕೆಯನ್ನು ಸೋಲಿಸಬೇಕಾಯಿತು. ಸಾರ್ಡಿಸ್ ಮತ್ತು ಇಫಿಸಸ್ ನಗರಗಳನ್ನು ಕಷ್ಟವಿಲ್ಲದೆ ಹಿಡಿದನು. ಮಿಲೆಟಸ್ ನಗರವನ್ನು ದೌರ್ಜನ್ಯತೆಯಿಂದ ಮುತ್ತಿ ಹಿಡಿಯಬೇಕಾಯಿತು.

ಇಸಸ್ ಕದನ ಯೋಜನೆ



ಸ್ಪೋಡ್ಸನಮೆಮ್ನಾನ್ ಎಂಬುವನು ಪರ್ಷಿಯನರ ಪರವಾಗಿ ಹಾಲಿ ಕರ್ನಸೆಸ್‌ನಲ್ಲಿ ಯುದ್ಧಕ್ಕೆ ಸಿದ್ಧತೆ ಮಾಡಿಕೊಂಡಿದ್ದನು.

ಗಾರ್ಡಿಯರ್ನ ಗಂಟು—ಅಲೆಗ್ಸಾಂಡರನು ಫ್ರಿಜಿಯ ಪ್ರದೇಶದ ಹಿಂದಿನ ರಾಜಧಾನಿಯಾದ ಗಾರ್ಡಿಯಂ ನಗರಕ್ಕೆ ಪ್ರವೇಶಿಸಿದನು. ಈ ಸ್ಥಳದಲ್ಲಿ ಒಂದು ಪುರಾತನವಾದ ರಥವಿತ್ತು. ಇದನ್ನು ಫ್ರಿಜಿಯನರ ಮೊದಲನೆಯ ದೊರೆಯಾದ ಗಾರ್ಡಿಯಸ್ ಎಂಬುವನು ಕಟ್ಟಿದನೆಂದು ಐತಿಹ್ಯವಿದೆ. ಈ ರಥದ ಕಂಬಕ್ಕೆ ಕಟ್ಟಿದ್ದ ತೊಗಟೆಯ ಗಂಟನ್ನು ಯಾರು ಬಿಚ್ಚುವರೋ ಅವರು ಏಷ್ಯವನ್ನು ಆಳುವರು ಎಂದು ಭವಿಷ್ಯ ಹೇಳುತ್ತಿದ್ದರು. ಅಲೆಗ್ಸಾಂಡರನು ಕಷ್ಟವಿಲ್ಲದೆ ತನ್ನ ಕತ್ತಿಯಿಂದ ಗಾರ್ಡಿಯರ್ನ ಗಂಟನ್ನು ಕತ್ತರಿಸಿದನು. ಅಕಸ್ಮಾತ್ತಾಗಿ ಉಂಟಾದ ಸಿಡಿಲು ಜ್ಯೂಸ್ ದೇವತೆಯ ಒಪ್ಪಿಗೆಯ ಸೂಚನೆ ಎಂದು ಹೇಳಿದರು. ಮುಂದಕ್ಕೆ ಅಲೆಗ್ಸಾಂಡರ್ ಟಾರಸ್ ಗುಡ್ಡದಿಂದ ಸೈಲಿಸಿಯಾಪ್ರದೇಶಕ್ಕೆ ಹೋದನು. ಪರ್ಷಿಯನರು ಯುದ್ಧಮಾಡದೆ ಹಿಮ್ಮೆಟ್ಟಿದರು. ಟಾರ್‌ಸಸ್ ನಗರವು ಅಲೆಗ್ಸಾಂಡರನಿಗೆ ವಶವಾಯಿತು.

ಇಸ್ಸಸ್ ಕದನ. ಕ್ರಿ. ಪೂ. ೩೩೩—ಡೇರಿಯಸ್‌ನು ಧೈರ್ಯಮಾಡಿ ಪ್ರಬಲವಾದ ಸೈನ್ಯದೊಡನೆ ಸೈಲಿಸಿಯ ಪ್ರದೇಶಕ್ಕೆ ಬಂದನು. ಇಸ್ಸಸ್‌ನಗರದಲ್ಲಿ ಯುದ್ಧವಾಯಿತು. ಪರ್ಷಿಯನರ ಸೈನ್ಯವು ಸಣ್ಣ ಮೈದಾನದಲ್ಲಿ ಚಲಿಸುವುದೇ ಕಷ್ಟವಾಯಿತು. ಡೇರಿಯಸನು ಭಯಪಟ್ಟು ಓಡಿಹೋದನು. ಪರ್ಷಿಯನರು ದಿಕ್ಕುತೋಚದೆ ಚದುರಿದರು. ಪರ್ಷಿಯನರು ಬಿಟ್ಟುಹೋದ ಐಶ್ವರ್ಯ ಗ್ರೀಕರ ವಶವಾಯಿತು. ಕೊನೆಗೆ ಡೇರಿಯಸನ ತಾಯಿ, ಹೆಂಡತಿ ಸಂಸಾರವೆಲ್ಲವೂ ಅಲೆಗ್ಸಾಂಡರನ ಆಶ್ರಯವನ್ನು ಪಡೆಯಬೇಕಾಯಿತು. ಅಲೆಗ್ಸಾಂಡರನು ಅವರನ್ನು ಮರ್ಯಾದೆಯಿಂದ ರಕ್ಷಿಸಿದನು.

ಟೈರ್‌ನ ಮುತ್ತಿಗೆ—ಅಲೆಕ್ಸಾಂಡರನು ಪರ್ಷಿಯಾ ದೇಶದ ಮೇಲೆ ನುಗ್ಗುವುದಕ್ಕೆ ಮುಂಚೆ ದಕ್ಷಿಣಕ್ಕೆ ತಿರುಗಿ ಸಿರಿಯ ಮತ್ತು ಈಜಿಪ್ಟ್‌ಗೆ ಹೋದನು. ಮಧ್ಯದಲ್ಲಿ ಸಿಕ್ಕಿದ ನಗರಗಳು ಅವನ ವಶವಾದವು. ಟೈರ್ ನಗರವು ಸುಲಭವಾಗಿ ಸ್ವಾಧೀನವಾಗಲಿಲ್ಲ. ಟೈರ್ ಒಂದು ದ್ವೀಪ. ಅದಕ್ಕೆ ಸುತ್ತಲೂ ಭದ್ರವಾದ ಕೋಟೆಯಿತ್ತು. ಅಲೆಕ್ಸಾಂಡರನು ದಡ

ದಿಂದ ಈ ದ್ವೀಪಕ್ಕೆ ಸೇತುವೆಯನ್ನು ರಚಿಸಿ, ಕೋಟೆಗೆ ಲಗ್ಗೆ ಹತ್ತಿ ವಶಪಡಿಸಿಕೊಂಡನು. ಅವನ ಕೀರ್ತಿ ಹೆಚ್ಚಿತು. ಆದರೆ ಅವನು ಮಾಡಿದ ಅಮಾನುಷ ಕೊಲೆಗಳು, ಹಿಂಸೆಗಳು ಥೀಬ್ಸ್‌ನಲ್ಲಿ ಮಾಡಿದ ಅನ್ಯಾಯಗಳಿಗೆ ಕಡಿಮೆಯಾಗಿರಲಿಲ್ಲ. ಅವನು ಎಂಟುಸಾವಿರ ಜನರನ್ನು ಕೊಂದನು; ಮೂವತ್ತು ಸಾವಿರ ಜನರನ್ನು ಗುಲಾಮರನ್ನಾಗಿ ಮಾರಿದನು. ಸಿಡನೆ ನಗರವು ಕಷ್ಟವಿಲ್ಲದೆ ಅವನ ವಶವಾಯಿತು. ಮುಂದಕ್ಕೆ ಪಾಲೆಸ್ಟೈನ್ ಪ್ರದೇಶದಲ್ಲಿ ಗಾಸ್ಸಾ ನಗರದ ಮೇಲೆ ದಾಳಿಮಾಡಿ ವಶಪಡಿಸಿಕೊಂಡನು. ನಗರದ ರಾಜ್ಯಪಾಲನಾದ ಬೇಟಿಸ್ ಎಂಬುವನ ಮೇಲೆ ಕ್ರೂರವಾದ ಶಿಕ್ಷೆಯನ್ನು ವಿಧಿಸಿದನು. ಬೇಟಿಸ್‌ನನ್ನು ತನ್ನ ರಥದ ಹಗ್ಗಕ್ಕೆ ಕಟ್ಟಿ ಅವನು ಸಾಯುವವರೆಗೂ ಎಳೆಸಿದನು.

ಈಜಿಪ್ಟಿನ ದಂಡಯಾತ್ರೆ—ಇಲ್ಲಿಂದ ಅಲೆಕ್ಸಾಂಡರನು ಈಜಿಪ್ಟನ್ನು ಸೇರಿದನು. ಈಜಿಪ್ಟ್ ಎರಡು ಶತಮಾನಗಳಿಂದ ಪರ್ಷಿಯಾ ದೇಶಕ್ಕೆ ಅಡಿಯಾಳಾಗಿ ನೊಂದಿತ್ತು. ಅಲೆಕ್ಸಾಂಡರನನ್ನು ಜನರು ಹರ್ಷದಿಂದ ಗೌರವಿಸಿದರು. ಅವನನ್ನು ತಮ್ಮ ಫರೋವನೆಂದು ಭಾವಿಸಿ ಅವನಿಗೆ ಹೂಮಾಲೆ ಹಾಕಿದರು. ಈ ದೇಶದಲ್ಲಿ ನಾಲ್ಕುತಿಂಗಳ ಕಾಲ ಅವನು ಇದ್ದನು. ಈಜಿಪ್ಟಿನವರು ತೋರಿದ ಪೂಜೆ, ಸತ್ಕಾರಗಳಿಂದ ಅವನ ತಲೆಯೂ ತಿರುಗಿತು. ತಾನು ದೈವಾಂಶ ಸಂಭೂತನೆಂದು ಹೆಮ್ಮೆಪಟ್ಟನು. ನೈಲ್ ನದಿಯ ಪಶ್ಚಿಮಕ್ಕೆ ಹೋಗಿ ಅಲೆಕ್ಸಾಂಡ್ರಿಯ ಎಂಬ ನಗರವನ್ನು ಸ್ಥಾಪಿಸಿದನು. ಈ ನಗರವು ಅನೇಕ ಶತಮಾನಗಳವರೆವಿಗೂ ಗ್ರೀಕರ ವಾಣಿಜ್ಯ ಮತ್ತು ನಾಗರಿಕತೆಯ ಕೇಂದ್ರವಾಯಿತು. ಮರುಭೂಮಿಯ ಹಸುರು ನೆಲದಲ್ಲಿದ್ದ ಸ್ಯೂಸ್ಸ್ ಅಮ್ಮನ ದಿವ್ಯವಾಣಿಯನ್ನು ಭೇಟಿಮಾಡಿದನು. ಈಜಿಪ್ಟಿನವರು ಇವನ ದೈವಭಕ್ತಿಯಿಂದ ಮುಗ್ಧರಾಗಿ ವಿಶೇಷ ಗೌರವ ತೋರಿಸಿದರು. ಈಜಿಪ್ಟ್ ದಂಡಯಾತ್ರೆಯಾದ ಮೇಲೆ ಕ್ರಿ. ಪೂ. ೩೩೧ ರಲ್ಲಿ ಟೈರ್‌ಗೆ ಬಂದನು. ಮೆಸಪೊಟಮಿಯ ಮರುಭೂಮಿಯ ಉಷ್ಣತೆಯನ್ನು ತಪ್ಪಿಸಿಕೊಳ್ಳಲು ಥಾಪಸಕಸ್‌ನಗರದಲ್ಲಿ ಈಫ್ರಟಿಸ್ ನದಿಯನ್ನೂ ಟೈಗ್ರಿಸ್ ನದಿಯನ್ನೂ ದಾಟಿದನು. ಟೈಗ್ರಿಸ್‌ನದಿಯ ಎಡದಡದಲ್ಲಿದ್ದ ಅರ್ಬೆಲ ಪಕ್ಕದಲ್ಲಿ ಗಾಗ್‌ಮೆಲ ಪಟ್ಟಣವನ್ನು ಸೇರಿದನು.

ಗಾಗ್‌ಮೆಲ ಕದನ ಕ್ರಿ. ಪೂ. ೩೩೧—ಡೇರಿಯಸನು ಬಹು ಸಂಖ್ಯಾತವಾದ ಸೇನೆಯನ್ನು ಸಿದ್ಧಪಡಿಸಿದ್ದನು. ಸುಮಾರು ಒಂದು ಕೋಟಿ ಕಾಲಾಳುಗಳೂ, ನಲವತ್ತುಸಾವಿರ ರಾವುತರೂ ಪರ್ಷಿಯನರ ಸೈನ್ಯದಲ್ಲಿದ್ದರು. ಆದರೆ ಪರ್ಷಿಯಾ ಸೈನ್ಯದಲ್ಲಿ ಏನೇನೂ ಶಿಸ್ತಿರಲಿಲ್ಲ. ಅಲೆಕ್ಸಾಂಡರನು ತನ್ನ ರಾವುತರನ್ನು ಪರ್ಷಿಯನರ ಮೇಲೆ ನುಗ್ಗಿಸಿ ಚದುರಿಸಿದನು. ಡೇರಿಯಸ್‌ನು ಮತ್ತೊಮ್ಮೆ ಓಡಿಹೋದನು. ಗಾಗ್‌ಮೆಲ ಕದನದಿಂದ ಅಲೆಗ್ಸಾಂಡರನಿಗೆ ಅದ್ಭುತ ಜಯವಾಯಿತು. ಡೇರಿಯಸನ್ನ ಸಂಪೂರ್ಣವಾಗಿ ಸೋತು, ಮಿಡಿಯ ರಾಜಧಾನಿಯಾದ ಎಕ್ಬಾಟನ ನಗರದಲ್ಲಿ ಬಚ್ಚಿಟ್ಟುಕೊಂಡನು. ಪರ್ಷಿಯನರ ಸಾಮ್ರಾಜ್ಯವು ನುಚ್ಚು ನೂರಾಯಿತು.

ವಿಜಯಿಯಾದ ಅಲೆಗ್ಸಾಂಡರನು ಬೆಬಿಲೋನ್ ಸಾಮ್ರಾಜ್ಯವನ್ನು ಆಕ್ರಮಿಸಿದನು. ಪರ್ಷಿಯಾದೇಶದ ರಾಜಧಾನಿಯಾದ ಸೂಸ ನಗರವನು ತನ್ನ ವಶಪಡಿಸಿಕೊಂಡನು. ಸೂಸ ನಗರದಲ್ಲಿ ಹೆಚ್ಚಾಗಿ ಕೊಳ್ಳೆ ಸಿಕ್ಕಿತು. ಇದರಲ್ಲಿ ಐವತ್ತುಸಾವಿರ ಟಾಲೆಂಟ್ (೧೨,೦೦೦,೦೦೦ ಪೌಂಡು) ನಗದು ಸೇರಿತ್ತು. ಪರ್ಷಿಯಾ ದೇಶದ ಸೇನಾನಾಯಕನಾದ ಆರಿಯೊ ಬರ್ಜನೆಸ್ ಎಂಬುವನು ಅಲೆಗ್ಸಾಂಡರನನ್ನು ವಿರೋಧಿಸಿದನು. ಅಲೆಗ್ಸಾಂಡರನು ಅವನ ಸೈನ್ಯವನ್ನು ಚದುರಿಸಿ ಪೆರ್ಸಿಪಾಲಿಸ್ ಎಂಬ ಸುಂದರವಾದ ನಗರವನ್ನು ಹಿಡಿದನು. ಇಲ್ಲಿಯೂ ಅಪರಿಮಿತವಾದ ಕೊಳ್ಳೆ ಸಿಕ್ಕಿತು. (೧೨೦,೦೦೦ ಟಾಲೆಂಟ್‌ಗಳು—೨೮,೮೦೦,೦೦೦ ಪೌಂಡು). ಈ ನಗರದಲ್ಲಿ ಜೆರ್ಕ್ಸಸ್ಸನ ಅರಮನೆಯನ್ನು ಸುಟ್ಟನು. ಕುಡಿತದ ಅಮಲಿನಿಂದ ಅಲೆಗ್ಸಾಂಡರನು ಈ ಅನಾಗರಿಕ ಕೃತ್ಯವನ್ನು ತನ್ನ ಸೇಡು ತೀರಿಸುವುದಕ್ಕೋಸ್ಕರ ಮಾಡಿದನೆಂದು ಪ್ರತೀತಿಯಿದೆ. ಇದು ಅವನ ಕೀರ್ತಿಗೆ ಕಳಂಕವೆನ್ನಬಹುದು. ಅವನ ಸೈನ್ಯದವರು ಮಾಡಿದ ಸುಲಿಗೆ, ಅಮಾನುಷ ಕೃತ್ಯಗಳಿಗೆ ಮಿತಿಯಿರಲಿಲ್ಲ.

ಅಲೆಗ್ಸಾಂಡರನ ಸಾಮ್ರಾಜ್ಯದ ವ್ಯವಸ್ಥೆ — ಅಲೆಗ್ಸಾಂಡರನ ದಂಡಯಾತ್ರೆಯ ಮೊದಲನೆಯ ಅಂಕವು ಇಲ್ಲಿಗೆ ಮುಗಿಯಿತು. ಪರ್ಷಿಯಾ ದೇಶವನ್ನು ಜಯಿಸಬೇಕೆಂಬ ಸಂಕಲ್ಪವು ನೆರವೇರಿತು. ಆದರೂ ವಿಜಯದ ದುರಾಶೆ ಬೆಳೆಯಿತು. ಇನ್ನೂ ಮುಂದಕ್ಕೆ ಪೂರ್ವಪ್ರದೇಶದ ಜೈತ್ರಯಾತ್ರೆಯ

ಮುನ್ನ ಅಲೆಗ್ಸಾಂಡರನು ತಾನು ಗೆದ್ದು ರಾಜ್ಯಗಳಲ್ಲಿ ವ್ಯವಸ್ಥಿತ ಆಡಳಿತಕ್ರಮವನ್ನು ಸ್ಥಾಪಿಸಿದನು. ಗ್ರೀಕರು ಪೌರ್ವಾತ್ಯ ದೇಶಗಳಲ್ಲಿ ಅಮಿತ ಐಶ್ವರ್ಯವಿದೆಯೆಂದೂ, ಜನರು ಗುಲಾಮರೆಂದೂ ತಪ್ಪುಭಾವನೆಯನ್ನು ಹೊಂದಿದ್ದರು. ಅಲೆಗ್ಸಾಂಡರನ ಜೈತ್ರಯಾತ್ರೆಯು ಇದಕ್ಕೆ ವ್ಯತಿರಿಕ್ತವಾದ ಅಭಿಪ್ರಾಯವಾಯಿತು. ಎಲ್ಲೆಲ್ಲಿಯೂ ಗ್ರೀಕರ ನಾಗರಿಕತೆಗನುಸಾರವಾಗಿ ಹೊಸ ನಗರಗಳನ್ನು ನಿರ್ಮಿಸಿದನು. ತಾನೇ ಈ ರಾಜ್ಯಗಳ ಸಾಮ್ರಾಟನೆಂದೂ ಮೆಸಿಡೋನಿಯ ದೇಶದ ರಾಜನೆಂದೂ ಘೋಷಿಸಿದನು. ಈ ಅದ್ಭುತ ವಿಜಯ ಅವನ ತಲೆಯನ್ನು ತಿರುಗಿಸಿತು. ತಾನು ದೈವಾಂಶ ಸಂಭೂತನೆಂದೂ ತನ್ನ ಹತೋಟಿಗೆ ಮಿತಿಯಿಲ್ಲವೆಂದೂ ಅಹಂಕಾರದಿಂದ ವರ್ತಿಸಿದನು. ಆದರೂ ಪಾಶ್ಚಾತ್ಯ ಪೌರ್ವಾತ್ಯ ದೇಶಗಳು ಪ್ರತ್ಯೇಕ ಮನೋಭಾವನೆಯನ್ನು ತ್ಯಜಿಸಿ ಒಟ್ಟಿಗೆ ಕಲೆತು ಪ್ರಗತಿ ಪಡೆಯಬೇಕೆಂಬ ಉದಾರ ಮನೋಭಾವವನ್ನು ಅವನು ತೋರಿಸಿದನು. ತಾನು ಹೋದ ಕಡೆಯಲ್ಲೆಲ್ಲಾ ಜನರ ಧಾರ್ಮಿಕ, ರಾಷ್ಟ್ರೀಯ ಭಾವನೆಯನ್ನು ಉಪೇಕ್ಷೆಮಾಡದೆ ಜನರನ್ನು ಒಲಿಸಿಕೊಂಡನು. ಪೌರ್ವಾತ್ಯ ಜನರಲ್ಲಿ ಕಲೆತು ಅವರ ಸಂಪ್ರದಾಯವನ್ನೂ ಉಡಿಗೆತೊಡಿಗೆಗಳನ್ನೂ ಅನುಸರಿಸಿದನು. ಪ್ರಾಂತ್ಯಗಳಲ್ಲಿ ರಾಜ್ಯಪಾಲರನ್ನು ನೇಮಿಸುವಾಗ ಗ್ರೀಕರ ಸೇನಾನಾಯಕನನ್ನೂ ದೇಶೀಯ ಸತ್ರಪನನ್ನೂ ಒಟ್ಟಿಗೆ ಸೇರಿಸಿದನು. ಈ ನೀತಿಯು ಮೆಸಿಡೊನಿಯರಿಗೆ ಅಸಹ್ಯವಾಗಿ ಕಂಡು ಕೊನೆಗೆ ಅವರು ಬಹಿರಂಗವಾಗಿ ದಂಗೆಯೆದ್ದರು.

ಡೇರಿಯುಸ್‌ನ ಬೆನ್ನಟ್ಟುವಿಕೆ ಮತ್ತು ಮರಣ. ಕ್ರಿ. ಪೂ. ೩೩೦- ಅಲೆಕ್ಸಾಂಡರನು ಆಡಳಿತಕ್ರಮವನ್ನು ವ್ಯವಸ್ಥೆಮಾಡಿದ ಮೇಲೆ ಡೇರಿಯುಸ್‌ನನ್ನು ಬೆನ್ನಟ್ಟಿಹಿಡಿಯಬೇಕೆಂದು ಸಂಕಲ್ಪಮಾಡಿದನು. ತ್ವರೆಮಾಡಿ ಎಕ್ಬಾಟನ ನಗರಕ್ಕೆ ಹೋದನು. ಆದರೆ ಅಲ್ಲಿಗೆ ಹೋದಾಗ 'ಪಕ್ಷಿಯು ಹಾರಿ ಹೋಯಿತು' ಎಂದು ತಿಳಿಯಿತು. ಮುಂದಕ್ಕೆ ಆತನನ್ನು ಬೆನ್ನಟ್ಟಿ ಪೂರ್ವದಕಡೆ ಹೋದನು. ಬಾಕ್ಟ್ರಿಯ ಪ್ರದೇಶದ ಸತ್ರಪನಾದ ಬೆಸ್ಸಸ್ ಎಂಬುವನು ಡೇರಿಯುಸ್‌ನನ್ನು ಸೆರೆಹಿಡಿದಿರುವನೆಂದು ತಿಳಿಯಿತು. ಅಲೆಗ್ಸಾಂಡರನು ತತ್‌ಕ್ಷಣವೇ ಬಾಕ್ಟ್ರಿಯಕಡೆ ಧಾವಿಸಿ ಬೆಸ್ಸಸ್‌ನನ್ನೂ ಆತನ

ಸ್ನೇಹಿತರನ್ನು ಹಿಡಿಯುವುದರಲ್ಲಿದ್ದನು. ಆದರೆ ಅವರು ತಮ್ಮ ಕುದುರೆಗಳನ್ನು ಹತ್ತಿ ತಪ್ಪಿಸಿಕೊಂಡರು. ಡೇರಿಯುಸನು ಓಡಿಹೋಗಲು ಒಪ್ಪದಿರಲು ಬೆಸ್ಸಸ್‌ನು ಅವನನ್ನು ತಿವಿದು ಕೊಂದುಹಾಕಿದನು. ಅಲೆಗ್ಸಾಂಡರನಿಗೆ ಈ ದುರಂತ ಸುದ್ದಿ ತಿಳಿದು ಕನಿಕರದಿಂದ ಡೇರಿಯುಸ್ಸನ ಶವವನ್ನು ಮರ್ಯಾದೆಯಿಂದ ಪೆರ್ಸಿಪಾಲಿಸ್‌ನಗರದಲ್ಲಿ ಹೂಳಲು ತಕ್ಕ ವ್ಯವಸ್ಥೆಮಾಡಿದನು.

ಬಾಕ್ಟ್ರಿಯದ ವಿಜಯ— ಅಲೆಗ್ಸಾಂಡರನು ಬಾಕ್ಟ್ರಿಯ (ಉತ್ತರ ಆಫ್ಘಾನಿಸ್ಥಾನ) ದೇಶದ ಮೇಲೆ ದಂಡೆತ್ತಿಹೋದನು. ಬೆಸ್ಸಸನು ತಾನೇ ಪರ್ಷಿಯಾ ದೇಶದ ರಾಜನೆಂದು ಘೋಷಿಸಿ "ಆರ್ಟಿಕ್ಸೆರ್ಸಸ್" ಎಂಬ ಬಿರುದನ್ನು ಪಡೆದನು. ಅಲೆಗ್ಸಾಂಡರನು ಈ ದಂಡಯಾತ್ರೆಯಲ್ಲಿ ಅದ್ಭುತ ಸಾಹಸವನ್ನು ತೋರಿಸಿದನು. ಅನೇಕ ದಟ್ಟವಾದ ಗುಡ್ಡಗಾಡುಗಳನ್ನು ದಾಟಬೇಕಾಗಿತ್ತು. ಹಿರತ್ ಮತ್ತು ಕಾಂದಹರ್ ಬಳಿ ಹೊಸ ಅಲೆಗ್ಸಾಂಡ್ರಿಯ ಪಟ್ಟಣವನ್ನು ನಿರ್ಮಿಸಿದನು. ಚಳಿಗಾಲದಲ್ಲಿ ಹಿಂದೂಕುಶ್ ಪರ್ವತವನ್ನು ದಾಟಿದನು. ಆಕ್ಸಸ್ ನದಿಯನ್ನು ದಾಟಲು ಚರ್ಮದ ಮೇಲೆ ತೇಲಿಕೊಂಡು ಹೋದನು. ಕೊನೆಗೆ ಬೆಸ್ಸಸ್‌ನನ್ನು ಹಿಡಿದು, ಅಂಗವಿಹೀನಮಾಡಿ, ಅವನ ರಾಜಧಾನಿಯಾದ ಬಾಕ್‌ನಗರದಲ್ಲಿ ಶೂಲಕ್ಕೇರಿಸಿದನು. ಈ ದಂಡಯಾತ್ರೆಯಲ್ಲಿಯೇ ಮತ್ತೊಂದು ಅಮಾನುಷ ಕೃತ್ಯವನ್ನು ಮಾಡಿದನು. ತನ್ನ ರಾವುತರ ನಾಯಕನಾದ ಪರ್ಮಿನಿಯೋವಿನ ಮಗನಾದ ಫಿಲೊಟಸ್ ಎಂಬುವನು ತನ್ನನ್ನು ಕೊಲೆ ಮಾಡಲು ಒಳಸಂಚು ಮಾಡಿದನೆಂದು ಸರಿಯಾಗಿ ವಿಚಾರಿಸದೆ ಅವನನ್ನು ಕೊಂದುಹಾಕಿದನು. ಎಕ್ಬಾಟನದಲ್ಲಿದ್ದ ಅವನ ತಂದೆ ಪರ್ಮಿನಿಯೋವನ್ನೂ ಕೊಲ್ಲಿಸಿದನು.

ಸೊಗ್ಡಿಯಾನದ ವಿಜಯ— ಬಾಕ್ಟ್ರಿಯದಿಂದ ಅಲೆಗ್ಸಾಂಡರನು ಸೊಗ್ಡಿಯಾನದ (ತುರ್ಕಿಸ್ಥಾನ್) ಮೇಲೆ ನುಗ್ಗಿದನು. ಈ ಪ್ರಾಂತ್ಯವು ಆಕ್ಸಸ್ ನದಿಯ ಆಚೆ ಪರ್ಷಿಯನರಿಗೆ ಸೇರಿತ್ತು. ಈ ಪ್ರದೇಶದ ಸಿಥಿಯನರು ಪ್ರಭಾವದಿಂದ ಕಾದಾಡಿದರು. ಆದರೆ ಅಲೆಗ್ಸಾಂಡರನು ಅವರನ್ನು ಜಯಿಸಿ ಜಕ್ಸಾರ್ಟಿಸ್ ನದಿಯ ತೀರವನ್ನು ತನ್ನ ಸಾಮ್ರಾಜ್ಯದ ಎಲ್ಲೆಯಾಗಿ

ಗೊತ್ತುಮಾಡಿದನು. ಈ ಪ್ರದೇಶದಿಂದಲೇ ಮಂಗೋಲರ ತಂಡಗಳು ಪಾಶ್ಚಾತ್ಯ ದೇಶಗಳ ದಂಡಯಾತ್ರೆಯನ್ನು ಕೈಗೊಂಡವು.

ಕ್ಲೀಟಸ್‌ನ ಕೊಲೆ— ಅಲೆಗ್ಸಾಂಡರನು ದಂಗೆಯನ್ನಡಗಿಸಲು ಸಮರಖಂಡ್‌ನಲ್ಲಿದ್ದಾಗ ಒಂದು ದುರಂತವು ನಡೆಯಿತು. ಅಲೆಗ್ಸಾಂಡರನ ನಡತೆ, ಪೌರ್ವಾತ್ಯ ನಡೆನುಡಿ, ಬಾಕ್ಟ್ರಿಯನ್ ರಾಜಕುಮಾರಿ ರಾಕ್ಸಾನಳನ್ನು ಮದುವೆಯಾದದ್ದು, ಏಷ್ಯದವರನ್ನು ತನ್ನ ಸೈನ್ಯದಲ್ಲಿ ಸೇರಿಸಿದ್ದು, ಅವನ ಸೈನಿಕರಿಗೆ ರೇಗಿಸಿತು. ಒಂದು ರಾತ್ರಿ ಅಲೆಗ್ಸಾಂಡರನ ಕುಡಿತದ ಅಮಲಿನಲ್ಲಿ ಭಟ್ಟಂಗಿಗಳು ಅವನನ್ನು ಹೊಗುಳುತ್ತಿರಲು ಅವನ ಪ್ರಿಯಮಿತ್ರನಾದ ಕ್ಲಿಟಸ್‌ಗೆ ಅದನ್ನು ತಡೆಯುಲಾಗಲಿಲ್ಲ. ಫಿಲಿಪನ ಸಾಹಸದಿಂದ ಅಲೆಗ್ಸಾಂಡರನು ರಾಜ್ಯಕಟ್ಟಿದನೆಂದೂ, ಫಿಲಿಪನ ಸೈನ್ಯವೇ ಇದಕ್ಕೆ ಕಾರಣವೆಂದೂ, ಗ್ರ್ಯಾನಿಕಸ್ ಕದನದಲ್ಲಿ ತಾನು ಅಲೆಗ್ಸಾಂಡರನನ್ನು ಬದುಕಿಸಿದನೆಂದೂ ಬಹಿರಂಗವಾಗಿ ಕ್ಲಿಟಸ್ ಘೋಷಿಸಿದನು. ಹೀಗೆ ಹಂಗಿಸಿದ್ದು ಅಲೆಗ್ಸಾಂಡರನಿಗೆ ನಾಚಿಕೆಯಾಗಿ ಕ್ಲೀಟಸನನ್ನು ತತ್‌ಕ್ಷಣವೇ ತನ್ನ ಭಲ್ಲೆಯಿಂದ ತಿವಿದು ಕೊಂದುಹಾಕಿದನು. ಕುಡಿತದ ಅಮಲು ಕಳೆದ ಮೇಲೆ ಅಲೆಗ್ಸಾಂಡರನು ಪಶ್ಚಾತ್ತಾಪಪಟ್ಟು, ದುಃಖದಿಂದ ಮೂರು ದಿವಸದವರೆವಿಗೂ ಊಟ, ನಿದ್ರೆ ಇಲ್ಲದೆಕಳೆದನು.

ಹಿಂದೂಸ್ಥಾನದ ಮೇಲೆ ದಂಡಯಾತ್ರೆ ಕ್ರಿ. ಪೂ. ೩೨೭–೩೨೬— ಅಲೆಗ್ಸಾಂಡರನು ಕ್ರಿ. ಪೂ. ೩೨೭ ರಲ್ಲಿ ಹಿಂದೂಸ್ಥಾನದ ಮೇಲೆ ದಂಡಯಾತ್ರೆಯನ್ನು ಮಾಡಿದನು. ಹಿಂದೂಕುಷ್ ಪರ್ವತವನ್ನು ದಾಟಿ ಕಾಬೂಲಿಗೆ ಬಂದನು. ತಕ್ಕ ಸೈನ್ಯ ವ್ಯವಸ್ಥೆಯನ್ನುಮಾಡಿ ಕಾಬೂಲಿನಿಂದ ಖೈಬರ್ ಕಣಿವೆಗೆ ಬಂದು ವಾಯುವ್ಯದಲ್ಲಿ ಗುಡ್ಡಗಾಡಿನ ಕುಲಗಳ ಮೇಲೆ ದಂಡಯಾತ್ರೆ ಮಾಡಿದನು. ಸಿಂಧೂ ನದಿಯನ್ನು ದಾಟ ಸಮರ್ಥನಾದ ಪುರೂರವಸನ ಮೇಲೆ ಯುದ್ಧ ಮಾಡಬೇಕಾಯಿತು. ಜೀಲಂ ನದಿಯ ತೀರದಲ್ಲಿ ಪುರೂರವಸನು ಪ್ರಬಲವಾದ ಸೈನ್ಯವನ್ನೂ ಆನೆಗಳನ್ನೂ ಸಿದ್ಧಪಡಿಸಿದ್ದನು. ಅಲೆಗ್ಸಾಂಡರನ ಕುದುರೆಗಳು ಆನೆಗಳನ್ನು ನೋಡಿ ಬೆದರಿದವು. ಅಲೆಗ್ಸಾಂಡರನಿಗೆ ಹಿಂದೂಸ್ಥಾನವನ್ನು ಜಯಿಸುವುದು ಕಷ್ಟವೆಂದು ಮನದಟ್ಟಾಯಿತು. ಆತನ ಸೈನಿಕರು ಆನೆಗಳ ಹೊಡೆತವನ್ನು ತಪ್ಪಿಸಿ

ಕೊಳ್ಳುವುದೇ ಬಹಳ ಕಷ್ಟವಾಯಿತು. ಅಲೆಗ್ಸಾಂಡರ್ ಪಕ್ಕದಿಂದ ಆನೆಗಳ ಮೇಲೆ ದಾಳಿಮಾಡಿ ಅವುಗಳಿಗೆ ಗಾಬರಿಪಡಿಸಿದನು. ಇದರಿಂದ ಅವು ಚೆಲ್ಲಾ ಪಿಲ್ಲಿಯಾಗಿ ಓಡಿಹೋದವು. ಪುರೂರವಸನು ಶತ್ರುಗಳ ವಶನಾದನು. “ ನನ್ನನ್ನು ರಾಜನನ್ನಾಗಿ ಕಾಣು ” ಎಂದು ಪುರೂರವಸನು ಕೇಳಿಕೊಂಡನು. ಅಲೆಗ್ಸಾಂಡರನು ಅವನು ತೋರಿಸಿದ ಧೈರ್ಯಸಾಹಸಗಳನ್ನು ಮೆಚ್ಚಿ ಅವನ ದೇಶವನ್ನು ಹಿಂದಿರುಗಿಕೊಟ್ಟನು. ಅನಂತರ ಪೂರ್ವಾಭಿಮುಖವಾಗಿ ನಂದರ ರಾಜ್ಯವನ್ನು ಗೆಲ್ಲಬೇಕೆಂದು ಹೊರಟನು. ಆದರೆ ಸಟ್ಲೆಜ್ ನದಿಯ ತೀರದಲ್ಲಿ ಅವನ ಸೈನಿಕರು ಮುಂದಕ್ಕೆ ಹೋಗಲು ಅವಕಾಶ ಕೊಡದೆ ದಂಗೆಯೆದ್ದರು. ಸೈನಿಕರು ಜೈತ್ರಯಾತ್ರೆಗಳಿಂದ ದಣಿದಿದ್ದರು; ಅದರಲ್ಲೂ ನಂದರ ಸೈನ್ಯಶಕ್ತಿಯು ಅದ್ಭುತವಾದುದೆಂದು ತಿಳಿದ ಮೇಲೆ ಏನುಮಾಡಿದರೂ ಮಗಧರಾಜ್ಯದ ಮೇಲೆ ಯುದ್ಧಮಾಡುವುದಿಲ್ಲವೆಂದು ಸಂಕಲ್ಪಿಸಿ ಹಿಂದಕ್ಕೆ ಹೋಗಲು ಹಟಮಾಡಿದರು. ಕೊನೆಗೆ ಅಲೆಗ್ಸಾಂಡರನು ಅವರ ಕೋರಿಕೆಗೆ ಒಪ್ಪಬೇಕಾಯಿತು. ಸಿಂಧು ನದಿಯನ್ನು ದಾಟಿ ಕ್ರಿ.ಪೂ. ೩೨೫ ರಲ್ಲಿ ಸೂಸ ಪಟ್ಟಣವನ್ನು ಸೇರಿದನು. ಅಲ್ಲಿಂದ ಬಾಬಿಲನ್ ನಗರಕ್ಕೆ ಹೋದಾಗ ಕ್ರಿ. ಪೂ. ೩೨೩ ರಲ್ಲಿ ಆಕಸ್ಮಾತ್ತಾಗಿ ಜ್ವರ ಬಂದು ಕೇವಲ ಮೂವತ್ತೆರಡನೆಯ ವಯಸ್ಸಿನಲ್ಲಿ ಕಾಲವಾದನು.

ಅಲೆಗ್ಸಾಂಡರನು ಮಹಾಶಯನೇ ?—ಅಲೆಗ್ಸಾಂಡರನ ವಿಶಾಲ ಸಾಮ್ರಾಜ್ಯವು ಗ್ರೀಸಿನಿಂದ ಪಂಜಾಬಿನವರೆವಿಗೂ ವಿಸ್ತರಿಸಿತ್ತು. ಆತನ ಕೀರ್ತಿಯು ಎಲ್ಲೆಲ್ಲಿಯೂ ಹರಡಿತ್ತು. ಕೇವಲ ಹನ್ನೆರಡು ವರ್ಷಗಳಲ್ಲಿ ಒಂದು ಜೀವಮಾನದ ಸಾಧನೆಯನ್ನು ಅಡಗಿಸಿದ್ದನು. ಆತನ ರಾಜನೀತಿ ಕುಶಲತೆಯ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಆದರೂ ಆತನು ಮಾಡಿದ ಕಾರ್ಯವು ಅದ್ಭುತವಾದುದು ಎಂದು ಹೇಳಬೇಕು. ಮುಖ್ಯವಾಗಿ ಪಾಶ್ಚಾತ್ಯ ಪೌರ್ವಾತ್ಯ ನಾಗರಿಕತೆಯನ್ನು ಒಂದುಗೂಡಿಸಬೇಕೆಂದು ಅವನ ಅಭಿಲಾಷೆಯಾಗಿತ್ತು. ಎಲ್ಲಾ ಜನಾಂಗಗಳೂ ಕಲೆತು ಪೌರ್ವಾತ್ಯ ದೇಶಗಳಲ್ಲಿ ಗ್ರೀಕರ ನಾಗರಿಕತೆಯು ಬೇರೂರಬೇಕೆಂದು ಸಕಲ ಪ್ರಯತ್ನ ಮಾಡಿದನು. ಅಂತರ್ವಿವಾಹ ಪದ್ಧತಿ, ಏಷ್ಯದವರನ್ನು

ತನ್ನ ಸೈನ್ಯದಲ್ಲಿ ಸೇರಿಸುವುದು, ಅಲೆಗ್ಸಾಂಡ್ರಿಯ ನಗರಗಳನ್ನು ಸ್ಥಾಪಿಸಿ ಗ್ರೀಕರ ನಾಗರಿಕತೆಯನ್ನು ಸ್ಥಾಪಿಸುವುದು—ಅವನ ಸಂಕಲ್ಪವಾಗಿತ್ತು. ಅವನನ್ನು ಮಹಾಶಯನೆಂದು ಹೇಳಲು ಯಾವ ಸಂಶಯವೂ ಇಲ್ಲ. ಅವನ ಅಕಾಲಮೃತ್ಯುವು ಶಾಶ್ವತವಾದ ಕಾರ್ಯಸಾಧನೆಗೆ ಅಡಚಣೆಯಾಯಿತು.